KSMC

KARNATAKA STATE MINERALS CORPORATION LIMITED

(A Govt. of Karnataka Undertaking)

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ದಿಮೆ)

B.M.T.C. Shantinagar, T.T.M.C. Building, 'A' Block, 5th Floor, Shantinagar, Bengaluru - 560 027.

54th Annual Report and Accounts

54ನೇ ವಾರ್ಷಿಕ ವರದಿ

2019-2020

2019–20ನೇ ಸಾಲಿನಲ್ಲಿ ರೂ. 29.75 ಕೋಟಿಗಳ ಡಿವಿಡೆಂಡ್
ಧನಾದೇಶವನ್ನು ಸಂಸ್ಥೆ ವತಿಯಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ನೀಡಲಾಯಿತು

ಸಂಸ್ಥೆ ವತಿಯಿಂದ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ
ರೂ. 5.00 ಕೋಟಿಗಳ ಧನಾದೇಶವನ್ನು ನೀಡಲಾಯಿತು

KSMC

KSMC

KSMC

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ದಿಮೆ)

KARNATAKA STATE MINERALS CORPORATION LIMITED

(A Govt. of Karnataka Undertaking)

Sri Murugesh Nirani
Hon'ble Minister for Mines & Geology
Government of Karnataka

Sri S. Lingamurthy B.Sc., M.B.A
Chairman, KSMCL

Sri G. Kumar Naik, I.A.S
ACS to the Government, (MSME & Mines)
Commerce & Industries

Sri Naveen Raj Singh, I.A.S
Managing Director, KSMCL

KSMC

KSMC

KSMC

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್

(ಹಿಂದಿನ ಮೈಸೂರು ಮಿನರಲ್ಸ್ ಲಿಮಿಟೆಡ್)

54ನೇ ವಾರ್ಷಿಕ ವರದಿ ಮತ್ತು ತಃಖ್ತೆ

2019–2020

ಟಿ.ಟಿ.ಎಂ.ಸಿ. ಕಟ್ಟಡ, 'ಎ' ಬ್ಲಾಕ್, 5ನೇ ಮಹಡಿ, ಬಿ.ಎಂ.ಟಿ.ಸಿ.,
ಶಾಂತಿನಗರ, ಬೆಂಗಳೂರು – 560 027.

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್

(ಹಿಂದಿನ ಮೈಸೂರು ಮಿನರಲ್ಸ್ ಲಿಮಿಟೆಡ್)

ಕ್ರ.ಸಂ.	ಪರಿವಿಡಿ	ಪುಟ
1.	ಮಂಡಳಿ ನಿರ್ದೇಶಕರು	3
2.	ತಿಳುವಳಿಕೆ	4
3.	ನಿರ್ದೇಶಕರ ವರದಿ	7
4.	ಮಹಾಲೇಖಾಪಾಲರ ಟೀಕೆಗಳು	42
5.	ಸ್ವತಂತ್ರ ಲೆಕ್ಕಪರಿಶೋಧಕರ ವರದಿ ಪರಿಷ್ಕೃತ	45
6.	ಹಣಕಾಸಿನ ವಿವರಗಳ ಪಟ್ಟಿ	64
7.	ಲಾಭ ಮತ್ತು ನಷ್ಟ ತಃಖ್ತೆ	65
8.	ಪರಿಶಿಷ್ಟಗಳು	68
9.	31ನೇ ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷದ ಹಣಕಾಸು ತಃಖ್ತೆಗಳ ಮೇಲಿನ ಟಿಪ್ಪಣಿಗಳು	95
10.	ಕ್ರೋಢೀಕೃತ ಸ್ವತಂತ್ರ ಲೆಕ್ಕಪರಿಶೋಧಕರ ವರದಿ ಪರಿಷ್ಕೃತ	111
11.	ಕ್ರೋಢೀಕೃತ ಹಣಕಾಸಿನ ವಿವರಗಳ ಪಟ್ಟಿ	124
12.	ಕ್ರೋಢೀಕೃತ ಲಾಭ ಮತ್ತು ನಷ್ಟ ತಃಖ್ತೆ	125
13.	ಪರಿಶಿಷ್ಟಗಳು	128
14.	31ನೇ ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷದ ಕ್ರೋಢೀಕೃತ ಹಣಕಾಸು ತಃಖ್ತೆಗಳ ಮೇಲಿನ ಟಿಪ್ಪಣಿಗಳು	154

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್

(ಹಿಂದಿನ ಮೈಸೂರು ಮಿನರಲ್ಸ್ ಲಿಮಿಟೆಡ್)

ಮಂಡಳಿ ನಿರ್ದೇಶಕರು 2019–2020*

ಶ್ರೀ ಎಸ್ ಲಿಂಗಮೂರ್ತಿ	ಅಧ್ಯಕ್ಷರು (27.11.2020ರಿಂದ ಇಂದಿನವರೆಗೆ)
ಶ್ರೀ ಜಿ ಕುಮಾರ್ ನಾಯಕ್, ಭಾ.ಆ.ಸೇ	ಅಧ್ಯಕ್ಷರು (04.09.2020ರಿಂದ 27.11.2020 ರವರೆಗೆ) ನಿರ್ದೇಶಕರು (27.11.2020ರಿಂದ ಇಂದಿನವರೆಗೆ)
ಶ್ರೀ ಎಂ. ಮಹೇಶ್ವರ ರಾವ್, ಭಾ.ಆ.ಸೇ.	ಅಧ್ಯಕ್ಷರು (30.07.2019ರಿಂದ 04.09.2020 ರವರೆಗೆ) ನಿರ್ದೇಶಕರು (16.03.2019ರಿಂದ 04.09.2020 ರವರೆಗೆ)
ಶ್ರೀಮತಿ ಲಕ್ಷ್ಮಿ ಆರ್. ಹೆಬ್ಬಾಳಕರ್, ಮಾನ್ಯ ವಿಧಾನಸಭಾ ಸದಸ್ಯರು	ಅಧ್ಯಕ್ಷರು (07.01.2019ರಿಂದ 30.07.2019 ರವರೆಗೆ)
ಶ್ರೀ ರಾಜೇಂದರ್ ಕುಮಾರ್ ಕಟಾರಿಯ, ಭಾ.ಆ.ಸೇ.	ಅಧ್ಯಕ್ಷರು (04.06.2018ರಿಂದ 28.06.2018 ರವರೆಗೆ) ನಿರ್ದೇಶಕರು (03.03.2017ರಿಂದ 25.02.2019 ರವರೆಗೆ)
ಶ್ರೀ ನವೀನ್ ರಾಜ್ ಸಿಂಗ್, ಭಾ.ಆ.ಸೇ.	ವ್ಯವಸ್ಥಾಪಕ ನಿರ್ದೇಶಕರು (27.07.2017ರಿಂದ ಇಂದಿನವರೆಗೆ)
ಡಾ. ಏಕ್‌ರೂಪ್ ಕೌರ್, ಭಾ.ಆ.ಸೇ	ನಿರ್ದೇಶಕರು (05.09.2019ರಿಂದ ಇಂದಿನವರೆಗೆ)
ಶ್ರೀ ಎನ್. ಎಸ್. ಪ್ರಸನ್ನಕುಮಾರ್, ಭಾ.ಆ.ಸೇ.	ನಿರ್ದೇಶಕರು (29.12.2017ರಿಂದ 27.06.2019 ರವರೆಗೆ)
ಶ್ರೀಮತಿ ವಿ. ಚೈತ್ರ, ಭಾ.ಆ.ಸೇ.	ನಿರ್ದೇಶಕರು (04.04.2018ರಿಂದ ಇಂದಿನವರೆಗೆ)
ಶ್ರೀ ಅನಿಲ್ ಕುಮಾರ್ ಜಾ, ಭಾ.ಆ.ಸೇ	ನಿರ್ದೇಶಕರು (29.06.2018ರಿಂದ 05.09.2019 ರವರೆಗೆ)
ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ	ನಿರ್ದೇಶಕರು (29.06.2018ರಿಂದ 11.09.2019 ರವರೆಗೆ) ನಿರ್ದೇಶಕರು (05.11.2020ರಿಂದ ಇಂದಿನವರೆಗೆ)
ಡಾ. ರಿಚರ್ಡ್ ವಿನ್ಸಂಟ್ ಡಿಸೋಜ, ಭಾ.ಆ.ಸೇ.	ನಿರ್ದೇಶಕರು (04.04.2018ರಿಂದ 19.09.2019 ರವರೆಗೆ)
ಶ್ರೀ ಪ್ರಭಾಶ್ ಚಂದ್ರ ರೇ, ಭಾ.ಆ.ಸೇ.	ನಿರ್ದೇಶಕರು (27.06.2019ರಿಂದ 18.11.2019 ರವರೆಗೆ)
ಶ್ರೀ ಶಿವಯೋಗಿ ಸಿ. ಕಳಸದ್, ಭಾ.ಆ.ಸೇ.	ನಿರ್ದೇಶಕರು (11.09.2019ರಿಂದ 05.11.2019 ರವರೆಗೆ)
ಶ್ರೀಮತಿ ಸಲ್ಮಾ ಕೆ. ಫಾಹಿಮ್, ಭಾ.ಆ.ಸೇ.	ನಿರ್ದೇಶಕರು (19.09.2019ರಿಂದ ಇಂದಿನವರೆಗೆ)
ಡಾ: ಎನ್. ಶಿವಶಂಕರ, ಭಾ.ಆ.ಸೇ.	ನಿರ್ದೇಶಕರು (18.11.2019ರಿಂದ 04.09.2020 ರವರೆಗೆ)
ಶ್ರೀ ಡಿ. ಎಸ್. ರಮೇಶ್, ಭಾ.ಆ.ಸೇ	ನಿರ್ದೇಶಕರು (04.09.2020ರಿಂದ ಇಂದಿನವರೆಗೆ)
ಶ್ರೀ ರುದ್ರಮೂರ್ತಿ ಎಂ.	ಅಧಿಕಾರೇತರ ನಿರ್ದೇಶಕರು (20.11.2020ರಿಂದ ಇಂದಿನವರೆಗೆ)

*ಮಂಡಳಿ ನಿರ್ದೇಶಕರ ಪಟ್ಟಿಯನ್ನು ವಾರ್ಷಿಕ ಮಹಾ ಸಭೆಯ ದಿನಾಂಕ 28.12.2020 ರಲ್ಲಿದಂತೆ ತೆಗೆದುಕೊಳ್ಳಲಾಗಿದೆ.

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್

(ಹಿಂದಿನ ಮೈಸೂರು ಮಿನರಲ್ಸ್ ಲಿಮಿಟೆಡ್)

ತಿಳುವಳಿಕೆ

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್, (ಈ ಹಿಂದೆ ಮೈಸೂರು ಮಿನರಲ್ಸ್ ನಿಯಮಿತ) ಸಂಸ್ಥೆಯ **54 ನೇ ಸರ್ವ ಸದಸ್ಯರ ವಾರ್ಷಿಕ ಸಭೆ**ಯನ್ನು **ದಿನಾಂಕ 28ನೇ ಡಿಸೆಂಬರ್ 2020ರಂದು ಸೋಮವಾರ ಮಧ್ಯಾಹ್ನ 1.00 ಘಂಟೆಗೆ** ಕಂಪನಿಯ ನೋಂದಾಯಿತ ಕಛೇರಿ ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್, 5ನೇ ಮಹಡಿ, 'ಎ' ಬ್ಲಾಕ್, ಟಿಟಿಎಂಸಿ ಕಟ್ಟಡ, ಬಿಎಂಟಿಸಿ ಕಟ್ಟಡ, ಶಾಂತಿನಗರ, ಬೆಂಗಳೂರು – 560027 ಇಲ್ಲಿ ಈ ಕೆಳಕಂಡ ವ್ಯವಹಾರಗಳ ಬಗ್ಗೆ ಚರ್ಚಿಸಲು ನಡೆಸಲಾಗುವುದೆಂದು ಈ ಮೂಲಕ ಸೂಚನೆ ನೀಡಲಾಗಿದೆ:

ಸಾಮಾನ್ಯ ವ್ಯವಹಾರ:

1. 31ನೇ ಮಾರ್ಚ್ 2020 ರಂದು ಇದ್ದಂತೆ ಕಂಪೆನಿಯ ಲೆಕ್ಕಪರಿಶೋಧಿತ ಸಂತುಲನ ಪಟ್ಟಿ ಮತ್ತು ಅದೇ ದಿನಾಂಕಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ತಃಖ್ತೆ ಮತ್ತು ನಗದು ಪ್ರವಹನ ತಖ್ತೆ, ಸ್ವತಂತ್ರ ಲೆಕ್ಕಪರಿಶೋಧಕರ ವರದಿ ಹಾಗೂ ಕಾರ್ಯದರ್ಶಿಯ ಲೆಕ್ಕಪರಿಶೋಧಿತ ವರದಿಯೂ ಸೇರಿದಂತೆ ನಿರ್ದೇಶಕರ ವರದಿಗಳನ್ನು ಒಳಗೊಳ್ಳುವ ಹಣಕಾಸು ತಖ್ತೆಗಳನ್ನು ಸ್ವೀಕರಿಸುವುದು, ಪರಿಗಣಿಸುವುದು ಮತ್ತು ಅಳವಡಿಸಿಕೊಳ್ಳುವುದು.
2. ಲಾಭಾಂಶದ ಘೋಷಣೆ.
3. ಲೆಕ್ಕಪರಿಶೋಧಕರ ಸಂಭಾವನೆಯನ್ನು ನಿಗದಿಪಡಿಸುವುದು.

ವಿಶೇಷ ವ್ಯವಹಾರ:

4. **ವೆಚ್ಚ ಲೆಕ್ಕಪರಿಶೋಧಕರ ಸಂಭಾವನೆಯನ್ನು ನಿಗದಿಪಡಿಸವುದು:**

   ಕೆಳಗಿನ ಗೊತ್ತುವಳಿಯನ್ನು ಪರಿಗಣಿಸಿ ಅದು ಯೋಗ್ಯವೆನಿಸಿದಲ್ಲಿ, ಮಾರ್ಪಾಟುಗಳೊಂದಿಗೆ ಅಥವಾ ಮಾರ್ಪಾಟುಗಳಿಲ್ಲದೆ ಸಾಮಾನ್ಯ ಗೊತ್ತುವಳಿಯಾಗಿ ಅಂಗೀಕರಿಸುವುದು:

   "ಕಂಪೆನಿ ಕಾಯ್ದೆ, 2013ರ ಪರಿಚ್ಛೇದ 148(3) ಮತ್ತಿತರ ಅನ್ವಯಿಸಬಹುದಾದ ಉಪಬಂಧಗಳ ಅನುಸಾರ ಮತ್ತು ಕಂಪೆನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014 (ಯಾವುದೇ ಶಾಸನಬದ್ಧ ಮಾರ್ಪಾಟು(ಗಳು) ಅಥವಾ ಪ್ರಸ್ತುತ ಜಾರಿಯಲ್ಲಿರುವ ಪುನರ್–ಅಧಿನಿಯಮಗಳೂ ಸೇರಿದಂತೆ) ಹಣಕಾಸು ವರ್ಷ 2020–21ರ ಸಾಲಿಗೆ ಕಂಪೆನಿಯ ವೆಚ್ಚ ದಾಖಲೆಗಳ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಡಿಸೆಂಬರ್ 31, 2014ರಂದು ಹೊರಡಿಸಿದ ಕಂಪೆನಿಗಳ (ವೆಚ್ಚ ದಾಖಲೆಗಳು ಮತ್ತು ಲೆಕ್ಕಪರಿಶೋಧನೆ) ನಿಯಮಗಳ ಪ್ರಕಾರ ಕಂಪೆನಿಯ ನಿರ್ದೇಶಕ ಮಂಡಳಿಯು ನೇಮಕಮಾಡಿದ್ದ ವೆಚ್ಚಲೆಕ್ಕಪರಿಶೋಧಕರಾದ ಮೆಸರ್ಸ್ ಪಿಕೆಆರ್ ಅಸೋಸಿಯೇಟ್ಸ್, ಎಲ್ಎಲ್ಪಿ, ವೆಚ್ಚ ಲೆಕ್ಕಪರಿಶೋಧಕರು, ಹೈದರಾಬಾದ್ – ಇವರಿಗೆ ಹಣಕಾಸು ವರ್ಷ 2020–21 ಕ್ಕೆ ಸಂದಾಯವಾಗಬೇಕಿರುವ ಸಂಭಾವನೆಯನ್ನು ರೂ 49,000/– (ರೂ. ನಲವತ್ತೊಂಬತ್ತು ಸಾವಿರ ಮಾತ್ರ) ಎಂದು ನಿಗದಿಗೊಳಿಸಿ ಈಮೂಲಕ ಸ್ಥಿರೀಕರಿಸಿ ಕಾಯಂಗೊಳಿಸಲಾಗಿದೆ ಎಂದು ಗೊತ್ತುವಳಿಯನ್ನು ಸ್ವೀಕರಿಸಲಾಗಿದೆ"

5. **ಕಂಪನಿಯ ಸಂಘ ನಿಯಾಮವಳಿಯಲ್ಲಿನ ಮಾರ್ಪಾಡು ಮಾಡುವುದು**

   ಕೆಳಗಿನ ಗೊತ್ತುವಳಿಯನ್ನು ಪರಿಗಣಿಸಿ ಅದು ಯೋಗ್ಯವೆನಿಸಿದಲ್ಲಿ, ಮಾರ್ಪಾಟಿನೊಂದಿಗೆ/(ಮಾರ್ಪಾಟುಗಳೊಂದಿಗೆ) ಅಥವಾ ಮಾರ್ಪಾಟುಗಳಿಲ್ಲದೆ ಸಾಮಾನ್ಯ ಗೊತ್ತುವಳಿಯಾಗಿ ಅಂಗೀಕರಿಸುವುದು:

   ಕಂಪನಿ ಕಾಯ್ದೆ 2013 ರ ಪರಿಚ್ಛೇದ 14 ಮತ್ತಿತರ ಅನ್ವಯಿಸಬಹುದಾದ ಉಪಬಂಧಗಳ ಅನುಸಾರ ಮತ್ತು ಕಂಪೆನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014 (ಯಾವುದೇ ಶಾಸನಬದ್ಧ ಮಾರ್ಪಾಟು(ಗಳು) ಅಥವಾ ಪ್ರಸ್ತುತ ಜಾರಿಯಲ್ಲಿರುವ ಪುನರ್–ಅಧಿನಿಯಮಗಳೂ ಸೇರಿದಂತೆ) ಆರ್ಟಿಕಲ್ಸ್ ಆಪ್ ಅಸೋಸಿಯೇಶನ್ ನ ಆರ್ಟಿಕಲ್ 15(ಡಿ)ಯನ್ನು ಸದಸ್ಯರ ಅನುಮೋದನೆ ಮೇರೆಗೆ ಕೆಳಕಂಡಂತೆ ಓದಲಾಗುವ ಆರ್ಟಿಕಲ್ 15(ಡಿ)ಯನ್ನು ರದ್ದು ಗೊಳಿಸುವ ಬಗ್ಗೆ ಗೊತ್ತುವಳಿಯನ್ನು ಸ್ವೀಕರಿಸಲಾಗಿದೆ

15(ಡಿ) ಕರ್ನಾಟಕ ಸರ್ಕಾರದ ನಿರ್ದಾರದನ್ವಯ ರೂ.10 ಕೋಟಿಗಳ ವೆಚ್ಚದಲ್ಲಿ (ಹತ್ತು ಕೋಟಿಗಳು ಮಾತ್ರ) ಅಧಿಕೃತ ಬಂಡವಾಳ ಕಾಮಗಾರಿಗಳನ್ನು ತೆಗೆದುಕೊಳ್ಳುವ ಎಲ್ಲ ಹಕ್ಕುಗಳನ್ನು ಮಂಡಳಿಯು ನಿರ್ದರಿಸುತ್ತದೆ.

ಮುಂದುವರೆದಂತೆ ಈ ಗೊತ್ತುವಳಿಯ ಪರಿಣಾಮಕಾರಿ ಜಾರಿಗೊಳಿಸುವಿಕೆಗೆ ಹಾಗೂ ಸಂಬಂಧಿತ ಮತ್ತು ಪ್ರಾಸಂಗಿಕವಾದ ವಿಷಯಗಳಿಗೆ ಸಂಬಂಧಿಸಿದಂತೆ ಅಗತ್ಯವಾದ ಎಲ್ಲ ಸೂಕ್ತ, ಯುಕ್ತ ಮತ್ತು ಅಪೇಕ್ಷಿತ ಕಾರ್ಯಗಳನ್ನು ಅಥವಾ ಶೀಘ್ರಗತಿಯ ಕಾರ್ಯಗಳನ್ನು ನಡೆಸಲು ಮತ್ತು ರಿಜಿಸ್ಟ್ರಾರ್ ಆಫ್ ಕಂಪನಿಯಲ್ಲಿ ಅಥವಾ ಇತರ ಶಾಸನಬದ್ಧ ಕಾಯಗಳಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ನಿರ್ದೇಶಕ ಮಂಡಳಿಯು ಅಧಿಕಾರವನ್ನು ಹೊಂದಿರಬೇಕೆಂದು ಮತ್ತು ಈ ಮೂಲಕ ಹೊಂದಿರುತ್ತದೆ ಎಂದು ಗೊತ್ತುವಳಿಯನ್ನು ಸ್ವೀಕರಿಸಲಾಗಿದೆ.

ಮಂಡಳಿಯ ಅಪ್ಪಣೆಯ ಮೇರೆಗೆ
ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್

ಸಹಿ/–
ನವೀನ್ ರಾಜ್ ಸಿಂಗ್, ಭಾಆಸೇ
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 06854287

ಸ್ಥಳ: ಬೆಂಗಳೂರು
ದಿನಾಂಕ: 5ನೇ ಡಿಸೆಂಬರ್ 2020

ಗಮನಿಕೆ:

1. ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸಲು ಹಕ್ಕುಳ್ಳ ಸದಸ್ಯರು ತಮ್ಮ ಬದಲಾಗಿ ಪ್ರತಿನಧಿಯೋರ್ವನಿಗೆ ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸುವ ಹಕ್ಕನ್ನು ನೀಡಬಹುದಾಗಿದೆ ಮತ್ತು ಇಂತಹ ಪ್ರತಿನಧಿ ಕಂಪೆನಿಯ ಸದಸ್ಯರಾಗಿರಬೇಕು; ಪ್ರತಿನಧಿಗಳ ನೇಮಕವು ಊರ್ಜಿತವಾಗಬೇಕಾದಲ್ಲಿ ಆ ಸಂಬಂಧದ ಮಾಹಿತಿಯನ್ನು ಸಭೆಯ ಪ್ರಾರಂಭದ 48 ಘಂಟೆಗಳ ಒಳಗೆ ಕಂಪೆನಿಯ ನೋಂದಾಯಿತ ಕಛೇರಿಗೆ ತಲುಪಿಸಬೇಕಾಗುತ್ತದೆ.

2. ವಿಶೇಷ ವ್ಯವಹಾರಕ್ಕೆ ಸಂಬಂಧಿಸಿದಂತೆ, ಕಂಪೆನಿ ಕಾಯ್ದೆ, 2013ರ ಪರಿಚ್ಛೇದ 102ರ ಅನುಸಾರ ವಿವರಣಾ ತಖ್ತೆಯನ್ನು ಇಲ್ಲಿ ಅನುಬಂಧಿಸಲಾಗಿದೆ.

ರೂಟ್ ಮ್ಯಾಪ್

Route Map Link: https://www.google.com/maps/place/Karnataka+State+Minerals+Corporation+Limited+(KSMCL)/@12.9540776,77.5932375,18z/data=!4m5!3m4!1s0x3bae15f0b86a1121:0xa9492ad8ac3c66b6!8m2!3d12.9540565!4d77.5931143

ವಿಶೇಷ ವ್ಯವಹಾರಕ್ಕೆ ಸಂಬಂಧಿಸಿದಂತೆ, ಕಂಪೆನಿ ಕಾಯ್ದೆ, 2013ರ ಪರಿಚ್ಛೇದ 102ರ ಅನುಸಾರ ವಿವರಣಾ ತಖ್ತೆ

ವಿಷಯ ಸಂಖ್ಯೆ. 4:

ಕಂಪೆನಿಯ ನಿರ್ದೇಶಕ ಮಂಡಳಿಯು ಮೆಸರ್ಸ್ ಪಿಕೆಆರ್ ಅಸೋಸಿಯೇಟ್ಸ್, ಎಲ್ಎಲ್ಪಿ, ವೆಚ್ಚ ಲೆಕ್ಕಪರಿಶೋಧಕರು, ಹೈದರಾಬಾದ್ – ಇವರನ್ನು 2020–21 ರ ಸಾಲಿಗೆ ಕಂಪೆನಿಯ ವೆಚ್ಚ ದಾಖಲೆಗಳ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಡಿಸೆಂಬರ್ 31, 2014ರಂದು ಹೊರಡಿಸಿದ ಕಂಪೆನಿಗಳ (ವೆಚ್ಚ ದಾಖಲೆಗಳು ಮತ್ತು ಲೆಕ್ಕಪರಿಶೋಧನೆ) ನಿಯಮಗಳ ಪ್ರಕಾರ ರೂ. 49,000/– ಸಂಭಾವನೆಯೊಂದಿಗೆ ಹಾಗೂ ಅನ್ವಯವಾಗುವಂತೆ ಅವರಿಗೆ ಸಂದಾಯವಾಗಬೇಕಿರುವ ಸೇವಾ ತೆರಿಗೆ ಹಾಗೂ ಅವರು ತಮ್ಮ ಕೈಯಿಂದ ವ್ಯಯಿಸಿರುವ ಖರ್ಚುಗಳ ಮರುಭರಿಕೆಯೊಂದಿಗೆ ಅಂಗೀಕರಿಸಿತ್ತು. ಇದೇ ಲೆಕ್ಕಪರಿಶೋಧರನ್ನು ಹಣಕಾಸು ವರ್ಷ 2020–21 ಸಾಲಿಗೆ ಅದೇ ಕರಾರುಗಳ ಮೇಲೆ ಲೆಕ್ಕಪರಿಶೋಧಕರನ್ನಾಗಿ ನೇಮಕಮಾಡಲಾಗಿದೆ.

ಇದಕ್ಕನುಗುಣವಾಗಿ, ಗೊತ್ತುವಳಿಯಲ್ಲಿ ಹೇಳಲಾಗಿರುವಂತೆ ಲೆಕ್ಕಪರಿಶೋಧಕರು ಸಲ್ಲಿಸಬೇಕಿರುವ ಮೇಲೆ ಸೂಚಿಸಲಾಗಿರುವ ಸೇವೆಗಳಿಗಾಗಿ 2020–21 ರ ವರ್ಷದಲ್ಲಿ ಅವರಿಗೆ ಸಂದಾಯವಾಗಬೇಕಿರುವ ಸಂಭಾವನೆಯನ್ನು ಪರಿಗಣಿಸಿ ಅಂಗೀಕರಿಸಲು ಸದಸ್ಯರನ್ನು ಕೋರಲಾಗಿದೆ.

ಮೇಲಿನ 4 ರಲ್ಲಿ ಹೇಳಲಾಗಿರುವ ಗೊತ್ತುವಳಿಯಲ್ಲಿ ಕಂಪೆನಿಯ ಯಾವು ನಿರ್ದೇಶಕರಾಗಲೀ ಅಥವಾ ಅವರ ಸಂಬಂಧಿಕರಾಗಲೀ ಯಾವುದೇ ಬಗೆಯ ಹಿತಾಸಕ್ತಿಗಳನ್ನು ಹೊಂದಿರುವುದಿಲ್ಲ.

ವಿಷಯ ಸಂಖ್ಯೆ 5

ಪ್ರಸ್ತುತ ಇರುವ ಸಂಘ ನಿಯಮಾವಳಿಯಲ್ಲಿ ರೂ.10.00 ಕೋಟಿಗಳ ವೆಚ್ಚದಲ್ಲಿ ಮಾತ್ರ ಅಧಿಕೃತ ಬಂಡವಾಳ ವೆಚ್ಚ ಕೈಗೊಳ್ಳಲು ಮಂಡಳಿಗೆ ಅಧಿಕಾರವಿರುತ್ತದೆ. ಮೊಮೊರಂಡಮ್ ಆಫ್ ಅಸೋಸಯೇಶನ್ ನಲ್ಲಿ ಹೊಸ ಯೋಜನೆಗಳು ಸೇರಿರುವುದರಿಂದ ಹಾಗೂ ಪ್ರಸ್ತುತ ಚಾಲ್ತಿಯಲ್ಲಿರುವ ಯೋಜನೆಗಳು ರೂ.10.00 ಕೋಟಿ ಬಂಡವಾಳ ವೆಚ್ಚಕ್ಕಿಂತ ಹೆಚ್ಚು ಇರುವುದರಿಂದ 2020–21 ನೇ ಸಾಲಿಯಲ್ಲಿ ಹಾಗೂ ಭವಿಷ್ಯದಲ್ಲಿ ಕಂಪನಿಯ ಅಧಿಕೃತ ಬಂಡವಾಳವು ರೂ.10.00 ಕೋಟಿಗಳಿಗಿಂತ ಹೆಚ್ಚಾಗಿರುತ್ತದೆ ಎಂದು ಭಾವಿಸಲಾಯಿತು. ಸಂಸ್ಥೆಯು ಕಾನೂನು ಅಡಿ ರಚಿತವಾಗಿರುವ ಸರ್ಕಾರದ ಸ್ವಂತ ಸಂಸ್ಥೆಯಾಗಿದ್ದು, ಸರ್ಕಾರ ಪರ ನೇಮಕಾತಿಯಾಗಿರುವ ಮಂಡಳಿ ನಿರ್ದೇಶಕರುಗಳು ಇರುವುದರಿಂದ ಅಧಿಕೃತ ಬಂಡವಾಳ ವೆಚ್ಚಕ್ಕೆ ಸರ್ಕಾರದ ಅನುಮೋದನೆ ಅಗತ್ಯವಿರುವುದಿಲ್ಲ ಹಾಗೂ ಅಂತಹ ಬಂಡವಾಳ ವೆಚ್ಚಕ್ಕೆ ಮಂಡಳಿಯು ಅಧಿಕಾರವನ್ನು ಹೊಂದಿರಬೇಕೆಂದು ಮಂಡಳಿಯು ಅಭಿಪ್ರಯಿಸಿ ಆರ್ಟಿಕಲ್ 15(ಡಿ)ಯನ್ನು ರದ್ದು ಗೊಳಿಸುವ ಬಗ್ಗೆ ಗೊತ್ತುವಳಿಯನ್ನು ಸದಸ್ಯರ ಅನುಮೋದನೆಗೆ ಶಿಫಾರಸ್ಸು ಮಾಡಲಾಗಿದೆ.

ಕಂಪನಿ ಕಾಯ್ದೆ 2013 ರ ಪರಿಚ್ಛೇದ 14 ರನ್ವಯ ಸಂಘ ನಿಯಮಾವಳಿಯನ್ನು ಮಾರ್ಪಾಡು ಮಾಡಲು ವಿಶೇಷ ಗೊತ್ತುವಳಿಯನ್ನು ಅಳವಡಿಸಿ ಸದಸ್ಯರ ಅನುಮೋದನೆ ಪಡೆಯುವುದು ಅಗತ್ಯವಾಗಿದೆ.

ಮಂಡಳಿಯು ಮೇಲೆ 5 ರಲ್ಲಿ ಪ್ರಸ್ತಾಪಿಸಲಾಗಿರುವ ವಿಶೇಷ ಗೊತ್ತುವಳಿಯನ್ನು ಸದಸ್ಯರ ಅಂಗೀಕಾರಕ್ಕಾಗಿ ಶಿಫಾರಸು ಮಾಡುತ್ತದೆ.

ಮೇಲಿನ 5 ರಲ್ಲಿ ಹೇಳಲಾಗಿರುವ ಗೊತ್ತುವಳಿಯಲ್ಲಿ ಕಂಪೆನಿಯ ಯಾವು ನಿರ್ದೇಶಕರಾಗಲೀ ಅಥವಾ ಅವರ ಸಂಬಂಧಿಕರಾಗಲೀ ಯಾವುದೇ ಬಗೆಯ ಹಿತಾಸಕ್ತಿಗಳನ್ನು ಹೊಂದಿರುವುದಿಲ್ಲ.

ಮಂಡಳಿಯ ಅಪ್ಪಣೆಯ ಮೇರೆಗೆ
ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್

ಸಹಿ/–
ನವೀನ್ ರಾಜ್ ಸಿಂಗ್, ಭಾಆಸೇ
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 06854287

ಸ್ಥಳ: ಬೆಂಗಳೂರು
ದಿನಾಂಕ: 5ನೇ ಡಿಸೆಂಬರ್ 2020

ಶ್ರೀ ಎಸ್. ಲಿಂಗಮೂರ್ತಿ, ಬಿ.ಎಸ್.ಸಿ. ಎಂ.ಬಿ.ಎ.
ಅಧ್ಯಕ್ಷರು, ಕೆಎಸ್ಎಂಎಲ್

ನಿರ್ದೇಶಕ ಮಂಡಳಿಯ ವರದಿ

ಆತ್ಮೀಯ ಸದಸ್ಯರೆ,

ದಿನಾಂಕ 31ನೇ ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷದ ಲೆಕ್ಕಪರಿಶೋಧಿತ ಲೆಕ್ಕತಃಖ್ತೆಗಳ ಜೊತೆಗೆ 54ನೇ ವಾರ್ಷಿಕ ವರದಿಯನ್ನು ಮಂಡಿಸಲು ನಿಮ್ಮ ನಿರ್ದೇಶಕರು ಹರ್ಷಿಸುತ್ತಾರೆ.

1) ಆರ್ಥಿಕ ಸಾರಾಂಶ/ಮುಖ್ಯಾಂಶಗಳು, ಕಾರ್ಯಾಚರಣೆ, ಸ್ಥಿತಿಗತಿ:

(ಕೋಟಿ ರೂ.ಗಳು)

ವಿವರಗಳು	**2019–20**	**2018–2019**
ಒಟ್ಟು ಆದಾಯ	357.22	185.51
ಬಡ್ಡಿ ಮತ್ತು ಸವಕಳಿಯ ನಂತರ ಲಾಭ	196.51	43.18
ಹಣಕಾಸು ಹೊಂದಿಸುವಿಕೆ ಶುಲ್ಕ	10.06	10.56
ಸವಕಳಿಗಾಗಿ ಹವಣಿಕೆ	11.50	11.01
ತೆರಿಗೆ ಮುನ್ನ ನಿವ್ವಳ ಲಾಭ	**196.51**	**43.18**
ತೆರಿಗೆಗಾಗಿ ಹವಣಿಕೆ	60.07	24.02
ತೆರಿಗೆಯ ನಂತರ ನಿವ್ವಳ ಲಾಭ	**129.93**	**19.12**
ಮುಂದಕ್ಕೆ ಒಯ್ಯಲಾದ ಲಾಭದ ಶಿಲ್ಕು	2250.13	2238.24
ವಿತರಣೆಗೆ ಲಭ್ಯವಿರುವ ಶಿಲ್ಕು	–	–
ಸ್ವಾಮ್ಯ ಷೇರುಗಳ ಮೇಲಿನ ಪ್ರಸ್ತಾವಿತ ಲಾಭಾಂಶ	30.00	12.00
ಪ್ರಸ್ತಾವಿತ ಲಾಭಾಂಶದ ಮೇಲಿನ ತೆರಿಗೆ	–	2.46
ಸಾಮಾನ್ಯ ಮುಡಿಪಿಗೆ ವರ್ಗಾಯಿಸಲಾದ ಮೊತ್ತ	–	–
ಸಂತುಲನ ಪಟ್ಟಿಗೆ ಒಯ್ಯಲಾದ ಹೆಚ್ಚಳ (ಸಂಚಯಿತ)	2365.59	2250.13

ವ್ಯಾಪಾರ ಕಾರ್ಯಾಚರಣೆಗಳು:

ಕಂಪೆನಿಯು ಕಳೆದ ವರ್ಷದ 8.94 ಲಕ್ಷ ಎಂಟಿಎಸ್‌ಗೆ ಪ್ರತಿಯಾಗಿ ಈ ವರ್ಷ 7.63 ಲಕ್ಷ ಎಂಟಿಎಸ್ ನಷ್ಟು ಕಬ್ಬಿಣ ಅದಿರಿನ ಉತ್ಪಾದನೆಯನ್ನು ಸಾಧಿಸಿರುತ್ತದೆ. ಸುಬ್ಬರಾಯನಹಳ್ಳಿ ಕಬ್ಬಿಣದ ಅದಿರುವ ಗಣಿಯ ಎಫ್‌ಸಿ ಪಡೆಯಲು ವಿಳಂಬವಾಗಿದ್ದು, ಫೆಬ್ರವರಿ 2020 ರಲ್ಲಿ ನವೀಕರಣ ಪರವಾನಗಿ ದೊರೆತಿರುತ್ತದೆ. ಇದು ಉತ್ಪಾದನೆಯಲ್ಲಿನ ಕೊರತೆಗೆ ಕಾರಣವಾಗಿದೆ. ಇತರ ಖನಿಜಗಳಿಗೆ ಸಂಬಂಧಿಸಿದಂತೆ ಕಂಪೆನಿ 128723 ಎಂಟಿಎಸ್ ಉತ್ಪಾದನೆಯನ್ನು ಸಾಧಿಸಿದೆ.

ಕಂಪೆನಿಯು ಕಳೆದ ವರ್ಷದ 2715 ಎಂ3 ಗೆ ಪ್ರತಿಯಾಗಿ ಈ ವರ್ಷ 3678 ಎಂ3 ಯಷ್ಟು ಗ್ರಾನೈಟ್ ಉತ್ಪಾದನೆಯನ್ನು ಸಾಧಿಸಿದೆ; ಹೆಚ್ಚುವರಿಯಾಗಿ ಎರಡು ಕಲ್ಲು ಗಣಿಗಳನ್ನು ಪ್ರಾರಂಭಿಸಿರುವುದರು ಹೆಚ್ಚಿನ ಉತ್ಪಾದನೆಗೆ ಕಾರಣವಾಗಿದೆ.

2019–20ರ ಹಣಕಾಸು ವರ್ಷದಲ್ಲಿ ಕಬ್ಬಿಣ ಅದಿರಿನ ಹೊರತೆಗೆಯುವಿಕೆ ಮತ್ತು ಮಾರಾಟ ಕೆಳಗಿನಂತಿವೆ:

ವರ್ಗ	ಪರಿಮಾಣ (ಎಂಟಿಎಸ್)	ಮೊತ್ತ (ರೂ)
ವರ್ಗ – ಎ ಟಿ.ಐ.ಒ.ಎಂ	228845	48,04,58,810/–
ವರ್ಗ – ಬಿ ಎಸ್‌ಐಒಎಂ/ ಜೆಐಒಎಂ	477045	135,67,22,651/–
ಒಟ್ಟು	**705890**	**183,71,81,461/–**

ಇತರ ಖನಿಜಗಳು/ಗ್ರಾನೈಟ್	ಸಾಕ್ಷಾತ್ಕಾರ ಮೊತ್ತ (ರೂ)
ಖನಿಜಗಳು	10,72,16,563/–
ಗ್ರಾನೈಟ್	7,92,25,481/–
ಒಟ್ಟು	**18,64,42,044/–**

2019–20 ರ ಹಣಕಾಸು ವರ್ಷದಲ್ಲಿ ಕಂಪೆನಿಯು ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರಕ್ಕೆ ಸಂದಾಯಮಾಡಿದ ಆದಾಯ:

ಕರ್ನಾಟಕ ಸರ್ಕಾರ

(ಮೊತ್ತ ಕೋಟಿ ರೂ)

ವಿವರಗಳು	2019–20	2018–19
ರಾಯಧನ	25.94	2.16
ಮಾರಾಟ ತೆರಿಗೆ	022	0.62
ಅರಣ್ಯ ಅಭಿವೃದ್ಧಿ ತೆರಿಗೆ	–	–
ಪರಿಸರ ಸಂರಕ್ಷಣ ಶುಲ್ಕ	–	0.09
ಜಿಎಸ್‌ಟಿ (ಎಸ್‌ಜಿಎಸ್‌ಟಿ/ಸಿಜಿಎಸ್‌ಟಿ)	438.67	188.12
ವಂತಿಗೆಗಳು	–	–
ಮುಖ್ಯಮಂತ್ರಿಗಳ ಪರಿಹಾರ ನಿಧಿ	15.00	10.00

ಭಾರತ ಸರ್ಕಾರ:

(ಮೊತ್ತ ಕೋಟಿ ರೂ)

ವಿವರಗಳು	2019–20	2018–19
ಆದಾಯ ತೆರಿಗೆ	69.11	61.27
ಲಾಭಾಂಶ ತೆರಿಗೆ	2.47	1.23
ಕಲ್ಯಾಣ ಉಪಕರ	–	–

ಕಂಪೆನಿಯ ಸ್ಥಿತಿಗತಿ ಮತ್ತು ಭವಿಷ್ಯದ ದೃಷ್ಟಿ:

ನಿಮ್ಮ ನಿರ್ದೇಶಕರು ಗಣಿಗಾರಿಕೆಗೆ ಸಂಬಂಧಿಸಿದ ವಾಣಿಜ್ಯ ಚಟುವಟಿಕೆಗಳನ್ನು ನಡೆಸಲುವಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಹಾಗೂ ತನ್ನ ವ್ಯಾಪಾರ ನೀತಿಯನ್ನು ಎಚ್ಚರಿಕೆಯಿಂದ ಅನುಸರಿಸುತ್ತಾರೆ.

ಕರ್ನಾಟಕ ಸರ್ಕಾರವು ಸಂಡೂರಿನ ಹದ್ದಿನಪಡೆಯಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆಯನ್ನು ನಡೆಸಲು 158 ಹೆಕ್ಟೇರುಗಳ ಗುತ್ತಿಗೆ ಭೂಮಿಯನ್ನು ಮಂಜೂರುಮಾಡಲು ಒಪ್ಪಿದೆ. ಕಂಪೆನಿಯು ತನ್ನ ಉತ್ಪಾದನೆಯನ್ನು ವಾರ್ಷಿಕ 4 ಎಂಎಂಟಿ ಗೆ ಹೆಚ್ಚಿಸಬಹುದಾಗಿದೆ

ಕಂಪೆನಿಯು ತನ್ನ ಆದಾಯವನ್ನು ಹೆಚ್ಚಿಸಲು ಹಾಸನದ ಗ್ರಾನೈಟ್ ಕಟಿಂಗ್ ಮತ್ತು ಪಾಲಿಶಿಂಗ್ ಘಟಕದಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಹಾಗೂ ಮೈಶುಗರ್ ಕಂಪೆನಿಯೊಂದಿಗೆ ಜೊತೆಸೇರಿ ಮೈಶುಗರ್ ಕಟ್ಟಡ, ಬೆಂಗಳೂರು – ಇಲ್ಲಿ ವಾಣಿಜ್ಯ ಸಂಕೀರ್ಣವೊಂದನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದೆ.

ನಿಮ್ಮ ಕಂಪೆನಿಯು ಚೈನಾ ಕ್ಲೇ ಉತ್ಪಾದನೆಯ ಸಾಮರ್ಥ್ಯವನ್ನು 80 ಟಿಪಿಡಿ ಯಿಂದ 160 ಟಿಪಿಡಿ ಗೆ ಹೆಚ್ಚಿಸಲು ನಂದಿಹಳ್ಳಿ ಜೇಡಿಮಣ್ಣು ಗಣಿಗಳಲ್ಲಿ ಚೈನಾ ಕ್ಲೇ ಸ್ಥಾವರವನ್ನು ಸ್ಥಾಪಿಸಲು ಉದ್ದೇಶಿಸಿದೆ.

ಕರ್ನಾಟಕ ಸರ್ಕಾರವು ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಮರಳು ಗಣಿಗಾರಿಕೆಯನ್ನು ಸಂಸ್ಥೆವತಿಯಿಂದ ನಡೆಸಲು ಅನುಮೋದನೆ ನೀಡಿರುತ್ತದೆ. ಸದರಿ ಕಾರ್ಯವು ಪ್ರಗತಿಯಲ್ಲಿರುತ್ತದೆ.

ಕರ್ನಾಟಕ ಸರ್ಕಾರವು 5 ಬ್ಲಾಕ್‌ಗಳಲ್ಲಿ ಸ್ಪಾಚುಟರಿ ಪ್ರಿ ಎಂಬಡೆಡ್ ಕ್ರಿಯರೆನ್ಸ್ (PEC) ಪಡೆಯುವ ಅಧಿಕಾರವನ್ನು ಸಂಸ್ಥೆಗೆ ನೀಡಿರುತ್ತದೆ.

ಲಾಕ್ ಡೌನ್ – ಕೋವಿಡ್–19

2019–20 ನೇ ಸಾಲಿನಲ್ಲಿ ಜಗತ್ತಿನಾದ್ಯಂತ ಕೊರೋನಾ ವೈರಸ್ ಹರಡಿದ್ದು, ಇದರಿಂದಾಗಿ ಅನೇಕ ಸಾವುನೋವುಗಳು ಉಂಟಾಗಿರುತ್ತದೆ. ಸಾಮಾಜಿಕ ಅಂತರವೊಂದೇ ಈ ವೈರಸ್ ಗೆ ತಡೆಗಟುವ ಏಕೈಕ ಮಾರ್ಗವಾಗಿದ್ದು, ವೈರಸ್ ಹರಡುವಿಕೆಯನ್ನು ತೆಯುವ ಸಲುವಾಗಿ ಮುಂಜಾಗ್ರತಾ ಕ್ರಮವಾಗಿ ಜಗತ್ತಿನಾದ್ಯಂತ ಲಾಕ್‌ಡೌನ್ ಮಾಡಲಾಗಿತ್ತು. ಪ್ರರಂಭದಲ್ಲೇ ತೆಗೆದುಕೊಳ್ಳಲಾದ ಉಪಕ್ರಮಗಳ ಫಲವಾಗಿ ಭಾರತವು 24 ಮಾರ್ಚ್ 2020ರಂದು ಲಾಕ್‌ಡೌನ್ ಘೋಷಿಸಿತು. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ನಿರ್ದೇಶನಗಳನ್ನು ನಿಮ್ಮ ಸಂಸ್ಥೆಯೂ ಎಲ್ಲ ಕಛೇರಿಗಳಲ್ಲೂ ಕಟ್ಟುನಿಟ್ಟಾಗಿ ಪಾಲಿಸಿತು. ಸಂಸ್ಥೆಯ ನೌಕರರು, ವ್ಯಾಪಾರದಾರರು, ಗ್ರಾಹಕರು, ಗೊರಗುತ್ತಿಗೆ ಅಭಿಕರಣಗಳು, ಸಮಾಲೋಚಕರು ಮತ್ತು ಇತರ ಸಂಬಂಧಿತರೆಲ್ಲರೂ ತಮ್ಮ ಕಾರ್ಯಾಚರಣೆಗಳನ್ನು ಬಹುತೇಕ ಪೂರ್ಣವಾಗಿ ನಿಲ್ಲಿಸಬೇಕಾಯಿತು.

ಇದರಿಂದಾಗಿ ಸಂಸ್ಥೆಗೆ ಆಗಿರುವ ವ್ಯಾಪಾರಿ ನಷ್ಟಗಳು ಮತ್ತು ಆರ್ಥಿಕ ಹೊಡೆತಗಳನ್ನು ಅಂದಾಜು ಮಾಡಲಾಗುತ್ತಿದೆ.

2) ಹಣಕಾಸು ತಃಖ್ತೆಗಳ ದಿನಾಂಕದ ತರುವಾಯದ ಘಟನೆಗಳು:

31 ಮಾರ್ಚ್ 2020ರ ನಂತರ ಮತ್ತು ಈ ವರದಿಯ ಸಹಿಯ ನಡುವೆ ಯಾವುದೇ ಮಹತ್ವದ ಬದಲಾವಣೆಗಳು ಘಟಿಸಿರುವುದಿಲ್ಲ.

3) ವ್ಯಾಪಾರದ ಸ್ವರೂಪದಲ್ಲಿನ ಬದಲಾವಣೆ:

31.03.2020ಕ್ಕೆ ಕೊನೆಗೊಂಡ ವರ್ಷದಲ್ಲಿ ಕಂಪೆನಯ ವ್ಯಾಪಾರದಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

4) **ಲಾಭಾಂಶ:**

ನಿಮ್ಮ ಮಂಡಳಿಯು 2019–20 ಹಣಕಾಸು ವರ್ಷಕ್ಕೆ ರೂ. 100/– ರ ಪೂರ್ಣವಾಗಿ ಸಂದಾಯವಾದ, ಪ್ರತಿಯೊಂದು ಸ್ವಾಮ್ಯ ಷೇರಿಗೆ 500/– ರೂ. ಗಳನ್ನು – ಅರ್ಥಾತ್, ರೂ.600 ಲಕ್ಷದಷ್ಟು ಪೂರ್ಣವಾಗಿ ಸಂದಾಯವಾದ ಷೇರು ಬಂಡವಾಳದ ಮೇಲೆ 500% ಲಾಭಾಂಶವನ್ನು, ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಷೇರದುದಾರರ ಅಂಗೀಕಾರಕ್ಕೆ ಬದ್ಧವಾಗಿ ಶಿಫಾರಸುಮಾಡಿದೆ.

5) ಮುಡಿಪುಗಳಿಗೆ ವರ್ಗಾಯಿಸಲಾದ ಮೊತ್ತಗಳು:

31.03.2020 ಕ್ಕೆ ಕೊನೆಗೊಂಡ ವರ್ಷದಲ್ಲಿ ನಿಮ್ಮ ಕಂಪೆನಿ ರೂ. 115.47 ಕೋಟಿ ಮೊತ್ತವನ್ನು ಮುಡಿಪುಗಳಿಗೆ ವರ್ಗಾಯಿಸಿದೆ.

6) ಷೇರು ಬಂಡವಾಳದಲ್ಲಿನ ಬದಲಾವಣೆಗಳು:

ವರದಿಯ ವರ್ಷದಲ್ಲಿ ಕಂಪೆನಿಯ ಬಂಡವಾಳ ರಚನೆಯಲ್ಲಿ ಯಾವುದೇ ಬದಲಾವಣೆಗಳಾಗಲಿಲ್ಲ. ಬಂಡವಾಳ ರಚನೆ ಕೆಳಗಿನಂತಿದೆ:

ಕಂಪೆನಿಯ ಅಧಿಕೃತ ಬಂಡವಾಳ:

ರೂ. 7,00,00,000/– (ಏಳು ಕೋಟಿ ರೂ. ಮಾತ್ರ) : ಪ್ರತಿಯೊಂದು ರೂ. 100/– (ರೂ. ಒಂದು ನೂರು ಮಾತ್ರ) 7,00,000 (ಏಳು ಲಕ್ಷ ಮಾತ್ರ) ಸ್ವಾಮ್ಯ ಷೇರುಗಳು.

ನೀಡಿಕೆಯಾದ, ವಂತಿಗೆಯಾದ ಮತ್ತು ಸಂದಾಯವಾದ ಕಂಪೆನಿಯ ಬಂಡವಾಳ:

ರೂ. 6,00,00,000/–(ಆರು ಕೋಟಿ ರೂ. ಮಾತ್ರ) : ಪ್ರತಿಯೊಂದು ರೂ. 100/– (ರೂ. ಒಂದು ನೂರು ಮಾತ್ರ) 6,00,000 (ಆರು ಲಕ್ಷ ಮಾತ್ರ) ಸ್ವಾಮ್ಯ ಷೇರುಗಳು.

7) ಇನ್‌ವೆಸ್ಟರ್ಸ್ ಎಜುಕೇಶನ್ ಅನದ ಪ್ರೊಟೆಕ್ಷನ್ ಫಂಡ್

ಕಂಪನಿ ಕಾಯ್ದೆ 2013 ರಲ್ಲಿ ವಿವರಿಸಿರುವಂತೆ ಐಇಪಿಎಫ್ ಅಥಾರಿಟಿ (ಲೆಕ್ಕ, ವರ್ಗಾವಣೆ ಮತ್ತು ಮರುಪಾವತಿ) ಕಾಯ್ದೆ 2016 ರ (ಐಇಪಿಎಫ್ ನಿಯಮ) ಅನ್ವಯ ಸಂಸ್ಥೆಯು ಪಾವತಿಸದೇ ಇರುವ ಅಥವಾ ಹಕ್ಕುಸಲ್ಲಿಕೆಯಾಗದ ಡಿವಿಡೆಂಡ್ ಮೊತ್ತವನ್ನು ಕೇಂದ್ರ ಸರ್ಕಾರದ ಐಇಪಿಎಫ್ ಗೆ ವರ್ಗಾವಣೆ ಮಾಡಬೇಕಾಗಿರುತ್ತದೆ. ಸದರಿ ಕಾಯ್ದೆಯನ್ವಯ 7 ವರ್ಷ ಅಥವಾ ಅದಕ್ಕಿಂತರ ಹೆಚ್ಚಿನ ವರ್ಷದ ಪಾವತಿಯಾಗದೇ ಇರುವ ಡಿವಿಡೆಂಡ್ ಅನ್ನು ಐಇಪಿಎಫ್ ಪ್ರಾಧಿಕಾರದ ಡಿಮ್ಯಾಟ್ ಖಾತೆಗೆ ಜಮಾ ಮಾಡಬೇಕಾಗಿರುತ್ತದೆ.

8) ಮಂಡಳಿ ಸಭೆಗಳು:

ಮಂಡಳಿಯ ಸಭೆಗಳನ್ನು ನಿಯತವಾಗಿ ನಡೆಸಲಾಗುತ್ತಿದ್ದು ಎರಡು ಕ್ರಮಾನುಗತ ಸಭೆಗಳ ನಡುವೆ 120 ದಿನಗಳಿಗಿಂತಲೂ ಹೆಚ್ಚಿನ ಸಮಯಾವಧಿ ಇರುವುದಿಲ್ಲ. ಅಗತ್ಯವಿದ್ದಾಗ ಮಂಡಳಿಯು ಹೆಚ್ಚಿನ ಸಭೆಗಳನ್ನು ಸಹ ನಡೆಸುತ್ತದೆ. ವರದಿಯ ವರ್ಷದಲ್ಲಿ 03.06.2019, 09.09.2019, 04.12.2019 ಮತ್ತು 21.01.2020ರಂದು ನಾಲ್ಕು (4) ಬಾರಿ ಮಂಡಳಿಯು ಸಭೆ ಸೇರಿತ್ತು.

ಸಭೆಯ ಕಾರ್ಯಸೂಚಿಯನ್ನು ನಿರ್ದೇಶಕರುಗಳಿಗೆ ಮೊದಲೇ ತಲುಪಿಸಲಾಗಿರುತ್ತದೆ. ನಿರ್ದೇಶಕ ಮಂಡಳಿಯ ಸಭೆಗಳ ನಡವಳಿಯನ್ನು ಮಂಡಳಿಯ ಸದಸ್ಯರುಗಳ ಅವಗಾಹನೆಗೆಂದು ಅವರಿಗೆ ತಲುಪಿಸಲಾಗುತ್ತದೆ.

9) ನಿರ್ದೇಶಕರು ಮತ್ತು ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿ:

ನಿರ್ದೇಶಕ ಮಂಡಳಿಯ ಸಂರಚನೆ ಕೆಳಗಿನಂತಿದೆ:

ಶ್ರೀ ಎಸ್ ಲಿಂಗಮೂರ್ತಿ	ಅಧ್ಯಕ್ಷರು (27.11.2020ರಿಂದ ಇಂದಿನವರೆಗೆ)
ಶ್ರೀ ಜಿ ಕುಮಾರ್ ನಾಯಕ್, ಭಾ.ಆ.ಸೇ	ಅಧ್ಯಕ್ಷರು (04.09.2020ರಿಂದ 27.11.2020 ರವರೆಗೆ) ನಿರ್ದೇಶಕರು (27.11.2020ರಿಂದ ಇಂದಿನವರೆಗೆ)
ಶ್ರೀ ಎಂ. ಮಹೇಶ್ವರ ರಾವ್, ಭಾ.ಆ.ಸೇ.	ಅಧ್ಯಕ್ಷರು (30.07.2019ರಿಂದ 04.09.2020 ರವರೆಗೆ) ನಿರ್ದೇಶಕರು (16.03.2019ರಿಂದ 04.09.2020 ರವರೆಗೆ)
ಶ್ರೀಮತಿ ಲಕ್ಷ್ಮಿ ಆರ್. ಹೆಬ್ಬಾಳಕರ್, ಮಾನ್ಯ ವಿಧಾನಸಭಾ ಸದಸ್ಯರು	ಅಧ್ಯಕ್ಷರು (07.01.2019ರಿಂದ 30.07.2019 ರವರೆಗೆ)
ಶ್ರೀ ರಾಜೇಂದರ್ ಕುಮಾರ್ ಕಟಾರಿಯ, ಭಾ.ಆ.ಸೇ.	ನಿರ್ದೇಶಕರು (03.03.2017ರಿಂದ 25.02.2019 ರವರೆಗೆ)
ಶ್ರೀ ನವೀನ್ ರಾಜ್ ಸಿಂಗ್, ಭಾ.ಆ.ಸೇ.	ವ್ಯವಸ್ಥಾಪಕ ನಿರ್ದೇಶಕರು (27.07.2017ರಿಂದ ಇಂದಿನವರೆಗೆ)
ಡಾ. ಏಕ್‌ರೂಪ್ ಕೌರ್, ಭಾ.ಆ.ಸೇ	ನಿರ್ದೇಶಕರು (05.09.2019ರಿಂದ ಇಂದಿನವರೆಗೆ)
ಶ್ರೀ ಎನ್. ಎಸ್. ಪ್ರಸನ್ನಕುಮಾರ್, ಭಾ.ಆ.ಸೇ.	ನಿರ್ದೇಶಕರು (29.12.2017ರಿಂದ 27.06.2019 ರವರೆಗೆ)
ಶ್ರೀಮತಿ ವಿ. ಚೈತ್ರ, ಭಾ.ಆ.ಸೇ.	ನಿರ್ದೇಶಕರು (04.04.2018ರಿಂದ ಇಂದಿನವರೆಗೆ)
ಶ್ರೀ ಅನಿಲ್ ಕುಮಾರ್ ಜಾ, ಭಾ.ಆ.ಸೇ	ನಿರ್ದೇಶಕರು (29.06.2018ರಿಂದ 05.09.2019 ರವರೆಗೆ)
ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ	ನಿರ್ದೇಶಕರು (29.06.2018ರಿಂದ 11.09.2019 ರವರೆಗೆ) ನಿರ್ದೇಶಕರು (05.11.2020ರಿಂದ ಇಂದಿನವರೆಗೆ)
ಡಾ. ರಿಚರ್ಡ್ ವಿನ್ಸಂಟ್ ಡಿಸೋಜ, ಭಾ.ಆ.ಸೇ.	ನಿರ್ದೇಶಕರು (04.04.2018ರಿಂದ 19.09.2019 ರವರೆಗೆ)
ಶ್ರೀ ಪ್ರಭಾಶ್ ಚಂದ್ರ ರೇ, ಭಾ.ಆ.ಸೇ.	ನಿರ್ದೇಶಕರು (27.06.2019ರಿಂದ 18.11.2019 ರವರೆಗೆ)
ಶ್ರೀ ಶಿವಯೋಗಿ ಸಿ. ಕಳಸದ್, ಭಾ.ಆ.ಸೇ.	ನಿರ್ದೇಶಕರು (11.09.2019ರಿಂದ 05.11.2019 ರವರೆಗೆ)
ಶ್ರೀಮತಿ ಸಲ್ಮಾ ಕೆ. ಫಾಹಿಮ್, ಭಾ.ಆ.ಸೇ.	ನಿರ್ದೇಶಕರು (19.09.2019ರಿಂದ ಇಂದಿನವರೆಗೆ)
ಡಾ: ಎನ್. ಶಿವಶಂಕರ, ಭಾ.ಆ.ಸೇ.	ನಿರ್ದೇಶಕರು (18.11.2019ರಿಂದ 04.09.2020 ರವರೆಗೆ)
ಶ್ರೀ ಡಿ. ಎಸ್. ರಮೇಶ್, ಭಾ.ಆ.ಸೇ	ನಿರ್ದೇಶಕರು (04.09.2020ರಿಂದ ಇಂದಿನವರೆಗೆ)
ಶ್ರೀ ರುದ್ರಮೂರ್ತಿ ಎಂ.	ಅಧಿಕಾರೇತರ ನಿರ್ದೇಶಕರು (20.11.2020ರಿಂದ ಇಂದಿನವರೆಗೆ)

ಕಂಪೆನಿಯು ಹೊರಹೋಗುತ್ತಿರುವ ನಿರ್ದೇಶಕರು ತಮ್ಮ ಸೇವಾವಧಿಯಲ್ಲಿ ಅವರು ಸಲ್ಲಿಸಿದ ಸೇವೆಯನ್ನು ನಿಮ್ಮ ಮಂಡಳಿಯು ಕೃತಜ್ಞತೆಯಿಂದ ಸ್ಮರಿಸುತ್ತದೆ.

10) ವಾರ್ಷಿಕ ಆಧಾರದ ಮೇಲೆ ಸ್ವತಂತ್ರ ನಿರ್ದೇಶಕರಿಂದ ಘೋಷಣೆ:

ಸರ್ಕಾರಿ ಕಂಪೆನಿಯಾಗಿರುವ ಕಾರಣ ಮತ್ತು ಕರ್ನಾಟಕ ಸರ್ಕಾರವೇ ನಿರ್ದೇಶಕರುಗಳನ್ನು ನೇಮಿಸಿರುವುದರಿಂದ ಇದು ಅನ್ವಯವಾಗುವುದಿಲ್ಲ.

11) ಲೆಕ್ಕಪರಿಶೋಧನಾ ಸಮಿತಿಯ ರಚನೆ:

ಕಾಯ್ದೆಯ ಅನ್ವಯ ರಚಿತವಾದ ಲೆಕ್ಕಪರಿಶೋಧನಾ ಸಮಿತಿಯು ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಿದೆ. ಈ ವರದಿಯ ದಿನಾಂಕದಂದು ಇದ್ದಂತೆ ಲೆಕ್ಕಪರಿಶೋಧನಾ ಸಮಿತಿಯ ರಚನೆ ಇಂತಿದೆ:

1. **ಶ್ರೀ ಜಿ. ಕುಮಾರ್ ನಾಯಕ್,** ಭಾ.ಆ.ಸೇ – ಅಧ್ಯಕ್ಷರು
2. **ಶ್ರೀ ನವೀನ್ ರಾಜ್ ಸಿಂಗ್,** ಭಾ.ಆ.ಸೇ – ಸದಸ್ಯರು
3. **ಸಲ್ಮಾ ಕೆ. ಫಾಹಿಮ್,** ಭಾ.ಆ.ಸೇ – ಸದಸ್ಯರು

ಹೊರಹೋಗುತ್ತಿರುವ ಲೆಕ್ಕಪರಿಶೋಧನಾ ಸಮಿತಿಯ ಸದಸ್ಯರು

1. **ಶ್ರೀ ಅನಿಲ್ ಕುಮಾರ್ ಝಾ,** ಭಾ.ಆ.ಸೇ – ಅಧ್ಯಕ್ಷರು
2. **ಶ್ರೀ ಮಹೇಶ್ವರ್ ರಾವ್,** ಭಾ.ಆ.ಸೇ – ಅಧ್ಯಕ್ಷರು
3. **ಶ್ರೀ ಎನ್ ಎಸ್ ಪ್ರಸನ್ನಕುಮಾರ್,** ಭಾ.ಆ.ಸೇ – ಸದಸ್ಯರು
4. **ಶ್ರೀ ರಿಚರ್ಡ್ ವಿನ್ಸಂಟ್ ಡಿ'ಸೋಜಾ,** ಭಾ.ಆ.ಸೇ – ಸದಸ್ಯರು

ಸಾಮಾಜಿಕ ಸಾಂಸ್ಥಿಕ ಹೊಣೆಗಾರಿಕೆ ಸಮಿತಿಯ ರಚನೆ (ಸಿಎಸ್ಆರ್) : ಕಾಯ್ದೆಯ ಅನ್ವಯ ರಚಿತವಾದ ಸಾಮಾಜಿಕ ಸಾಂಸ್ಥಿಕ ಹೊಣೆಗಾರಿಕೆ ಸಮಿತಿಯು ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಿದೆ. ಈ ವರದಿಯ ದಿನಾಂಕದಂದು ಇದ್ದಂತೆ ಲೆಕ್ಕಪರಿಶೋಧನಾ ಸಮಿತಿಯ ರಚನೆ ಇಂತಿದೆ:

1. **ಶ್ರೀ ಜಿ. ಕುಮಾರ್ ನಾಯಕ್,** ಭಾ.ಆ.ಸೇ – ಅಧ್ಯಕ್ಷರು
2. **ಶ್ರೀ ನವೀನ್ ರಾಜ್ ಸಿಂಗ್,** ಭಾ.ಆ.ಸೇ – ಸದಸ್ಯರು
3. **ಸಲ್ಮಾ ಕೆ. ಫಾಹಿಮ್,** ಭಾ.ಆ.ಸೇ – ಸದಸ್ಯರು

ಹೊರಹೋಗುತ್ತಿರುವ ಸಾಮಾಜಿಕ ಸಾಂಸ್ಥಿಕ ಹೊಣೆಗಾರಿಕೆ ಸಮಿತಿಯ ಸದಸ್ಯರು

1. **ಶ್ರೀ ಮಹೇಶ್ವರ್ ರಾವ್,** ಭಾ.ಆ.ಸೇ – ಅಧ್ಯಕ್ಷರು
2. **ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ,** ಭಾ.ಆ.ಸೇ – ಸದಸ್ಯರು
3. **ಶ್ರೀ ರಿಚರ್ಡ್ ವಿನ್ಸಂಟ್ ಡಿ'ಸೋಜಾ,** ಭಾ.ಆ.ಸೇ – ಸದಸ್ಯರು

12) ನಿರ್ದೇಶಕರ ಜವಾಬ್ದಾರಿ ವರದಿ:

ಕಂಪೆನಿ ಕಾಯ್ದೆ 2013ರ ಪರಿಚ್ಛೇದ 134 (5) ಅನುಸಾರ ನಿಮ್ಮ ನಿರ್ದೇಶಕರು ಹೀಗೆ ಸ್ಥಿರೀಕರಿಸುತ್ತಾರೆ:

ಎ) ಕಂಪೆನಿಯ ವಾರ್ಷಿಕ ಲೆಕ್ಕಪತ್ರಗಳನ್ನು ಅನ್ವಯಿಸಬೇಕಾದ ಲೇಖಾಪ್ರಮಾಣಗಳನ್ನು ಅನುಸರಿಸಿ ಮತ್ತು ವಾಸ್ತವಿಕ ಅಸಾಂಗತ್ಯಗಳಿಗೆ ಸಂಬಂಧಿಸಿದಂತೆ ಸೂಕ್ತ ವಿವರಣೆಗಳನ್ನು ಒದಗಿಸಿ ಸಿದ್ಧಪಡಿಸಲಾಗಿದೆ.

ಬಿ) ಕಂಪೆನಿಯ ಆಡಳಿತ ಮಂಡಳಿಯು ಹಣಕಾಸು ವರ್ಷದ ಕೊನೆಯ ಹೊತ್ತಿಗೆ ಕಂಪೆನಿಯ ಸ್ಥಿತಿಗತಿಗಳ ಹಾಗೂ ವರದಿಯ ಅವಧಿಗೆ ಕಂಪೆನಿಯ ಲಾಭ ಮತ್ತು ನಷ್ಟದ ಬಗ್ಗೆ ನೈಜ ಮತ್ತು ನಿಷ್ಪಕ್ಷಪಾತ ಚಿತ್ರವನ್ನು ಒದಗಿಸುವಂತೆ ಯುಕ್ತವೂ ದೂರ ದೃಷ್ಟಿಯುಳ್ಳದ್ದೂ ಆದ ನಿರ್ಧಾರಗಳು ಮತ್ತು ಅಂದಾಜುಗಳನ್ನು ಆಯ್ಕೆಮಾಡಿರುತ್ತಾರೆ ಮತ್ತು ಇದಕ್ಕನುಗುಣವಾದ ಲೇಖಾಕಾರ್ಯನೀತಿಗಳನ್ನು ಆಯ್ಕೆಮಾಡಿ ಅವನ್ನು ನಿಯತವಾಗಿ ಅನ್ವಯಿಸಿದ್ದಾರೆ.

ಸಿ) ಕಂಪೆನಿಯ ಅಸ್ತಿಗಳ ಹಿತರಕ್ಷಣೆಗಾಗಿ ಮತ್ತು ಮೋಸ ಹಾಗೂ ಇತರ ಅಕ್ರಮಗಳನ್ನು ಪತ್ತೆಹಚ್ಚಲು ಮತ್ತು ತಡೆಗಟ್ಟಲು ಸದರಿ ಕಾಯ್ದೆಯ ಉಪಬಂಧಗಳ ಅನುಸಾರವಾಗಿ ಸೂಕ್ತವಾದ ಮತ್ತು ಪರ್ಯಾಪ್ತವಾದ ಲೆಕ್ಕದಾಖಲೆಗಳ ನಿರ್ವಹಣೆಗಾಗಿ ಸೂಕ್ತವಾದ ಮತ್ತು ಅಗತ್ಯವಾದ ಎಚ್ಚರವನ್ನು ನಿರ್ದೇಶಕರು ತೆಗೆದುಕೊಂಡಿದ್ದಾರೆ.

ಡಿ) ನಿರ್ದೇಶಕರು ವಾರ್ಷಿಕ ಲೆಕ್ಕಪತ್ರಗಳನ್ನು ಮುಂದುವರೆಯುತ್ತಿರುವ ಸಂಸ್ಥೆ ಆಧಾರದ ಮೇಲೆ ಸಿದ್ಧಪಡಿಸಿರುತ್ತಾರೆ.

ಇ) ಅನ್ವಯವಾಗುವ ಎಲ್ಲ ಕಾನೂನುಗಳ ಉಪಬಂಧಗಳನ್ನು ಅನುಸರಿಸಲು ಸಹಾಯಕವಾಗುವಂತೆ ನಿಮ್ಮ ನಿರ್ದೇಶಕರು ಸೂಕ್ತ ವ್ಯವಸ್ಥೆಗಳನ್ನು ರೂಪಿಸಿರುತ್ತಾರೆ ಮತ್ತು ಇಂತಹ ವ್ಯವಸ್ಥೆಗಳು ಪರ್ಯಾಪ್ತವಾಗಿದ್ದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ.

ಅಧೀನ ಸಂಸ್ಥೆಗಳು / ಸಹ ಸಂಸ್ಥೆಗಳು / ಜಂಟಿ ಉಪಕ್ರಮಗಳ ಹಣಕಾಸು ಸಾಧನೆ / ಹಣಕಾಸು ಸ್ಥಿತಿಗತಿಗಳ ಬಗ್ಗೆ ಮಾಹಿತಿ:

ಕಂಪೆನಿ ಯವುದೇ ಅಧೀನ ಸಂಸ್ಥೆಗಳು / ಸಹ ಸಂಸ್ಥೆಗಳು / ಜಂಟಿ ಉಪಕ್ರಮಗಳನ್ನು ಹೊಂದಿರುವುದಿಲ್ಲ.

13) ವಾರ್ಷಿಕ ಸಲ್ಲಿಕೆಯ ಉದ್ಧೃತ ಭಾಗ:

ಕಂಪೆನಿ ಕಾಯ್ದೆ, 2013ರ ಪರಿಚ್ಛೇದ 92(3) ಮತ್ತು ಕಂಪೆನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 12(1)ರ ಅನುಸಾರ **ಎಂಜಿಟಿ 9** ರಲ್ಲಿ ವಾರ್ಷಿಕ ಸಲ್ಲಿಕೆಯ ಉದ್ಧೃತಭಾಗವನ್ನು ಈ ವಾರ್ಷಿಕ ವರದಿಯ ಭಾಗವಾಗಿ **ಅನುಬಂಧ ಎ** ಯಲ್ಲಿ ಸೇರಿಸಲಾಗಿದೆ.

14) ಲೆಕ್ಕಪರಿಶೋಧಕರು:

ನಿಮ್ಮ ಕಂಪೆನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನು ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರು ನೇಮಿಸುತ್ತಾರೆ. 2019–20 ರ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ಮೆಸರ್ಸ್ ಎಸ್ ಆರ್ ಆರ್ ಕೆ ಶರ್ಮ & ಅಸೋಸಿಯೇಟ್ಸ್, ಸನದಿ ಲೆಕ್ಕಪರಿಶೋಧಕರು, ಇವರನ್ನು ನೇಮಿಸಲಾಗಿದೆ.

ಶಾಸನಬದ್ಧ ಲೆಕ್ಕಪರಿಶೋಧಕರು ಮಾಡುವ ಪ್ರತಿಯೊಂದು ಪರಿಶೀಲನೆ, ಪರಿಮಿತಿ, ವ್ಯತಿರಿಕ್ತ ಷರಾ ಅಥವಾ ಹಕ್ಕು ತ್ಯಾಗಗಳ ಮೇಲೆ ಮಂಡಳಿ ಒದಗಿಸಿರುವ ವಿವರಣೆಗಳು ಅಥವಾ ಅಭಿಪ್ರಾಯಗಳನ್ನು ಕೆಳಗೆ ಒದಗಿಸಲಾಗಿದೆ:

ಹಣಕಾಸು ವರ್ಷ 2019–20ರ ಲೆಕ್ಕಪರಿಶೋಧನಾ ಪರಿಶೀಲನೆಗಳು

31 ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷದ ಹಣಕಾಸು ಸ್ಥಿತಿಗತಿಗಳ ಮೇಲಿನ ತಮ್ಮ ವರದಿಯಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರು ಮಾಡಿರುವ ಪರಿಶೀಲನೆಗಳು ಮತ್ತು ಆಡಳಿತ ಮಂಡಳಿ ಅದಕ್ಕೆ ನೀಡಿರುವ ಉತ್ತರಗಳನ್ನು **ಅನುಬಂಧ ಬಿ** ರಲ್ಲಿ ಒದಗಿಸಲಾಗಿದೆ.

15) ಕಾರ್ಯದರ್ಶಿಯ ಲೆಕ್ಕಪರಿಶೋಧನೆ:

ಮೆ. ಟಿಎಸ್‌ಡಿಜೆ & ಅಸೋಸಿಯೇಟ್ಸ್, ಬೆಂಗಳೂರು, ವೃತ್ತಿಗಾರ ಕಂಪೆನಿ ಕಾರ್ಯದರ್ಶಿ – ಇವರು ಒದಗಿಸಿರುವ ಕಾರ್ಯದರ್ಶಿಯ ಲೆಕ್ಕಪರಿಶೋಧನಾ ವರದಿ ಹಾಗೂ ವರದಿಯಲ್ಲಿನ ಪರಿಶೀಲನೆಗಳಿಗೆ ಉತ್ತರಗಳನ್ನು **ಅನುಬಂಧ ಸಿ ಯಲ್ಲಿ** ನೀಡಲಾಗಿದೆ.

16) ಶಕ್ತಿ ಸಂರಕ್ಷಣೆ, ತಂತ್ರಜ್ಞಾನ ವಿಲೀನ ಮತ್ತು ವಿದೇಶಿ ವಿನಿಮಯ ಗಳಿಕೆ ಮತ್ತು ವ್ಯಯ:

(ಎ) ಶಕ್ತಿ ಸಂರಕ್ಷಣೆ:

ತೆಗೆದುಕೊಳ್ಳಲಾದ ಕ್ರಮಗಳು/ಶಕ್ತಿ ಸಂರಕ್ಷಣೆಯ ಮೇಲಿನ ಪರಿಣಾಮ	ಕಂಪೆನಿ ಶಕ್ತಿಯ ಬಳಕೆಯನ್ನು ಒಳಗೊಳ್ಳುವ ಯಾವುದೇ ಚಟುವಟಿಕೆಯನ್ನೂ ಕೈಗೊಳ್ಳುವುದಿಲ್ಲ ಮತ್ತು ಕಛೇರಿ ಬಳಕೆಗಾಗಿ ಮಾತ್ರವೇ ಶಕ್ತಿಯನ್ನು ವ್ಯಯಿಸುತ್ತದೆ. ಆದರೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಇಂಧನ ಬಳಕೆಯನ್ನು ತಗ್ಗಿಸಲು ಮತ್ತು ಅದನ್ನು ಸಂರಕ್ಷಿಸಲು ವಿವಿಧ ಕ್ರಮಗಳನ್ನು ನಿಮ್ಮ ಕಂಪೆನಿ ಪರಿಚಯಿಸಿದೆ.
1) ಸೃಷ್ಟಿಯಾದ ತ್ಯಾಜ್ಯವೂ ಸೇರಿದಂತೆ ಪರ್ಯಾಯ ಇಂಧನ ಮೂಲಗಳನ್ನು ಬಳಸಲು ಕಂಪೆನಿ ಕೈಗೊಂಡಿರುವ ಕ್ರಮಗಳು	ಯಾವುದೂ ಇಲ್ಲ
2) ಶಕ್ತಿ ಸಂರಕ್ಷಣಾ ಸಲಕರಣೆಗಳ ಮೇಲಿನ ಬಂಡವಾಳ ಹೂಡಿಕೆ	–ಅನ್ವಯವಾಗುವುದಿಲ್ಲ–
ನಮೂನೆ "ಎ" ಪ್ರಕಾರ ಒಟ್ಟು ಶಕ್ತಿಯ ಬಳಕೆ ಮತ್ತು ಪ್ರತಿ ಘಟಕದ ಉತ್ಪಾದನೆಗೆ ಶಕ್ತಿಯ ಬಳಕೆ.	–ಅನ್ವಯವಾಗುವುದಿಲ್ಲ–

(ಬಿ) ತಂತ್ರಜ್ಞಾನ ವಿಲೀನ

ತಂತ್ರಜ್ಞಾನ ವಿಲೀನ, ಅಳವಡಿಕೆ ಮತ್ತು ನಾವೀನ್ಯತೆಗೆ ಸಂಬಂಧಿಸಿದಂತೆ ಮಾಡಲಾದ ಪ್ರಯತ್ನಗಳು, ಸಂಕ್ಷಿಪ್ತವಾಗಿ.	ಯಾವುದೂ ಇಲ್ಲ
ಮೇಲಿನ ಪ್ರಯತ್ನಗಳ ಫಲವಾಗಿ ಪಡೆದುಕೊಂಡ ಲಾಭಗಳು, ಉದಾ: ಉತ್ಪನ್ನ ಸುಧಾರಣೆ, ವೆಚ್ಚ ತಗ್ಗಿಸುವಿಕೆ, ಉತ್ಪನ್ನ ಅಭಿವೃದ್ಧಿ, ಆಮದು ಪರ್ಯಾಯ, ಮುಂತಾದವು	ಅನ್ವಯವಾಗುವುದಿಲ್ಲ
ಆಮದುಮಾಡಿಕೊಂಡ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಮೇಲಿನ ಪ್ರಯತ್ನಗಳ ಫಲವಾಗಿ ಪ್ರಾಪ್ತವಾದ ಲಾಭಗಳು (ಹಣಕಾಸು ವರ್ಷದ ಪ್ರಾರಂಭದಿಂದ ಲೆಕ್ಕಕ್ಕೆ ಬರುವಂತೆ ಕಳೆದ 5 ವರ್ಷಗಳಲ್ಲಿ ಆಮದು ಮಾಡಿಕೊಂಡದ್ದು). ಕೆಳಗಿನಂತೆ ಮಾಹಿತಿ ಒದಗಿಸಬಹುದಾಗಿದೆ.	
ಆಮದುಮಾಡಿಕೊಂಡ ತಂತ್ರಜ್ಞಾನ	ಅನ್ವಯವಾಗುವುದಿಲ್ಲ
ಆಮದುಮಾಡಿಕೊಂಡ ವರ್ಷ	ಅನ್ವಯವಾಗುವುದಿಲ್ಲ
ತಂತ್ರಜ್ಞಾನ ಸಂಪೂರ್ಣವಾಗಿ ವಿಲೀನಗೊಂಡಿದೆಯೇ	ಅನ್ವಯವಾಗುವುದಿಲ್ಲ
ಪೂರ್ಣವಾಗಿ ವಿಲೀನ ಆಗದಿದ್ದಲ್ಲಿ, ವಿಲೀನವಾಗದಿರುವ ಕ್ಷೇತ್ರಗಳು, ಅದಕ್ಕೆ ಕಾರಣಗಳು ಮತ್ತು ಮುಂದಿನ ಕಾರ್ಯಯೋಜನೆ	ಅನ್ವಯವಾಗುವುದಿಲ್ಲ

ಸಿ) **ಸಂಶೋಧನೆ ಮತ್ತು ಅಭಿವೃದ್ಧಿ (ಆರ್ & ಡಿ)**

ಕಂಪೆನಿ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಕೈಗೊಂಡಿರುವ ನಿರ್ದಿಷ್ಟ ಕ್ಷೇತ್ರಗಳು	ಕಂಪೆನಿ ಪ್ರಸ್ತುತ ವರ್ಷದಲ್ಲಿ ಯಾವುದೇ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಯನ್ನು ಕೈಗೊಂಡಿರುವುದಿಲ್ಲ.
ಮೇಲಿನ ಸಂಶೋಧನೆ & ಅಭಿವೃದ್ಧಿಯ ಫಲವಾಗಿ ಪಡೆದ ಲಾಭಗಳು	ಅನ್ವಯವಾಗುವುದಿಲ್ಲ
ಭವಿಷ್ಯದ ಯೋಜನಾ ಕ್ರಮ	ಅನ್ವಯವಾಗುವುದಿಲ್ಲ
ಆರ್ & ಡಿ ಮೇಲಿನ ವೆಚ್ಚ	
ಎ) ಬಂಡವಾಳ	ಯಾವುದೂ ಇಲ್ಲ
ಬಿ) ಆವರ್ತಕ	ಯಾವುದೂ ಇಲ್ಲ
ಸಿ) ಒಟ್ಟು	ಯಾವುದೂ ಇಲ್ಲ
ಡಿ) ಒಟ್ಟು ವಹಿವಾಟಿನ ಪ್ರತಿಶತವಾಗಿ ಒಟ್ಟು	ಯಾವುದೂ ಇಲ್ಲ

ಡಿ. ವಿದೇಶೀ ವಿನಿಮಯ ಗಳಿಕೆ ಮತ್ತು ವ್ಯಯ

ರಫ್ತು ಪ್ರಕ್ರಿಯೆಗೆ ಸಂಬಂಧಿಸಿದ ಚಟುವಟಿಕೆಗಳು	ಅನ್ವಯವಾಗುವುದಿಲ್ಲ
ರಫ್ತುಗಳನ್ನು ಹೆಚ್ಚಿಸಲು ತೆಗೆದುಕೊಳ್ಳಲಾದ ಕ್ರಮಗಳು	ಅನ್ವಯವಾಗುವುದಿಲ್ಲ
ಉತ್ಪನ್ನಗಳು & ಸೇವೆಗಳಿಗೆ ಹೊಸ ರಫ್ತು ಮಾರುಕಟ್ಟೆಯ ಅಭಿವೃದ್ಧಿ	ಅನ್ವಯವಾಗುವುದಿಲ್ಲ
ರಫ್ತು ಯೋಜನೆಗಳು	ಅನ್ವಯವಾಗುವುದಿಲ್ಲ
ಬಳಸಲಾದ ಒಟ್ಟು ವಿನಿಮಯ (ನಗದು ಆಧಾರ)	31 ಮಾರ್ಚ್ 2020 ರಂದು ಇದ್ದಂತೆ: ಶೂನ್ಯ
ಗಳಿಸಲಾದ ಒಟ್ಟು ವಿದೇಶೀ ವಿನಿಮಯ (ಪ್ರಾಪ್ತತೆ ಆಧಾರ)	31 ಮಾರ್ಚ್ 2020 ರಂದು ಇದ್ದಂತೆ: ಶೂನ್ಯ

17) ನೌಕರರ ಸಂಭಾವನೆಗೆ ಸಂಬಂಧಿಸಿದ ಪ್ರಕಟಣೆಗಳು:

ವಾರ್ಷಿಕ ರೂ. 1,02,00,000/– (ರೂ. ಒಂದು ಕೋಟಿ ಎರಡು ಲಕ್ಷ ಮಾತ್ರ) ಕ್ಕಿಂತ ಮತ್ತು/ಅಥವಾ ಮಾಸಿಕ ರೂ. 8,50,000/– (ರೂ. ಎಂಟು ಲಕ್ಷ ಐವತ್ತು ಸಾವಿರ ಮಾತ್ರ) ಕ್ಕಿಂತ ಹೆಚ್ಚಿನ ಸಂಭಾವನೆಯನ್ನು ಪಡೆಯುವ ಯಾವ ನೌಕರರೂ ಇರುವುದಿಲ್ಲ. ಹಾಗಾಗಿ, ಕಂಪೆನಿಗಳ (ವ್ಯವಸ್ಥಾಪನ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014 ರ ಉಪನಿಯಮ 5(2)ರ ಅನುಸಾರ ಮಾಡಬೇಕಿರುವ ಹೇಳಿಕೆ/ಪ್ರಕಟಣೆಯನ್ನು ಸದಸ್ಯರ ನಡುವೆ ಸುತ್ತೋಲೆಯಾಗಿ ತಲುಪಿಸುವ ಅಗತ್ಯವಿರುವುದಿಲ್ಲ ಮತ್ತು ಅದನ್ನು ವಾರ್ಷಿಕ ವರದಿಯೊಂದಿಗೆ ಲಗತ್ತಿಸಲಾಗಿಲ್ಲ.

ನಿರ್ದೇಶಕರಾಗಿರುವ ಅಥವಾ ಅವರ ಸಂಬಂಧಿಕರಾಗಿರುವ ಹಾಗೂ ಮೇಲಿನ ಮಿತಿಗಿಂತಲೂ ಹೆಚ್ಚಿನ ಸಂಭಾವನೆಯನ್ನು ಪಡೆಯುವ ಕಂಪೆನಿಯ ಯಾವ ನೌಕರರನ್ನೂ ಭಾರತದಾಚೆಗಿನ ಯಾವುದೇ ದೇಶದಲ್ಲಿ ಕೆಲಸದ ಮೇಲೆ ನಿಯುಕ್ತಿಗೊಳಿಸಿರುವುದಿಲ್ಲ, ಹಾಗಾಗಿ, ಕಂಪೆನಿಗಳ (ವ್ಯವಸ್ಥಾಪನ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014 ರ ಉಪನಿಯಮ 5(3)ರ ಅನುಸಾರ ಮಾಡಬೇಕಿರುವ ಹೇಳಿಕೆ/ಪ್ರಕಟಣೆಯನ್ನು ಸದಸ್ಯರ ನಡುವೆ ಸುತ್ತೋಲೆಯಾಗಿ ತಲುಪಿಸುವ ಅಗತ್ಯವಿರುವುದಿಲ್ಲ ಮತ್ತು ಅದನ್ನು ವಾರ್ಷಿಕ ವರದಿಯೊಂದಿಗೆ ಲಗತ್ತಿಸಲಾಗಿಲ್ಲ.

18) ಇತರ ಕಂಪನಿಗಳಿಂದ ಅಥವಾ ತನ್ನ ಹೋಲ್ಡಿಂಗ್ ಸಂಸ್ಥೆ ಇಲ್ಲವೇ ಅಧೀನ ಕಂಪೆನಿಯಿಂದ ವ್ಯವಸ್ಥಾಪಕ ನಿರ್ದೇಶಕರು/ ಪೂರ್ಣ ಪ್ರಮಾಣದ ನಿರ್ದೇಶಕರು ಪಡೆದಿರುವ ಕಮೀಶನ್/ ಸಂಭಾವನೆ:

ಯಾವುದೇ ಕಂಪನಿಗಳಿಂದ ಅಥವಾ ತನ್ನ ಹೋಲ್ಡಿಂಗ್ ಸಂಸ್ಥೆ ಇಲ್ಲವೇ ಅಧೀನ ಕಂಪೆನಿಯಿಂದ ಕಮೀಶನ್ / ಸಂಭಾವನೆಯನ್ನು ವ್ಯವಸ್ಥಾಪಕ ನಿರ್ದೇಶಕರು/ ಪೂರ್ಣ ಪ್ರಮಾಣದ ನಿರ್ದೇಶಕರು ಪಡೆದಿರುವ ಬಗ್ಗೆ ಪರಿಶೀಲನೆಯಲ್ಲಿರುವ ವರ್ಷದಲ್ಲಿ ವರದಿ ಇರುವುದಿಲ್ಲ.

19) ಕೆಳಗಿನವುಗಳನ್ನು ಒಳಗೊಳ್ಳುವಂತೆ ಠೇವಣಿಗಳಿಗೆ ಸಂಬಂಧಿಸಿದ ವಿವರಗಳು:

ಕಂಪೆನಿ ಕಾಯ್ದೆ, 2013ರ ಉಪಬಂಧಗಳ ಅಡಿಯಲ್ಲಿ ನಿರ್ವಚಿಸಲಾಗಿರುವಂತಹ ತಾವುದೇ ಠೇವಣಿಗಳನ್ನೂ ಸಾರ್ವಜನಿಕರಿಂದ ನಿಮ್ಮ ಕಂಪೆನಿ ಆಹ್ವಾನಿಸಿಲ್ಲ/ಪಡೆದಿಲ್ಲ/ನವೀಕರಿಸಿಲ್ಲ, ಮತ್ತು ಹಾಗಾಗಿ, 31 ಮಾರ್ಚ್ 2020ರಂದು ಅಥವಾ ಅದಕ್ಕೂ ಮುನ್ನ ಬಾಕಿ ಉಳಿದ ಯಾವುದೇ ಠೇವಣಿಗಳೂ ಇರಲಿಲ್ಲ.

20) ಕಣ್ಗಾವಲು ಕಾರ್ಯತಂತ್ರ/ಎಚ್ಚರಿಸುವ ಕಾರ್ಯನೀತಿ:

ತಮ್ಮ ಪ್ರಾಮಾಣಿಕವಾದ ಕಾಳಜಿಯನ್ನು ವರದಿಮಾಡಲು ಕಂಪೆನಿಯು ನಿರ್ದೇಶಕರು ಹಾಗೂ ನೌಕರರಿಗೆ ಕಂಪೆನಿಯು ಕಣ್ಗಾವಲು ಕಾರ್ಯತಂತ್ರ/ಎಚ್ಚರಿಸುವ ಕಾರ್ಯನೀತಿಯನ್ನು ಸ್ಥಾಪಿಸಿದೆ.

21) ನಿಬಂಧಕರಿಂದ ಹೊರಡಿಸಲಾದ ಗಣನೀಯ ಮತ್ತು ಮಹತ್ವದ ಆದೇಶಗಳು:

ವರದಿಯ ವರ್ಷದಲ್ಲಿ ಇಂತಹ ಯಾವುದೇ ಘಟನೆಗಳೂ ಜರುಗಲಿಲ್ಲ.

22) ಆಂತರಿಕ ಹಣಕಾಸು ನಿಯಂತ್ರಣಗಳ ಪರ್ಯಾಪ್ತತೆಯ ವಿವರಗಳು:

ಹಣಕಾಸು ತಃಖ್ತೆಗಳಿಗೆ ಸಂಬಂಧಿಸಿದಂತೆ ಕಂಪೆನಿಯು ಪರ್ಯಾಪ್ತವಾದ ಆಂತರಿಕ ಹಣಕಾಸು ನಿಯಂತ್ರಣಗಳನ್ನು ಅನುಸರಿಸುತ್ತಿದೆ.

23) ಸಾಲಗಳು, ಭದ್ರತೆಗಳು ಅಥವಾ ಹೂಡಿಕೆಗಳ ವಿವರಗಳು:

ಕಂಪೆನಿಯು ಕಂಪೆನಿ ಕಾಯ್ದೆ 2013ರ ಪರಿಚ್ಛೇದ 186ರ ಉಪಬಂಧಗಳನ್ನು ಸೂಕ್ತ ರೀತಿಯಲ್ಲಿ ಪಾಲಿಸಿದೆ. ಸಾಲಗಳು, ಭದ್ರತೆಗಳು ಅಥವಾ ಹೂಡಿಕೆಗಳ ವಿವರಗಳು ಕೆಳಗಿನಂತಿವೆ:

ಸಾಲಗಳ ವಿವರ:

ಕ್ರ.ಸಂ	ಸಾಲ ಪಡೆದ ದಿನಾಂಕ	ಸಾಲ ಪಡೆದವರರ ಹೆಸರು	ಮೊತ್ತ	ಸಾಲವನ್ನು ಪಡೆದವರು ಯಾವ ಉದ್ದೇಶಕ್ಕೆ ಬಳಸುತ್ತಾರೆ	ಸಾಲದ ಅವಧಿ	ಬಿಆರ್ ದಿನಾಂಕ	ಎಸ್ಆರ್ ದಿನಾಂಕ (ಅಗತ್ಯವಿದ್ದರೆ)	ಬಡ್ಡಿ ದರ	ಭದ್ರತೆ
ಯಾವುದೂ ಇಲ್ಲ									

ಹೂಡಿಕೆಗಳ ವಿವರ:

ಕ್ರ. ಸಂ	ಹೂಡಿಕೆಯ ದಿನಾಂಕ	ಹೂಡಿಕೆದಾರರ ಹೆಸರು	ಮೊತ್ತ	ಸ್ವೀಕೃತಿದಾರರು ಹೂಡಿಕೆಯಿಂದ ಬರುವ ಉತ್ಪತ್ತಿಯನ್ನು ಯಾವ ಉದ್ದೇಶಕ್ಕೆ ಬಳಸಬೇಕೆಂದಿದ್ದಾರೆ	ಬಿಆರ್ ದಿನಾಂಕ	ಎಸ್‌ಆರ್ ದಿನಾಂಕ (ಅಗತ್ಯವಿದ್ದರೆ)	ನಿರೀಕ್ಷಿತ ಉತ್ಪತ್ತಿ ದರ
1. ತುಂಗಭದ್ರಾ ಮಿನರಲ್ಸ್ ಪ್ರೈ ಲಿ.			15,60,400/–	ದಿನಾಂಕ 17.11.1971ರ ಪ್ರತಿಯೊಂದು ರೂ. 100ರ 15604 ಷೇರುಗಳು.			
2. ವಿಜಯನಗರ ಮಿನರಲ್ಸ್ ಪ್ರೈ ಲಿ.			30,000/–	ದಿನಾಂಕ 09.03.2003ರ ಪ್ರತಿಯೊಂದು ರೂ. 10ರ 3000 ಷೇರುಗಳು.			
3. ಹಟ್ಟಿ ಚಿನ್ನದ ಗಣಿ ಕಂಪೆನಿ ನಿಯಮಿತ			15,00,000/–	ದಿನಾಂಕ 29.03.1986ರ ಪ್ರತಿಯೊಂದು ರೂ. 100ರ 15000 ಷೇರುಗಳು.			
4. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ			50,00,00,000/–	ದಿನಾಂಕ 27.06.2014ರ ಪ್ರತಿಯೊಂದು ರೂ. 1000ರ 5,00,000 ಷೇರುಗಳು.			

ಒದಗಿಸಲಾದ ಖಾತರಿ/ಭದ್ರತೆಯ ವಿವರ:

ಕ್ರ. ಸಂ	ಖಾತರಿ/ ಭದ್ರತೆಯನ್ನು ಒದಗಿಸಿದ ದಿನಾಂಕ	ಸ್ವೀಕೃತಿದಾರರ ಹೆಸರು	ಮೊತ್ತ (ರೂ)	ಸ್ವೀಕೃತಿದಾರರು ಖಾತರಿ/ ಭದ್ರತೆಯನ್ನು ಯಾವ ಉದ್ದೇಶಕ್ಕೆ ಬಳಸಬೇಕೆಂದಿದ್ದಾರೆ	ಬಿಆರ್ ದಿನಾಂಕ	ಎಸ್‌ಆರ್ ದಿನಾಂಕ (ಇದ್ದ ಪಕ್ಷದಲ್ಲಿ)	ದಲಾಲಿ
ಯಾವುದೂ ಇಲ್ಲ							

24) ಅಪಾಯ ನಿರ್ವಹಣೆ ಕಾರ್ಯನೀತಿ:

ಇಂದಿನ ಆರ್ಥಿಕ ಪರಿಸರದಲ್ಲಿ ಅಪಾಯ ನಿರ್ವಹಣೆ ವ್ಯಾಪಾರ ವ್ಯವಸ್ಥೆಯ ಅತ್ಯಂತ ಪ್ರಮುಖ ಭಾಗವಾಗಿದೆ. ಅಪಾಯ ನಿರ್ವಹಣೆಯ ಪ್ರಧಾನವಾದ ಗುರಿಯೆಂದರೆ ವ್ಯಾಪಾರಕ್ಕೆ ಅಪಾಯಗಳನ್ನು ತಂದೊಡ್ಡುವ ಘಟನೆಗಳನ್ನು ಗುರುತಿಸುವುದು, ನಿಯಂತ್ರಿಸುವುದು ಮತ್ತು ಅಗತ್ಯ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳುವುದೇ ಆಗಿದೆ. ನಿಮ್ಮ ಕಂಪೆನಿಯ ಅಪಾಯ ನಿರ್ವಹಣೆ ಕಾರ್ಯನೀತಿಯು ವ್ಯಾಪಾರ ಪ್ರಕ್ರಿಯೆಗಳ ಭಾಗವಾಗಿದೆ. ಕಂಪೆನಿ ನಿರ್ವಹಿಸುವ ವ್ಯಾಪಾರದಲ್ಲಿ ಇರಬಹುದಾದ ಅಪಾಯಗಳನ್ನು ಕಂಪೆನಿಯ ತಾಂತ್ರಿಕ ಸಮಿತಿ ಮತ್ತು ಮಂಡಳಿ ಕಾಲದಿಂದ ಕಾಲಕ್ಕೆ ಪುನರ್‌ಪರಿಶೀಲಿಸುತ್ತದೆ ಮತ್ತು ಅವನ್ನು ತಗ್ಗಿಸಲು ಕ್ರಮಗಳನ್ನು ಕೈಗೊಳ್ಳುತ್ತದೆ.

25) ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ (ಸಿಎಸ್‌ಆರ್):

ಓರ್ವ ಉತ್ತಮ ಕಾರ್ಪೊರೇಟ್ ನಾಗರಿಕನಾಗಿ ನಿಮ್ಮ ಕಂಪೆನಿಯು ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಲು ಬದ್ಧವಾಗಿದೆ.

ಈ ಸಂಬಂಧವಾಗಿ ಕಂಪೆನಿ ಕಾಯ್ದೆ, 2013ರ ಅಗತ್ಯಗಳನ್ನು ಪೂರೈಸಲು ನಿಮ್ಮ ಕಂಪೆನಿಯು ಕ್ರಮಗಳನ್ನು ತೆಗೆದುಕೊಂಡಿದೆ ಎಂದು ತಿಳಿಸಲು ನಿರ್ದೇಶಕರು ಸಂತೋಷಿಸುತ್ತಾರೆ.

ಚಾಲ್ತಿ ಹಣಕಾಸು ವರ್ಷದಲ್ಲಿ ವ್ಯಯಿಸಲು ಉದ್ದೇಶಿಸಿರುವ ಮೊತ್ತ ಮತ್ತು ಅದನ್ನು ವ್ಯಯಿಸಿದ ವಿಧಾನದ ವಿವರಗಳನ್ನು **ಅನುಬಂಧ ಡಿ** ಯಲ್ಲಿ ನೀಡಲಾಗಿದೆ.

26) ಸಂಬಂಧಿತ ಪಕ್ಷ ವ್ಯವಹಾರಗಳು:

ಕಂಪೆನಿ ಕಾಯ್ದೆ, 2013ರ ಪರಿಚ್ಛೇದ 188ರ ಅಡಿ ನಿಗದಿಪಡಿಸಿರುವಂತಹ ಯಾವುದೇ ಸಂಬಂಧಿತ ಪಕ್ಷ ವ್ಯವಹಾರಗಳಲ್ಲಿ ಕಂಪೆನಿ ಈ ವರ್ಷ ಭಾಗಿಯಾಗಿರುವುದಿಲ್ಲ.

27) ಅವ್ಯವಹಾರಗಳ ಬಗ್ಗೆ ವರದಿ : ಕಂಪನಿ ಕಾಯ್ದೆ 2013ರ ಉಪ ಬಂಧ 143(12)ರ ಅನ್ವಯ ಸಂಸ್ಥೆಯಲ್ಲಿ ಯಾವುದೇ ಅವ್ಯವಹಾರ ನಡೆದಿರುವ ಬಗ್ಗೆ ಸಂಸ್ಥೆಯ ಲೆಕ್ಕಪರಿಶೋಧಕರು ವರದಿ ಮಾಡಿರುವುದಿಲ್ಲ. ಅಲ್ಲದೆ, ಇತರ ಯಾವುದೇ ಮೂಲಗಳಿಂದಲೂ ಆಡಳಿತ ಮಂಡಳಿಗೆ ಮೋಸದ ವರದಿಯಾಗಿರುವುದಿಲ್ಲ.

28) ಅನ್ವಯವಾಗುವ ಕಾರ್ಯದರ್ಶಿಯ ಪ್ರಮಾಣಗಳ ಅನುಸರಣೆ:

ಸಂಸ್ಥೆಯು ಮಂಡಳಿ ಸಭೆ/ವಾರ್ಷಿಕ ಸಭೆ ನಡೆಸುವಾಗ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯದವರು ನೀಡಿರುವ ಮಾರ್ಗಸೂಚಿಯನ್ವಯ ಕಾರ್ಯದರ್ಶಿಯ ಪ್ರಮಾಣಗಳನ್ನು ಅನುಸರಿಸುತ್ತಾರೆ.

29) ಕೆಲಸದ ಸ್ಥಳದಲ್ಲಿ ಮಹಿಳೆಯ ಲೈಂಗಿಕ ಶೋಷಣೆ (ತಡೆಗಟ್ಟುವಿಕೆ, ನಿಷೇಧ ಮತ್ತು ನಿವಾರಣೆ) ಕಾಯ್ದೆ, 2013ರ ಅಡಿ ಪ್ರಕಟಣೆ:

ನಿಮ್ಮ ಕಂಪೆನಿಯು ವಿವಿಧ ಮಧ್ಯಪ್ರವೇಶ ಮತ್ತು ಆಚರಣೆಗಳ ಮೂಲಕ ಕಂಪೆನಿಯ ಆವರಣದಲ್ಲಿ ಕಾರ್ಯನಿರ್ವಹಿಸುವ ಪ್ರತಿಯೋರ್ವ ವ್ಯಕ್ತಿಗೂ ಸುರಕ್ಷಿತವಾದ ಮತ್ತು ಪೂರಕವಾದ ಕಾರ್ಯಸ್ಥಳವನ್ನು ಒದಗಿಸುವುದರಲ್ಲಿ ನಂಬಿಕೆಯಿರಿಸಿದೆ. ತಾರತಮ್ಯ ಮತ್ತು ಲೈಂಗಿಕ ಶೋಷಣೆಯೂ ಒಳಗೊಂಡಂತೆ ಯಾವುದೇ ಬಗೆಯ ಶೋಷಣೆಯಿಂದ ಮುಕ್ತವಾದ ವಾತಾವರಣವನ್ನು ಸೃಷ್ಟಿಸಿ ಒದಗಿಸುವ ಉದ್ದೇಶ ಎಂದಿಗೂ ಕಂಪೆನಿಯದಾಗಿದೆ.

ಕಂಪೆನಿಯು ಕೆಲಸದ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯ ತಡೆಗೆ ನೀತಿಯೊಂದನ್ನು ಅಳವಡಿಸಿಕೊಂಡಿದೆ. ಈ ನೀತಿಯು ಸಿಬ್ಬಂದಿಯ ಮೇಲೆ ದೌರ್ಜನ್ಯವನ್ನು ತಡೆಯುವ ಉದ್ದೇಶ ಹೊಂದಿದ್ದು ಅನಪೇಕ್ಷಿತ ನಡವಳಿಕೆಯನ್ನು ಗುರುತಿಸುವ, ವರದಿಮಾಡುವ ಮತ್ತು ತಡೆಯುವ ಬಗ್ಗೆ ಮಾರ್ಗಸೂಚಿಗಳನ್ನು ಹೊಂದಿದೆ. ಹಿರಿಯ ವ್ಯವಸ್ಥಾಪನಾ ಮಂಡಳಿಯು ಮೂರು ಸದಸ್ಯರ ಆಂತರಿಕ ದೂರುಗಳ ಸಮಿತಿ(ಐಸಿಸಿ)ಯೊಂದನ್ನು ರಚಿಸಿದ್ದು ಇದರಲ್ಲಿ ಮಹಿಳಾ ಸಿಬ್ಬಂದಿಯ ಸಂಖ್ಯೆ ಹೆಚ್ಚಿದೆ. ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ದೂರುಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದು ಐಸಿಸಿ ಜವಾಬ್ದಾರಿಯಾಗಿದ್ದು ನೀತಿಯಲ್ಲಿ ಹೇಳಲಾದ ಮಾರ್ಗಸೂಚಿಗಳನ್ನು ಅದು ಅನುಸರಿಸುತ್ತದೆ.

ಸದರಿ ವರ್ಷದಲ್ಲಿ ಲೈಂಗಿಕ ಶೋಷಣೆಗೆ ಸಂಬಂಧಿಸಿದ ಯಾವುದೇ ದೂರುಗಳೂ ವರದಿಯಾಗಿಲ್ಲ.

30) ವೆಚ್ಚದಾಖಲೆಗಳ ನಿರ್ವಹಣೆ

ಕಂಪೆನಿ ಕಾಯ್ದೆ, 2013ರ ಪರಿಚ್ಛೇದ 148, ಉಪಪರಿಚ್ಛೇದ (1)ರ ಅಡಿಯಲ್ಲಿ ಕೇಂದ್ರ ಸರ್ಕಾರವು ನಿಗದಿಪಡಿಸಿರುವಂತೆ ಕಂಪೆನಿಯು ವೆಚ್ಚ ದಾಖಲೆಗಳನ್ನು ನಿರ್ವಹಿಸಬೇಕಿದ್ದು ಇದಕ್ಕನುಗುಣವಾಗಿ ಇಂತಹ ಲೆಕ್ಕಗಳು ಮತ್ತು ದಾಖಲೆಗಳನ್ನು ಸಿದ್ಧಪಡಿಸಿ ನಿರ್ವಹಿಸಲಾಗಿದೆ.

31) ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ ವರದಿಯಲ್ಲಿನ ಆಕ್ಷೇಪಣೆಗಳು

ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ ಆಕ್ಷೇಪಣೆಗಳು ಕೆಳಕಂಡಿರುತ್ತದೆ;

	ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ ಆಕ್ಷೇಪಣೆಗಳು	ಆಡಳಿತ ಮಂಡಳಿಯ ಉತ್ತರಗಳು
	1. ಸಂತುಲನ ಪಟ್ಟಿ (1) ಇತರ ಚಾಲ್ತಿಯಲ್ಲದ ಆಸ್ತಿಗಳು (ಇ) ಇತರ ಚಾಲ್ತಿಯಲ್ಲದ ಆಸ್ತಿಗಳು–ರೂ. 57.19 ಕೋಟಿ ಟಿಪ್ಪಣಿ 5–ನಿಶ್ಚಿತ ಠೇವಣಿಯ ಮೇಲೆ ಪ್ರಾಪ್ತವಾದ ಬಡ್ಡಿ ಇದರಲ್ಲಿ ಬೇಗೂರಿನ ವಿಜಯ ಬ್ಯಾಂಕಿನಲ್ಲಿ ಇರಿಸಲಾಗಿದ್ದ ರೂ. 15 ಕೋಟಿ ಮೊತ್ತದ ನಿಶ್ಚಿತ ಠೇವಣಿಯ ಮೇಲಿನ ರೂ. 6.98 ಕೋಟಿ ಮೊತ್ತದ ಬಡ್ಡಿ ಸೇರುತ್ತದೆ. ಈ ಮೊತ್ತವು ಅಕ್ಟೋಬರ್ 2015ರಲ್ಲಿ ಪಕ್ವವಾಗಿತ್ತು. ಬ್ಯಾಂಕಿನಲ್ಲಿ ನಡೆದ ಹಣದ ಅಪಬಳಕೆಯ ಕಾರಣದಿಂದಾಗಿ ಈ ಮೊತ್ತವು ಬಡ್ಡಿ	ವಿಜಯ ಬ್ಯಾಂಕ್ ನವರು ಪತ್ರ ಸಂಖ್ಯೆ ಎಎಸ್‌ಪಿ/0262/ 2016 ದಿನಾಂಕ 17.2.2020 ರಂದು ಪತ್ರ ಕಳುಹಿಸಿ ಕ್ರಿಮನಲ್ ಮೊಕದ್ದಮೆ ಪೂರ್ಣಗೊಂಡ ನಂತರ ಪಕ್ವತೆಯ ಮೊತ್ತವನ್ನು ಬಡ್ಡಿಯೊಂದಿಗೆ ಪಾವತಿಸಲಾಗುವುದು ಎಂದು ತಿಳಿಸಿರುತ್ತಾರೆ.

	ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ ಆಕ್ಷೇಪಣೆಗಳು	ಆಡಳಿತ ಮಂಡಳಿಯ ಉತ್ತರಗಳು
	ಸಹಿತವಾಗಿ ಕಂಪೆನಿಗೆ ಜಮೆಯಾಗಿರಲಿಲ್ಲ. ಬ್ಯಾಂಕು ಸಿಬಿಐ ನಲ್ಲಿ ಕೇಸು ದಾಖಲಿಸಿದ್ದು ಅದರ ಇತ್ಯರ್ಥ ಬಾಕಿ ಉಳಿದಿದೆ. ಈ ವಿಷಯವನ್ನು 2016–17ರಿಂದ ಪ್ರಸ್ತಾಪಿಸಲಾಗುತ್ತಿದ್ದು ಕಂಪೆನಿಯು ಮೊತ್ತದ ಮರುಭರಿಕೆಗೆ ಬ್ಯಾಂಕಿನೊಂದಿಗೆ ಸಮಾಲೋಚನೆ ನಡೆಸುತ್ತಿರುವುದಾಗಿಯೂ ಇದುವರೆವಿಗೂ ಸಕಾರಾತ್ಮಕವಾದ ಉತ್ತರ ದೊರೆತಿರುವುದಿಲ್ಲ ಎಂದು ಹೇಳಿತ್ತು. ಬ್ಯಾಂಕು ಈ ವಿಷಯದ ಇತ್ಯರ್ಥ ಆಗುವವರೆಗೂ ಮೊತ್ತವನ್ನು ಹಿಂದಿರುಗಿಸಲಾಗುವುದಿಲ್ಲ ಎಂದು ವಾದಿಸಿತ್ತು (ಜನವರಿ 2020). ಕಂಪೆನಿಯು ಸಿಬಿಐ ನೊಂದಿಗೆ ಈ ವಿಷಯವನ್ನು ಪ್ರತಿನಿಧಿಸಲು (ಆಗಸ್ಟ್ 2020) ಸಿಬಿಐ ಮೊತ್ತವನ್ನು ಹಿಂದಕ್ಕೆ ಪಡೆಯಲು ನ್ಯಾಯಾಲಯದ ಮೊರೆಹೋಗಲು ನಿರ್ದೇಶಿಸಿತು. ವಿಷಯವು ನ್ಯಾಯಾಲಯದಲ್ಲಿ ಇರುವ ಕಾರಣ ಬ್ಯಾಂಕು ಕೇಸು ಇತ್ಯರ್ಥವಾಗುವವರೆಗೂ ಮೊತ್ತವನ್ನು ಬಡ್ಡಿ ಸಹಿತವಾಗಿ ಹಿಂದಿರುಗಿಸಲು ಒಪ್ಪಲಿಲ್ಲ ಹಾಗೂ ಈ ಸಂಬಂಧದ ಶಿಲ್ಕುಗಳ ಸ್ಥಿರೀಕರಣವಾಗಿಲ್ಲ. ಪ್ರಾಪ್ತವಾದ ಬಡ್ಡಿಯನ್ನು ಆದಾಯವೆಂದು ಲೆಕ್ಕತೋರಿಸಿರುವುದು ಸರಿಯಲ್ಲ. ಭಾರತೀಯ ಲೇಖಾ ಪ್ರಮಾಣ 37: ಹವಣಿಕೆಗಳು, ಸಾದಿಲ್ವಾರು ಹೊಣೆಗಳು ಮತ್ತು ಸಾದಿಲ್ವಾರು ಆಸ್ತಿಗಳು – ಇದರ ಪ್ರಕಾರ ಬಡ್ಡಿಯನ್ನು ಸಾದಿಲ್ವಾರು ಆಸ್ತಿಯಾಗಿ ಗುರುತಿಸಬೇಕಾಗಿತ್ತು. ಇದು ಚಾಲ್ತಿ ಆಸ್ತಿಯನ್ನು ರೂ. 6.98 ಕೋಟಿಯಷ್ಟು ಹೆಚ್ಚಾಗಿ ತೋರಿಸಲು, ಮುಡಿಪುಗಳನ್ನು (2014–15 ರಿಂದ 2017–18ವರೆಗಿನ ಅವಧಿಗೆ) ರೂ. 4.59 ಕೋಟಿಯಷ್ಟು ಹೆಚ್ಚಾಗಿ ತೋರಿಸಲು, ಚಾಲ್ತಿ ವರ್ಷದ ಆದಾಯವನ್ನು ರೂ. 1.05 ಕೋಟಿಯಷ್ಟು ಹೆಚ್ಚಾಗಿ ತೋರಿಸಲು, ಹಿಂದಿನ ವರ್ಷದ (2018–19) ಆದಾಯವನ್ನು ರೂ. 1.35 ಕೋಟಿಯಷ್ಟು ಹೆಚ್ಚಾಗಿ ತೋರಿಸಲು ಹಾಗೂ ತತ್ಪರಿಣಾಮವಾಗಿ ಅದೇ ಮಟ್ಟಕ್ಕೆ ಈ ವರ್ಷಗಳ ಲಾಭವನ್ನು ಹೆಚ್ಚಾಗಿ ತೋರಿಸಲು ಕಾರಣವಾಗಿದೆ. ಲೆಕ್ಕಪರಿಶೋಧಕರು ತಮ್ಮ ವರದಿಯಲ್ಲಿ ಈ ವಿಷಯವನ್ನು ಸೇರಿಸಿದ್ದಾರೆ; ಆದರೆ, ಯಾವುದೇ ಲೆಕ್ಕಪರಿಶೋಧನಾ ಆಕ್ಷೇಪಣೆ ಅಥವಾ ಪರಿಣಾಮವಿಲ್ಲದ ಕೇವಲ ವಾಸ್ತವಿಕ ಹೇಳಿಕೆಯಾಗಿ ಈ ವಿಷಯದ ಪ್ರಸ್ತಾಪ ಸೇರಿರುತ್ತದೆ.	ಕಂಪೆನಿಯು ಮೂಲ ದಸ್ತಾವೇಜುಗಳನ್ನು ಸಂಗ್ರಹಿಸಲು ಮಾತ್ರ ಸಿಬಿಐ ಅನ್ನು ಸಂಪರ್ಕಿಸಿರುತ್ತದೆ. ಈ ಕುರಿತು ಬ್ಯಾಂಕ್ ಆಫ್ ಬರೋಡ (ಹಿಂದಿನ ವಿಜಯ ಬ್ಯಾಂಕ್) ರವರು ನಿರಂತರವಾಗಿ ಪತ್ರ ವ್ಯವಹಾರ ನಡೆಸಿದ್ದು, ಸಂಸ್ಥೆಯು ಇಂಡೆಮ್ನಿಟಿ ಬಾಂಡ್ ಸಲ್ಲಿಕೆಯನ್ನು ಮಾಡಿದಲ್ಲಿ ಪಕ್ವತೆಯ ಮೊತ್ತವನ್ನು ಬಡ್ಡಿಯೊಂದಿಗೆ ಪಾವತಿಸಲಾಗುವುದು ಎಂದು, ಅರ್ಥಾತ್ ಕೆಎಸ್ಎಂಸಿಎಲ್‌ನಿಂದ ಇಂಡೆಮ್ನಿಟಿ ಬಾಂಡ್ ಸಲ್ಲಿಕೆಯ ನಂತರ ಪಕ್ವತೆಯ ಉತ್ಪತ್ತಿಗಳನ್ನು ಪಾವತಿಸಲಾಗುವುದು ಎಂದು ಬ್ಯಾಂಕ್ ಭರವಸೆ ನೀಡಿದೆ. ಈ ವಿಷಯವನ್ನು ಬ್ಯಾಂಕ್ ಆಫ್ ಬರೋಡಾದ ವಲಯ ಕಛೇರಿಯು ಕೇಂದ್ರ ಕಛೇರಿಗೆ ತಿಳಿಸಿರುತ್ತದೆ. ಕೆಎಸ್ಎಂಸಿಎಲ್‌ನ ಹಕ್ಕುಸಲ್ಲಿಕೆಗಳು/ಪ್ರಸ್ತಾವನೆಯನ್ನು ಬ್ಯಾಂಕ್ ಆಫ್ ಬರೋಡದ ಕೇಂದ್ರ ಕಛೇರಿ ಅಂಗೀಕರಿಸಿದ ನಂತರ ಬ್ಯಾಂಕ್ ಆಫ್ ಬರೋಡಾದ ಮೇಲ್ನೋಟದ ಸ್ಥಿರೀಕರಣದ ಅನ್ವಯ ಬ್ಯಾಂಕಿನಿಂದ ಹಕ್ಕುಸಲ್ಲಿಸಲಾದ ಮೊತ್ತವನ್ನು ಪಡೆಯಲಾಗುವುದು. ಮೇಲಿನ ಭರವಸೆಗಳು ಮತ್ತು ಪತ್ರವ್ಯವಹಾರಗಳ ಆಧಾರದ ಮೇಲೆ ಈ ಅಂಗವನ್ನು ಸಾದಿಲ್ವಾರು ಆಸ್ತಿಯಾಗಿ ಪರಿಗಣಿಸಿರುವುದಿಲ್ಲ. ಮುಂದುವರೆದು, ಕಂಪೆನಿಯು ನವೆಂಬರ್ 6, 2020ರಂದು ಬ್ಯಾಂಕ್ ಆಫ್ ಬರೋಡಾದ ವಲಯ ಕಛೇರಿಯಿಂದ ಇ–ಮೇಲ್ ಪಡೆದಿದ್ದು ಅದರಲ್ಲಿ 15 ಕೋಟಿ ಮೊತ್ತವನ್ನು ಬಡ್ಡಿ ಸಹಿತ ಮರುಪಾವತಿಸುವ ಪ್ರಸ್ತಾವನೆಯನ್ನು ತನ್ನ ಮಂಡಳಿಯ ಮುಂದೆ ಅಂಗೀಕಾರಕ್ಕಾಗಿ ಇರಿಸಲಾಗಿದೆ ಎಂದು ಬ್ಯಾಂಕು ತಿಳಿಸಿರುತ್ತದೆ.

	ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ ಆಕ್ಷೇಪಣೆಗಳು	ಆಡಳಿತ ಮಂಡಳಿಯ ಉತ್ತರಗಳು
	2. ಸಂತುಲನ ಪಟ್ಟಿ 1) ಇತರ ಚಾಲ್ತಿಯಲ್ಲದ ಆಸ್ತಿಗಳು – (ಎ) ಸ್ವತ್ತು, ಸ್ಥಾವರ ಮತ್ತು ಸಲಕರಣೆ ಟಿಪ್ಪಣಿ 1 – ರೂ. 109.86 ಕೋಟಿಲಾಭ ಮತ್ತು ನಷ್ಟದ ತಃಖ್ತೆ – ಖರ್ಚುಗಳು: ಸವಕಳಿ ಮತ್ತು ದತ್ತಿ ವೆಚ್ಚ – ರೂ. 11.50 ಕೋಟಿ ಖರ್ಚುಗಳು: ಹಣಕಾಸು ಕೂಡಿಸುವಿಕೆ ವೆಚ್ಚ – ಟಿಪ್ಪಣಿ 23 – ಇತರರಿಗೆ ಬಡ್ಡಿ: ರೂ. 9.7 ಕೋಟಿ ಗಣಿಯ ಆಯುಷ್ಯವನ್ನು ಅದರ ನೈಜ ಆಯುಷ್ಯದ ಅವಧಿಯಾದ 3 ರಿಂದ 100 ವರ್ಷಗಳ ಬದಲಿಗೆ 10 ವರ್ಷ ಮೇಲಿನ ದತ್ತಿ ವೆಚ್ಚ ಮತ್ತು ಬಡ್ಡಿ ವೆಚ್ಚವನ್ನು ಎಂದು ಪರಿಗಣಿಸಿ ಲೆಕ್ಕಹಾಕಲಾಗಿದೆ. ಕಂಪೆನಿಗೆ ಗಣಿಗಳ ಆಯುಷ್ಯಾವಧಿಯು ತಿಳಿದಿರುವ ಕಾರಣ ನೇರವಾಗಿ 10 ವರ್ಷ ಎಂದು ಅದರ ಆಯುಷ್ಯವನ್ನು ಪರಿಗಣಿಸುವ ಬದಲಿಗೆ ಗಣಿಗಳನೈಜ ಆಯುಷ್ಯಾವಧಿಯನ್ನೇ ಬಳಸಿ ಲೆಕ್ಕಹಾಕಬೇಕಾಗಿತ್ತು. ಈ ಲೆಕ್ಕಪರಿಗಣನೆಯು ಇಂಡ್ ಎಎಸ್ 10ರ ಅನುಸಾರ ಇರುವುದಿಲ್ಲ. ಇದು ದತ್ತಿ ವೆಚ್ಚವನ್ನು ರೂ. 2.44 ಕೋಟಿಯಷ್ಟು ಹೆಚ್ಚಿಗೆ ತೋರಿಸಲು, ಬಡ್ಡಿಯನ್ನು ರೂ. 2.80 ಕೋಟಿಯಷ್ಟು ಹೆಚ್ಚಿಗೆ ತೋರಿಸಲು, ಲಾಭವನ್ನು 5.24 ಕೋಟಿಯಷ್ಟು ಕಡಿಮೆ ತೋರಿಸಲು ಹಾಗೂ ತತ್ಪರಿಣಾಮವಾಗಿ ಹೊಣೆಯನ್ನು ಹೆಚ್ಚಿಗೆ ತೋರಿಸಲು ಮತ್ತು ಆಸ್ತಿಯನ್ನು ರೂ. 5.24 ಕೋಟಿಯಷ್ಟು ಕಡಿಮೆ ತೋರಿಸಲು ಕಾರಣವಾಗಿದೆ. **3. ಲಾಭ ಮತ್ತು ನಷ್ಟದ ತಃಖ್ತೆ** ಖರ್ಚುಗಳು – ಇತರ ಖರ್ಚುಗಳು ಟಿಪ್ಪಣಿ 25 – ರೂ. 76.08 ಕೋಟಿ ಇದರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಕಂಪೆನಿಯ ಪರವಾಗಿ 80.06 ಹೆಕ್ಟೇರುಗಳಷ್ಟು ಅರಣ್ಯ ಭೂಮಿಯನ್ನು ಅರಣ್ಯೇತರ ಬಳಕೆಗೆ	ಲೆಕ್ಕಪರಿಶೋಧನೆಯು ಗುರುತಿಸಿರುವಂತೆ ಕಂಪೆನಿಯು ಹೊಂದಿರುವ ಗಣಿಗಳು ಮತ್ತು ಕಲ್ಲುಗಣಿಗಳು ಭಿನ್ನ ಭಿನ್ನ ಆಯಷ್ಯಗಳನ್ನು ಹೊಂದಿದ್ದು ಲಭ್ಯ ಸಂಪನ್ಮೂಲಗಳು ಹಾಗೂ ವಾರ್ಷಿಕ ಉತ್ಪಾದನಾ ಸಾಮರ್ಥ್ಯವನ್ನು ಅವಲಂಬಿಸಿ 3 ರಿಂದ 100 ವರ್ಷಗಳವರೆಗೆ ಇವುಗಳ ಆಯುಷ್ಯ ಇರುತ್ತದೆ. ಕಾರ್ಯಯುಕ್ತ ಗಣಿಗಳಿಗೆ ಸಂಬಂಧಿಸಿದಂತೆ, ಕಂಪೆನಿಯು ಗಣಿ/ಕಲ್ಲುಗಣಿಯ ಆಯುಷ್ಯವನ್ನು ಆಧರಿಸಿ ಸರಿಯಾಗಿ ದತ್ತಿವೆಚ್ಚವನ್ನು ಹಾಕಿದೆ. ಕಾರ್ಯಯುಕ್ತವಲ್ಲದ ಗಣಿಗಳಿಗೆ ಸಂಬಂಧಿಸಿದಂತೆ ಮಾತ್ರವೇ ಕಂಪೆನಿಯು ಗಣಿಗಳ ಸರಾಸರಿ ಆಯುಷ್ಯವನ್ನು ಅವುಗಳ ನೈಜ ಆಯುಷ್ಯಕೆ ಪ್ರತಿಯಾಗಿ 10 ವರ್ಷಗಳು ಎಂದು ಪರಿಗಣಿಸಿದೆ. ಸಾಮಾನ್ಯವಾಗಿ, ಹಿಂದಕ್ಕೆ ಒಪ್ಪಿಸಲಾದ ಗಣಿಗಳು/ಕಲ್ಲುಗಣಿಗಳನ್ನು ಎಫ್ಎಂಸಿಪಿ ಗಾಗಿ ಪರಿಗಣಿಸಲಾಗುತ್ತದೆ ಮತ್ತು ಶಾಸನಬದ್ಧ ಪ್ರಾಧಿಕಾರಗಳಿಂದ ಒಪ್ಪಿಗೆಯ ಸ್ವೀಕೃತಿಯನ್ನು ಪಡೆಯುವವರೆಗಿನ ಅವಧಿಗೆ ದತ್ತಿಹಾಕಲಾಗುತ್ತದೆ. ಒಪ್ಪಿಗೆಯ ಸ್ವೀಕೃತಿಯ ನಂತರ ಒಪ್ಪಿಸಲಾದ ಗಣಿಗಳು/ಕಲ್ಲುಗಣಿಗಳಿಗೆ ಸಂಬಂಧಿಸಿದ ಇಡೀ ಎಫ್ಎಂಸಿಪಿ ವೆಚ್ಚವನ್ನು ತೊಡೆದುಹಾಕಲಾಗುತ್ತದೆ. ಒದಗಿಸಲಾದ ಮಾಹಿತಿಯ ಪ್ರಕಾರ, ಸದರಿ ವರ್ಷದಲ್ಲಿ ಒಪ್ಪಿಸಲಾದ ಗಣಿಗಳಿಗೆ ಸಂಬಂಧಿಸಿದಂತೆ ಶಾಸನಬದ್ಧ ಪ್ರಾಧಿಕಾರಗಳಿಂದ ಯಾವುದೇ ಅಂತಿಮ ಒಪ್ಪಿಗೆಯನ್ನು ಪಡೆದಿರುವುದಿಲ್ಲ. ಆದರೆ, ಈ ನಿಟ್ಟಿನಲ್ಲಿ, ಐಸಿಎಐ ಅಭಿಪ್ರಾಯವನ್ನು ಆಧರಿಸಿದ ಲೇಖಾ ಪ್ರಕ್ರಿಯೆಯನ್ನು ಅನುಸರಿಸಲು ಕಂಪೆನಿಗೆ ಸಲಹೆನೀಡಲಾಗಿದೆ. ಎಂಎಂಸಿಪಿ ಪರಿಗಣನೆಗೆ ಸೂಕ್ತ ಕ್ರಮವನ್ನು ಕಂಪೆನಿಯು ತೆಗೆದುಕೊಳ್ಳುತ್ತದೆ ಹಾಗೂ ಸೂಕ್ತವಾದ ಲೇಖಾ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳಲಾಗುವುದು. ವ್ಯಯಿಸಲಾದ ವೆಚ್ಚವು ಒಂದು ಬಾರಿಯ ವೆಚ್ಚವನ್ನು ಪ್ರತಿನಿಧಿಸುತ್ತದೆ ಹಾಗೂ ಇಂಡ್ ಎಎಸ್ 106ರ ಅಳವಡಿಕೆಯನ್ನು ಅಗತ್ಯವಾಗಿಸುವಂತೆ ಖನಿಜವೊಂದರ ಶೋಧನೆ ಅಥವಾ ಮೌಲ್ಯಮಾಪನದಂತಹ ವೆಚ್ಚವನ್ನು ಪ್ರತಿನಿಧಿಸುವುದಿಲ್ಲ ಎನ್ನುವ ಅಂಶವನ್ನು ಲೆಕ್ಕಪರಿಶೋಧನೆಯು

	ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ ಆಕ್ಷೇಪಣೆಗಳು	ಆಡಳಿತ ಮಂಡಳಿಯ ಉತ್ತರಗಳು
	ತೊಡಗಿಸಲೆಂದು ಗಣಿ ಗುತ್ತಿಗೆಗಳಿಗಾಗಿನ ನಿವ್ವಳ ಪ್ರಸ್ತುತ ಮೌಲ್ಯದ ಬಾಬ್ತಿಗಾಗಿ ಪಾವತಿಸಲಾದ ರೂ. 6.43 ಕೋಟಿ ಸೇರಿದೆ. ಸದರಿ ಮೊತ್ತವನ್ನು ಗಣಿಗಾರಿಕೆ ಗುತ್ತಿಗೆಯ ಅವಧಿಯನ್ನು 30 ವರ್ಷಗಳಿಗೆ ವಿಸ್ತರಿಸಲು ಪಾವತಿಸಿರುವ ಕಾರಣ ಹಾಗೂ ಲಾಭಗಳು ಗಣಿಗಾರಿಕೆ ಗುತ್ತಿಗೆಯ ಅವಧಿಯುದ್ದಕ್ಕೂ ವಿಸ್ತರಿಸುವುದರಿಂದ ಸದರಿ ವೆಚ್ಚವನ್ನು 2019–20ರ ವೆಚ್ಚವಾಗಿ ಪರಿಗಣಿಸುವ ಬದಲು ಗುತ್ತಿಗೆ ಅವಧಿಯ ಉದ್ದಕ್ಕೆ ದತ್ತಿವೆಚ್ಚವಾಗಿಸಬೇಕಾಗಿತ್ತು. ಇದು ಗುತ್ತಿಗೆ ಭೂಮಿಯನ್ನು ಕಡಿಮೆ ತೋರಿಸಲು, ಇತರ ಖರ್ಚುಗಳನ್ನು ರೂ. 6.43 ಕೋಟಿಯಷ್ಟು ಹೆಚ್ಚಿಗೆ ತೋರಿಸಲು, ಸವಕಳಿ ಮತ್ತು ದತ್ತಿ ವೆಚ್ಚವನ್ನು ರೂ. 0.21 ಕೋಟಿಯಷ್ಟು ಕಡಿಮೆ ತೋರಿಸಲು ಹಾಗೂ ವರ್ಷದ ಲಾಭವನ್ನು ರೂ. 6.21 ಕೊಟಿಯಷ್ಟು ಕಡಿಮೆ ತೋರಿಸಲು ಕಾರಣವಾಗಿದೆ.	ಪುರಸ್ಕರಿಸುತ್ತದೆ. ಯಾವುದೇ ಆಸ್ತಿಯನ್ನು ಇಲ್ಲ ಸೃಷ್ಟಿಸಲಾಗಿಲ್ಲ ಹಾಗೂ ವ್ಯಯವು ಗಣಿಗಾರಿಕೆಯ ಮುಂದುವರಿಕೆಗಾಗಿ ಮತ್ತು ಹಾಗಾಗಿ ಇದು ಯುಕ್ತವಾಗಿ ಆದಾಯ ವೆಚ್ಚವನ್ನು ಪ್ರತಿನಿಧಿಸುತ್ತದೆ. ಇದು ಶಾಸನಬದ್ಧ ಪಾವರಿ ಸ್ವರೂಪದಲ್ಲಿದೆ – ದರಗಳು ಮತ್ತು ತೆರಿಗೆಗಳು. ವೆಚ್ಚಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಶಾಸನಬದ್ಧ ಅಗತ್ಯಗಳ ಅನುಸರಣೆಗೆಂದು ನವೀಕರಣ ಶುಲ್ಕದ ಸ್ವರೂಪದಲ್ಲಿವೆ. ಇಂಡ್–ಎಎಸ್ 106 ಆಸ್ತಿಗಳ ಶೋಧನೆ ಮತ್ತು ಮೌಲ್ಯಮಾಪನದ ಪ್ರಾರಂಭಿಕ ಮಾಪನದ ವಿವರಪೂರ್ಣ ಪಟ್ಟಿಯನ್ನು ಒದಗಿಸುತ್ತದೆ. ಎನ್‌ಪಿವಿ ಗೆಂದು ವ್ಯಯಿಸಲಾದ ವೆಚ್ಚವು ಹೇಳಲಾದ ಕಂಡಿಕೆಯಲ್ಲಿ ನಿರ್ದಿಷ್ಟಗೊಳಿಸಲಾಗಿರುವ ಯಾವುದೇ ವೆಚ್ಚದ ಅಡಿಯೂ ಬರುವುದಿಲ್ಲ. ಮೇಲಿನ ಮೊತ್ತವನ್ನು ಯಾವುದೇ ಹೆಚ್ಚುವರಿ ಗಣಿಗಾರಿಕೆ ಹಕ್ಕುಗಳನ್ನು ಪಡೆದುಕೊಳ್ಳಲು ಪಾವತಿಸಿರುವುದಿಲ್ಲ. ಕಂಪೆನಿಗೆ ಈಗಾಗಲೇ ನೀಡಲಾಗಿರುವ ಗಣಿಗಾರಿಕೆ ಗುತ್ತಿಗೆಗಳ ಪೈಕಿ ಕೆಲವು ಅರಣ್ಯ ಭೂಮಿಯಿದ್ದು ಅಲ್ಲಿ ಅದಿರನ್ನು ಹೊರತೆಗೆಯುವ ಮುನ್ನ ಅರಣ್ಯ ಇಲಾಕೆಯ ಒಪ್ಪಿಗೆ ಅಗತ್ಯವಾಗಿರುತ್ತದೆ. ಅರಣ್ಯ ಭೂಮಿಯನ್ನು ಅರಣ್ಯೇತರ ಬಳಕೆಗೆ ತೊಡಗಿಸಲು ಪಾವತಿಸಲಾದ ಪರಿಹಾರ ಇದಾಗಿದೆ.

ನಿರ್ದೇಶಕ ಮಂಡಳಿಯ ಆದೇಶದಂತೆ
ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್ ಪರವಾಗಿ
(ಈ ಮುನ್ನ ಮೈಸೂರು ಮಿನರಲ್ಸ್ ಲಿಮಿಟೆಡ್)

ಸಹಿ/–
ಎಸ್. ಲಿಂಗಮೂರ್ತಿ
ಅಧ್ಯಕ್ಷರು
ಡಿಐಎನ್: 09012809

ಸ್ಥಳ: ಬೆಂಗಳೂರು
ದಿನಾಂಕ: 28ನೇ ಡಿಸೆಂಬರ್ 2020

ಅನುಬಂಧ "ಎ"

ನಮೂನೆ ಸಂ. ಎಂಜಿಟಿ – 9

ವಾರ್ಷಿಕ ಸಲ್ಲಿಕೆಯ ಉದ್ಧೃತ ಭಾಗ

31 ಮಾರ್ಚ್, 2020ಕ್ಕೆ ಕೊನೆಗೊಂಡ ವರ್ಷದ್ದು

[ಕಂಪೆನಿ ಕಾಯ್ದೆ, 2013ರ ಪರಿಚ್ಛೇದ 92(3) ಮತ್ತು ಕಂಪೆನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 12(1)ರ ಅನುಸಾರ]

I. ನೋಂದಣಿ ಮತ್ತು ಇತರ ವಿವರಗಳು:

i) **ಸಿಐಎನ್ :** ಯು85110ಕೆಎ1966ಎಸ್‌ಜಿಸಿ001620
ವಿದೇಶೀ ಕಂಪೆನಿ ನೋಂದಣಿ ಸಂಖ್ಯೆ/ಜಿಎಲ್‌ಎನ್ : ಅನ್ವಯವಾಗುವುದಿಲ್ಲ.

ii) **ನೋಂದಣಿ ದಿನಾಂಕ :** 13.05.1966

iii) **ಕಂಪೆನಿಯ ಹೆಸರು :** ಕರ್ನಾಟಕ ರಾಜ್ಯ ಖನಿಜ ನಿಗಮ ನಿಯಮಿತ
(ಈ ಮುನ್ನ ಮೈಸೂರು ಮಿನರಲ್ಸ್ ಲಿಮಿಟೆಡ್)

iv) **ಕಂಪೆನಿಯ ವರ್ಗ:**

1.	ಸಾರ್ವಜನಿಕ ಕಂಪೆನಿ	(ಹೌದು)
2.	ಖಾಸಗಿ ಕಂಪೆನಿ	(ಅನ್ವಯವಾಗುವುದಿಲ್ಲ)

ಕಂಪೆನಿಯ ಉಪ–ವರ್ಗ:

1.	ಸರ್ಕಾರಿ ಕಂಪೆನಿ	(ಹೌದು)
2.	ಸಣ್ಣ ಕಂಪೆನಿ	(ಅನ್ವಯವಾಗುವುದಿಲ್ಲ)
3.	ಏಕ ವ್ಯಕ್ತಿ ಕಂಪೆನಿ	(ಅನ್ವಯವಾಗುವುದಿಲ್ಲ)
4.	ಅಧೀನ ಅಥವಾ ವಿದೇಶೀ ಕಂಪೆನಿ	(ಅನ್ವಯವಾಗುವುದಿಲ್ಲ)
5.	ಎನ್‌ಬಿಎಫ್‌ಸಿ	(ಅನ್ವಯವಾಗುವುದಿಲ್ಲ)
6.	ಖಾತರಿ ಕಂಪೆನಿ	(ಅನ್ವಯವಾಗುವುದಿಲ್ಲ)
7.	ಷೇರುಗಳಿಂದ ಮಿತಗೊಂಡಿದೆಯೇ	(ಹೌದು)
8.	ಅನಿಯಮಿತ ಕಂಪೆನಿ	(ಅನ್ವಯವಾಗುವುದಿಲ್ಲ)
9.	ಷೇರು ಬಂಡವಾಳ ಹೊಂದಿರುವ ಕಂಪೆನಿಯೇ	(ಹೌದು)
10.	ಷೇರು ಬಂಡವಾಳ ಹೊಂದಿರದ ಕಂಪೆನಿಯೇ	(ಅನ್ವಯವಾಗುವುದಿಲ್ಲ)
11.	ಪರಿಚ್ಛೇದ 8ರ ಅಡಿ ನೋಂದಾಯಿತ ಕಂಪೆನಿಯೇ	(ಅನ್ವಯವಾಗುವುದಿಲ್ಲ)

v) ನೋಂದಾಯಿತ ಕಛೇರಿ ವಿಳಾಸ ಮತ್ತು ಸಂಪರ್ಕ ವಿವರಗಳು:

ವಿಳಾಸ	ಬಿಎಂಟಿಸಿ ಶಾಂತಿನಗರ, ಟಿಟಿಎಂಸಿ ಕಟ್ಟಡ, 'ಎ' ಬ್ಲಾಕ್, 5ನೇ ಮಹಡಿ, ಶಾಂತಿನಗರ
ಪಟ್ಟಣ/ನಗರ	ಬೆಂಗಳೂರು
ರಾಜ್ಯ	ಕರ್ನಾಟಕ
ಪಿನ್ ಕೋಡ್	560052
ದೇಶದ ಹೆಸರು	ಭಾರತ
ದೇಶದ ಸಂಕೇತ	ಐಎನ್
ದೂರವಾಣಿ ಸಂಖ್ಯೆ, ಎಸ್‌ಟಿಡಿ ಜೊತೆ	ಪ್ರದೇಶ ಸಂಕೇತ 080 ಸಂಖ್ಯೆ 2227 8813–16
ಫ್ಯಾಕ್ಸ್ ಸಂಖ್ಯೆ	ಪ್ರದೇಶ ಸಂಕೇತ 080 ಸಂಖ್ಯೆ 2221 3172
ಇ–ಮೇಲ್ ವಿಳಾಸ, ಇದ್ದ ಪಕ್ಷದಲ್ಲಿ	md.ksmcl@gmail.com

vi) ಷೇರುಗಳನ್ನು ಅಂಗೀಕೃತ ಷೇರು ವಿನಿಮಯ ಕೇಂದ್ರದಲ್ಲಿ/ಗಳಲ್ಲಿ ಪಟ್ಟಿಮಾಡಲಾಗಿದೆಯೇ – ~~ಹೌದು~~/ಇಲ್ಲ
ಹೌದಾದರೆ, ಪಟ್ಟಿಮಾಡಲಾಗಿರುವ ಅಂಗೀಕೃತ ಷೇರು ವಿನಿಮಯ ಕೇಂದ್ರಗಳು

ಕ್ರಮ ಸಂಖ್ಯೆ	ಷೇರು ವಿನಿಮಯ ಕೇಂದ್ರದ ಹೆಸರು	ಷೇರು ವಿನಿಮಯ ಕೇಂದ್ರದ ಸಂಕೇತ
ಅನ್ವಯವಾಗುವುದಿಲ್ಲ		

vii) ನೋಂದಣಿ ಅಧಿಕಾರಿ ಮತ್ತು ರವಾನೆ ಅಭಿಕರ್ತರ (ಆರ್‌ಟಿಎ) ಹೆಸರು, ವಿಳಾಸ ಮತ್ತು ಸಂಪರ್ಕ ವಿವರಗಳು:

ನೋಂದಣಿ ಅಧಿಕಾರಿ ಮತ್ತು ರವಾನೆ ಅಭಿಕರ್ತರ (ಆರ್‌ಟಿಎ) ಹೆಸರು	ಅನ್ವಯವಾಗುವುದಿಲ್ಲ	
ವಿಳಾಸ		
ಪಟ್ಟಣ/ನಗರ		
ರಾಜ್ಯ		
ಪಿನ್ ಕೋಡ್		
ದೇಶದ ಹೆಸರು		
ದೇಶದ ಸಂಕೇತ		
ದೂರವಾಣಿ, ಎಸ್‌ಟಿಡಿ ಜೊತೆ	ಪ್ರದೇಶದ ಸಂಕೇತ	ಸಂಖ್ಯೆ
ಫ್ಯಾಕ್ಸ್	ಪ್ರದೇಶದ ಸಂಕೇತ	ಸಂಖ್ಯೆ
ಇ–ಮೇಲ್ ವಿಳಾಸ, ಇದ್ದ ಪಕ್ಷದಲ್ಲಿ		

II. ಕಂಪೆನಿಯ ಪ್ರಧಾನ ವ್ಯಾಪಾರ ಚಟುವಟಿಕೆಗಳು:

ಕಂಪೆನಿಯ ಒಟ್ಟಾರೆ ವಹಿವಾಟಿನಲ್ಲಿ 10% ಅಥವಾ ಹೆಚ್ಚಿನ ಪ್ರಮಾಣದ ಕೊಡುಗೆ ಸಲ್ಲಿಸುವ ಎಲ್ಲ ವ್ಯಾಪಾರ ಚಟುವಟಿಕೆಗಳು:

ಕ್ರ. ಸಂ.	ಪ್ರಧಾನ ಉತ್ಪನ್ನಗಳು/ಸೇವೆಗಳ ಹೆಸರು ಮತ್ತು ವಿವರಣೆ	ಉತ್ಪನ್ನ/ಸೇವೆಯ ಎನ್‌ಐಸಿ ಸಂಕೇತ	ಕಂಪೆನಿಯ ಒಟ್ಟಾರೆ ವಹಿವಾಟಿನ %
1	ಕಬ್ಬಿಣದ ಅದಿರು		81.50
2	ಇತರ ಖನಿಜಗಳು		–

III. ಗುತ್ತಿಗೆ, ಅಧೀನ ಮತ್ತು ಸಹಯೋಗಿ ಸಂಸ್ಥೆಗಳ ವಿವರಗಳು:

ಕ್ರ ಸಂ	ಕಂಪೆನಿಯ ಹೆಸರು ಮತ್ತು ವಿಳಾಸ	ಸಿಐಎನ್/ಜಿಎಲ್‌ಎನ್	ಹಿಡುವಳಿ/ ಅಧೀನ/ ಸಹಯೋಗಿ	ಹೊಂದಿರುವ % ಷೇರುಗಳು	ಅನ್ವಯವಾಗುವ ಪರಿಚ್ಛೇದ
1	ವಿಜಯನಗರ್ ಮಿನರಲ್ಸ್ ಪ್ರೈ ಲಿ.	U13100KA1997PTC022398	ಸಹಯೋಗಿ	30%	
2	ತುಂಗಭದ್ರಾ ಮಿನರಲ್ಸ್ ಪ್ರೈ ಲಿ.	U14200KA1971PTC002035	ಸಹಯೋಗಿ	26%	

IV. ಷೇರುಹಿಡುವಳಿ ವಿನ್ಯಾಸ (ಒಟ್ಟು ಸ್ವಾಮ್ಯ ಷೇರಿನ ಪ್ರತಿಶತವಾಗಿ ಸ್ವಾಮ್ಯ ಷೇರು ಬಂಡವಾಳ ವಿಭಾಗ)

i) ವರ್ಗವಾರು ಷೇರು ಹಿಡುವಳಿ

ಷೇರುದಾರರ ವರ್ಗ	ವರ್ಷದ ಪ್ರಾರಂಭದ ಹೊತ್ತಿಗೆ ಷೇರುಗಳ ಸಂಖ್ಯೆ				ವರ್ಷದ ಕೊನೆಯ ಹೊತ್ತಿಗೆ ಷೇರುಗಳ ಸಂಖ್ಯೆ				ವರ್ಷದಲ್ಲಿನ ಬದಲಾವಣೆಯ %
	ಡಿ–ಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರುಗಳ %	ಡಿ–ಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರುಗಳ %	
ಎ. ಪ್ರೋತ್ಸಾಹಕರು									
(1) ಭಾರತೀಯ									
ಎ) ವ್ಯಕ್ತಿ/ಎಚ್‌ಯುಎಫ್	-	-	-	-	-	-	-	-	-
ಬಿ) ಕೇಂದ್ರ ಸರ್ಕಾರ	-	-	-	-	-	-	-	-	-
ಸಿ) ರಾಜ್ಯ ಸರ್ಕಾರ (ಗಳು)	-	594,986	594,986	99.16%	-	594,986	594,986	99.16%	-
ಡಿ) ಕಾರ್ಪೊರೇಟ್ ಕಾಯಗಳು	-	-	-	-	-	-	-	-	-
ಇ) ಬ್ಯಾಂಕುಗಳು/ಹಣಕಾಸು ಸಂಸ್ಥೆಗಳು	-	-	-	-	-	-	-	-	-
ಎಫ್) ಇತರ ಯಾವದೇ									
ಉಪ–ಮೊತ್ತ (ಎ)(1)	-	594,986	594,986	99.16%	-	594,986	594,986	99.16%	-
(2) ವಿದೇಶೀ									
ಎ) ಎನ್‌ಆರ್‌ಐ – ವ್ಯಕ್ತಿಗಳು	-	-	-	-	-	-	-	-	-
ಬಿ) ಇತರ – ವ್ಯಕ್ತಿಗಳು	-	-	-	-	-	-	-	-	-
ಸಿ) ಕಾರ್ಪೊರೇಟ್ ಕಾಯಗಳು	-	-	-	-	-	-	-	-	-
ಡಿ) ಬ್ಯಾಂಕುಗಳು/ಹಣಕಾಸು ಸಂಸ್ಥೆಗಳು	-	-	-	-	-	-	-	-	-
ಇ) ಇತರ ಯಾವದೇ	-	-	-	-	-	-	-	-	-
ಉಪ–ಮೊತ್ತ (ಎ)(2)	-	-	-	-	-	-	-	-	-
ಪ್ರೋತ್ಸಾಹಕರ ಒಟ್ಟು ಷೇರು ಹಿಡುವಳಿ(ಎ) = (ಎ)(1)+ (ಎ)(2)	-	594,986	594,986	99.16%	-	594,986	594,986	99.16%	-

ಷೇರುದಾರರ ವರ್ಗ	ವರ್ಷದ ಪ್ರಾರಂಭದ ಹೊತ್ತಿಗೆ ಷೇರುಗಳ ಸಂಖ್ಯೆ				ವರ್ಷದ ಕೊನೆಯ ಹೊತ್ತಿಗೆ ಷೇರುಗಳ ಸಂಖ್ಯೆ				ವರ್ಷದಲ್ಲಿನ ಬದಲಾವಣೆಯ %
	ಡಿ–ಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರುಗಳ %	ಡಿ–ಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರುಗಳ %	
ಬಿ. ಸಾರ್ವಜನಿಕ ಷೇರು ಹಿಡುವಳಿ									
1. ಸಂಸ್ಥೆಗಳು									
ಎ) ಮ್ಯೂಚುಯಲ್ ನಿಧಿಗಳು	-	-	-	-	-	-	-	-	-
ಬಿ) ಬ್ಯಾಂಕುಗಳು/ ಹಣಕಾಸು ಸಂಸ್ಥೆಗಳು	-	-	-	-	-	-	-	-	-
ಸಿ) ಕೇಂದ್ರ ಸರ್ಕಾರ	-	-	-	-	-	-	-	-	-
ಡಿ) ರಾಜ್ಯ ಸರ್ಕಾರ(ಗಳು)	-	-	-	-	-	-	-	-	-
ಇ) ವೆಂಚರ್ ಬಂಡವಾಳ ನಿಧಿಗಳು	-	-	-	-	-	-	-	-	-
ಎಫ್) ವಿಮಾ ಕಂಪೆನಿಗಳು	-	-	-	-	-	-	-	-	-
ಜಿ) ಎಫ್ಐಐಗಳು	-	-	-	-	-	-	-	-	
ಎಚ್) ವಿದೇಶೀ ಉಪಕ್ರಮ ಬಂಡವಾಳ ನಿಧಿಗಳು	-	-	-	-	-	-	-	-	
ಐ) ಇತರೆ (ನಿರ್ದಿಷ್ಟಗೊಳಿಸಿ)	-	-	-	-	-	-	-	-	-
ಉಪ–ಮೊತ್ತ (ಬಿ)(1)									
2. ಸಂಸ್ಥೆಗಳಲ್ಲದವು									
ಎ) ಕಾರ್ಪರೇಟ್ ಕಾಯಗಳು									
1) ಭಾರತೀಯ	-	5,000	5,000	0.83%	-	5,000	5,000	0.83%	-
2) ವಿದೇಶಿ	-	-	-	-	-	-	-	-	-
ಬಿ) ವ್ಯಕ್ತಿಗಳು									
1) ರೂ. 1 ಲಕ್ಷದವರೆಗೆ ನಾಮಮಾತ್ರ ಷೇರು ಬಂಡವಾಳ ಹೊಂದಿರುವ ವೈಯಕ್ತಿಕ ಷೇರುದಾರರು	-	-	-	-	-	-	-	-	-
2) ರೂ. 1 ಲಕ್ಷಕ್ಕಿಂತ ಹೆಚ್ಚಿನ ನಾಮಮಾತ್ರ ಷೇರು ಬಂಡವಾಳ ಹೊಂದಿರುವ ವೈಯಕ್ತಿಕ ಷೇರುದಾರರು	-	-	-	-	-	-	-	-	-
ಸಿ) ಇತರ (ನಿರ್ದೇಶಕರು)	-	14	14	0.01%	-	14	14	0.01%	-
ಉಪಮೊತ್ತ (ಬಿ)(2)	-	5,014	5,014	0.84%	-	5,014	5,014	0.84%	-
ಒಟ್ಟು ಸಾರ್ವಜನಿಕ ಷೇರು ಹಿಡುವಳಿ (ಬಿ) = (ಬಿ)(1)+(ಬಿ)(2)	-	5,014	5,014	0.84%	-	5,014	5,014	0.84%	-
ಸಿ. ಜಿಡಿಆರ್ & ಎಡಿಆರ್ ಅಭಿರಕ್ಷಕರು ಇರಿಸಿಕೊಂಡಿರುವ ಷೇರುಗಳು	-	-	-	-	-	-	-	-	-
ಒಟ್ಟು ಮೊತ್ತ (ಎ+ಬಿ+ಸಿ)	-	**600,000**	**600,000**	**100%**	-	**600,000**	**600,000**	**100%**	-

ii) ಪ್ರೋತ್ಸಾಹಕರ ಷೇರು ಹಿಡುವಳಿ

ಕ್ರ ಸಂ	ಷೇರುದಾರರ ಹೆಸರು	ವರ್ಷದ ಪ್ರಾರಂಭದ ಹೊತ್ತಿಗೆ ಷೇರು ಹಿಡುವಳಿ			ವರ್ಷದ ಕೊನೆಯ ಹೊತ್ತಿಗೆ ಷೇರು ಹಿಡುವಳಿ			ವರ್ಷದಲ್ಲಿ ಷೇರು ಹಿಡುವಳಿಯಲ್ಲಿನ ಪ್ರತಿಶತ ಬದಲಾವಣೆ
		ಷೇರುಗಳ ಸಂಖ್ಯೆ	ಕಂಪೆನಿಯ ಒಟ್ಟು ಷೇರುಗಳ ಪ್ರತಿಶತ	ಷೇರುಗಳ ಪೈಕಿ ಅಡವಿರಿಸಿದ/ ಋಣಭಾರ ಇರಿಸಿದ ಷೇರು %	ಷೇರುಗಳ ಸಂಖ್ಯೆ	ಕಂಪೆನಿಯ ಒಟ್ಟು ಷೇರುಗಳ ಪ್ರತಿಶತ	ಷೇರುಗಳ ಪೈಕಿ ಅಡವಿರಿಸಿದ/ ಋಣಭಾರ ಇರಿಸಿದ ಷೇರು %	
1	ಕರ್ನಾಟಕದ ರಾಜ್ಯಪಾಲರು	594,986	99.16%	-	594,986	99.16%	-	-
	ಒಟ್ಟು	594,986	99.16%	-	594,986	99.16%	-	-

iii) ಪ್ರೋತ್ಸಾಹಕರ ಷೇರು ಹಿಡುವಳಿಯಲ್ಲಿನ ಬದಲಾವಣೆ:

ಕ್ರ. ಸಂ.		ವರ್ಷದ ಪ್ರಾರಂಭದ ಹೊತ್ತಿಗೆ ಷೇರು ಹಿಡುವಳಿ		ವರ್ಷದ ಕೊನೆಯ ಹೊತ್ತಿಗೆ ಸಂಚಯಿತ ಷೇರು ಹಿಡುವಳಿ	
		ಷೇರುಗಳ ಸಂಖ್ಯೆ	ಕಂಪೆನಿಯ ಒಟ್ಟು ಷೇರುಗಳ %	ಷೇರುಗಳ ಸಂಖ್ಯೆ	ಕಂಪೆನಿಯ ಒಟ್ಟು ಷೇರುಗಳ %
1. ಕರ್ನಾಟಕದ ರಾಜ್ಯಪಾಲರು	ವರ್ಷದ ಪ್ರಾರಂಭದ ಹೊತ್ತಿಗೆ	594,986	99.16%	594,986	99.16%
	ವರ್ಷದಲ್ಲಿ ಪ್ರೋತ್ಸಾಹಕರ ಷೇರು ಹಿಡುವಳಿಯಲ್ಲಿನ ದಿನಾಂಕವಾರು ಏರಿಕೆ/ಇಳಿಕೆ, ಏರಿಕೆ/ಇಳಿಕೆಗೆ ಕಾರಣಗಳನ್ನು ಸೂಚಿಸುವುದು (ಉದಾ: ಹಂಚಿಕೆ/ವರ್ಗವಣೆ/ಬೋನಸ್/ಸ್ವೆಟ್ ಈಕ್ವಿಟಿ, ಮುಂ.)	-	-	-	-
1. ಕರ್ನಾಟಕದ ರಾಜ್ಯಪಾಲರು	ವರ್ಷದ ಕೊನೆಯ ಹೊತ್ತಿಗೆ	594,986	99.16%	594,986	99.16%

iv) ಮೊದಲ ಹತ್ತು ಷೇರುದಾರರ ಷೇರು ಹಿಡುವಳಿ ವಿನ್ಯಾಸ (ನಿರ್ದೇಶಕರು, ಪ್ರೋತ್ಸಾಹಕರು ಮತ್ತು ಜಿಡಿಆರ್ & ಎಡಿಆರ್ ಹಿಡುವಳಿದಾರರನ್ನು ಹೊರತುಪಡಿಸಿ):

ಕ್ರ. ಸಂ.	ವರ್ಷದ ಪ್ರಾರಂಭದ ಹೊತ್ತಿಗೆ ಷೇರು ಹಿಡುವಳಿ	ವರ್ಷದ ಕೊನೆಯ ಹೊತ್ತಿಗೆ ಸಂಚಯಿತ ಷೇರು ಹಿಡುವಳಿ		ಮೊದಲ ಹತ್ತು ಷೇರುದಾರರಲ್ಲಿ ಪ್ರತಿಯೋರ್ವರಿಗೂ	
		ಷೇರುಗಳ ಸಂಖ್ಯೆ	ಕಂಪೆನಿಯ ಒಟ್ಟು ಷೇರುಗಳ %	ಷೇರುಗಳ ಸಂಖ್ಯೆ	ಕಂಪೆನಿಯ ಒಟ್ಟು ಷೇರುಗಳ %
1. ಕೆಎಸ್ಐಐಡಿಸಿ	ವರ್ಷದ ಪ್ರಾರಂಭದ ಹೊತ್ತಿಗೆ	5,000	0.83%	5,000	0.83%
	ವರ್ಷದಲ್ಲಿ ಷೇರು ಹಿಡುವಳಿಯಲ್ಲಿನ ದಿನಾಂಕವಾರು ಏರಿಕೆ/ಇಳಿಕೆ, ಏರಿಕೆ/ಇಳಿಕೆಗೆ ಕಾರಣಗಳನ್ನು ಸೂಚಿಸುವುದು (ಉದಾ: ಹಂಚಿಕೆ/ವರ್ಗವಣೆ/ಬೋನಸ್/ಸ್ವೆಟ್ ಈಕ್ವಿಟಿ ಮುಂ.)	-	-	-	-
1. ಕೆಎಸ್ಐಐಡಿಸಿ	ವರ್ಷದ ಕೊನೆಯ ಹೊತ್ತಿಗೆ (ಅಥವಾ ವರ್ಷದಲ್ಲಿ ಪ್ರತ್ಯೇಕಿಸಲಾಗಿದ್ದರೆ, ಪ್ರತ್ಯೇಕಗೊಳಿಸುವಿಕೆಯ ದಿನಾಂಕದಂದು)	5,000	0.83%	5,000	0.83%

v) ನಿರ್ದೇಶಕರು ಮತ್ತು ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿಯ ಷೇರು ಹಿಡುವಳಿ: 28.12.2020ರಂದು ಇದ್ದಂತೆ

	ಪ್ರತಿಯೋರ್ವ ನಿರ್ದೇಶಕರಿಗೆ	ವರ್ಷದ ಪ್ರಾರಂಭದ ಹೊತ್ತಿಗೆ ಷೇರು ಹಿಡುವಳಿ		ವರ್ಷದ ಕೊನೆಯ ಹೊತ್ತಿಗೆ ಸಂಚಯಿತ ಷೇರು ಹಿಡುವಳಿ	
		ಷೇರುಗಳ ಸಂಖ್ಯೆ	ಕಂಪೆನಿಯ ಒಟ್ಟು ಷೇರುಗಳ %	ಷೇರುಗಳ ಸಂಖ್ಯೆ	ಕಂಪೆನಿಯ ಒಟ್ಟು ಷೇರುಗಳ %
ಶ್ರೀ ನವೀನ್ ರಾಜ್ ಸಿಂಗ್ ಶ್ರೀ ಮಹೇಶ್ವರ ರಾವ್ ಡಾ. ಏಕ್‌ರೂಪ್ ಕೌರ್ ಶ್ರೀ ಎನ್. ಎಸ್. ಪ್ರಸನ್ನಕುಮಾರ್ ಶ್ರೀ ಸೋಮಶೇಖರ್ ಶ್ರೀ ಅನ್ವರ್ ಬಾಷಾ ಶ್ರೀ ಜಿ. ಶಶಿಧರ	ವರ್ಷದ ಪ್ರಾರಂಭದ ಹೊತ್ತಿಗೆ	2 2 2 2 2 2 2		2 2 2 2 2 2 2	
	ವರ್ಷದಲ್ಲಿ ಷೇರು ಹಿಡುವಳಿಯಲ್ಲಿನ ದಿನಾಂಕವಾರು ಏರಿಕೆ/ಇಳಿಕೆ, ಏರಿಕೆ/ಇಳಿಕೆಗೆ ಕಾರಣಗಳನ್ನು ಸೂಚಿಸುವುದು (ಉದಾ:ಹಂಚಿಕೆ/ ವರ್ಗಾವಣೆ/ಬೋನಸ್/ಸ್ವೆಟ್ ಈಕ್ವಿಟಿ ಮುಂ.)				
ಶ್ರೀ ನವೀನ್ ರಾಜ್ ಸಿಂಗ್ ಶ್ರೀ ಜಿ. ಕುಮಾರ್ ನಾಯಕ್ ಡಾ. ಏಕರೂಪ್ ಕೌರ್ ಶ್ರೀ ಡಿ. ಎಸ್. ರಮೇಶ್ ಶ್ರೀ ಎಸ್. ವೆಂಕಟೇಶ್ ಶ್ರೀಮತಿ ಜಿ. ಎನ್. ಧನಲಕ್ಷ್ಮಿ ಶ್ರೀ ಜಿ. ಶಶಿಧರ	ವರ್ಷದ ಕೊನೆಯ ಹೊತ್ತಿಗೆ	2 2 2 2 2 2 2		2 2 2 2 2 2 2	

V. ಋಣಬದ್ಧತೆ:

ಬಾಕಿ ಇರುವ ಬಡ್ಡಿ/ಪ್ರಾಪ್ತವಾ ಆದರೆ ಸಂದಾಯ ಬಾಕಿ ಇರದ ಕಂಪೆನಿಯ ಋಣಗಳು –

	ಠೇವಣಿಗಳನ್ನು ಹೊರತುಪಡಿಸಿ ಸುಭದ್ರ ಸಾಲಗಳು	ಅಭದ್ರ ಸಾಲಗಳು	ಠೇವಣಿಗಳು	ಒಟ್ಟು ಋಣಬದ್ಧತೆ
ಹಣಕಾಸು ವರ್ಷದ ಪ್ರಾರಂಭದ ಹೊತ್ತಿಗೆ ಋಣಬದ್ಧತೆ	-	-	-	-
i) ಅಸಲು ಮೊತ್ತ				
ii) ಬಾಕಿ ಇರುವ ಆದರೆ ಸಂದಾಯವಾಗದ ಬಡ್ಡಿ				
iii) ಪ್ರಾಪ್ತವಾದ ಆದರೆ ಬಾಕಿ ಇರದ ಬಡ್ಡಿ				
ಒಟ್ಟು (i+ii+iii)	-	-	-	-
ಚಾಲ್ತಿ ಹಣಕಾಸು ವರ್ಷದಲ್ಲಿ ಋಣಬದ್ಧತೆಯಲ್ಲಿ ಬದಲಾವಣೆ				
• ಸೇರ್ಪಡೆ				
• ಇಳಿಕೆ				
ನಿವ್ವಳ ಬದಲಾವಣೆ				
ಹಣಕಾಸು ವರ್ಷದ ಕೊನೆಯ ಹೊತ್ತಿಗೆ ಋಣಬದ್ಧತೆ				
i) ಅಸಲು ಮೊತ್ತ				
ii) ಬಾಕಿ ಇರುವ ಆದರೆ ಸಂದಾಯವಾಗದ ಬಡ್ಡಿ				
iii) ಪ್ರಾಪ್ತವಾದ ಆದರೆ ಬಾಕಿ ಇರದ ಬಡ್ಡಿ				
ಒಟ್ಟು (i+ii+iii)	-	-	-	-

VI. ನಿರ್ದೇಶಕರು ಮತ್ತು ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿಯ ಸಂಭಾವನೆ

ಎ. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿ ನಿರ್ದೇಶಕರು ಮತ್ತು / ಅಥವಾ ಪ್ರಬಂಧಕರ ಸಂಭಾವನೆ:

ಕ್ರ.ಸಂ	ಸಂಭಾವನೆಯ ವಿವರಗಳು	ವ್ಯವಸ್ಥಾಪಕ ನಿರ್ದೇಶಕರು/ಪೂರ್ಣಾವಧಿ ನಿರ್ದೇಶಕರು/ ಪ್ರಬಂಧಕರ ಹೆಸರು				ಒಟ್ಟು ಮೊತ್ತ
		ವ್ಯವಸ್ಥಾಪಕ ನಿರ್ದೇಶಕರು	——	——	——	
1	1. ಒಟ್ಟು ವೇತನ					
	ಎ. ಆದಾಯ ತೆರಿಗೆ ಕಾಯ್ದೆ, 1961 ಪರಿಚ್ಛೇದ 17(1)ರ ಉಪಬಂಧಗಳ ಪ್ರಕಾರ ವೇತನ	ನವೀನ್ ರಾಜ್ ಸಿಂಗ್, ಭಾಆಸೇ				ರೂ. 29.48 ಲಕ್ಷ
	ಬಿ. ಆದಾಯ ತೆರಿಗೆ ಕಾಯ್ದೆ, 1961 ಪರಿಚ್ಛೇದ 17(2)ರ ಉಪಬಂಧಗಳ ಪ್ರಕಾರ ವಿಶೇಷ ಸವಲತ್ತು					
	ಸಿ. ಆದಾಯ ತೆರಿಗೆ ಕಾಯ್ದೆ, 1961 ಪರಿಚ್ಛೇದ 17(3)ರ ಉಪಬಂಧಗಳ ಪ್ರಕಾರ ವೇತನದ ಸ್ಥಾನದಲ್ಲಿ ಲಾಭಗಳು					
2	ಸ್ಟಾಕ್ ಆಯ್ಕೆ					
3	ಸ್ವೆಟ್ ಈಕ್ವಿಟಿ					
4	ದಲಾಲಿ					
	– ಲಾಭದ ಪ್ರತಿಶತವಾಗಿ					
	– ಇತರೆ, ನಿರ್ದಿಷ್ಟಗೊಳಿಸಿ					
5	ಇತರೆ, ನಿರ್ದಿಷ್ಟಗೊಳಿಸಿ					
	ಒಟ್ಟು (ಎ)					
	ಕಾಯ್ದೆಯ ಪ್ರಕಾರ ಮೇಲ್ಮಿತಿ					

ಬಿ. ಇತರ ನಿರ್ದೇಶಕರಿಗೆ ಸಂಭಾವನೆ:

ಕ್ರ.ಸಂ	ಸಂಭಾವನೆಯ ವಿವರಗಳು	ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿ ನಿರ್ದೇಶಕರು, ಪ್ರಬಂಧಕರ ಹೆಸರು				ಒಟ್ಟು ಮೊತ್ತ
1	ಸ್ವತಂತ್ರ ನಿರ್ದೇಶಕರು					
	• ಮಂಡಳಿ/ಸಮಿತಿ ಸಭೆಗಳಲ್ಲಿನ ಹಾಜರಾತಿಗೆ ಶುಲ್ಕ					ರೂ. 13,000/–
	• ದಲಾಲಿ					
	• ಇತರೆ, ನಿರ್ದಿಷ್ಟಗೊಳಿಸಿ					
	ಒಟ್ಟು (1)					
2	ಇತರ ಕಾರ್ಯಕಾರಿ ಅಲ್ಲದ ನಿರ್ದೇಶಕರು					
	• ಮಂಡಳಿ/ಸಮಿತಿ ಸಭೆಗಳಲ್ಲಿನ ಹಾಜರಾತಿಗೆ ಭತ್ಯೆ					
	• ದಲಾಲಿ					
	• ಇತರೆ, ನಿರ್ದಿಷ್ಟಗೊಳಿಸಿ					
	ಒಟ್ಟು (2)					**ರೂ. 13,000/–**
	ಒಟ್ಟು (ಬಿ)=(1+2)					
	ಒಟ್ಟು ವ್ಯವಸ್ಥಾಪನಾ ಸಂಭಾವನೆ					
	ಕಾಯ್ದೆಯ ಪ್ರಕಾರ ಒಟ್ಟಾರೆ ಮೇಲ್ಮಿತಿ					

ಸಿ. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿ ನಿರ್ದೇಶಕರು, ಪ್ರಬಂಧಕರ ಹೊರತಾಗಿ ಇತರ ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿಯ ಸಂಭಾವನೆ:

ಕ್ರ.ಸಂ	ಸಂಭಾವನೆಯ ವಿವರಗಳು	ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿ			ಒಟ್ಟು ಮೊತ್ತ
		ಸಿಇಓ	ಕಂಪೆನಿ ಕಾರ್ಯದರ್ಶಿ	ಸಿಎಫ್ಓ	
1	1. ಒಟ್ಟು ವೇತನ				
	ಎ. ಆದಾಯ ತೆರಿಗೆ ಕಾಯ್ದೆ, 1961 ಪರಿಚ್ಛೇದ 17(1)ರ ಉಪಬಂಧಗಳ ಪ್ರಕಾರ ವೇತನ				ಅನ್ವಯವಾ–ಗುವುದಿಲ್ಲ
	ಬಿ. ಆದಾಯ ತೆರಿಗೆ ಕಾಯ್ದೆ, 1961 ಪರಿಚ್ಛೇದ 17(2)ರ ಉಪಬಂಧಗಳ ಪ್ರಕಾರ ವಿಶೇಷ ಸವಲತ್ತು				
	ಸಿ. ಆದಾಯ ತೆರಿಗೆ ಕಾಯ್ದೆ, 1961 ಪರಿಚ್ಛೇದ 17(3)ರ ಉಪಬಂಧಗಳ ಪ್ರಕಾರ ವೇತನದ ಸ್ಥಾನದಲ್ಲಿ ಲಾಭಗಳು				
2	ಸ್ಟಾಕ್ ಆಯ್ಕೆ				
3	ಸ್ವೆಟ್ ಈಕ್ವಿಟಿ				
4	ದಲಾಲಿ				
	– ಲಾಭದ ಪ್ರತಿಶತವಾಗಿ				
	– ಇತರೆ, ನಿರ್ದಿಷ್ಟಗೊಳಿಸಿ				
5	ಇತರೆ, ನಿರ್ದಿಷ್ಟಗೊಳಿಸಿ				
	ಒಟ್ಟು				

VII: *ಅಪರಾಧಗಳಿಗೆ ಸಂಬಂಧಿಸಿದಂತೆ ದಂಡಗಳು/ಶಿಕ್ಷೆ/ರಾಜಿಕಬೂಲಿ:*

ವಿಧ	ಕಂಪೆನಿ ಕಾಯ್ದೆಯ ಪರಿಚ್ಛೇದ	ಸಂಕ್ಷಿಪ್ತ ವಿವರಣೆ	ವಿಧಿಸಲಾದ ದಂಡಗಳು/ಶಿಕ್ಷೆ/ ರಾಜಿಕಬೂಲಿಯ ವಿವರಗಳು ನ್ಯಾಯಾಲಯ]	ಪ್ರಾಧಿಕಾರ [ಆರ್ಡಿ/ ಎನ್ಸಿಎಲ್ಟಿ/	ಮೇಲ್ಮನವಿ, ಯಾವುದಾದರೂ ಇದ್ದ ಪಕ್ಷದಲ್ಲಿ (ವಿವರಗಳನ್ನು ಒದಗಿಸಿ)
ಎ. ಕಂಪೆನಿ					
ದಂಡ	ಯಾವುದೂ ಇಲ್ಲ				
ಶಿಕ್ಷೆ	ಯಾವುದೂ ಇಲ್ಲ				
ರಾಜಿಕಬೂಲಿ	ಯಾವುದೂ ಇಲ್ಲ				
ಬಿ. ನಿರ್ದೇಶಕರು					
ದಂಡ	ಯಾವುದೂ ಇಲ್ಲ				
ಶಿಕ್ಷೆ	ಯಾವುದೂ ಇಲ್ಲ				
ರಾಜಿಕಬೂಲಿ	ಯಾವುದೂ ಇಲ್ಲ				
ಸಿ. ತಪ್ಪಿರುವ ಇತರ ಅಧಿಕಾರಿಗಳು					
ದಂಡ	ಯಾವುದೂ ಇಲ್ಲ				
ಶಿಕ್ಷೆ	ಯಾವುದೂ ಇಲ್ಲ				
ರಾಜಿಕಬೂಲಿ	ಯಾವುದೂ ಇಲ್ಲ				

ನಿರ್ದೇಶಕ ಮಂಡಳಿಯ ಆದೇಶದಂತೆ
ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್ ಪರವಾಗಿ

ಸಹಿ/–
ಎಸ್. ಲಿಂಗಮೂರ್ತಿ
ಅಧ್ಯಕ್ಷರು
ಡಿಐಎನ್: 09012809

ಸ್ಥಳ: ಬೆಂಗಳೂರು
ದಿನಾಂಕ: 28ನೇ ಡಿಸೆಂಬರ್ 2020

KSMC

ಅನುಬಂಧ "ಬಿ"

ನಿರ್ದೇಶಕರ ವರದಿಗೆ ಜೋಡಿಕೆ
ಲೆಕ್ಕಪರಿಶೋಧಕರ ಪರಿಶೀಲನೆಗಳಿಗೆ ಅನುಸರಣೆ

ಲೆಕ್ಕಪರಿಶೋಧಕರ ಪರಿಶೀಲನೆಗಳು:

ಕ್ರ.ಸಂ	ಲೆಕ್ಕಪರಿಶೋಧಕರ ಪರಿಶೀಲನೆಗಳು	ಅನುಸರಣೆ
1	**ಗುತ್ತಿಗೆ ವ್ಯಾಜ್ಯ:** ಸುಬ್ಬರಾಯನಹಳ್ಳಿ ಕಬ್ಬಿಣ ಅದಿರು ಗಣಿಗಳಲ್ಲಿನ ಒಟ್ಟು 168 ಹೆಕ್ಟೇರು ಪ್ರದೇಶದ ಪೈಕಿ 35.5 ಹೆಕ್ಟೇರು ಪ್ರದೇಶ ಹಾಗೂ ತಿಮ್ಮಪ್ಪನಗುಡಿ ಕಬ್ಬಿಣ ಅದಿರು ಗಣಿಯ 621.59 ಪ್ರದೇಶದ ಪೈಕಿ 36.5 ಹೆಕ್ಟೇರು ಪ್ರದೇಶವನ್ನು ಮೊದಲಿಗೆ ಕಂಪೆನಿಗೆ ಗುತ್ತಿಗೆ ನೀಡಲಾಗಿತ್ತು ಮತ್ತು ತದನಂತರದಲ್ಲಿ ಇವನ್ನು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಅನುಕ್ರಮವಾಗಿ ಶ್ರೀ ಬಿ. ಕುಮಾರ ಗೌಡ ಮತ್ತು ಶ್ರೀ ಎಚ್ ರಂಗನ್ ಗೌಡ ಅವರಿಗೆ ಗುತ್ತಿಗೆಗೆ ನೀಡಿತು. ಈ ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ವ್ಯಾಜ್ಯದಲ್ಲಿವೆ. ಈ ನಿಟ್ಟಿನಲ್ಲಿ ಹೊರಬರುವ ತೀರ್ಪು ಕಂಪೆನಿಯ ಮೇಲೆ ಆರ್ಥಿಕ ಪರಿಣಾಮವನ್ನು ಬೀರಲಿದೆ.	ಈ ವಿಷಯವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಇರುತ್ತದೆ.
2	**ಅರಣ್ಯ ಅಭಿವೃದ್ಧಿ ತೆರಿಗೆ:** 1. ಕಂಪೆನಿಯು 1–4–2000 ದಿಂದ 26–08–2008ರ ವರೆಗಿನ ಅವಧಿಗೆ ಅರಣ್ಯ ಅಭಿವೃದ್ಧಿ ತೆರಿಗೆಯ ಹಕ್ಕುಸಲ್ಲಿಕೆಗೆ ವಿರುದ್ಧವಾಗಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹಿಂಪಡೆದಿದೆ. ಕರ್ನಾಟಕ ಸರ್ಕಾರದ ನಿರ್ದೇಶನಾನುಸಾರ ಹೊಂದಾಣಿಕೆ ಮಾಡಿಕೊಂಡ ನಂತರ ಕಂಪೆನಿ ಪಾವತಿಸಬೇಕಿರುವ ಮೊತ್ತ ಕಂಪೆನಿಯ ಲೆಕ್ಕದಂತೆ ರೂ. 71,16,51,454/– ಆಗಿರುತ್ತದೆ. ಕಂಪೆನಿಯು 2010–11ರ ಹಣಕಾಸು ವರ್ಷದಲ್ಲಿ ರೂ. 35,00,00,000/– ಮತ್ತು 2013–14ರ ಹಣಕಾಸು ವರ್ಷದಲ್ಲಿ ರೂ. 36,16,51,453/– ಪಾವತಿಸಿದೆ. ಈ ಪೈಕಿ ಹಣಕಾಸು ವರ್ಷ 2011–12ರಲ್ಲಿ ಕಂಪೆನಿಯು ರೂ. 11,04,19,823/– ಮೊತ್ತವನ್ನು ತೊಡೆದುಹಾಕಿದೆ ಮತ್ತು ಉಳಿಕೆ ರೂ. 60,12,31,631/– ಕ್ಕೆ 2013–14ರಲ್ಲಿ ಸಾಲಚೀಟಿಗಳನ್ನು ಸೃಷ್ಟಿಸಿದೆ. ಈ ಪೈಕಿ ರೂ. 6,94,98,677/– ಮೊತ್ತವನ್ನು ಕಂಪೆನಿ ಹೊಂದಿರುವ ಜಮಾ ಶಿಲ್ಕಿನೊಂದಿಗೆ ಹೊಂದಿಸುವ ಮೂಲಕ ವಸೂಲಿಮಾಡಲಾಗಿದೆ ಹಾಗೂ ಉಳಿಕೆ ರೂ. 53,17,32,954/– ಮೊತ್ತವನ್ನು ಸಂಬಂಧಿತ ಪಕ್ಷಗಳು ಗುರುತಿಸಿರುವುದೂ ಇಲ್ಲ, ಕಂಪೆನಿಯೂ ಇದಕ್ಕೆ ಹವಣಿಕೆ ಮಾಡಿರುವುದಿಲ್ಲ. ಅಷ್ಟರ ಮಟ್ಟಿಗೆ ಇತರ ಸಾಲಗಾರರು ಹೆಚ್ಚಿಗೆ ಪ್ರಕಟವಾಗಿದೆ. ಆದರೆ, ಪರಿಷ್ಕೃತ ಲೆಕ್ಕಾಚಾರದ ಪ್ರಕಾರ ಸರ್ಕಾರಕ್ಕೆ ಪಾವತಿಸಬೇಕಿರುವ ನೈಜ ಮೊತ್ತ ರೂ. 6148.87 ಲಕ್ಷವಾಗಿದ್ದು ಪಾವತಿಸಲಾಗಿರುವ ರೂ 967.64 ಲಕ್ಷ ಹೆಚ್ಚುವರಿ ಮೊತ್ತವನ್ನು (7116.57 ಲಕ್ಷ –6148.87 ಲಕ್ಷ) ಸಕಾರದಿಂದ ವಸೂಲಿಮಾಡಬೇಕಿದೆ ಹಾಗೂ ಖರೀದಿದಾರರ ಮೇಲೆ ಸೃಷ್ಟಿಸಲಾದ ರೂ 967.64 ಲಕ್ಷ ಮೊತ್ತದ ಸಾಲಚೀಟಿಗಳನ್ನು ಹೊಂದಾಣಿಕೆಯ ನಂತರ ವ್ಯತಿರಿಕ್ತಗೊಳಿಸಬೇಕಿದೆ. ಈ ಮಟ್ಟಿಗೆ ಸರ್ಕರದಿಂದ ಬರಬೇಕಿರುವುದನ್ನು ಕಡಿಮೆ ತೋರಿಸಲಾಗಿದೆ ಹಾಗೂ ಖರೀದಿದಾರರಿಂದ ಬರಬೇಕಿರುವ ಮೊತ್ತವನ್ನು ಹೆಚ್ಚಿಗೆ ತೋರಿಸಲಾಗಿದೆ.	ಕಂಪೆನಿಯು ಪಕ್ಷಗಳಿಂದ ಎಫ್‌ಡಿಟಿ ವಸೂಲಿಗೆ ಕಾನೂನು ಕ್ರಮಗಳನ್ನು ಪ್ರಾರಂಭಿಸಿದೆ. ಸಂಬಂಧಪಟ್ಟವರಿಂದ ಅರಣ್ಯ ತೆರಿಗೆಯನ್ನು ವಸೂಲಾತಿ ಮಾಡಲು ಸಂಸ್ಥೆಯು ಕಾನೂನು ಕ್ರಮಗಳನ್ನು ಕೈಗೊಂಡಿದೆ. ದಿನಾಂಕ 20.10.2020ರಂದು ಮುಖ್ಯ ಕಾರ್ಯದರ್ಶಿಗಳು, ಇವರೊಂದಿಗೆ ನಡೆದ ಸಭೆಯಲ್ಲಿ ಅರಣ್ಯ ಇಲಾಖೆ ಮತ್ತು ಕೆಎಸ್‌ಎಂಸಿಎಲ್ ಸಂಸ್ಥೆಯು ಜಂಟಿ ಸಹಯೋಗದೊಂದಿಗೆ ದಿನಾಂಕ 5.11.2020 ರೊಳಗೆ ಅರಣ್ಯ ತೆರಿಗೆ ಅಭಿವೃದ್ಧಿ ಪಾವತಿ ಲೆಕ್ಕವನ್ನು ಸಮನ್ವಯಗೊಳಿಸುವಂತೆ ಮುಖ್ಯ ಕಾರ್ಯದರ್ಶಿಗಳು ಸೂಚಿಸಿರುತ್ತಾರೆ. ಅದರಂತೆ ಮುಖ್ಯ ಅರಣ್ಯ ಸಂರಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಅರಣ್ಯ ಅಭಿವೃದ್ಧಿ ಲೆಕ್ಕವನ್ನು ಕೆಳಕಂಡಂತೆ ಸಮನ್ವಯಗೊಳಿಸಿರುತ್ತಾರೆ. ಅ. ಅರಣ್ಯ ಅಭಿವೃದ್ಧಿ ತೆರಿಗೆ ಪಾವತಿಗೆ ರವಾನೆಯಾಗಿರುವ ಅದಿರು ಪ್ರಮಾಣವನ್ನಷ್ಟೆ ಲೆಕ್ಕಕ್ಕೆ ತೆಗೆದುಕೊಳ್ಳುವುದು. ಆ. ಕೆಎಸ್‌ಎಂಸಿಎಲ್ ಸಂಸ್ಥೆಯು ನಿಗಧಿಪಡಿಸಿರುವ ದರದ ಆಧಾರದ ಮೇರೆಗೆ ಅರಣ್ಯ ಅಭಿವೃದ್ಧಿ ತೆರಿಗೆ ಪಾವತಿ ಲೆಕ್ಕ ಹಾಕುವುದು.

ಕ್ರ.ಸಂ	ಲೆಕ್ಕಪರಿಶೋಧಕರ ಪರಿಶೀಲನೆಗಳು	ಅನುಸರಣೆ
	2. ಕಂಪೆನಿಯು ಎಫ್‌ಡಿಟಿ ಸಂದಾಯವನ್ನು 26.08.2008ರ ನಂತರ ಘಟಿಸಿದ ಮಾರಾಟಗಳ ಮೇಲೆ ಮೌಲ್ಯಾನುಸಾರವಾಗಿ 12% ಅಥವಾ 6% ದಂತೆ ಮಾಡುತ್ತಿದೆ. ಆದರೆ, ಮೇಲಿನದರ ಜೊತೆಗೆ ಅರಣ್ಯ ಇಲಾಖೆ ಮೌಲ್ಯಾನುಸಾರ ಆಧಾರಿತ ಶುಲ್ಕಕ್ಕೆ ಬದಲಾಗಿ, ಯಾವುದು ಹೆಚ್ಚಿದೆಯೋ ಅದರಂತೆ ಎನ್‌ಎಮ್ ಡಿಸಿ/ ಎಮ್‌ಎಮ್‌ಎಲ್/ಡಿಎಮ್‌ಜಿ (ಐಬಿಎಮ್) ಸೂಚಿತ ದರಗಳ ಪೈಕಿ ಹೆಚ್ಚಿನ ದರದ ಮೇಲೆ 12% ದಂತೆ ಎಫ್‌ಡಿಟಿ ಗಾಗಿ ರೂ. 58,37,89,827/– ಮೊತ್ತದ ಹೆಚ್ಚುವರಿ ಬೇಡಿಕೆಯನ್ನು ಮುಂದಿಟ್ಟಿದೆ. ಈ ಸಂಬಂಧವಾಗಿ ಕಂಪೆನಿಯು ಲೆಕ್ಕಪತ್ರಗಳಲ್ಲಿ ಯಾವುದೇ ಹವಣಿಕೆ ಮಾಡಿಲ್ಲ ಅಥವಾ ಹಕ್ಕಸಲ್ಲಿಕೆಗೆ ಪ್ರತಿಯಾಗಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಬದಲಿಗೆ ಅರಣ್ಯ ಇಲಾಖೆಯ ಬೇಡಿಕೆಯನ್ನು ಮನ್ನಾ ಮಾಡುವಂತೆ ಕರ್ನಾಟಕ ಸರ್ಕಾರವನ್ನು ಕೋರಿದೆ. ಇಷ್ಟರ ಮಟ್ಟಿಗೆ ಲಾಭವನ್ನು ರೂ. 58.38 ಕೋಟಿಯಷ್ಟು ಹೆಚ್ಚಿಗೆ ತೋರಿಸಲಾಗಿದೆ ಹಾಗೂ ಬಾಕಿ ಹೊಣೆಗಳನ್ನು ರೂ. 58.38 ಕೋಟಿಯಷ್ಟು ಕಡಿಮೆ ತೋರಿಸಲಾಗಿದೆ. **3.** ರಿಟ್ ಅರ್ಜಿ ಸಂ. 863/2009, ದಿನಾಂಕ 28.05.2009ಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದ ಆದೇಶದ ಅನುಸಾರ 2009ರಿಂದ 2015ರ ವರೆಗಿನ ಅವಧಿಗೆ ಎಫ್‌ಡಿಟಿ ಮೇಲಿನ ಬಾಕಿ ಮತ್ತು ಬಡ್ಡಿಯ ಕಡೆಗೆ ಉಪ ಅರಣ್ಯ ಸಂರಕ್ಷಕರಿಂದ ಪತ್ರ ಸಂ. ಎಸ್‌ಟಿಆರ್/ಎಫ್‌ಡಿಟಿ/ಎಂಎಂಎಲ್/995/2015–16 ಮುಖಾಂತರ ಉಬ್ಬಲಗುಂಡಿ ಕಬ್ಬಿಣದ ಅದಿರು ಗಣಿಗಳಿಗೆ ಸಂಬಂಧಿಸಿದಂತೆ ರೂ. 78,47,614/– ಮೊತ್ತದ ಬೇಡಿಕೆಯನ್ನು ಪಡೆದುಕೊಂಡಿದೆ. ತತ್ಸಂಭಂಧವಾಗಿ ಉಪ ಅರಣ್ಯ ಸಂರಕ್ಷರು ಬಳ್ಳಾರಿ ರವರು ತಮ್ಮ ಪತ್ರ ಸಂಖ್ಯೆ ಎಂಎನ್‌ಜಿ/ ಸಿಆರ್–67/92–93 (ಎಂಎಂಎಲ್) ದಿನಾಂಕ 11.3.2020 ರಂದು ಬೇಡಿಕೆ ಪತ್ರ ಕಳುಹಿಸಿ ರೂ.319.25 ಲಕ್ಷಗಳ ಅರಣ್ಯ ತೆರಿಗೆಯನ್ನು ಬಡ್ಡಿಯೊಂದಿಗೆ ಪಾವತಿಸುವಂತೆ ಕೋರಿರುತ್ತಾರೆ ಈ ಸಂಬಂಧವಾಗಿ ಕಂಪೆನಿಯು ಲೆಕ್ಕಪತ್ರಗಳಲ್ಲಿ ಯಾವುದೇ ಹವಣಿಕೆ ಮಾಡಿಲ್ಲ ಅಥವಾ ಹಕ್ಕಸಲ್ಲಿಕೆಗೆ ಪ್ರತಿಯಾಗಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಇಷ್ಟರ ಮಟ್ಟಿಗೆ ಲಾಭವನ್ನು ಹೆಚ್ಚಿಗೆ ತೋರಿಸಲಾಗಿದೆ ಹಾಗೂ ಹೊಣೆಗಳನ್ನು ಕಡಿಮೆತೋರಿಸಲಾಗಿದೆ. **4.** ರಿಟ್ ಅರ್ಜಿ ಸಂ. 863/2009, ದಿನಾಂಕ 28.05.2009ಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದ ಆದೇಶದ ಅನುಸಾರ 2009ರಿಂದ 2015ರ ವರೆಗಿನ ಅವಧಿಗೆ ಎಫ್‌ಡಿಟಿ ಮೇಲಿನ ಬಾಕಿ ಮತ್ತು ಬಡ್ಡಿಯ ಕಡೆಗೆ ಉಪ ಅರಣ್ಯ ಸಂರಕ್ಷಕರಿಂದ ಪತ್ರ ಸಂ. ಎಸ್‌ಟಿಆರ್/ಎಫ್‌ಡಿಟಿ/ಎಂಎಂಎಲ್/995/2015–16 ಮುಖಾಂತರ ತಿಮ್ಮಪ್ಪನಗುಂಡಿ ಕಬ್ಬಿಣದ ಅದಿರು ಗಣಿಗಳಿಗೆ ಸಂಬಂಧಿಸಿದಂತೆ ರೂ. 56,85,05,357/– ಮೊತ್ತದ ಬೇಡಿಕೆಯನ್ನು ಪಡೆದುಕೊಂಡಿದೆ. ತತ್ಸಂಭಂಧವಾಗಿ ತಿಮ್ಮಪ್ಪನಗುಡಿ ಕಬ್ಬಿಣದ ಅದಿರು ಗಣಿಗೆ ಸಂಭಂಧಿಸಿದಂತೆ ಉಪ ಅರಣ್ಯ ಸಂರಕ್ಷರು ಬಳ್ಳಾರಿ ರವರು ತಮ್ಮ ಪತ್ರ ಸಂಖ್ಯೆ ಎಂಎನ್‌ಜಿ/ಸಿಆರ್–67/92–93 (ಎಂಎಂಎಲ್) ದಿನಾಂಕ 11.3.2020 ರಂದು ಬೇಡಿಕೆ ಪತ್ರ ಕಳುಹಿಸಿ ರೂ.10606.14 ಲಕ್ಷಗಳ ಅರಣ್ಯ ತೆರಿಗೆಯನ್ನು ಬಡ್ಡಿಯೊಂದಿಗೆ ಪಾವತಿಸುವಂತೆ ಕೋರಿರುತ್ತಾರೆ ಈ ಸಂಬಂಧವಾಗಿ ಕಂಪೆನಿಯು ಲೆಕ್ಕಪತ್ರಗಳಲ್ಲಿ ಯಾವುದೇ ಹವಣಿಕೆ ಮಾಡಿಲ್ಲ ಅಥವಾ ಹಕ್ಕಸಲ್ಲಿಕೆಗೆ ಪ್ರತಿಯಾಗಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಇಷ್ಟರ ಮಟ್ಟಿಗೆ ಲಾಭವನ್ನು ಹೆಚ್ಚಿಗೆ ತೋರಿಸಲಾಗಿದೆ ಹಾಗೂ ಬಾಕಿ ಹೊಣೆಗಳನ್ನು ಕಡಿಮೆ ತೋರಿಸಲಾಗಿದೆ.	ಇ. ದಿನಾಂಕ 1.4.2000 ರಿಂದ 26.08.2008 ರವೆಗಿನ ಬಡ್ಡಿಯನ್ನು ಪಾವತಿಸುವ ಕುರಿತು ಸರ್ಕಾರದ ತೀರ್ಮಾನದ ಅಗತ್ಯವಿದ್ದು, ತೀರ್ಮಾನವಾಗು ವವರೆವಿಗೂ ಸದರಿ ಅವಧಿಯಲ್ಲಿ ಪಾವತಿಸಿರುವ ಮೇಲ್ಕಂಡ ರೂ.9,66,64,404 ಗಳನ್ನು ಹೆಚ್ಚುವರಿ ಪಾವತಿ ಮೊತ್ತವೆಂದು ಪರಿಗಣಿಸಲಾಗುವುದು. ಈ. ಸದರಿ ಅವಧಿಗೆ ಸರಳ ಬಡ್ಡಿಯಂತೆ 18% ಬಡ್ಡಿಯ ಲೆಕ್ಕಹಾಕುವಿಕೆಯನ್ನು ಕುರಿತಂತೆ ಅರಣ್ಯ ಇಲಾಖೆಯು ಮತ್ತೊಮ್ಮೆ ಪುನರ್‌ಶೀಲನೆ ನಡೆಸುವುದು. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕುರಿತು ಮತ್ತೊಮ್ಮೆ ಪರಿಶೀಲಿಸುವಂತೆ ಅರಣ್ಯ ಮತ್ತು ಪರಿಸರ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಮುಖ್ಯ ಅರಣ್ಯ ಸಂರಕ್ಷಕರಿಗೆ ಸೂಚಿಸಿರುತ್ತಾರೆ. ಸರ್ಕಾರದ ಉತ್ತರವನ್ನು ನಿಸರೀಕ್ಷಿಸಲಾಗಿದೆ.

ಕ್ರ.ಸಂ	ಲೆಕ್ಕಪರಿಶೋಧಕರ ಪರಿಶೀಲನೆಗಳು	ಅನುಸರಣೆ
	5. ಸುಬ್ಬರಾಯನಹಳ್ಳಿ ಕಬ್ಬಿಣದ ಅದಿರು ಗಣಿಗೆ ಸಂಭಂಧಿಸಿದಂತೆ ಉಪ ಅರಣ್ಯ ಸಂರಕ್ಷರು ಬಳ್ಳಾರಿ ರವರು ತಮ್ಮ ಪತ್ರ ಸಂಖ್ಯೆ ಎಂಎನ್‌ಜಿ/ಸಿಆರ್–67/92–93 (ಎಂಎಂಎಲ್) ದಿನಾಂಕ 11.3.2020 ರಂದು ಬೇಡಿಕೆ ಪತ್ರ ಕಳುಹಿಸಿ ರೂ.4240.24 ಲಕ್ಷಗಳ ಅರಣ್ಯ ತೆರಿಗೆಯನ್ನು ಬಡ್ಡಿಯೊಂದಿಗೆ ಪಾವತಿಸುವಂತೆ ಕೋರಿರುತ್ತಾರೆ ಈ ಸಂಬಂಧವಾಗಿ ಕಂಪೆನಿಯು ಲೆಕ್ಕಪತ್ರಗಳಲ್ಲಿ ಯಾವುದೇ ಹವಣಿಕೆ ಮಾಡಿಲ್ಲ ಅಥವಾ ಹಕ್ಕುಸಲ್ಲಿಕೆಗೆ ಪ್ರತಿಯಾಗಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಇಷ್ಟರ ಮಟ್ಟಿಗೆ ಲಾಭವನ್ನು ಹೆಚ್ಚಿಗೆ ತೋರಿಸಲಾಗಿದೆ ಹಾಗೂ ಬಾಕಿ ಹೊಣೆಗಳನ್ನು ಕಡಿಮೆ ತೋರಿಸಲಾಗಿದೆ.	
3	**ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ:** ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಸಲುವಾಗಿ ಕಂಪೆನಿ **ರೂ. 421.13 ಲಕ್ಷ** ಮೊತ್ತವನ್ನು ವ್ಯಯಿಸಿದೆ ಮತ್ತು ವೆಚ್ಚವನ್ನು ಅನುಭವಿಸಿದ್ದಕ್ಕಾಗಿ ಸಿಎಸ್‌ಆರ್ ಗಾಗಿ ರೂ. 786.45 ಲಕ್ಷ ಮೊತ್ತವನ್ನು ಮುಂಗಡವಾಗಿ ಪಾವತಿಸಿದೆ; ಆದರೆ, ಕಳೆದ ಮೂರು ವರ್ಷಗಳ ಒಟ್ಟು ಲಾಭದ 2% ದಂತೆ ರೂ. 662.06 ಲಕ್ಷದಷ್ಟು ಮೊತ್ತವನ್ನು ಸಿಎಸ್‌ಆರ್ ಚಟುವಟಿಕೆಗೆ ವ್ಯಯಿಸಬೇಕಿರುತ್ತದೆ.	ಸಿಎಸ್‌ಆರ್ ಚಟುವಟಿಕೆಗಳಿಗೆಂದು ನಿಧಿಗಳ ಅಗತ್ಯದ ಕೋರಿಕೆ ಸ್ವೀಕರಿಸಿದೊಡನೆಯೇ ಬಳಕೆಯ ಪ್ರಮಾಣಪತ್ರಗಳನ್ನು ಅಂಗೀಕೃತ ಸಿಎಸ್‌ಆರ್ ಚಟುವಟಿಕೆಗಳಿಗೆ ವ್ಯಯಿಸಲಾದ ವೆಚ್ಚಗಳ ವಿವರಗಳೊಂದಿಗೆ ಪಡೆದುಕೊಂಡು ಕಂತುಗಳಲ್ಲಿ ಮುಂಗಡಗಳನ್ನು ಬಿಡುಗಡೆ ಮಾಡಲಾಗುತ್ತದೆ. ಈಗಾಗಲೇ ಬಿಡುಗಡೆಮಾಡಲಾದ ಮತ್ತು ವ್ಯಯಿಸಲಾದ ಮೊತ್ತಗಳ ಪರಿಶೀಲನೆಯ ನಂತರ ಮುಂದಿನ ದಿನಗಳಲ್ಲಿ ಉಳಿದ ಮೊತ್ತವನ್ನು ಬಿಡುಗಡೆಮಾಡಲಾಗುತ್ತದೆ.
4	**ಇತರ ಚಾಲ್ತಿಯಲ್ಲದ ಆಸ್ತಿಗಳು ಟಿಪ್ಪಣಿ ಸಂ.05: ರೂ. 57.19 ಕೋಟಿ:** ಈ ಮೊತ್ತದಲ್ಲಿ ವಿಜಯ ಬ್ಯಾಂಕ್, ಬೇಗೂರು – ಇಲ್ಲಿ ಇರಿಸಲಾಗಿದ್ದ ರೂ. 15.00 ಕೋಟಿ ಸೇರಿದ್ದು ಈ ಮೊತ್ತವನ್ನು ಪಕ್ವತೆಯ ನಂತರ ಭರಿಕೆಮಾಡಿರುವುದಿಲ್ಲ. ಮೊತ್ತವನ್ನು ಬ್ಯಾಂಕ್ ಪ್ರಬಂಧಕರು ಅಪಬಳಕೆ ಮಾಡಿಕೊಂಡಿದ್ದು ಬ್ಯಾಂಕು ಠೇವಣಿ ಇರಿಸಿದ ಮೊತ್ತವನ್ನು ಕೋರ್ಟಿನ ಆದೇಶದಂತೆ ಬಡ್ಡಿಯೊಂದಿಗೆ ಮರು ಪಾವತಿಸಬೇಕಿದೆ.	ವಿಜಯ ಬ್ಯಾಂಕ್ ನವರು ಪತ್ರ ಸಂಖ್ಯೆ ಎಎಸ್‌ಪಿ/0262/2016 ದಿನಾಂಕ 17.2.2020 ರಂದು ಪತ್ರ ಕಳುಹಿಸಿ ಕ್ರಿಮಿನಲ್ ಮೊಕದ್ದಮೆ ಪೂರ್ಣಗೊಂಡ ನಂತರ ಪಕ್ವತೆಯ ಮೊತ್ತವನ್ನು ಬಡ್ಡಿಯೊಂದಿಗೆ ಪಾವತಿಸಲಾಗುವುದು ಎಂದು ತಿಳಿಸಿರುತ್ತಾರೆ. ಈ ಕುರಿತು ಬ್ಯಾಂಕ್ ಆಫ್ ಬರೋಡ (ಹಿಂದಿನ ವಿಜಯ ಬ್ಯಾಂಕ್) ರವರು ನಿರಂತರವಾಗಿ ಪತ್ರ ವ್ಯವಹಾರ ನಡೆಸಿದ್ದು, ಸಂಸ್ಥೆಯು ಇಂಡೆಮ್ನಿಟಿ ಬಾಂಡ್ ಸಲ್ಲಿಕೆಯನ್ನು ಮಾಡಿದಲ್ಲಿ ಪಕ್ವತೆಯ ಮೊತ್ತವನ್ನು ಬಡ್ಡಿಯೊಂದಿಗೆ ಪಾವತಿಸಲಾಗುವುದು ಎಂದು, ಅರ್ಥಾತ್ ಕೆಎಸ್‌ಎಂಸಿಎಲ್ ನಿಂದ ಇಂಡೆಮ್ನಿಟಿ ಬಾಂಡ್ ಸಲ್ಲಿಕೆಯ ನಂತರ ಪಕ್ವತೆಯ ಉತ್ಪತ್ತಿಗಳನ್ನು ಪಾವತಿಸಲಾಗುವುದು ಎಂದುಬ್ಯಾಂಕ್ ಭರವಸೆ ನೀಡಿದೆ. ಕೆಎಸ್‌ಎಂಸಿಎಲ್‌ನ ಹಕ್ಕುಸಲ್ಲಿಕೆಗಳು/ಪ್ರಸ್ತಾವನೆಯನ್ನು ಬ್ಯಾಂಕ್ ಆಫ್ ಬರೋಡದ ಕೇಂದ್ರ ಕಛೇರಿ ಅಂಗೀಕರಿಸಿದ ನಂತರ ಮತ್ತು ಬಡ್ಡಿ ಸಹಿತ ಪಕ್ವತೆಯ ಉತ್ಪತ್ತಿಗಳನ್ನು ಸ್ವೀಕರಿಸಿದ ನಂತರ ಲೆಕ್ಕಪುಸ್ತಕಗಳಲ್ಲಿ ಅಗತ್ಯ ಪರಿಗಣನೆಯನ್ನು ಮಾಡಲಾಗುವುದು. ಬ್ಯಾಂಕ್ ಆಫ್ ಬರೋಡದವರಿಂದ ದಿನಾಂಕ 11.08.2020ರ ಇಮೇಲ್ ಅನ್ವಯ ಸ್ಥಿರೀಕರಣವನ್ನು ಪಡೆದುಕೊಂಡಿರುವ ಕಾರಣ ಈ ಪ್ರಕರಣವನ್ನು ಅನಿಶ್ಚಿತ ಪ್ರಕರಣವೆಂದು ಪರಿಗಣಿಸದಿರಲು ತೀರ್ಮಾನಿಸಿದೆ.

ಕ್ರ.ಸಂ	ಲೆಕ್ಕಪರಿಶೋಧಕರ ಪರಿಶೀಲನೆಗಳು	ಅನುಸರಣೆ
5	**ಗಣಿಗಾರಿಕೆ ಮತ್ತು ಭೂಗರ್ಭಶಾಸ್ತ್ರ ಇಲಾಖೆ:** ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಲೆಕ್ಕಪರಿಶೋಧನಾ ವರದಿಗಳ ಆಧಾರದ ಮೇಲೆ 2009–10, 2010–11 & 2011–12 ರ ಅವಧಿಗೆ (ಸುಬ್ಬರಾಯನಹಳ್ಳಿ, ತಿಮ್ಮಪ್ಪನಗುಡಿ ಮತ್ತು ಇತರ ಗಣಿಗಳಿಗೆ) ಮಾರ್ಚ್, 2013 ಮತ್ತು ಜುಲೈ, 2013ರ ತಿಂಗಳುಗಳ ವಿವಿಧ ದಿನಾಂಕಗಳಂದು ರೂ. 11,20,44,207/– ಮೊತ್ತದ ಹಕ್ಕುಸಲ್ಲಿಸಿದೆ. ಕಬ್ಬಿಣ ಅದಿರಿನ ಮಾರಾಟದಿಂದ ಬಂದ ರೂ. 11,20,44,207/– ಮೊತ್ತವನ್ನು ಮೇಲ್ವಿಚಾರಣಾ ಸಮಿತಿಯು ವಸೂಲುಮಾಡಿತು. ಉಪನಿರ್ದೇಶಕರು, ಗಣಿಗಳು ಮತ್ತು ಭೂಗರ್ಭ ಇಲಾಖೆ – ಇವರು ತಮ್ಮ ಪತ್ರ ಸಂಖ್ಯೆ: ಡಿಡಿಎಚ್/ಎಂಎಲ್/ಎಸ್‌ವೈ/ಇ–ಆಕ್ಷನ್/2013–14/6822 ಅನ್ವಯ ತಿಮ್ಮಪ್ಪನಗುಡಿಗೆ ಸಂಬಂಧಿಸಿದ ಕಬ್ಬಿಣ ಅದಿರನ್ನು ಮನ್ನಾಮಾಡಬೇಕೆಂದು ಮೇಲ್ವಿಚಾರಣಾ ಸಮಿತಿಗೆ ಸೂಚಿಸಿತ್ತು. ಆದರೆ ಲೇಖಾ ಕಾರ್ಯನೀತಿಗಳ ಪ್ರಕಾರ ಕಂಪೆನಿಯು ಮೇಲ್ವಿಚಾರಣಾ ಸಮಿತಿಯಿಂದ ವಸೂಲಾಗಬೇಕಿರುವ ರೂ. 4,48,46,000/– ಮೊತ್ತವನ್ನು ಆದಾಯವೆಂದು ಪರಿಗಣಿಸಿಲ್ಲ. ಅಷ್ಟರ ಮಟ್ಟಿಗೆ ಲಾಭ ಮತ್ತು ಬರಬೇಕಾದವುಗಳನ್ನು ಕಡಿಮೆ ತೋರಿಸಲಾಗಿದೆ.	ಮಾನಿಟರಿಂಗ್ ಕಮಿಟಿಯು ಸಂಸ್ಥೆಗೆ ಹೆಚ್ಚಿಗೆ ಪಾವತಿ ಮಾಡಿರುವ ಮೊತ್ತಕ್ಕೆ (ಐಬಿಎಂನವರು ವರದಿ ಮಾಡಿರುವ ಹೆಚ್ಚುವರಿ ಪ್ರಮಾಣದ ಅದಿರು ವರದಿಯಂತೆ) ರೂ.4.48 ಕೋಟಿಗಳನ್ನು ಹೊಂದಾಣಿಕೆ ಮಾಡಿಕೊಂಡಿರುತ್ತಾರೆ.
6	**ಪರಿಸರ ಸಂರಕ್ಷಣ ಶುಲ್ಕ:** 2009–10ರ ವರ್ಷದಲ್ಲಿ ಪಡೆಯಲಾದ ಅರಣ್ಯವಲ್ಲದ ಭೂಮಿಗೆ ಸಂಬಂಧಿಸಿದಂತೆ ಪರಿಸರ ಸಂರಕ್ಷಣಾ ಶುಲ್ಕವಾಗಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಗುತ್ತಿಗೆ ಭೂಮಿಯ ಮೇಲೆ ಪ್ರತಿ ಹೆಕ್ಟೇರಿಗೆ ರೂ. 84,000/– ರಷ್ಟು ಬೇಡಿಕೆ ಇರಿಸಿದೆ. ಒಟ್ಟು ಬೇಡಿಕೆ ರೂ. 44,89,74,204/– ಆಗಿದೆ. ಆದರೆ, ಕಂಪೆನಿ ಹಣಕಾಸು ವರ್ಷಗಳು 2009–19ರ ಅವಧಿಯಲ್ಲಿ ಕಾರ್ಯಯುಕ್ತ ಗುತ್ತಿಗೆಗಳ ಮೇಲೆ ರೂ. 25,85,50,584/– ರಷ್ಟು ಹವಣಿಕೆ ಒದಗಿಸಿ ಸಂದಾಯಮಾಡಿದೆ ಹಾಗೂ ಪಾವತಿಸಬೇಕಾದ ಉಳಿಕೆ ರೂ. 19,04,23,620/– ಮೊತ್ತವನ್ನು ಕಾರ್ಯಯುಕ್ತವಲ್ಲದ ಗಣಿಗಳ ಮೇಲ ಹವಣಿಕೆ ಮಾಡಿದೆ ಮತ್ತು ಇದನ್ನು ಇತರ ದೀರ್ಘಾವಧಿ ಹೊಣೆ ಅಡಿ ತೋರಿಸಲಾಗಿದೆ.	ಪಡೆಯಲಾದ ಒಟ್ಟು ಅರಣ್ಯ ಗುತ್ತಿಗೆ ಭೂಮಿಯ ಮೇಲೆ ಕಂಪೆನಿ ಸಂದಾಯ ಮಾಡಬೇಕಿರುವ ಪರಿಸರ ಸಂರಕ್ಷಣಾ ಶುಲ್ಕದ ಒಟ್ಟು ಹೊಣೆ ರೂ. 44.90 ಕೋಟಿ ಇದ್ದು ಈ ಪೈಕಿ ಕಂಪೆನಿ ರೂ. 25.88 ಕೋಟಿ ಸಂದಾಯಮಾಡಿದೆ. ಈಗಾಗಲೇ ಮಾಡಲಾಗಿರುವ ಉಳಿಕೆ ಹವಣಿಕೆಯಿಂದ, ಬೇಡಿಕೆಯನ್ನು ಅವಲಂಬಿಸಿ ಮತ್ತು ಮಂಡಳಿಯ ನಿರ್ಧಾರದ ಅನುಸಾರವಾಗಿ ಉಳಿಕೆ ಮೊತ್ತವನ್ನು ಪಾವತಿಸಿ ಅದಕ್ಕನುಗುಣವಾಗಿ ಲೆಕ್ಕತೋರಿಸಲಾಗುವುದು.
7	ದಾಸ್ತಾನುಗಳ ಮೌಲ್ಯಮಾಪನ:ಮೂರು ವರ್ಷಗಳಿಗೂ ಹೆಚ್ಚು ಕಾಲ ಸಂಗ್ರಹದಲ್ಲಿ ಉಳಿದಿರುವ ಮತ್ತು ಪ್ರದರ್ಶನಕ್ಕಿರಿಸಿರುವ ದಾಸ್ತಾನು ಹಾಗೂ ಮಾರ್ಪಡಿಸಲಾದ ಗ್ರಾನೈಟ್ ಸಾಮಗ್ರಿಗಳನ್ನು ದಾಸ್ತಾನಿನ ಮೌಲ್ಯದಲ್ಲಿ ಸೇರಿಸಿರುವುದಿಲ್ಲ. ಇಷ್ಟರ ಮಟ್ಟಿಗೆ ದಾಸ್ತಾನುಗಳನ್ನು ಕಡಿಮೆ ತೋರಿಸಲಾಗಿದೆ.	ದಾಸ್ತಾನುಗಳು ಮೂರು ವರ್ಷ ಹಳೆಯದಾಗಿದ್ದು ಮೂರು ವರ್ಷಕ್ಕಿಂತ ಹಳೆಯದಲ್ಲದ ದಾಸ್ತಾನನ್ನು ಮಾತ್ರವೇ ಮೌಲ್ಯಮಾಪನ ಮಾಡುವುದು ಕಂಪೆನಿಯ ಕಾರ್ಯನೀತಿಯಾಗಿರುವುದರಿಂದ ಇವನ್ನು ಮೌಲ್ಯಮಾಪನ ಮಾಡಿರುವುದಿಲ್ಲ.
8	**ಭದ್ರತಾ ಠೇವಣಿ ಖಾತೆ : ರೂ. 877.23 ಲಕ್ಷ** ಗ್ರಾಹಕರಿಗೆ ಸಂದಾಯವಾಗಬೇಕಿರುವ ಭದ್ರತಾ ಠೇವಣಿಯನ್ನು ಆಡಳಿತ ಮಂಡಳಿ ಸರಿಹೊಂದಿಸಿರುವುದಿಲ್ಲ ಹಾಗೂ ಇದನ್ನು ದೀರ್ಘಕಾಲೀನ ಹೊಣೆಗಳ ಅಡಿ ಪಾವತಿಯಾಗಬೇಕಾದ ಇತರೆ ಅಡಿ ತೋರಿಸಲಾಗಿದೆ. ಗ್ರಾಹಕರಿಂದ ಈ ಬಗ್ಗೆ ಸ್ಥಿರೀಕರಣಗಳನ್ನು ಸಹ ಪಡೆದುಕೊಂಡಿರುವುದಿಲ್ಲ. ಸ್ಥಿರೀಕರಣ/ಹೊಂದಾಣಿಕೆಗಳ ಅನುಪಸ್ಥಿತಿಯಲ್ಲಿ ಇವು ಕಂಪೆನಿಯ ಆರ್ಥಿಕ ತಖ್ತೆಗಳ ಮೇಲೆ ಬೀರುವ ಪರಿಣಾಮದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.	ಕಂಪೆನಿಯು ಭದ್ರತಾ ಠೇವಣಿಗೆ ಸಂಬಂಧಿಸಿದಂತೆ ಎಲ್ಲ ಪಕ್ಷಗಳ ಖಾತೆಗಳನ್ನು ಹೊಂದಿಸುವ ಕಾರ್ಯವನ್ನು ಕೈಗೆತ್ತಿಕೊಂಡಿದ್ದು ಮುಂದಿನ ವರ್ಷಗಳಲ್ಲಿ ಇದನ್ನು ಸೂಕ್ತವಾಗಿ ನಿರ್ವಹಿಸಲಾಗುವುದು.

ಕ್ರ.ಸಂ	ಲೆಕ್ಕಪರಿಶೋಧಕರ ಪರಿಶೀಲನೆಗಳು	ಅನುಸರಣೆ
9	**ವ್ಯಾಪಾರಿ ವಸೂಲಾತಿಗಳು/ವ್ಯಾಪಾರಿ ಸಂದಾಯಗಳು ಮುಂತಾದವು:** ಅನುಕ್ರಮವಾಗಿ ಟಿಪ್ಪಣಿ 07 ಮತ್ತು ಟಿಪ್ಪಣಿ 14 ರ ಪ್ರಕಾರ ವ್ಯಾಪಾರಿ ವಸೂಲಾತಿ/ ವ್ಯಾಪಾರಿ ಸಂದಾಯದ ಶೀರ್ಷಿಕೆಯಡಿ ಇರುವ ಶಿಲ್ಕುಗಳು ಹೊಂದಾಣಿಕೆ ಮತ್ತು ಸ್ಥಿರೀಕರಣಕ್ಕೆ ಬದ್ಧವಾಗಿವೆ. ಸ್ಥಿರೀಕರಣ/ಹೊಂದಾಣಿಕೆಗಳ ಅನುಪಸ್ಥಿತಿಯಲ್ಲಿ ಇವು ಕಂಪೆನಿಯ ಆರ್ಥಿಕ ತಖ್ತೆಗಳ ಮೇಲೆ ಬೀರುವ ಪರಿಣಾಮದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.	ವ್ಯಾಪಾರಿ ವಸೂಲಾತಿಗಳು/ವ್ಯಾಪಾರಿ ಸಂದಾಯಗಳು ಹಾಗೂ ಸಾಲಗಾರರ ಖಾತೆಯಲ್ಲಿನ ಜಮಾ ಶಿಲ್ಕುಗಳ ಹೊಂದಾಣಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ಪ್ರಕ್ರಿಯೆ ಅಂತಿಮಗೊಂಡ ನಂತರ ವಿವಿಧ ಪಕ್ಷಗಳಿಂದ ಸ್ಥಿರೀಕರಣ ಪಡೆದುಕೊಂಡು ಮುಂದಿನ ವರ್ಷಗಳಲ್ಲಿ ಇದನ್ನು ಸೂಕ್ತವಾಗಿ ನಿರ್ವಹಿಸಲಾಗುವುದು.
10	**ಠೇವಣಿಗಳು, ಸಾಲಗಳು ಮತ್ತು ಮುಂಗಡ:** ಠೇವಣಿಗಳು, ಸಾಲಗಳು ಮತ್ತು ಮುಂಗಡ ಶೀರ್ಷಿಕೆಯ ಅಡಿಯಲ್ಲಿನ ಶಿಲ್ಕುಗಳು ಸ್ಥಿರೀಕರಣ ಮತ್ತು ಹೊಂದಾಣಿಕೆಗೆ ಬದ್ಧವಾಗಿವೆ. ಸ್ಥಿರೀಕರಣ/ಹೊಂದಾಣಿಕೆಗಳ ಅನುಪಸ್ಥಿತಿಯಲ್ಲಿ ಇವು ಕಂಪೆನಿಯ ಆರ್ಥಿಕ ತಖ್ತೆಗಳ ಮೇಲೆ ಬೀರುವ ಪರಿಣಾಮದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.	ಠೇವಣಿಗಳು, ಸಾಲಗಳು ಮತ್ತು ಮುಂಗಡಗಳ ಹೊಂದಾಣಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ಪ್ರಕ್ರಿಯೆ ಅಂತಿಮಗೊಂಡ ನಂತರ ವಿವಿಧ ಪಕ್ಷಗಳಿಂದ ಸ್ಥಿರೀಕರಣ ಪಡೆದುಕೊಂಡು ಮುಂದಿನ ವರ್ಷಗಳಲ್ಲಿ ಇದನ್ನು ಸೂಕ್ತವಾಗಿ ನಿರ್ವಹಿಸಲಾಗುವುದು.
11	**ಆಂತರಿಕ ಲೆಕ್ಕಪರಿಶೋಧನೆ ಮತ್ತು ಆಂತರಿಕ ನಿಯಂತ್ರಣ:** ವಿಭಾಗಗಳು ಆಂತರಿಕ ಲೆಕ್ಕಪರಿಶೋಧನೆಯ ವ್ಯವಸ್ಥೆಯನ್ನು ಹೊಂದಿವೆ. ಆದರೆ, ಇತರ ಸಾಲಗಾರರ ಹೊಂದಾಣಿಕೆ, ದರಪಟ್ಟಿಗಳ ಸೃಷ್ಟಿ, ಇತರ ಸಾಲದಾರರ ಹೊಂದಾಣಿಕೆ, ಮೃತ ಬಾಡಿಗೆಯ ಹೊಂದಾಣಿಕೆ, ಯಂತ್ರೋಪಕರಣ ಬಾಡಿಗೆ ಶುಲ್ಕ, ವ್ಯಾಟ್, ಸೇವಾ ತೆರಿಗೆ ಮತ್ತು ಜಿಎಸ್‌ಟಿಗಳ ಅನುಸರಣೆಯಲ್ಲಿನ ಕೊರತೆಗಳು ನಮ್ಮನ್ನು ಕಂಪೆನಿಯಲ್ಲಿ ಅಸ್ತಿತ್ವದಲ್ಲಿರುವ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಪರಿಶೀಲಿಸಲು ಹಾಗೂ ಕಂಪೆನಿಯ ಆಂತರಿಕ ಲೆಕ್ಕಪರಿಶೋಧನೆ ಮತ್ತು ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಬಲಪಡಿಸಬೇಕೆಂದು ಅಭಿಪ್ರಾಯಪಡಲು ಒತ್ತಾಯಿಸುತ್ತದೆ. ಕಂಪೆನಿಯು ವರ್ಷದ ಆಂತರಿಕ ಲೆಕ್ಕಪರಿಶೋಧನಾ ವರದಿಗಳಲ್ಲಿನ ಪರಿಶೀಲನೆಗಳಿಗೆ ಅನುಸರಣೆಗಳನ್ನು ಸಲ್ಲಿಸಿರುವುದಿಲ್ಲ.	ಆಂತರಿಕ ಲೆಕ್ಕಪರಿಶೋಧನೆಮತ್ತು ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಬಲಪಡಿಸಲು ಮುಂದಿನ ವರ್ಷಗಳಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.
12	**ವಿಮೆ:** ಕಂಪೆನಿಯ ಸ್ಥಿರಾಸ್ತಿಗಳು, ದಾಸ್ತಾನು ಮತ್ತು ನಗದು ಶಿಲ್ಕುಗಳ ವಿಮೆಯನ್ನು ಮಾಡಲಾಗಿಲ್ಲ. ಹಾಗಾಗಿ ಕಂಪೆನಿಯು ಮಾನವನಿರ್ಮಿತ ಅಥವಾ ಪ್ರಾಕೃತಿಕ ವಿಪತ್ತುಗಳು, ಅಪಘಾತಗಳು ಮತ್ತು ಕಳವು ಮುಂತಾದವುಗಳಿಂದ ಸಂಭವಿಸಬಹುದಾದ ಅಪಾಯಗಳಿಗೆ ಎದುರಾಗುವ ಸಾಧ್ಯತೆಯಿದೆ.	ಮುಂದಿನ ವರ್ಷಗಳಲ್ಲಿ ಅಗತ್ಯ ಕ್ರಮವನ್ನು ಕೈಗೊಳ್ಳಲಾಗುವುದು.

KSMC

ಕ್ರ.ಸಂ	ಲೆಕ್ಕಪರಿಶೋಧಕರ ಪರಿಶೀಲನೆಗಳು	ಅನುಸರಣೆ
13	**ಕಂಪೆನಿಯ ವಿರುದ್ಧ ಬಾಕಿ ಇರುವ ಪ್ರಕರಣಗಳು** ನಮಗೆ ಒದಗಿಸಲಾದ ಮಾಹಿತಿಯ ಪ್ರಕಾರ 31.03.2020ರಂದು ಇದ್ದಂತೆ ವಿವಿಧ ನ್ಯಾಯಾಲಯಗಳಲ್ಲಿ ಕಂಪೆನಿಯ ವಿರುದ್ಧ ಬಾಕಿ ಇರುವ ಪ್ರಕರಣಗಳ ವಿವರ ಇಂತಿವೆ:	ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇವೆ. ಪ್ರಕರಣಗಳು ಇತ್ಯರ್ಥವಾದ ಮೇಲೆ ಅವುಗಳ ಘನತೆಯ ಮೇಲೆ ಅವನ್ನು ಪರಿಗಣಿಸಿ ಲೆಕ್ಕಪುಸ್ತಕಗಳಲ್ಲಿ ಹವಣಿಸಲಾಗುವುದು.

ಮಧ್ಯಸ್ಥಿಕೆ ಪ್ರಕರಣಗಳು	07 ಪ್ರಕರಣಗಳು
ಟ್ರಯಲ್ ನ್ಯಾಯಾಲಯ ಪ್ರಕರಣಗಳು	19 ಪ್ರಕರಣಗಳು
ಸರ್ವೋಚ್ಚ ನ್ಯಾಯಾಲಯ ಪ್ರಕರಣಗಳು	05 ಪ್ರಕರಣಗಳು
ಉಚ್ಚ ನ್ಯಾಯಾಲಯ ಪ್ರಕರಣಗಳು	85 ಪ್ರಕರಣಗಳು
ಸಿಜಿಐಟಿ/ಕಾರ್ಮಿಕ ನ್ಯಾಯಾಲಯ ಪ್ರಕರಣಗಳು	14 ಪ್ರಕರಣಗಳು
ಒಟ್ಟು	**130 ಪ್ರಕರಣಗಳು**

ಕಂಪೆನಿಯು ಈ ದಿನದವರೆಗೂ ಮೇಲೆ ಪ್ರಸ್ತಾಪಿಸಲಾಗಿರುವ ಯಾವುದೇ ಪ್ರಕರಣಗಳಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕುಸಲ್ಲಿಗೆಗಳನ್ನು ಗುರುತಿಸಿರುವುದಿಲ್ಲ ಹಾಗೂ ಲೆಕ್ಕಪುಸ್ತಕಗಳಲ್ಲಿ ಹವಣಿಕೆಗಳನ್ನು ಮಾಡಿರುವುದಿಲ್ಲ. ಹಾಗಾಗಿ, ಈ ಮಟ್ಟಿಗೆ ಇಂಡ್ ಎಎಸ್ 37ರ ಅನುಸರಣೆ ಆಗಿರುವುದಿಲ್ಲ.

ಅನುಬಂಧ "ಸಿ"

ನಮೂನೆ ಸಂ. ಎಂಆರ್ – 3

[(ಕಂಪನಿ ಕಾಯ್ದೆ, 2013ರ ಪರಿಚ್ಛೇದ 204(1)ರ ಅನುಸಾರ ಮತ್ತು ಕಂಪನಿ
(ವ್ಯವಸ್ಥಾಪನಾ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ಕ್ಕೆ ಹೊಂದುವಂತೆ]

ಕಾರ್ಯದರ್ಶಿಯ ಲೆಕ್ಕಪರಿಶೋಧನಾ ವರದಿ

2019–20ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ

ಇವರಿಗೆ,
ಸದಸ್ಯರು,
ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಶನ್ ಲಿಮಿಟೆಡ್,
ಬಿಎಂಟಿಸಿ ಶಾಂತಿನಗರ್, ಟಿಟಿಎಂಸಿ ಕಟ್ಟಡ, ಎ ಬ್ಲಾಕ್,
5ನೇ ಮಹಡಿ, ಶಾಂತಿನಗರ್, ಬೆಂಗಳೂರು – 560027.

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಶನ್ ಲಿಮಿಟೆಡ್, ಸಂಸ್ಥೆಯಲ್ಲಿ (ಇನ್ನು ಮುಂದೆ 'ಕಂಪನಿ') ಅನ್ವಯವಾಗುವ ಶಾಸನಬದ್ಧ ಉಪಬಂಧಗಳ ಅನುಸರಣೆ ಮತ್ತು ಉತ್ತಮ ಕಾರ್ಪರೇಟ್ ಆಚರಣೆಗಳ ಬಗೆಗಿನ ಬದ್ಧತೆಗೆ ಸಂಬಂಧಿಸಿದಂತೆ ನಾವು ಕಾರ್ಯದರ್ಶಿಯ ಲೆಕ್ಕಪರಿಶೋಧನೆಯನ್ನು ಕೈಗೊಂಡಿರುತ್ತೇವೆ. ಕಾರ್ಪರೇಟ್ ನಡವಳಿಕೆ/ಶಾಸನಬದ್ಧ ಅನುಸರಣೆಗಳ ಮೌಲ್ಯಮಾಪನ ನಡೆಸಲು ಮತ್ತು ಆ ಬಗ್ಗೆ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸೂಕ್ತವಾದ ಆಧಾರವನ್ನು ಒದಗಿಸುವ ವಿಧಾನದಲ್ಲಿ ಕಾರ್ಯದರ್ಶಿಯ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು.

ಲೆಕ್ಕಪುಸ್ತಕಗಳು, ದಾಖಲೆಗಳು, ನಡಾವಳಿ ಪುಸ್ತಕಗಳು, ಸಲ್ಲಿಸಲಾದ ನಮೂನೆ ಮತ್ತು ಸಲ್ಲಿಕೆಗಳು ಹಾಗೂ ಕಂಪನಿ ನಿರ್ವಹಿಸಿರುವ ಇತರ ದಾಖಲೆಗಳ ಪರಿಶೀಲನೆಯ ಆಧಾರದ ಮೇಲೆ ಮತ್ತು ಕಂಪೆನಿ, ಅದರ ಅಧಿಕಾರಿಗಳು, ಅಭಿಕರ್ತರು ಮತ್ತು ಅಧಿಕೃತ ಪ್ರತಿನಿಧಿಗಳು ಕಾರ್ಯದರ್ಶಿಯ ಲೆಕ್ಕಪರಿಶೋಧನೆಯನ್ನು ನಡೆಸುವಾಗ ಒದಗಿಸಿದ ಮಾಹಿತಿಯ ಆಧಾರದ ಮೇಲೆ ನಾವು ಹೀಗೆ ವರದಿ ಮಾಡುತ್ತಿದ್ದೇವೆ: ನಮ್ಮ ಅಭಿಪ್ರಾಯದಲ್ಲಿ, 31.03.2020ಕ್ಕೆ ಕೊನೆಗೊಂಡ ಹಣಕಾಸು ವರ್ಷವನ್ನು ಒಳಗೊಳ್ಳುವ ಲೆಕ್ಕಪರಿಶೋಧನೆಯ ಅವಧಿಯಲ್ಲಿ ಕೆಳಗೆ ಪಟ್ಟಿಮಾಡಲಾಗಿರುವ ಶಾಸನಬದ್ಧ ಉಪಬಂಧಗಳನ್ನು ಅನುಸರಿಸಿದೆ ಮತ್ತು ಇಲ್ಲಿಂದಾಚೆಗೆ ಮಾಡಿರುವ ವರದಿಗೆ ಬದ್ಧವಾಗಿ ಮತ್ತು ಆ ಮಟ್ಟಿಗೆ ಸೂಕ್ತವಾದ ಮಂಡಳಿ–ಪ್ರಕ್ರಿಯೆಗಳು ಮತ್ತು ಅನುಸರಣಾ ಕಾರ್ಯತಂತ್ರವನ್ನು ಸಹ ಹೊಂದಿದೆ:

ನಾವು, **ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಶನ್ ಲಿಮಿಟೆಡ್**, ("ಕಂಪನಿ") ಸಂಸ್ಥೆಯ 31.03.2020ಕ್ಕೆ ಕೊನೆಗೊಂಡ ಹಣಕಾಸು ವರ್ಷದ ಲೆಕ್ಕಪುಸ್ತಕಗಳು, ದಾಖಲೆಗಳು, ನಡಾವಳಿ ಪುಸ್ತಕಗಳು, ಸಲ್ಲಿಸಲಾದ ನಮೂನೆ ಮತ್ತು ಸಲ್ಲಿಕೆಗಳು ಹಾಗೂ ಕಂಪನಿ ನಿರ್ವಹಿಸಿರುವ ಇತರ ದಾಖಲೆಗಳ ಕೆಳಗಿನ ಉಪಬಂಧಗಳ ಅನ್ವಯ ಪರಿಶೀಲಿಸಿರುತ್ತೇವೆ:

(i) ಕಂಪನಿ ಕಾಯ್ದೆ, 2013 (ಕಾಯ್ದೆ) ಮತ್ತು ತತ್ಸಂಬಂಧಿತ ನಿಯಮಗಳು;

(ii) ಭದ್ರತಾ ಗುತ್ತಿಗೆಗಳ (ನಿಬಂಧನೆ) ಕಾಯ್ದೆ, 1956 ('ಎಸ್‌ಸಿಆರ್‌ಎ') ಮತ್ತು ಅದರಡಿ ರೂಪಿಸಲಾದ ನಿಯಮಗಳು;

(iii) ದಿ ಡಿಪಾಸಿಟರೀಸ್ ಕಾಯ್ದೆ, 1996 ಮತ್ತು ಅದರಡಿ ರೂಪಿಸಲಾದ ನಿಬಂಧನೆಗಳು ಮತ್ತು ಉಪ–ನಿಯಮಗಳು.

(iv) ವಿದೇಶೀ ವಿನಿಮಯ ನಿರ್ವಹಣಾ ಕಾಯ್ದೆ, 1999 ಮತ್ತು ವಿದೇಶೀ ನೇರ ಹೂಡಿಕೆ, ಸಾಗರೋತ್ತರ ನೇರ ಹೂಡಿಕೆ ಮತ್ತು ಬಾಹ್ಯ ವಾಣಿಜ್ಯ ಸಾಲಗಳನ್ನು ವ್ಯಾಪಿಸುವಂತೆ ಕಾಯ್ದೆಯಡಿ ರೂಪಿಸಲಾದ ನಿಯಮಗಳು ಮತ್ತು ನಿಬಂಧನೆಗಳು.

(v) ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ ಕಾಯ್ದೆ, 1992 (ಸೆಬಿ ಕಾಯ್ದೆ) ಅಡಿ ನಿಗದಿಪಡಿಸಲಾಗಿರುವ ಕೆಳಗಿನ ನಿಬಂಧನೆಗಳು ಮತ್ತು ಮಾರ್ಗಸೂಚಿಗಳು :–

   (ಎ) ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (ಷೇರುಗಳ ಗಣನೀಯ ಗಳಿಕೆ ಮತ್ತು ವಹಿಸಿಕೊಳ್ಳುವಿಕೆ) ನಿಬಂಧನೆಗಳು, 2011;

   (ಬಿ) ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (ಒಳಗಿನವರ ವ್ಯಾಪಾರ ನಿಷೇಧ) ನಿಬಂಧನೆಗಳು, 1992;

   (ಸಿ) ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (ಬಂಡವಾಳ ನೀಡಿಕೆ ಮತ್ತು ಪ್ರಕಟಣೆ ಅಗತ್ಯಗಳು) ನಿಬಂಧನೆಗಳು, 2009;

   (ಡಿ) ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (ನೌಕರರ ಸ್ಟಾಕ್ ಆಯ್ಕೆ ಯೋಜನೆ ಮತ್ತು ನೌಕರರ ಸ್ಟಾಕ್ ಖರೀದಿ ಯೋಜನೆ) ಮಾರ್ಗಸೂಚಿಗಳು, 1999;

(ಇ) ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (ಸಾಲ ಭದ್ರತೆಗಳ ಇಶ್ಯೂ ಮತ್ತು ಲಿಸ್ಟಿಂಗ್) ನಿಬಂಧನೆಗಳು, 2008;

(ಎಫ್) ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (ಇಶ್ಯೂ ಒಂದಕ್ಕೆ ನೋಂದಣಿ ಅಧಿಕಾರಿ ಮತ್ತು ಷೇರು ವರ್ಗಾವಣೆ ಅಭಿಕರ್ತೃಗಳು) ನಿಬಂಧನೆಗಳು, 1993, ಕಂಪನಿಕಾಯ್ದೆ ಮತ್ತು ಗ್ರಾಹಕರೊಂದಿಗೆ ವ್ಯವಹರಿಸುವುಕ್ಕೆ ಸಂಬಂಧಿಸಿದಂತೆ;

(ಜಿ) ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (ಸ್ವಾಮ್ಯ ಷೇರುಗಳ ಡಿ–ಲಿಸ್ಟಿಂಗ್) ನಿಬಂಧನೆಗಳು, 2009; ಮತ್ತು

(ಎಚ್) ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (ಭದ್ರತೆಗಳ ಮರುಖರೀದಿ) ನಿಬಂಧನೆಗಳು, 1998;

(vi) ಆಡಳಿತ ಮಂಡಳಿಯು ಕೆಳಗಿನ ಕಾನೂನುಗಳು/ನಿಯಮಗಳು/ನೀತಿಗಳು ಕಂಪೆನಿಗೆ ನಿರ್ದಿಷ್ಟವಾಗಿ ಅನ್ವಯವಾಗುವುವೆಂದು ಗುರುತಿಸಿ ಸ್ಥಿರೀಕರಿಸಿರುತ್ತದೆ:

1. ಟ್ರೇಡ್‌ಮಾರ್ಕ್ ಕಾಯ್ದೆ, 1999
2. ನೌಕರರ ಭವಿಷ್ಯ ನಿಧಿ ಮತ್ತು ಇತರೆ ಉಪಬಂಧಗಳ ಕಾಯೆ, 1952
3. ಬೋನಸ್ ಪಾವತಿ ಕಾಯ್ದೆ, 1965
4. ಗ್ರಾಚುಟಿ ಪಾವತಿ ಕಾಯ್ದೆ, 1961
5. ಹೆರಿಗೆ ಸವಲತ್ತುಗಳು ಕಾಯ್ದೆ, 1962
6. ಆದಾಯ ತೆರಿಗೆ ಕಾಯ್ದೆ, 1961
7. ಅಂಗಡಿಗಳು ಮತ್ತು ವಾಣಿಜ್ಯ ಸ್ಥಾಪನೆಗಳು ಕಾಯ್ದೆ, 1948
8. ಗಣಿ ಕಾಯ್ದೆ, 1952
9. ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಬಂಧನೆ) ಕಾಯ್ದೆ, 1957
10. ಕಬ್ಬಿಣ ಅದಿರು ಗಣಿ, ಮ್ಯಾಂಗನೀಸ್ ಅದಿರು ಗಣಿ ಮತ್ತು ಕ್ರೋಮ್ ಅದಿರು ಗಣಿ ಕಾರ್ಮಿಕ ಕಲ್ಯಾಣ ಉಪಕರ ಕಾಯ್ದೆ, 1976.
11. ಕಬ್ಬಿಣ ಅದಿರು ಗಣಿ, ಮ್ಯಾಂಗನೀಸ್ ಅದಿರು ಗಣಿ ಮತ್ತು ಕ್ರೋಮ್ ಅದಿರು ಗಣಿ ಕಾರ್ಮಿಕ ಕಲ್ಯಾಣ ಕಲ್ಯಾಣ ಕಾಯ್ದೆ, 1976.
12. ಅರಣ್ಯ (ಸಂರಕ್ಷಣಾ) ಕಾಯ್ದೆ, 1980
13. ಪರಿಸರ (ರಕ್ಷಣಾ) ಕಾಯ್ದೆ, 1986
14. ಜಿಎಸ್‌ಟಿ ಕಾಯ್ದೆ, 2017

ಅನ್‌ಲಿಸ್ಟೆಡ್ ಸಾರ್ವಜನಿಕ ಕಂಪೆನಿಯಾಗಿರುವ ಕಾರಣ ಕಲಮು (ii), (iii), (iv) ಮತ್ತು (V) ಗಳ ಉಪಬಂಧಗಳು ಈ ಕಂಪೆನಿಗೆ ಅನ್ವಯವಾಗುವುದಿಲ್ಲ.

ಕೆಳಗಿನ ಅನ್ವಯವಾಗುವ ಕಲಮುಗಳ ಅನುಸರಣೆಯನ್ನೂ ಸಹ ನಾವು ಪರಿಶೀಲಿಸಿರುತ್ತೇವೆ:

(1) ಭಾರತೀಯ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ ನಿರ್ದೇಶಕ ಮಂಡಳಿ ಸಭೆಗಳು (ಎಸ್‌ಎಸ್–1) ಮತ್ತು ಸಾಮಾನ್ಯ ಸಭೆಗಳಿಗೆ (ಎಸ್‌ಎಸ್–2) ಸಂಬಂಧಿಸಿದಂತೆ ಹೊರಡಿಸಿರುವ ಕಾರ್ಯದರ್ಶೀಯ ಪ್ರಮಾಣಗಳು (1 ಜುಲೈ, 2015ರಿಂದ ಜಾರಿಗೆ ಬರುವಂತೆ, ಇತ್ತೀಚಿನ ತಿದ್ದುಪಡಿಗಳೊಂದಿಗೆ).

ನಮ್ಮ ಲೆಕ್ಕಪರಿಶೋಧನೆಯ ವ್ಯಾಪ್ತಿಯು ಕಂಪನಿಕಾಯ್ದೆ, 2013 ಮತ್ತು ಅದರಡಿ ರೂಪಿಸಲಾದ ನಿಯಮಗಳು ಹಾಗೂ ಕಂಪೆನಿಗೆ ಅನ್ವಯವಾಗುವಂತೆ, ಮೇಲೆ ನಿರ್ದಿಷ್ಟಗೊಳಿಸಿರುವ ಕಾಯ್ದೆಗಳ ಅನುಸರಣೆಗೆ ಸೀಮಿತವಾಗಿದೆ.

ಮುಂದುವರೆಯುತ್ತ, ಪರಿಶೀಲನೆಯ ಅವಧಿಯಲ್ಲಿ, ಕಂಪೆನಿಯು ನಿರ್ವಹಿಸಿರುವ ಲೆಕ್ಕಪತ್ರಗಳ ಹಾಗೂ ಅನುಸರಣಾ ವರದಿ, ಕಂಪೆನಿಯ ನಿರ್ದೇಶಕರು ಪಡೆದು ದಾಖಲಿಸಿರುವ ಅನುಕ್ರಮವಾದ ವಿಭಾಗ ಮುಖ್ಯಸ್ಥರ ಹೇಳೀಕೆಗಳ ಪರಿಶೀಲನೆಯ ಆಧಾರದ ಮೇಲೆ ಹೇಳುವುದಾದರೆ, ಮೇಲೆ ಹೇಳಿರುವಂತೆ, ಕೆಲಸಗಾರರು ಮತ್ತು ಪರಿಸರಕ್ಕೆ ಸಂಬಂಧಿಸಿದ ಅನ್ವಯವಾಗತಕ್ಕ ಕಾನೂನುಗಳ ಅನುಸರಣೆಯ ಮೇಲ್ವಿಚಾರಣೆಗಾಗಿ ಕಂಪೆನಿಯು ಪರ್ಯಾಪ್ತವಾದ ವ್ಯವಸ್ಥೆಗಳು, ಪ್ರಕ್ರಿಯೆಗಳು ಮತ್ತು ನಿಯಂತ್ರಣಾ ಕಾರ್ಯವಿಧಾನವನ್ನು ಹೊಂದಿರುತ್ತದೆ. ಕಂಪನಿಕಾಯ್ದೆಯ ಉಪಬಂಧಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯು ಮಾಡಿರುವ ಕೆಲವು ಮಹತ್ವಪೂರ್ಣವಲ್ಲದ ಪರಿಶೀಲನೆಗಳಿಗೆ ಸಂಬಂಧಿಸಿದಂತೆ ಕಂಪೆನಿಯು ಉತ್ತರಿಸಿದೆ. ಪರಿಶೀಲನೆಯ ಅವಧಿಯಲ್ಲಿ ಕಂಪೆನಿಯು ಕಾಯ್ದೆ, ನಿಯಮಗಳು, ಮಾರ್ಗಸೂಚಿಗಳು, ಪ್ರಮಾಣಗಳು ಮತ್ತು ಮೇಲೆ ಹೇಳಿದ ಇತರ ಅನ್ವಯವಾಗತಕ್ಕ ಅಂಶಗಳ ಉಪಬಂಧಗಳನ್ನು ಕೆಳಗಿನ ಮಹತ್ವಪೂರ್ಣ ಅಂಶಗಳಿಗೆ ಬದ್ಧವಾಗಿ, ಅನುಸರಿಸಿದೆ.

ಕಂಪನಿ ಕಾನೂನು: ವಿಷಯದ ಮಹತ್ವ :

1. ಕಂಪನಿಕಾಯ್ದೆ 2013, ಪರಿಚ್ಛೇದ 203ರ ಅನುಸಾರ ಹಾಗೂ ಕಂಪೆನಿಗಳ (ವ್ಯವಸ್ಥಾಪನಾ ಸಿಬ್ಬಂದಿಯ ನೇಮಕ ಮತ್ತು ಸಂಭಾವನೆ) ನಿಯಮಗಳು 2014ರ ನಿಯಮ 8ಕ್ಕೆ ಹೊಂದುವಂತೆ 2019–20ರ ಹಣಕಾಸು ವರ್ಷಕ್ಕೆ ಕಂಪೆನಿಯು ಪೂರ್ಣಾವಧಿ ಕಂಪನಿ ಕಾರ್ಯದರ್ಶಿಯನ್ನು ನೇಮಿಸಿರುವುದಿಲ್ಲ.

ಆದಾಗ್ಯೂ ಮಿನಿಸ್ಟ್ರಿ ಆಫ್ ಕಾರ್ಪೋರೇಟ್ ಅಫೈರ್ಸ್ ರವರ ನೋಟಿಫೀಕೇಶನ್ ಸಂಖ್ಯೆ. ಜಿಎಸ್ಆರ್ 13ಇ ದಿನಾಂಕ 03.01.2020 ರಲ್ಲಿ 1 ಏಪ್ರಿಲ್ 2020ರಿಂದ ಜಾರಿಗೆ ಬರುವಂತೆ ಕಂಪನಿ ಕಾರ್ಯದರ್ಶಿಗಳ ನೇಮಕಾತಿಗೆ ಅನ್ವಯವಾಗುವ ಮಿತಿಯನ್ನು ರೂ.5.00 ಕೋಟಿ ಯಿಂದ ರೂ.10.00 ಕೋಟಿಗೆ ಹೆಚ್ಚಿಸಿದೆ.

2. ಕಂಪೆನಿಗಳ (ನಿರ್ದೇಶಕರ ನೇಮಕ ಮತ್ತು ಅರ್ಹತೆಗಳು) ನಿಯಮಗಳು 2014ರ ನಿಯಮ 8ಕ್ಕೆ ಹೊಂದುವಂತೆ ಹಾಗೂ ಪರಿಚ್ಛೇದ 149ಕ್ಕೆ ಸಂಗತವಾಗುವಂತೆ ಕಂಪೆನಿಯು ಕನಿಷ್ಠ ಇಬ್ಬರು ಸ್ವತಂತ್ರ ನಿರ್ದೇಶಕರುಗಳನ್ನು ನೇಮಿಸಬೇಕಿತ್ತು.

3. ಕಂಪನಿಕಾಯ್ದೆ 2013, ಪರಿಚ್ಛೇದ 135ರ ಅನುಸಾರ ಕಂಪೆನಿಯು ರಚಿಸಿರುವ ಸಿಎಸ್ಆರ್ ಸಮಿತಿಯಲ್ಲಿ ಕನಿಷ್ಠ ಒಬ್ಬರು ಸ್ವತಂತ್ರ ನಿರ್ದೇಶಕರೂ ಇರುವುದಿಲ್ಲ.

4. ಕಂಪನಿಕಾಯ್ದೆ 2013, ಪರಿಚ್ಛೇದ 177ರ ಅನುಸಾರ, ಕಂಪೆನಿಯ ಲೆಕ್ಕಪರಿಶೋಧನಾ ಸಮಿತಿಯಲ್ಲಿ ಸ್ವತಂತ್ರ ನಿರ್ದೇಶಕರು ಬಹುಸಂಖ್ಯೆಯಲ್ಲಿ ಇಲ್ಲ. ಆದರೆ, ಕಂಪೆನಿಯು ಮಂಡಳಿಯಲ್ಲಾಗಲೀ ಲೆಕ್ಕಪರಿಶೋಧನಾ ಸಮಿತಿಯಲ್ಲಾಗಲೀ ಒಬ್ಬರಾದರೂ ಸ್ವತಂತ್ರ ನಿರ್ದೇಶಕರನ್ನು ಹೊಂದಿರುವುದಿಲ್ಲ.

ಮುಂದುವರೆಯುತ್ತ ನಾವು ಕೆಳಗಿನಂತೆ ವರದಿಮಾಡುತ್ತಿದ್ದೇವೆ:

ಕಂಪೆನಿಯ ನಿರ್ದೇಶಕ ಮಂಡಳಿ ಕಾರ್ಯಕಾರಿ ನಿರ್ದೇಶಕರು, ಕಾರ್ಯಕಾರಿಯಲ್ಲದ ನಿರ್ದೇಶಕರು ಮತ್ತು ಸ್ವತಂತ್ರ ನಿರ್ದೇಶಕರ ಸೂಕ್ತ ಸಮತೋಲನದೊಂದಿಗೆ ಯುಕ್ತವಾಗಿ ರಚನೆಯಾಗಿದೆ. ಕಂಪೆನಿಯು ಸ್ವತಂತ್ರ ನಿರ್ದೇಶಕರನ್ನು ಹೊಂದಿರುವುದಿಲ್ಲ. ಪರಿಶೀಲನೆಯಲ್ಲಿರುವ ಅವಧಿಯಲ್ಲಿ ಕಂಪೆನಿಯ ನಿರ್ದೇಶಕ ಮಂಡಳಿಯ ರಚನೆಯಲ್ಲಾದ ಬದಲಾವಣೆಗಳನ್ನು ಕಾಯ್ದೆಯ ಉಪಬಂಧಗಳ ಅನುಸಾರ ಮಾಡಲಾಗಿದೆ.

ಮಂಡಳಿ ಸಭೆಗಳನ್ನು ಜರುಗಿಸುವ ಸಂಬಂಧವಾಗಿ ಎಲ್ಲ ನಿರ್ದೇಶಕರಿಗೆ ಪರ್ಯಾಪ್ತ ನೋಟೀಸನ್ನು ನೀಡಲಾಗುತ್ತದೆ, ಸಭೆಯ ಕಾರ್ಯಸೂಚಿ ಮತ್ತು ಟಿಪ್ಪಣಿಗಳನ್ನು ಕನಿಷ್ಠ ಏಳು ದಿನ ಮುಂಗಡವಾಗಿ ತಲುಪಿಸಲಾಗುತ್ತದೆ, ಮತ್ತು ಸಭೆಯಲ್ಲಿ ಅರ್ಥಪೂರ್ಣ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳಲು ಸಭೆಯ ಕಾರ್ಯಸೂಚಿ ಒಳಗೊಳ್ಳುವ ಅಂಶಗಳ ಬಗ್ಗೆ ಸಭೆಗೆ ಪೂರ್ವದಲ್ಲಿಯೇ ಮಾಹಿರಿ ಒದಗಿಸಿ ಸ್ಪಷ್ಟಣೆಯನ್ನು ಪಡೆದುಕೊಳ್ಳುವ ವ್ಯವಸ್ಥೆಯನ್ನು ಕಂಪನಿ ಹೊಂದಿದೆ.

ಮುಂದುವರೆಯುತ್ತ, ಅನ್ವಯವಾಗುವ ಕಾನೂನು, ನಿಯಮ, ನಿಬಂಧನೆ ಮತ್ತು ಮಾರ್ಗಸೂಚಿಗಳ ಅನುಸರಣೆ ಹಾಗೂ ಮೇಲ್ವಿಚಾರಣೆಯನ್ನು ಖಚಿತಪಡಿಸಿಕೊಳ್ಳಲು ಕಂಪೆನಿಯ ಗಾತ್ರ ಮತ್ತು ಕಾರ್ಯಾಚರಣೆಗಳಿಗೆ ಹೊಂದುವಂತೆ ಪರ್ಯಾಪ್ತವಾದ ವ್ಯವಸ್ಥೆಗಳು ಮತ್ತು ಪ್ರಕ್ರಿಯೆಗಳನ್ನು ಕಂಪನಿ ಹೊಂದಿದೆ ಎಂದು ವರದಿಮಾಡುತ್ತಿದ್ದೇವೆ.

ಮುಂದುವರೆಯುತ್ತ, ಲೆಕ್ಕಪರಿಶೋಧನೆಯ ಅವಧಿಯಲ್ಲಿ ಕಂಪೆನಿಯು/ಕಂಪೆನಿಯಲ್ಲಿ –

1. ಸಾರ್ವಜನಿಕ/ಹಕ್ಕು/ಆದ್ಯತೆಯ ಷೇರುಗಳು/ಡಿಬೆಂಚರುಗಳು/ಸ್ವೆಟ್ ಈಕ್ವಿಟಿ ಮುಂತಾದವನ್ನು ನೀಡಿರುವುದಿಲ್ಲ.
2. ಭದ್ರತೆಗಳ ವಿಮೋಚನೆ/ಮರಳಿ ಖರೀದಿಸುವಿಕೆ ಮಾಡಿರುವುದಿಲ್ಲ.
3. ಕಂಪನಿಕಾಯ್ದೆ, 2013 ಪರಿಚ್ಛೇದ 180 ರ ಅನುಸಾರ ಸದಸ್ಯರು ಯಾವುದೇ ಪ್ರಧಾನವಾದ ನಿರ್ಧಾರಗಳನ್ನೂ ತೆಗೆದುಕೊಂಡಿರುವುದಿಲ್ಲ.
4. ಯಾವುದೇ ವಿಲೀನ/ಸಂಯೋಜನೆ/ಪುನರ್‌ರಚನೆ ಮುಂತಾದವು ಘಟಿಸಿರುವುದಿಲ್ಲ.
5. ಯಾವುದೇ ವಿದೇಶೀ ತಾಂತ್ರಿಕ ಸಹಯೋಗಗಳಿರುವುದಿಲ್ಲ.

ಟಿಎಸ್‌ಡಿಜೆ & ಅಸೋಸಿಯೇಟ್ಸ್
ಕಂಪನಿಕಾರ್ಯದರ್ಶಿಗಳು

ಸಹಿ/–
ಶೀಲಾ ಅರವಿಂದ್
ಸದಸ್ಯತ್ವ ಸಂಖ್ಯೆ : ಎಫ್‌ಸಿಎಸ್ 9686
ಸಿಪಿ ಸಂಖ್ಯೆ : 11992
ಸಂಸ್ಥೆ ನೋಂದಾವಣಿ ಸಂಖ್ಯೆ : ಪಿ2015ಕೆಆರ್043500

ಯುಡಿಐಎನ್ : ಎಫ್009686ಬಿ000701234

ಸ್ಥಳ : ಬೆಂಗಳೂರು
ದಿನಾಂಕ : 11.09.2020

ಈ ವರದಿಯನ್ನು ಅನುಬಂಧ 'ಎ' ಎಂದು ಜೊತೆ ಸೇರಿಸಲಾಗಿರುವ ಹಾಗೂ ಈ ವರದಿಯ ಅಂತರ್ಗತ ಭಾಗವಾಗಿರುವ ನಮ್ಮ ಇದೇ ದಿನಾಂಕದ ಪತ್ರದೊಂದಿಗೆ ಪರಿಗಣಿಸುವುದು.

KSMC

"ಅನುಬಂಧ ಎ"

ಇವರಿಗೆ,
ಸದಸ್ಯರು,
ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಶನ್ ಲಿಮಿಟೆಡ್,
ಬಿಎಂಟಿಸಿ ಶಾಂತಿನಗರ್, ಟಿಟಿಎಂಸಿ ಕಟ್ಟಡ, ಎ ಬ್ಲಾಕ್,
5ನೇ ಮಹಡಿ, ಶಾಂತಿನಗರ್, ಬೆಂಗಳೂರು – 560027.

ನಮ್ಮ ಇದೇ ದಿನಾಂಕದ ವರದಿಯನ್ನು ಈ ಪತ್ರದೊಂದಿಗೆ ಪರಿಗಣಿಸುವುದು.

1. ಕಾರ್ಯದರ್ಶಿಯ ದಾಖಲೆಗಳ ನಿರ್ವಹಣೆ ಕಂಪೆನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ. ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಈ ಕಾರ್ಯದರ್ಶಿಯ ದಾಖಲೆಗಳ ಮೇಲೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿದೆ.

2. ಕಾರ್ಯದರ್ಶಿಯ ದಾಖಲೆಗಳು ಒಳಗೊಂಡಿರುವ ವಸ್ತುವಿಷಯವು ಸರಿಯಾಗಿರುವುದರ ಬಗ್ಗೆ ಯುಕ್ತವಾದ ಭರವಸೆಯನ್ನು ಪಡೆದುಕೊಳ್ಳಲು ಸೂಕ್ತವಾದ ಲೆಕ್ಕಪರಿಶೋಧನಾ ವಿಧಾನಗಳು ಮತ್ತು ಪ್ರಕ್ರಿಯೆಗಳನ್ನು ನಾವು ಅನುಸರಿಸಿದ್ದೇವೆ. ಕಾರ್ಯದರ್ಶಿಯ ದಾಖಲೆಗಳಲ್ಲಿ ಸರಿಯಾದ ವಾಸ್ತವಾಂಶಗಳು ಪ್ರತಿಫಲಿತವಾಗಿವೆ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಪರೀಕ್ಷಾ ಆಧಾರದ ಮೇಲೆ ನಾವು ಪರಿಶೀಲನೆಯನ್ನು ಕೈಗೊಂಡಿರುತ್ತೇವೆ. ನಾವು ಅನುಸರಿಸಿದ ಪ್ರಕ್ರಿಯೆಗಳು ಮತ್ತು ವಿಧಾನಗಳು ನಮ್ಮ ಅಭಿಪ್ರಾಯಗಳಿಗೆ ಸೂಕ್ತ ಆಧಾರವನ್ನು ಒದಗಿಸುವುದೆಂದು ನಾವು ನಂಬಿದ್ದೇವೆ.

3. ಕಂಪೆನಿಯ ಹಣಕಾಸು ದಾಖಲೆಗಳು ಮತ್ತು ಲೆಕ್ಕಪುಸ್ತಕಗಳು ಸರಿಯಾಗಿವೆಯೇ ಮತ್ತು ಸೂಕ್ತವಾಗಿವೆಯೇ ಎನ್ನುವ ಅಂಶವನ್ನು ನಾವು ಪರಿಶೀಲಿಸಿರುವುದಿಲ್ಲ.

4. ಅಗತ್ಯವಾದಾಗೆಲ್ಲ ನಾವು ಕಾನೂನುಗಳು, ನಿಯಮಗಳು ಮತ್ತು ನಿಬಂಧನೆಗಳ ಅನುಸರಣೆ ಹಾಗೂ ಘಟಿಸುತ್ತಿರುವ ಸಂಗತಿಗಳ ಬಗ್ಗೆ ಆಡಳಿತ ಮಂಡಳಿಯಿಂದ ವಿವರಣೆಗಳನ್ನು ಪಡೆದುಕೊಂಡಿರುತ್ತೇವೆ.

5. ಕಾರ್ಪೊರೇಟ್ ಮತ್ತು ಅನ್ವಯವಾಗುವ ಇತರ ಕಾನೂನುಗಳು, ನಿಯಮಗಳು, ನಿಬಂದನೆಗಳು, ಪ್ರಮಾಣಗಳು ಮುಂತಾದವುಗಳ ಉಪಬಂಧಗಳ ಅನುಸರಣೆ ಆಡಳಿತಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಪರೀಕ್ಷಾ ಆಧಾರದ ಮೇಲೆ ಪ್ರಕ್ರಿಯೆಗಳನ್ನು ಪರಿಶೀಲಿಸುವುದಕ್ಕೆ ನಮ್ಮ ಪರಿಶೀಲನೆ ಸೀಮಿತವಾಗಿತ್ತು.

6. ಕಾರ್ಯದರ್ಶಿಯ ಲೆಕ್ಕಪರಿಶೋಧನಾ ವರದಿಯು ಕಂಪೆನಿಯ ಭವಿಷ್ಯದ ಕಾರ್ಯಸಾಧ್ಯತೆಯ ಬಗ್ಗೆಯಾಗಲೀ ಅಥವಾ ಆಡಳಿತ ಮಂಡಳಿಯು ಎಷ್ಟು ಫಲಪ್ರದವಾಗಿ ಮತ್ತು ಪರಿಣಾಮಕಾರಿಯಾಗಿ ಕಂಪೆನಿಯು ವ್ಯವಹಾರಗಳನ್ನು ನಡೆಸಿಕೊಂಡು ಹೋಗಿದೆ ಎನ್ನುವ ಬಗ್ಗೆಯಾಗಲೀ ಯಾವುದೇ ಭರವಸೆಯನ್ನು ಒದಗಿಸುತ್ತಿಲ್ಲ.

ಟಿಎಸ್‌ಡಿಜೆ & ಅಸೋಸಿಯೇಟ್ಸ್
ಕಂಪನಿಕಾರ್ಯದರ್ಶಿಗಳು

ಸಹಿ/–
ಶೀಲಾ ಅರವಿಂದ್
ಸದಸ್ಯತ್ವ ಸಂಖ್ಯೆ : ಎಫ್‌ಸಿಎಸ್ 9686
ಸಿಪಿ ಸಂಖ್ಯೆ : 11992
ಸಂಸ್ಥೆ ನೋಂದಾವಣಿ ಸಂಖ್ಯೆ : ಪಿ2015ಕೆಆರ್043500

ಯುಡಿಐಎನ್ : ಎಫ್009686ಬಿ000701234

ಸ್ಥಳ : ಬೆಂಗಳೂರು
ದಿನಾಂಕ : 11.09.2020

KSMC

ಅನುಬಂಧ "ಡಿ"

ಹಣಕಾಸು ವರ್ಷ 2019–20ರ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ

"ಕಾರ್ಪೊರೇಟ್ ಮತ್ತು ಸಾಮಾಜಿಕ ಜವಾಬ್ದಾರಿ" (ಸಿಎಸ್ಆರ್) ಅಡಿಯ ತನ್ನ ಉಪಕ್ರಮಗಳ ಭಾಗವಾಗಿ ಕಂಪೆನಿ ಗಣಿಗಳಿಂದಾಗಿ ಬಾಧಿತವಾದ ಪ್ರದೇಶದಲ್ಲಿ ಯೋಜನೆಯನ್ನು ಕೈಗೆತ್ತಿಕೊಂಡಿದೆ (60%, ರಾಜ್ಯದ ಉಳಿದ ಭಾಗ 40%). ಈ ಯೋಜನೆ ಕಂಪೆನಿ ಕಾಯ್ದೆ, 2013ರ ಅನುಸೂಚಿ VIIರ ಅನುಸಾರವಾಗಿದೆ.

"ಕಾರ್ಪೊರೇಟ್ ಮತ್ತು ಸಾಮಾಜಿಕ ಜವಾಬ್ದಾರಿ" (ಸಿಎಸ್ಆರ್) ಚಟುವಟಿಕೆಗಳ ಮೇಲಿನ ವಾರ್ಷಿಕ ವರದಿ:

ಕಂಪೆನಿಯ ಸಿಎಸ್ಆರ್ ಕಾರ್ಯನೀತಿಗಳ ಸಂಕ್ಷಿಪ್ತ ರೂಪುರೇಷೆ:

ಸಿಎಸ್ಆರ್ ಕಾರ್ಯನೀತಿಯನ್ನು ಕೆಳಗೆ ನೀಡಲಾಗಿದೆ:

ಸಿಎಸ್ಆರ್ ಉಪಕ್ರಮ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ, ಅಂಗೀಕೃತ ಸರ್ಕಾರಿ ಆಸ್ಪತ್ರೆಗಳಿಗೆ, ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿ ಉಪಶಮನಕ್ಕಾಗಿ ಪರಿಹಾರ, ಕಲೆ ಮತ್ತು ಸಂಸ್ಕೃತಿ, ಕೌಶಲ ಅಭಿವೃದ್ಧಿ ಮುಂತಾದವುಗಳಿಗಾಗಿ ಸರ್ಕಾರ ಗುರುತಿಸಿರುವ ಸಂಸ್ಥೆಗಳಿಗೆ ಕೊಡುಗೆಗಳನ್ನು ನೀಡುವ ಮೂಲಕ ಸಿಎಸ್ಆರ್ ಉಪಕ್ರಮ ಕಾರ್ಯಯುಕ್ತವಾಗಲು ಆಶಿಸುತ್ತದೆ.

ಸಿಎಸ್ಆರ್ ಸಮಿತಿಯರಚನೆ:

1. ಶ್ರೀ ಜಿ. ಕುಮಾರ್ ನಾಯಕ್, ಭಾಆಸೇ – ಅಧ್ಯಕ್ಷರು
2. ಶ್ರೀ ನವೀನ್ ರಾಜ್ ಸಿಂಗ್, ಭಾಆಸೇ – ಸದಸ್ಯರು
3. ಶ್ರೀಮತಿ ಸಲ್ಮಾ ಕೆ. ಫಾಹಿಂ, ಭಾಆಸೇ – ಸದಸ್ಯರು

ವಿವರಗಳು	ಮೊತ್ತ, ರೂಪಾಯಿಗಳಲ್ಲಿ
ಕಳೆದ ಮೂರು ಹಣಕಾಸು ವರ್ಷಗಳಲ್ಲಿ (2016–2017, 2017–2018 & 2018–2019) ಕಂಪೆನಿಯ ಸರಾಸರಿ ನಿವ್ವಳ ಲಾಭ	330.75 ಕೋಟಿ
ನಿಗದಿಪಡಿಸಲಾದ ಸಿಎಸ್ಆರ್ ವೆಚ್ಚ (ಮೇಲಿನ ಬಾಬ್ತು '3'ರಲ್ಲಿ ಇರುವಂತೆ ಮೊತ್ತದ ಎರಡು ಪ್ರತಿಶತ)	6.61 ಕೋಟಿ
ಹಣಕಾಸು ಅವಧಿಗಾಗಿ ವ್ಯಯಿಸಲಾದ ಸಿಎಎಸ್ಆರ್ ವಿವರಗಳು	5.97 ಕೋಟಿ
ಖರ್ಚಾಗದೇ ಉಳಿದ ಮೊತ್ತ, ಯಾವುದಾದರೂ ಇದ್ದಲ್ಲಿ	0.64 ಕೋಟಿ
ಖರ್ಚಾಗದೇ ಉಳಿಯಲು ಕಾರಣಗಳು	2014–15 ರಿಂದ 2017–18 ರವರೆಗೆ ಸಿಎಸ್ಆರ್ ಗೆ ವೆಚ್ಚ ಮಾಡಬೇಕಾದ ಮೊತ್ತವನ್ನು ತೆರಿಗೆ ನಂತರದ ನಿವ್ವಳ ಲಾಭದ ಆದಾರದ ಮೇರೆಗೆ ತೆಗೆದುಕೊಳ್ಳಲಾಗುತ್ತಿದ್ದು, ಲೆಕ್ಕಪರಿಶೋಧಕರ ಆಕ್ಷೇಪಣೆ ನಂತರ ಸಿಎಸ್ಆರ್‌ಗೆ ವ್ಯಯಿಸಬೇಕಾದ ವೆಚ್ಚವನ್ನು ತೆರಿಗೆ ಮುಂಚಿನ ನಿವ್ವಳ ಲಾಭದ ಆದಾರದ ಮೇರೆಗೆ ತೆಗೆದುಕೊಳ್ಳಲಾಗಿದೆ. ಹಾಗಾಗಿ ಪೂರ್ಣ ಪ್ರಮಾಣದ ವೆಚ್ಚ ಮಾಡಲು ಸಾಧ್ಯವಾಗಿರುವುದಿಲ್ಲ. ಹಿರಿಯ ಲೆಕ್ಕಪರಿಶೋಧನಾ ಅಧಿಕಾರಿಯು (ತಪಾಸಣೆ) ದಿನಾಂಕ 11.04.2019ರಂದು ಮಾಡಿರುವ ಪರಿಶೀಲನೆಯನ್ನು ಗಮನಸಲಾಗಿದೆ. ಇದನ್ನು ಪರಿಗಣಿಸಿ 9.9.2019ರಂದು ನಡೆದ ಮಂಡಳಿಯ 328ನೇ ಸಭೆಯ ಮುಂದೆ ಇರಿಸಲಾಯಿತು ಹಾಗೂ ಮಂಡಳಿಯು ಸದರಿ ಮೊತ್ತವನ್ನು ವ್ಯಯಿಸಲು ಅಂಗೀಕಾರ ನೀಡಿದೆ. ಹಾಗಾಗಿ, ಬಾಕಿ ಮೊತ್ತವನ್ನು ಮುಂದಿನ ವರ್ಷಗಳಲ್ಲಿ ವೆಚ್ಚ ಮಾಡಲಾಗುವುದು.

2019–20ರ ಅವಧಿಯಲ್ಲಿ ಮೊತ್ತವನ್ನು ವ್ಯಯಿಸಲಾದ ವಿಧಾನ (ಲಕ್ಷ ರೂ.ಗಳು)

ಗುರುತಿಸಲಾದ ಸಿಎಸ್ಆರ್ ಯೋಜನೆ/ ಚಟುವಟಿಕೆ	ಯೋಜನೆಯ ವ್ಯಾಪ್ತಿಯ ವಲಯ	ಯೋಜನೆಗಳು/ ಕಾರ್ಯಕ್ರಮಗಳು ಸ್ಥಳೀಯ ಪ್ರದೇಶ ಅಥವಾ ಇತರೆಯೋಜನೆಗಳು ಅಥವಾ ಕಾರ್ಯಕ್ರಮಗಳನ್ನು ಕೈಗೊಂಡರಾಜ್ಯ ಮತ್ತು ಜಿಲ್ಲೆಯನ್ನು ನಿರ್ದಿಷ್ಟಗೊಳಿಸಿ	ಯೋಜನಾ/ ಕಾರ್ಯಕ್ರಮವಾರು ಮೀಸಲಿರಿಸಿದ ಮೊತ್ತ (ಆಯವ್ಯಯ)(ಲಕ್ಷ ರೂ.ಗಳು)	ಯೋಜನಾ/ಕಾರ್ಯಕ್ರಮ ಉಪ–ಶೀರ್ಷಿಕೆಗಳ ಮೇಲೆ ವ್ಯಯಿಸಲಾದ ಮೊತ್ತಯೋಜನೆಗಳು ಅಥವಾ ಕಾರ್ಯಕ್ರಮಗಳ ಮೇಲೆ ನೇರ ವೆಚ್ಚಹೆಚ್ಚುವರಿ ವೆಚ್ಚ	ವರದಿಯ ಅವಧಿಯವರೆಗೆ ವ್ಯಯಿಸಲಾದ ಸಂಚಿತ ಮೊತ್ತ (ಲಕ್ಷ ರೂ. ಗಳು)
ಗಣಿಗಾರಿಕೆಯಿಂದ ಬಾಧಿತ ಪ್ರದೇಶ, (60%) ರಾಜ್ಯದ ಇತರ ಭಾಗ, (40%)	ಶಿಕ್ಷಣ ಆರೋಗ್ಯ ಕುಡಿಯುವ ನೀರು ನೈರ್ಮಲ್ಯೀಕರಣ ಮೂಲಸೌಕರ್ಯ ಅಭಿವೃದ್ಧಿ ವನ್ಯಜೀವಿ ಸಂರಕ್ಷಣೆಗಾಗಿ ಅನುಕೂಲ ಕಲ್ಪಿಸುವಿಕೆ ವಿಕಲಾಂಗಚೇತನರು ಮತ್ತು ಮನೋವೈಕಲ್ಯ ವುಳ್ಳವರು. ಸ್ಥಳೀಯ, ರಾಷ್ಟ್ರೀಯ ಕ್ರೀಡೆಗಳಿಗ ಪ್ರೋತ್ಸಾಹ	1. ಯಾವುದೂ ಇಲ್ಲ 2. ಕರ್ನಾಟಕ, ಬೆಂಗಳೂರು, ಬಾಗಲಕೋಟೆ, ಬಳ್ಳಾರಿ, ಬೆಳಗಾಂ, ಬೀದರ್, ಚಿತ್ರದುರ್ಗ, ಚಿಕ್ಕಮಗಳೂರು, ದೊಡ್ಡಬಳ್ಳಾಪುರ, ಹಾಸನ, ರಾಮನಗರ, ಧಾರವಾಡ, ಮೈಸೂರು,	597.59	ಎ. ಹಾಸನ, ಬಳ್ಳಾರಿ, ಗದಗ ಜಿಲ್ಲೆಗಳಲ್ಲಿ ತರಗತಿ ಕೋಣೆಗಳು, ಕಾಂಪೌಂಡ್‌ಗಳು, ಸಿಸಿ ರಸ್ತೆ ಹಾಗೂ ಶೌಚಾಲಯಗಳ ನಿರ್ಮಾಣ. ಬಿ. ಬಳ್ಳಾರಿ, ಹಾಸನ, ಬೆಂಗಳೂರು ಬೆಳಗಾವಿ ಜಿಲ್ಲೆಗಳಲ್ಲಿ ಕುಡಿಯುವ ನೀರು ಮುಂತಾದವು. ಸಿ. ಬಳ್ಳಾರಿ, ಹಾಸನ, ಮೈಸೂರು, ಬೆಳಗಾವಿ, ಗದಗ ಜಿಲ್ಲೆಗಳಲ್ಲಿ ಪುಸ್ತಕಗಳು, ಕಂಪ್ಯೂಟರ್‌ಗಳು, ಪೀಠೋಪಕರಣಗಳು ಮತ್ತು ಜೊತೆಯ ಸಲಕರಣೆಗಳ ಸರಬರಾಜು. ಡಿ. ಫಿಸಿಯೋತೆರಪಿ ಯಂತ್ರ ಮತ್ತು ಅಂಬುಲನ್ಸ್ ಸರಬರಾಜು, ಮೈಸೂರು ಮತ್ತು ಬಳ್ಳಾರಿ ಜಿಲ್ಲೆ ಇ. ಬೆಂಗಳೂರು, ಹಾಸನಗಳ ವಿವಿಧ ಶಾಲೆ, ಕಾಲೇಜುಗಳಲ್ಲಿ ಸ್ಯಾನಿಟರಿ ನ್ಯಾಪ್‌ಕಿನ್ ಯಂತ್ರಗಳ ಸರಬರಾಜು. ಎಫ್. ಬಳ್ಳಾರಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ಮತ್ತು ಸುರಕ್ಷತಾ ಸಲಕರಣೆಗಳ ಸರಬರಾಜು. ಜಿ. ಪ್ರಾಯೋಜಕತ್ವ ಮತ್ತು ಇತರೆ, ಬೆಂಗಳೂರು, ಬಳ್ಳಾರಿ, ಮಂಗಳೂರು – ಅಧ್ಯಕ್ಷರು, ಕೇಶವ ಸಮಿತಿ ಟ್ರಸ್ಟ್, ಚಿಕ್ಕೋಡಿ, ಬೆಳಗಾವಿ – ಬನಾಶನ್ ಕರಿಗೌ ಜೈವಿಕ ತೋಟಗಾರಿಕಾ ಸಂಶೋಧನಾ, ಅಭಿವೃದ್ಧಿ ಮತ್ತು ತರಬೇತಿ ಕೇಂದ್ರ ಹಂಪಿ ಉತ್ತವ ಮತ್ತು ಕೊಪ್ಪಳ ಉತ್ಸವಗಳಿಗೆ ದೇಣಿಗೆ	277.50 51.21 170.78 20.80 22.80 9.50 5.00 40.00
				ಒಟ್ಟು	**597.59**

31 ಮಾರ್ಚ್ 2020ರಂದು ಕೊನೆಗೊಂಡ ವರ್ಷಕ್ಕಾಗಿನ ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್ ಬೆಂಗಳೂರು ಸಂಸ್ಥೆಯ ಪ್ರತ್ಯೇಕ ಹಣಕಾಸು ತಖ್ತೆಗಳ ಮೇಲೆ ಕಂಪೆನಿ ಕಾಯ್ದೆ, 2013ರ ಪರಿಚ್ಛೇದ 143(6)(ಬಿ) ಅಡಿ, ಪರಿಚ್ಛೇದ 129(4) ಕ್ಕೆ ಸಂಗತವಾಗಿ ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರ ಟೀಕೆಗಳು.

ಕಂಪೆನಿ ಕಾಯ್ದೆ 2013ರ ಅಡಿ ನಿಗದಿಪಡಿಸಲಾದ ಆರ್ಥಿಕ ವರದಿಗಾರಿಕೆ ಚೌಕಟ್ಟಿನ ಅನುಸಾರ 31 ಮಾರ್ಚ್ 2020ರಂದು ಕೊನೆಗೊಂಡ ವರ್ಷಕ್ಕಾಗಿನ **ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್, ಬೆಂಗಳೂರು** ಸಂಸ್ಥೆಯ ಹಣಕಾಸು ತಖ್ತೆಗಳ ಸಿದ್ಧಪಡಿಸುವಿಕೆ ಕಂಪೆನಿಯ ಆಡಳಿತವರ್ಗದ ಜವಾಬ್ದಾರಿಯಾಗಿದೆ. ಕಾಯ್ದೆಯ ಪರಿಚ್ಛೇದ 139(5) ರ ಅಡಿ, ಪರಿಚ್ಛೇದ 129(4) ಕ್ಕೆ ಸಂಗತವಾಗಿ ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರು ನಿಯಮಿಸುವ ಶಾಸನಬದ್ಧ ಲೆಕ್ಕಪರಿಶೋಧಕರು ಕಾಯ್ದೆಯ ಪರಿಚ್ಛೇದ 143(10)ರ ಅಡಿ ನಿಗದಿಪಡಿಸಲಾಗಿರುವ ಲೆಕ್ಕಪರಿಶೋಧನಾ ಪ್ರಮಾಣಗಳ ಅನುಸಾರ ನಡೆಸಿದ ಸ್ವತಂತ್ರ ಲೆಕ್ಕಪರಿಶೋಧನೆಯ ಬೆಳಕಿನಲ್ಲಿ ಈ ಹಣಕಾಸು ತಃಖ್ತೆಗಳ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಜವಾಬ್ದಾರಿಯನ್ನು ಕಾಯ್ದೆಯ ಪರಿಚ್ಛೇದ 143ರ ಅಡಿ ಹೊಂದಿರುತ್ತಾರೆ. ಶಾಸನಬದ್ಧ ಲೆಕ್ಕಪರಿಶೋಧಕರು, ಅವರ ದಿನಾಂಕ **17 ನವಂಬರ್ 2020ರ** ಪರಿಷ್ಕೃತ ಲೆಕ್ಕಪರಿಶೋಧನಾ ವರದಿಯಲ್ಲಿ ತಾವು ಮೇಲೆ ತಿಳಿಸಿರುವಂತೆ ಮಾಡಿರುವುದಾಗಿ ವರದಿಮಾಡಿರುತ್ತಾರೆ ಹಾಗೂ ಈ ವರದಿಯು ಅವರ **11 ಸೆಪ್ಟೆಂಬರ್ 2020ರ** ಲೆಕ್ಕಪರಿಶೋಧನಾ ವರದಿಯನ್ನು ಗೌಣವಾಗಿಸುತ್ತದೆ.

ಕಂಪೆನಿ ಕಾಯ್ದೆಯ ಪರಿಚ್ಛೇದ 143(6)(ಎ) ಅನ್ವಯ, ಪರಿಚ್ಛೇದ 129(4) ಕ್ಕೆ ಸಂಗತವಾಗಿ ನಾನು, ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರ ಪರವಾಗಿ **31 ಮಾರ್ಚ್ 2020**ರಂದು ಕೊನೆಗೊಂಡ ವರ್ಷಕ್ಕಾಗಿನ **ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್, ಬೆಂಗಳೂರು** ಸಂಸ್ಥೆಯ ಹಣಕಾಸು ವಿವರಣಾ ತಃಖ್ತೆಗಳ ಪೂರಕ ಲೆಕ್ಕಪರಿಶೋಧನೆಯನ್ನು ಕೈಗೊಂಡಿರುತ್ತೇನೆ. ಆದರೆ, **31 ಮಾರ್ಚ್ 2020**ರಂದು ಕೊನೆಗೊಂಡ ವರ್ಷಕ್ಕಾಗಿನ ತುಂಗಭದ್ರ ಮಿನರಲ್ಸ್ ಪ್ರೈವೇಟ್ ಲಿಮಿಟೆಡ್ ಹಾಗೂ ವಿಜಯನಗರ ಮಿನರಲ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗಳ ಹಣಕಾಸು ವಿವರಣಾ ತಃಖ್ತೆಗಳ ಪೂರಕ ಲೆಕ್ಕಪರಿಶೋಧನೆಯನ್ನು ಕೈಗೊಂಡಿರುವುದಿಲ್ಲ. ಅಲ್ಲದೆ ತುಂಗಭದ್ರ ಮಿನರಲ್ಸ್ ಪ್ರೈವೇಟ್ ಲಿಮಿಟೆಡ್ ಹಾಗೂ ವಿಜಯನಗರ ಮಿನರಲ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗಳು ಖಾಸಗಿ ಸಂಸ್ಥೆಗಳಾದ ಕಾರಣ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕ ಹಾಗೂ ಪುರಕ ಲೆಕ್ಕಪರಿಶೋಧನೆಯನ್ನು ನಡೆಸುವ ಸಂಬಂಧ ಅನುಕ್ರಮವಾದ ಕಾನೂನುಗಳನ್ನು ಅವು ಹೊಂದಿರುವುದರಿಂದ ಕಾಯ್ದೆಯ ಪರಿಚ್ಛೇದ 139(5) ಮತ್ತು 143(6)(ಬಿ) ಇವುಗಳಿಗೆ ಅನ್ವಯವಾಗುವುದಿಲ್ಲ. ಇದಕ್ಕನುಗುಣವಾಗಿ ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರು ಈ ಸಂಸ್ಥೆಗಳಿಗೆ ಶಾಸನಬದ್ಧ ಲೆಕ್ಪರಿಶೋಧರನ್ನು ನೇಮಿಸಲಿಲ್ಲ ಮತ್ತು ಈ ಕಂಪೆನಿಗಳ ಪೂರಕ ಲೆಕ್ಕಪರಿಶೋಧನೆಯನ್ನೂ ಸಹ ನಡೆಸಲಿಲ್ಲ. ಈ ಪೂರಕ ಲೆಕ್ಕಪರಿಶೋಧನೆಯನ್ನು ಸ್ವತಂತ್ರವಾಗಿ ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರು ಕೆಲಸಮಾಡಿದ ಕಾಗದಪತ್ರಗಳಿಂದ ದೂರವಾಗಿ ಕೈಗೊಳ್ಳಲಾಗಿದ್ದು ಶಾಸನಬದ್ಧ ಲೆಕ್ಕಪರಿಶೋಧಕರ ಮತ್ತು ಕಂಪೆನಿ ಸಿಬ್ಬಂದಿಯ ವಿಚಾರಣೆಗೆ ಮತ್ತು ಕೆಲವು ಲೆಕ್ಕದಾಖಲೆಗಳ ಆಯ್ದ ಪರಿಶೀಲನೆಗೆ ಇದು ಮೂಲತಃ ಸೀಮಿತವಾಗಿದೆ. ಪೂರಕ ಲೆಕ್ಕಪರಿಶೋಧನೆಯಲ್ಲಿ ನಾನು ಮುಂದಿಟ್ಟ ಕೆಲವು ಲೆಕ್ಕಪರಿಶೋಧನಾ ಪರಿಶೀಲನೆಗಳಿಗೆ ಪರಿಣಾಮವನ್ನು ನೀಡುವ ದೃಷ್ಟಿಯಿಂದ ಲೆಕ್ಕಪರಿಶೋಧನಾ ವರದಿಯನ್ನು ಶಾಸನಬದ್ಧ ಲೆಕ್ಕಪರಿಶೋಧಕರು ಪರಿಷ್ಕರಿಸಿದ್ದಾರೆ.

ಮುಂದುವರೆದಂತೆ ಕಂಪೆನಿ ಕಾಯ್ದೆಯ ಪರಿಚ್ಛೇದ 143(6)(ಬಿ) ಅನ್ವಯ, ಪರಿಚ್ಛೇದ 129(4) ಕ್ಕೆ ಸಂಗತವಾಗಿ, ನನ್ನ ದೃಷ್ಟಿಯಲ್ಲಿ ಹಣಕಾಸು ತಃಖ್ತೆಗಳು ಹಾಗೂ ಸಂಬಂಧಿತ ಲೆಕ್ಕಪರಿಶೋಧನಾ ವರದಿಯನ್ನು ಮತ್ತಷ್ಟು ಸಂಗತವಾಗಿ ಅರ್ಥೈಸಲು ಅಗತ್ಯವೆಂದು ತೋರಿದ ಕೆಳಕಂಡ ಮಹತ್ವಪೂರ್ಣ ಅಂಶಗಳತ್ತ ಗಮನಸೆಳೆಯಬಯಸುತ್ತೇನೆ.

1. ಸಂತುಲನ ಪಟ್ಟಿ

(1) ಇತರ ಚಾಲ್ತಿಯಲ್ಲದ ಆಸ್ತಿಗಳು

(ಇ) ಇತರ ಚಾಲ್ತಿಯಲ್ಲದ ಆಸ್ತಿಗಳು – ರೂ. 57.19 ಕೋಟಿ

ಟಿಪ್ಪಣಿ 5 – ನಿಶ್ಚಿತ ಠೇವಣಿಯ ಮೇಲೆ ಪ್ರಾಪ್ತವಾದ ಬಡ್ಡಿ

ಇದರಲ್ಲಿ ಬೇಗೂರಿನ ವಿಜಯ ಬ್ಯಾಂಕಿನಲ್ಲಿ ಇರಿಸಲಾಗಿದ್ದ ರೂ. 15 ಕೋಟಿ ಮೊತ್ತದ ನಿಶ್ಚಿತ ಠೇವಣಿಯ ಮೇಲಿನ ರೂ. 6.98 ಕೋಟಿ ಮೊತ್ತದ ಬಡ್ಡಿ ಸೇರುತ್ತದೆ. ಈ ಮೊತ್ತವು ಅಕ್ಟೋಬರ್ 2015ರಲ್ಲಿ ಪಕ್ವವಾಗಿತ್ತು. ಬ್ಯಾಂಕಿನಲ್ಲಿ ನಡೆದ ಹಣದ ಅಪಬಳಕೆಯ ಕಾರಣದಿಂದಾಗಿ ಈ ಮೊತ್ತವು ಬಡ್ಡಿ ಸಹಿತವಾಗಿ ಕಂಪೆನಿಗೆ ಜಮೆಯಾಗಿರಲಿಲ್ಲ. ಬ್ಯಾಂಕು ಸಿಬಿಐ ನಲ್ಲಿ ಕೇಸು ದಾಖಲಿಸಿದ್ದು ಅದರ ಇತ್ಯರ್ಥ ಬಾಕಿ ಉಳಿದಿದೆ.

ಈ ವಿಷಯವನ್ನು 2016–17ರಿಂದ ಪ್ರಸ್ತಾಪಿಸಲಾಗುತ್ತಿದ್ದು ಕಂಪೆನಿಯು ಮೊತ್ತದ ಮರುಭರಿಕೆಗೆ ಬ್ಯಾಂಕಿನೊಂದಿಗೆ ಸಮಾಲೋಚನೆ ನಡೆಸುತ್ತಿರುವುದಾಗಿಯೂ ಇದುವರೆವಿಗೂ ಸಕಾರಾತ್ಮಕವಾದ ಉತ್ತರ ದೊರೆತಿರುವುದಿಲ್ಲ ಎಂದು ಹೇಳಿತ್ತು.

ಬ್ಯಾಂಕು ಈ ವಿಷಯದ ಇತ್ಯರ್ಥ ಆಗುವವರೆಗೂ ಮೊತ್ತವನ್ನು ಹಿಂದಿರುಗಿಸಲಾಗುವುದಿಲ್ಲ ಎಂದು ವಾದಿಸಿತ್ತು (ಜನವರಿ 2020). ಕಂಪೆನಿಯು ಸಿಬಿಐ ನೊಂದಿಗೆ ಈ ವಿಷಯವನ್ನು ಪ್ರತಿನಿಧಿಸಲು (ಆಗಸ್ಟ್ 2020) ಸಿಬಿಐ ಮೊತ್ತವನ್ನು ಹಿಂದಕ್ಕೆ ಪಡೆಯಲು ನ್ಯಾಯಾಲಯದ ಮೊರೆಹೋಗಲು ನಿರ್ದೇಶಿಸಿತು.

ವಿಷಯವು ನ್ಯಾಯಾಲಯದಲ್ಲಿ ಇರುವ ಕಾರಣ ಬ್ಯಾಂಕು ಕೇಸು ಇತ್ಯರ್ಥವಾಗುವವರೆಗೂ ಮೊತ್ತವನ್ನು ಬಡ್ಡಿ ಸಹಿತವಾಗಿ ಹಿಂದಿರುಗಿಸಲು ಒಪ್ಪಲಿಲ್ಲ ಹಾಗೂ ಈ ಸಂಬಂಧದ ಶಿಲ್ಕುಗಳ ಸ್ಥಿರೀಕರಣವಾಗಿಲ್ಲ. ಪ್ರಾಪ್ತವಾದ ಬಡ್ಡಿಯನ್ನು ಆದಾಯವೆಂದು ಲೆಕ್ಕತೋರಿಸಿರುವುದು ಸರಿಯಲ್ಲ. ಭಾರತೀಯ ಲೇಖಾ ಪ್ರಮಾಣ 37: ಹವಣಿಕೆಗಳು, ಸಾದಿಲ್ವಾರು ಹೊಣೆಗಳು ಮತ್ತು ಸಾದಿಲ್ವಾರು ಆಸ್ತಿಗಳು – ಇದರ ಪ್ರಕಾರ ಬಡ್ಡಿಯನ್ನು ಸಾದಿಲ್ವಾರು ಆಸ್ತಿಯಾಗಿ ಗುರುತಿಸಬೇಕಾಗಿತ್ತು.

ಇದು ಚಾಲ್ತಿ ಆಸ್ತಿಯನ್ನು ರೂ. 6.98 ಕೋಟಿಯಷ್ಟು ಹೆಚ್ಚಾಗಿ ತೋರಿಸಲು, ಮುಡಿಪುಗಳನ್ನು (2014–15 ರಿಂದ 2017–18ವರೆಗಿನ ಅವಧಿಗೆ) ರೂ. 4.59 ಕೋಟಿಯಷ್ಟು ಹೆಚ್ಚಾಗಿ ತೋರಿಸಲು, ಚಾಲ್ತಿ ವರ್ಷದ ಆದಾಯವನ್ನು ರೂ. 1.05 ಕೋಟಿಯಷ್ಟು ಹೆಚ್ಚಾಗಿ ತೋರಿಸಲು, ಹಿಂದಿನ ವರ್ಷದ (2018–19) ಆದಾಯವನ್ನು ರೂ. 1.35 ಕೊಟಿಯಷ್ಟು ಹೆಚ್ಚಾಗಿ ತೋರಿಸಲು ಹಾಗೂ ತತ್ಪರಿಣಾಮವಾಗಿ ಅದೇ ಮಟ್ಟಕ್ಕೆ ಈ ವರ್ಷಗಳ ಲಾಭವನ್ನು ಹೆಚ್ಚಾಗಿ ತೋರಿಸಲು ಕಾರಣವಾಗಿದೆ. ಲೆಕ್ಕಪರಿಶೋಧಕರು ತಮ್ಮ ವರದಿಯಲ್ಲಿ ಈ ವಿಷಯವನ್ನು ಸೇರಿಸಿದ್ದಾರೆ; ಆದರೆ, ಯಾವುದೇ ಲೆಕ್ಕಪರಿಶೋಧನಾ ಆಕ್ಷೇಪಣೆ ಅಥವಾ ಪರಿಣಾಮವಿಲ್ಲದ ಕೇವಲ ವಾಸ್ತವಿಕ ಹೇಳಿಕೆಯಾಗಿ ಈ ವಿಷಯದ ಪ್ರಸ್ತಾಪ ಸೇರಿರುತ್ತದೆ.

2. ಸಂತುಲನ ಪಟ್ಟಿ

1) ಇತರ ಚಾಲ್ತಿಯಲ್ಲದ ಆಸ್ತಿಗಳು – (ಎ) ಸ್ವತ್ತು, ಸ್ಥಾವರ ಮತ್ತು ಸಲಕರಣೆ

ಟಿಪ್ಪಣಿ 1 – ರೂ. 109.86 ಕೋಟಿ

ಲಾಭ ಮತ್ತು ನಷ್ಟದ ತಃಖ್ತೆ – ಖರ್ಚುಗಳು: ಸವಕಳಿ ಮತ್ತು ದತ್ತಿ ವೆಚ್ಚ – ರೂ. 11.50 ಕೋಟಿ

ಖರ್ಚುಗಳು: ಹಣಕಾಸು ಕೂಡಿಸುವಿಕೆ ವೆಚ್ಚ – ಟಿಪ್ಪಣಿ 23 – ಇತರರಿಗೆ ಬಡ್ಡಿ: ರೂ. 9.7 ಕೋಟಿ

ಗಣಿಯ ಆಯುಷ್ಯವನ್ನು ಅದರ ನೈಜ ಆಯುಷ್ಯದ ಅವಧಿಯಾದ 3 ರಿಂದ 100 ವರ್ಷಗಳ ಬದಲಿಗೆ 10 ವರ್ಷ ಮೇಲಿನ ದತ್ತಿ ವೆಚ್ಚ ಮತ್ತು ಬಡ್ಡಿ ವೆಚ್ಚವನ್ನು ಎಂದು ಪರಿಗಣಿಸಿ ಲೆಕ್ಕಹಾಕಲಾಗಿದೆ. ಕಂಪೆನಿಗೆ ಗಣಿಗಳ ಆಯುಷ್ಯಾವಧಿಯು ತಿಳಿದಿರುವ ಕಾರಣ ನೇರವಾಗಿ 10 ವರ್ಷ ಎಂದು ಅದರ ಆಯುಷ್ಯವನ್ನು ಪರಿಗಣಿಸುವ ಬದಲಿಗೆ ಗಣಿಗಳನೈಜ ಆಯುಷ್ಯಾವಧಿಯನ್ನೇ ಬಳಸಿ ಲೆಕ್ಕಹಾಕಬೇಕಾಗಿತ್ತು. ಈ ಲೆಕ್ಕಪರಿಗಣನೆಯು ಇಂಡ್ ಎಎಸ್ 10ರ ಅನುಸಾರ ಇರುವುದಿಲ್ಲ. ಇದು ದತ್ತಿ ವೆಚ್ಚವನ್ನು ರೂ. 2.44 ಕೋಟಿಯಷ್ಟು ಹೆಚ್ಚಿಗೆ

ತೋರಿಸಲು, ಬಡ್ಡಿಯನ್ನು ರೂ. 2.80 ಕೋಟಿಯಷ್ಟು ಹೆಚ್ಚಿಗೆ ತೋರಿಸಲು, ಲಾಭವನ್ನು 5.24 ಕೋಟಿಯಷ್ಟು ಕಡಿಮೆ ತೋರಿಸಲು ಹಾಗೂ ತತ್ಪರಿಣಾಮವಾಗಿ ಹೊಣೆಯನ್ನು ಹೆಚ್ಚಿಗೆ ತೋರಿಸಲು ಮತ್ತು ಆಸ್ತಿಯನ್ನು ರೂ. 5.24 ಕೋಟಿಯಷ್ಟು ಕಡಿಮೆ ತೋರಿಸಲು ಕಾರಣವಾಗಿದೆ.

3. ಲಾಭ ಮತ್ತು ನಷ್ಟದ ತಃಖ್ತೆ

ಖರ್ಚುಗಳು – ಇತರ ಖರ್ಚುಗಳು – ಟಿಪ್ಪಣಿ 25 – ರೂ. 76.08 ಕೋಟಿ

ಇದರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಕಂಪೆನಿಯ ಪರವಾಗಿ 80.06 ಹೆಕ್ಟೇರುಗಳಷ್ಟು ಅರಣ್ಯ ಭೂಮಿಯನ್ನು ಅರಣ್ಯೇತರ ಬಳಕೆಗೆ ತೊಡಗಿಸಲೆಂದು ಗಣಿ ಗುತ್ತಿಗೆಗಳಿಗಾಗಿನ ನಿವ್ವಳ ಪ್ರಸ್ತುತ ಮೌಲ್ಯದ ಬಾಬ್ತಿಗಾಗಿ ಪಾವತಿಸಲಾದ ರೂ. 6.43 ಕೋಟಿ ಸೇರಿದೆ.

ಸದರಿ ಮೊತ್ತವನ್ನು ಗಣಿಗಾರಿಕೆ ಗುತ್ತಿಗೆಯ ಅವಧಿಯನ್ನು 30 ವರ್ಷಗಳಿಗೆ ವಿಸ್ತರಿಸಲು ಪಾವತಿಸಿರುವ ಕಾರಣ ಹಾಗೂ ಲಾಭಗಳು ಗಣಿಗಾರಿಕೆ ಗುತ್ತಿಗೆಯ ಅವಧಿಯುದ್ದಕ್ಕೂ ವಿಸ್ತರಿಸುವುದರಿಂದ ಸದರಿ ವೆಚ್ಚವನ್ನು 2019–20ರ ವೆಚ್ಚವಾಗಿ ಪರಿಗಣಿಸುವ ಬದಲು ಗುತ್ತಿಗೆ ಅವಧಿಯ ಉದ್ದಕ್ಕೆ ದತ್ತಿವೆಚ್ಚವಾಗಿಸಬೇಕಾಗಿತ್ತು.

ಇದು ಗುತ್ತಿಗೆ ಭೂಮಿಯನ್ನು ಕಡಿಮೆ ತೊರಿಸಲು, ಇತರ ಖರ್ಚುಗಳನ್ನು ರೂ. 6.43 ಕೋಟಿಯಷ್ಟು ಹೆಚ್ಚಿಗೆ ತೋರಿಸಲು, ಸವಕಳಿ ಮತ್ತು ದತ್ತಿ ವೆಚ್ಚವನ್ನು ರೂ. 0.21 ಕೋಟಿಯಷ್ಟು ಕಡಿಮೆ ತೋರಿಸಲು ಹಾಗೂ ವರ್ಷದ ಲಾಭವನ್ನು ರೂ. 6.21 ಕೊಟಿಯಷ್ಟು ಕಡಿಮೆ ತೋರಿಸಲು ಕಾರಣವಾಗಿದೆ.

ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರ ಪರವಾಗಿ

ಸಹಿ/–
(ಅನುಪ್ ಫ್ರಾನ್ಸಿಸ್ ಡುಂಗ್‌ಡುಂಗ್)
ಪ್ರಧಾನ ಮಹಾಲೇಖಾಪಾಲರು
(ಅರ್ಥ ಮತ್ತು ಕಂದಾಯ ವಲಯ ಲೆಕ್ಕಪರಿಶೋಧನೆ)
ಕರ್ನಾಟಕ, ಬೆಂಗಳೂರು

ಬೆಂಗಳೂರು
ದಿ. 14.12.2020

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್
(ಹಿಂದಿನ ಮೈಸೂರು ಮಿನರಲ್ಸ್ ಲಿಮಿಟೆಡ್)

ಸ್ವತಂತ್ರ ಲೆಕ್ಕಪರಿಶೋಧಕರ ವರದಿ

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಶನ್ ಲಿಮಿಟೆಡ್
ಸದಸ್ಯರಿಗೆ ಸ್ವತಂತ್ರ ಲೆಕ್ಕಪರಿಶೋಧಕರ ವರದಿ (ಪರಿಷ್ಕೃತ)

31 ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷದ ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಶನ್ ಲಿಮಿಟೆಡ್ ಸಂಸ್ಥೆಯ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸಿದ ನಂತರ ನಾವು 11 ಸೆಪ್ಟೆಂಬರ್ 2020ರಂದು ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಿದ್ದೇವೆ. ನಮ್ಮ ವರದಿಯ ತರುವಾಯದಲ್ಲಿ ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರು ನಡೆಸಿದ ಲೆಕ್ಕಪರಿಶೋಧನೆಯಿಂದ ಪ್ರಕಟವಾದ ಪರಿಶೀಲನೆಗಳ ಹಿನ್ನೆಲೆಯಲ್ಲಿ ಸಿಎಆರ್‌ಓ ವರದಿಯ ಕಲಮು **x** ಕ್ಕೆ ಸಂಬಂಧಿಸಿದಂತೆ, ಪುಟ ಸಂಖ್ಯೆ 1 ರಲ್ಲಿನ ಕಂಡಿಕೆಯ ಶೀರ್ಷಿಕೆಯನ್ನು ಪರಿಶೀಲನಾತ್ಮಕ ಅಭಿಪ್ರಾಯ ಎಂದು ಬದಲಾಯಿಸುವ ಹಾಗೂ ಕಂಡಿಕೆ ಬಿ – II – ಆದಾಯದ ಲೆಕ್ಕ – ಇಲ್ಲಿ **"ಆ ಮಟ್ಟಿಗೆ ಇಂಡ್ ಎಎಸ್–1 ಮತ್ತು ಇಂಡ್ ಎಎಸ್–115 ರ ಅನುಸರಣೆಯಾಗಿಲ್ಲ"** ಎಂಬ ಭಾಗವನ್ನು ಸೇರಿಸುವ ಕುರಿತು ಹೆಚ್ಚಿನ ಪ್ರಕಟಣೆಗಳನ್ನು ಮಾಡಲು ಸಾಧ್ಯವಾಗುವಂತೆ ನಮ್ಮ ವರದಿಯನ್ನು ಪರಿಷ್ಕರಿಸಲಾಗಿದೆ.

ಈ ವರದಿ ನಮ್ಮ ಹಿಂದಿನ ವರದಿಯನ್ನು ಗೌಣವಾಗಿಸುತ್ತದೆ.

ಪ್ರತ್ಯೇಕ ಇಂಡ್ ಎಎಸ್ ಹಣಕಾಸು ತಃಖ್ತೆಯ ಮೇಲಿನ ವರದಿ

ಪರಿಶೀಲನಾತ್ಮಕ ಅಭಿಪ್ರಾಯ

ನಾವು **ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಶನ್ ಲಿಮಿಟೆಡ್** (**"ದಿ ಕಂಪನಿ)"** ಲಗತ್ತಾದ ಪ್ರತ್ಯೇಕ ಇಂಡ್ ಎಎಸ್ ಹಣಕಾಸು ತಃಖ್ತೆಗಳನ್ನು ಲೆಕ್ಕಪರಿಶೋಧಿಸಿದ್ದೇವೆ. ಈ ತಃಖ್ತೆಗಳಲ್ಲಿ 31 ಮಾರ್ಚ್ 2020ರಂದು ಇದ್ದಂತೆ ಸಂತುಲನ ಪಟ್ಟಿ, ಇತರ ಸಮಗ್ರ ಆದಾಯವೂ ಸೇರಿ, ಅದೇ ದಿನಾಂಕಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ತಃಖ್ತೆ ಹಾಗೂ ನಗದು ಪ್ರವಹನ ತಃಖ್ತೆ, ಸ್ವಾಮ್ಯದಲ್ಲಿನ ಬದಲಾವಣೆಗಳ ತಃಖ್ತೆ ಮತ್ತು ಮಹತ್ವದ ಲೇಖಾ ಕಾರ್ಯನೀತಿಗಳ ಸಾರ ಮತ್ತು ಇತರ ವಿವರಣಾತ್ಮಕ ಮಾಹಿತಿ ಸೇರುತ್ತವೆ (ಇನ್ನು ಮುಂದೆ **"ಪ್ರತ್ಯೇಕ ಇಂಡ್ ಎಎಸ್ ಹಣಕಾಸು ತಃಖ್ತೆಗಳು** ಎಂದು ಉಲ್ಲೇಖಿತ).

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮ್ಮ ಅತ್ಯುತ್ತಮ ತಿಳುವಳಿಕೆ ಹಾಗೂ ನಮಗೆ ಒದಗಿಸಲಾದ ವಿವರಣೆಗಳ ಪ್ರಕಾರ ಮೇಲೆ ಸೂಚಿಸಲಾಗಿರುವ ಕ್ರೋಢೀಕೃತ ಇಂಡ್ ಎಎಸ್ ಹಣಕಾಸು ತಃಖ್ತೆಗಳು ಕಂಪನಿ ಕಾಯ್ದೆ, 2013 (**"ಕಾಯ್ದೆ"**) ಪರಿಚ್ಛೇದ 133 ರ ಅಡಿ ನಿರ್ದಿಷ್ಟಗೊಳಿಸಲಾಗಿರುವ ಲೇಖಾ ಪ್ರಮಾಣಗಳಿಗೆ ಅನುಸಾರವಾಗಿ ಮತ್ತು ತಿದ್ದುಪಡಿ ಮಾಡಲಾದಂತೆ, ಕಂಪನಿಗಳ (ಭಾರತೀಯ ಲೇಖಾ ಪ್ರಮಾಣಗಳು) ನಿಯಮಗಳು, 2015 (**"ಇಂಡ್ ಎಎಸ್"**) ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಿತವಾದ ಲೇಖಾ ಸಿದ್ಧಾಂತಗಳಿಗೆ ಹೊಂದುವಂತೆ 31 ಮಾರ್ಚ್ 2020ರಂದು ಇದ್ದಂತೆ, ಕಂಪನಯ ಸ್ಥಿತಿಗತಿ, ಇತರ ಸಮಗ್ರ ಆದಾಯವೂ ಸೇರಿದಂತೆ ಅದರ ಲಾಭ, ಅದರ ನಗದು ಹರಿವುಗಳು ಮತ್ತು ಅದೇ ದಿನಾಂಕದಂದು ಕೊನೆಯಾದ ವರ್ಷಕ್ಕೆ ಈಕ್ವಿಟಿಯಲ್ಲಿನ ಬದಲಾವಣೆಗಳ ಬಗ್ಗೆ ನೈಜ ಮತ್ತು ನಿಷ್ಪಕ್ಷಪಾತವಾದ ಚಿತ್ರವನ್ನು ನೀಡುತ್ತದೆ.

ಅಭಿಪ್ರಾಯಗಳಿಗೆ ಆಧಾರ

ನಾವು ನಮ್ಮ ಲೆಕ್ಕಪರಿಶೋಧನೆಯನ್ನು ಕಾಯ್ದೆಯ ಪರಿಚ್ಛೇದ 143(10)ರ ಅಡಿ ನಿರ್ದಿಷ್ಟಗೊಳಿಸಿರುವ ಲೆಕ್ಕಪರಿಶೋಧನಾ ಪ್ರಮಾಣಗಳ (ಎಸ್ಎಗಳು) ಅನುಸಾರ ನಡೆಸಿರುತ್ತೇವೆ. ನಮ್ಮ ವರದಿಯ ಕ್ರೋಢೀಕೃತ ಹಣಕಾಸು ತಃಖ್ತೆಗಳ ಲೆಕ್ಕಪರಿಶೋಧನೆಯ ಲೆಕ್ಕಪರಿಶೋಧಕರ ಅಭಿಪ್ರಾಯಗಳು ಭಾಗದಲ್ಲಿ ಈ ಪ್ರಮಾಣಗಳ ಅಡಿಯಲ್ಲಿನ ನಮ್ಮ ಜವಾಬ್ದಾರಿಗಳನ್ನು ಮತ್ತಷ್ಟು ವಿವರಿಸಲಾಗಿದೆ. ಭಾರತೀಯ

ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯು ಹೊರಡಿಸಿರುವ ನೀತಿ ಸಂಹಿತೆಗೆ ಅನುಗುಣವಾಗಿ ಹಾಗೂ ಕಂಪನಿ ಕಾಯ್ದೆ 2013ರ ಉಪಬಂಧಗಳು ಮತ್ತು ಅದರಡಿಯ ನಿಯಮಗಳ ಅಡಿಯಲ್ಲಿ ಜೊತೆಗಿನ ಕ್ರೋಢೀಕೃತ ಹಣಕಾಸು ತಃಖ್ತೆಗಳ ಲೆಕ್ಕಪರಿಶೋಧನೆಗೆ ಪ್ರಸ್ತುತವಾದ ಉಪಬಂಧಗಳ ಅಡಿಯಲ್ಲಿನ ನೈತಿಕ ಅಗತ್ಯಗಳಿಗೆ ಅನುಗುಬಣವಾಗಿ ನಾವು ಗುಂಪಿನಿಂದ ಸ್ವತಂತ್ರರಾಗಿದ್ದೇವೆ ಹಾಗೂ ನಾವು ನೀತಿ ಸಂಹಿತೆಯ ಅಗತ್ಯಗೀಗೆ ಅನುಗುಣವಾಗಿ ನಾವು ನಮ್ಮ ನೈತಿಕ ಜವಾಬ್ದಾರಿಗಳನ್ನು ನಿಭಾಯಿಸಿರುತ್ತೇವೆ. ನಾವು ಪಡೆದುಕೊಂಡಿರುವ ಲೆಕ್ಕಪರಿಶೋಧನಾ ಆಧಾರಗಳು ಕ್ರೋಢೀಕೃತ ಇಂಡ್ ಎಎಸ್ ಹಣಕಾಸು ತಖ್ತೆಗಳ ಮೇಲಿನ ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಗಳಿಗೆ ಪರ್ಯಾಪ್ತ ಮತ್ತು ಸೂಕ್ತವಾಗಿದ್ದು ತಕ್ಕ ಆಧಾರಗಳನ್ನು ಒದಗಿಸುತ್ತವೆ ಎಂದು ನಾವು ನಂಬಿದ್ದೇವೆ.

ಪ್ರಧಾನ ಲೆಕ್ಕಪರಿಶೋಧನಾ ವಿಷಯಗಳು

ಪ್ರಧಾನ ಲೆಕ್ಕಪರಿಶೋಧನಾ ವಿಷಯಗಳೆಂದರೆ, ಚಾಲ್ತಿ ಅವಧಿಯ ಹಣಕಾಸು ತಃಖ್ತೆಗಳ ನಮ್ಮ ಲೆಕ್ಕಪರಿಶೋಧನೆಯಲ್ಲಿ ನಮ್ಮ ವೃತ್ತಿಪರ ದೃಷ್ಟಿಗೆ ತೋರಿದಂತೆ ಅತ್ಯಂತ ಮಹತ್ವಪೂರ್ಣವಾದ ವಿಷಯಗಳಾಗಿವೆ. ಈ ವಿಷಯಗಳನ್ನು ಹಣಕಾಸು ತಃಖ್ತೆಗಳ ನಮ್ಮ ಒಟ್ಟಾರೆ ಲೆಕ್ಕಪರಿಶೋಧನೆಯ ಹಾಗೂ ಇವಕ್ಕೆ ಸಂಬಂಧಿಸಿದಂತೆ ಅಭಿಪ್ರಾಯಗಳನ್ನು ರೂಪಿಸುವ ಹಿನ್ನೆಲೆಯಲ್ಲಿ ನಾವು ಎದುರಾದೆವು ಮತ್ತು ಈ ವಿಷಯಗಳ ಮೇಲೆ ನಾವು ಪ್ರತ್ಯೇಕವಾದ ಅಭಿಪ್ರಾಯಗಳನ್ನು ಒದಗಿಸುವುದಿಲ್ಲ. ನಮ್ಮ ವರದಿಯಲ್ಲಿ ತಿಳಿಸುವ ಉದ್ದೇಶದಿಂದ ಕೆಳಗಿನವನ್ನು ನಾವು ಪ್ರಧಾನವಾದ ಅಂಶಗಳೆಂದು ತೀರ್ಮಾನಿಸಿದ್ದೇವೆ:

ಪ್ರಧಾನ ಲೆಕ್ಕಪರಿಶೋಧನಾ ವಿಷಯ	ಲೆಕ್ಕಪರಿಶೋಧಕರ ಪ್ರತಿಕ್ರಿಯೆ
1) ಗಣಿ ಮುಚ್ಚುವಿಕೆ ಹೊಣೆ (ಎಂಸಿಓ):ಕಂಪನಿಯು ತನ್ನ ಇತ್ತೀಚಿನ ಗಣಿಯನ್ನು ಆಧಾರವಾಗಿರಿಸಿ ಗಣಿಗಾರಿಕೆ ಯೋಜನೆಯ ಪ್ರಸ್ತುತ ಮುಚ್ಚುವಿಕೆ ವೆಚ್ಚವನ್ನು ಆಧರಿಸಿ ಗಣಿ ಮುಚ್ಚುವಿಕೆ ಹೊಣೆಯನ್ನು ಸೃಷ್ಟಿಸುತ್ತದೆ. ಇಂತಹ ವೆಚ್ಚವನ್ನು ಆಧರಿಸಿ ಲೆಕ್ಕಹಾಕಲಾದ ಮುಚ್ಚುವಿಕೆ ವೆಚ್ಚವನ್ನು ಏಕರೂಪವಾಗಿ ಇತರ ಗಣಿಗಳಿಗೂ ಅನ್ವಯಿಸಿ ಒಟ್ಟು ಗಣಿ ಮುಚ್ಚುವಿಕೆ ಹೊಣೆಯನ್ನು ಲೆಕ್ಕಹಾಕಲಾಗುತ್ತದೆ. ಆಡಳಿತ ಮಂಡಳಿಯ ಕಾರ್ಯನೀತಿಯ ಪ್ರಕಾರ ಈ ಪ್ರಕ್ರಿಯೆಯು ಅಂದಾಜಿಸುವಿಕೆಯನ್ನು ಒಳಗೊಳ್ಳುವ ಕಾರಣ ಈ ವಿಷಯವನ್ನು ಪ್ರಧಾನ ಲೆಕ್ಕಪರಿಶೋಧನಾ ವಿಷಯವಾಗಿ ಪರಿಗಣಿಸಲಾಯಿತು.	ಕಂಪನಿಯು ಪರಿಗಣಿಸಿರುವ ಗಣಿ ಮುಚ್ಚುವಿಕೆ ಹೊಣೆಯ ದರಗಳ ಅಂದಾಜುಗಳನ್ನು ಪರಿಶೀಲಿಸಲು ನಾವು ನಮ್ಮ ಆಂತರಿಕ ಪರಿಣತಿಯನ್ನು ತೊಡಗಿಸಿದ್ದೇವೆ.
2) ಆದಾಯ ತೆರಿಗೆ:ಕಂಪನಿಯು ವ್ಯಾಜ್ಯದಡಿಯ ವಿಷಯಗಳೂ ಸೇರಿದಂತೆ ಅನಿಶ್ಚಿತ ತೆರಿಗೆ ಸ್ಥಿತಿಯನ್ನು ಹೊಂದಿದ್ದು ಆದಾಯ ತೆರಿಗೆ ಹವಣಿಕೆಯ ಅಂದಾಜಿನ ಪ್ರಕ್ರಿಯೆಯಲ್ಲಿ ಈ ವ್ಯಾಜ್ಯಗಳ ಸಾಧ್ಯ ಪರಿಣಾಮಗಳಿಗೆ ಸಂಬಂಧಿಸಿದಂತೆ ಮಹತ್ವಪೂರ್ಣ ತೀರ್ಮಾನಗಳನ್ನು ಒಳಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಈ ವಿಷಯವನ್ನು ಪ್ರಧಾನ ಲೆಕ್ಕಪರಿಶೋಧನಾ ವಿಷಯವಾಗಿ ಪರಿಗಣಿಸಲಾಯಿತು. (ಹಣಕಾಸು ತಃಖ್ತೆಗಳ ಟಿಪ್ಪಣಿ ಸಂಖ್ಯೆ 3 ನೋಡಿ)	ನಮ್ಮ ಲೆಕ್ಕಪರಿಶೋಧನಾ ಪ್ರಕ್ರಿಯೆಗಳು 31, ಮಾರ್ಚ್ 2020ರಂದು ಇದ್ದಂತೆ ಪೂರ್ಣಗೊಂಡ ತೆರಿಗೆ ನಿರ್ಧಾರಣಗಳು ಮತ್ತು ಬಾಕಿ ಬೇಡಿಕೆಗಳ ವಿವರಗಳನ್ನು ಆಡಳಿತ ಮಂಡಳಿಯಿಂದ ಪಡೆದುಕೊಳ್ಳುವುದನ್ನು ಒಳಗೊಳ್ಳುತ್ತದೆ. ವ್ಯಾಜ್ಯ ಪ್ರಕರಣಗಳ ತೆರಿಗೆ ಹವಣಿಕೆಗಳನ್ನು ಲೆಕ್ಕಹಾಕಲು ಬಳಸಲಾಗುವ ಅಂದಾಜುಗಳನ್ನು ಕುರಿತಂತೆ ಆಡಳಿತ ಮಂಡಳಿಯೊಂದಿಗೆ ಚರ್ಚಿಸಲು ನಾವು ನಮ್ಮ ಆಂತರಿಕ ತಜ್ಞರನ್ನು ತೊಡಗಿಸುತ್ತೇವೆ.

ಪ್ರತ್ಯೇಕ ಹಣಕಾಸು ತಃಖ್ತೆಗಳು ಮತ್ತು ಸಂವಾದಿ ಲೆಕ್ಕಪರಿಶೋಧಕರ ವರದಿಯನ್ನು ಉಳಿದು ಇತರ ಮಾಹಿತಿ:

ಹೋಲ್ಡಿಂಗ್ ಕಂಪನಿಯ ನಿರ್ದೇಶಕರ ಮಂಡಳಿಯು ಇತರ ಮಾಹಿತಿಯ ಸಿದ್ಧಪಡಿಸುವಿಕೆಯ ಜವಾಬ್ದಾರಿಯನ್ನು ಹೊಂದಿರುತ್ತದೆ. ವಾರ್ಷಿಕ ವರದಿಯಲ್ಲಿ ಸೇರಿರುವ, ಆದರೆ ಪ್ರತ್ಯೇಕ ಹಣಕಾಸು ತಃಖ್ತೆಗಳು ಹಾಗೂ ಸಂವಾದಿ ಲೆಕ್ಕಪರಿಶೋಧಕರ ವರದಿಯ ಭಾಗವಾಗದ ಮಾಹಿತಿಯು ಇತರ ಮಾಹಿತಿಯಲ್ಲಿ ಸೇರುತ್ತದೆ.

ಈ ವರದಿಯ ಸಹಿಯ ದಿನಾಂಕದವರೆಗೆ ನಮಗೆ ಲಭ್ಯವಿರದಿದ್ದ ಮೇಲೆ ಪ್ರಸ್ತಾಪಿಸಲಾಗಿರುವ ಇತರ ಮಾಹಿತಿಯು ಈ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ದಿನಾಂಕದ ನಂತರ ನಮಗೆ ಲಭ್ಯವಾಗುವ ನಿರೀಕ್ಷೆಯಿದೆ.

ಇತರ ಮಾಹಿತಿಯನ್ನು ನಾವು ಓದಿದ ನಂತರ, ಅಲ್ಲಿ ವಾಸ್ತವಿಕ ಅಪಹೇಳಿಕೆಯು ಇರುವುದೆಂದು ನಮ್ಮ ತೀರ್ಮಾನವಾದಲ್ಲಿ, ಆಡಳಿತದ ಜವಾಬ್ದಾರಿಯನ್ನು ಹೊಂದಿರುವವರಿಗೆ ಆ ವಿಷಯವನ್ನು ನಾವು ತಿಳಿಸಬೇಕಾಗುತ್ತದೆ.

ಪ್ರತ್ಯೇಕ ಹಣಕಾಸು ತಃಖ್ತೆಗಳ ಮೇಲಿನ ನಮ್ಮ ಅಭಿಪ್ರಾಯವು ಇತರ ಮಾಹಿತಿಯನ್ನು ಒಳಗೊಳ್ಳುವುದಿಲ್ಲ ಹಾಗು ಈ ನಿಟ್ಟಿನಲ್ಲಿ ನಾವು ಯಾವುದೇ ಭರವಸೆಯನ್ನಾಗಲೀ ತೀರ್ಮಾನವನ್ನಾಗಲೀ ವ್ಯಕ್ತಪಡಿಸುವುದಿಲ್ಲ.

ಪ್ರತ್ಯೇಕ ಹಣಕಾಸು ತಃಖ್ತೆಗಳ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ನಮ್ಮ ಜವಾಬ್ದಾರಿ ಎಂದರೆ, ಇತರ ಮಾಹಿತಿಯನ್ನು ಓದುವುದು ಮತ್ತು ಹಾಗೆ ಮಾಡುವಾಗ, ಇತರ ಮಾಹಿತಿಯು ಕ್ರೋಢೀಕೃತ ಹಣಕಾಸು ತಃಖ್ತೆಗಳೊಂದಿಗೆ ವಾಸ್ತವಿಕ ನೆಲೆಯಲ್ಲಿ ಹೊಂದುತ್ತಿಲ್ಲವೇ ಅಥವಾ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ನಾವು ಪಡೆದುಕೊಂಡ ಜ್ಞಾನವು ವಾಸ್ತವಿಕವಾಗಿ ಅಪಹೇಳಿಕೆಗಳನ್ನು ಒಳಗೊಂಡಿದೆಯೋ ಎನ್ನುವುದನ್ನು ಪರಿಗಣಿಸುವುದಾಗಿದೆ. ನಾವು ಕೈಗೊಂಡ ಕಾರ್ಯದ ಆಧಾರದ ಮೇಲೆ, ಒಂದು ವೇಳೆ ಈ ಇತರ ಮಾಹಿತಿಯ ವಾಸ್ತವಿಕ ಅಪಹೇಳಿಕೆಗಳು ಇವೆ ಎಂದು ತೀರ್ಮಾನಿಸಿದ್ದೇ ಆದಲ್ಲಿ ನಾವು ಆ ಸಂಗತಿಯನ್ನು ವರದಿಮಾಡಬೇಕಾಗುತ್ತದೆ. ನಾವು ಈ ದಿಸೆಯಲ್ಲಿ ವರದಿಮಾಡುವುದು ಏನೂ ಇರುವುದಿಲ್ಲ.

ಪ್ರತ್ಯೇಕ ಹಣಕಾಸು ತಃಖ್ತೆಗಳಿಗೆ ಸಂಬಂಧಿಸಿದಂತೆ ಆಡಳಿತ ಮಂಡಳಿಯ ಜವಾಬ್ದಾರಿ

ಕಂಪನಿಯ ಹಣಕಾಸು ಸ್ಥಿತಿಗತಿ, ಇತರ ಸಮಗ್ರ ಆದಾಯ, ನಗದು ಹರಿವುಗಳು ಮತ್ತು ಸೇರಿದಂತೆ ಈಕ್ವಿಟಿಯಲ್ಲಿನ ಬದಲಾವಣೆಗಳ ಬಗ್ಗೆ ನೈಜವಾದ ಮತ್ತು ನಿಷ್ಪಕ್ಷಪಾತವಾದ ಚಿತ್ರವನ್ನು ನೀಡುವಂತಹ ಈ ಪ್ರತ್ಯೇಕ ಹಣಕಾಸು ತಃಖ್ತೆಗಳ ಸಿದ್ಧಪಡಿಸುವಿಕೆಗೆ ಸಂಬಂಧಿಸಿದಂತೆ "ಕಾಯ್ದೆ"ಯ ಪರಿಚ್ಛೇದ 134(5)ರಲ್ಲಿ ನಿರ್ದಿಷ್ಟಗೊಳಿಸಿರುವ ಅಂಶಗಳಿಗೆ ಬದ್ಧವಾಗಿರುವಂತೆ, ಕಾಯ್ದೆಯ ಪರಿಚ್ಛೇದ 133ರ ಅಡಿ ನಿರ್ದಿಷ್ಟಗೊಳಿಸಲಾಗಿರುವ ಲೇಖಾ ಪ್ರಮಾಣಗಳಿಗೂ ಸೇರಿ ಮತ್ತು ಕಂಪನಿಗಳ (ಭಾರತೀಯ ಲೇಖಾ ಪ್ರಮಾಣಗಳು) ನಿಯಮಗಳು, 2015ಕ್ಕೆ ಸಂಗತವಾಗುವಂತೆ ಪ್ರತ್ಯೇಕ ಹಣಕಾಸು ತಃಖ್ತೆಗಳನ್ನು ಸಿದ್ಧಪಡಿಸುವುದು ಕಂಪನಿಯ ನಿರ್ದೇಶಕ ಮಂಡಳಿಯ ಜವಾಬ್ದಾರಿಯಾಗಿದೆ.

ಆಸ್ತಿಗಳ ಹಿತರಕ್ಷಣೆಯ ಸಲುವಾಗಿ ಹಾಗೂ ಮೋಸ ಮತ್ತಿತರ ಅಕ್ರಮಗಳನ್ನು ತಡಗಟ್ಟಲು ಮತ್ತು ಪತ್ತೆಮಾಡಲು ಸಾಧ್ಯವಾಗುವಂತೆ ಕಾಯ್ದೆಯ ಉಪಬಂಧಗಳ ಅನುಸಾರ ಪರ್ಯಾಪ್ತ ಲೆಕ್ಕದಾಖಲೆಗಳ ನಿರ್ವಹಣೆ; ಸೂಕ್ತ ಲೇಖಾ ಕಾರ್ಯನೀತಿಗಳ ಆಯ್ಕೆ ಮತ್ತು ಅನ್ವಯ; ಜವಾಬ್ದಾರಿಯುತವೂ ದೂರದೃಷ್ಟಿಯವೂ ಆದ ತೀರ್ಮಾನಗಳು ಮತ್ತು ಅಂದಾಜುಗಳನ್ನು ಮಾಡುವುದು; ನೈಜ ಮತ್ತು ನಿಷ್ಪಕ್ಷಪಾತವಾದ ನೋಟವನ್ನು ಒದಗಿಸುವ ಹಾಗೂ ಮೇಲೆ ಹೇಳಿದಂತೆ ಕಂಪನಿಯ ನಿರ್ದೇಶಕರು ಪ್ರತ್ಯೇಕ ಹಣಕಾಸು ತಃಖ್ತೆಗಳ ಸಿದ್ಧಪಡಿಸುವಿಕೆಯ ಉದ್ದೇಶಕ್ಕೆ ಬಳಸಿಕೊಂಡ ಮೋಸ ಅಥವಾ ತಪ್ಪುಗಳ ಕಾರಣದಿಂದ ಉಂಟಾದ ವಾಸ್ತವಿಕ ಅಪಹೇಳಿಕೆಗಳಿಲ್ಲದ ಇಂಡ್ ಎಎಸ್ ಹಣಕಾಸು ತಃಖ್ತೆಗಳ ಸಿದ್ಧಪಡಿಸುವಿಕೆ ಮತ್ತು ಪ್ರಸ್ತುತಿಗೆ ಸಂಗತವಾಗುವಂತೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಆಂತರಿಕ ನಿಯಂತ್ರಣ ವ್ಯವಸ್ಥೆಯ ವಿನ್ಯಾಸ, ಜಾರಿಗೊಳಿಸುವಿಕೆ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನೂ ಸಹ ಹೊಂದಿರುತ್ತದೆ.

ಪ್ರತ್ಯೇಕ ಹಣಕಾಸು ತಃಖ್ತೆಗಳನ್ನು ಸಿದ್ಧಪಡಿಸುವಾಗ, ಮುಂದುವರೆಯುವ ಸಂಸ್ಥೆಯಾಗಿ ಕಂಪನಿಯ ಸಾಮರ್ಥ್ಯವನ್ನು ಅಂದಾಜು ಮಾಡುವುದು, ಅನ್ವಯವಾಗುವೆಡೆಗಳಲ್ಲಿ, ಮುಂದುವರೆಯುತ್ತಿರುವ ಸಂಸ್ಥೆಗೆ ಸಂಬಂಧಿಸಿದ ವಿಷಯಗಳನ್ನು ಪ್ರಕಟಿಸುವುದು ಹಾಗೂ ಆಡಳಿತ ಮಂಡಳಿಯು ಕಂಪನಿಯನ್ನು ನಿರಸನಗೊಳಿಸಲು, ಅಥವಾ ಕಾರ್ಯಾಚರಣೆಗಳನ್ನು ನಿಲ್ಲಿಸಲು ಉದ್ದೇಶಿಸದೆ ಇದ್ದಲ್ಲಿ ಅಥವಾ ವ್ಯಾವಹಾರಿಕವೂ ನೈಜವೂ ಆದ ಪರ್ಯಾಯವಾವುದೂ ಅದರ ಮುಂದೆ ಇಲ್ಲದಿರುವ ಸಂದರ್ಭ ಉದ್ಭವಿಸದಿದ್ದಲ್ಲಿ ಲೆಕ್ಕಪ್ರಕ್ರಿಯೆಗೆ ಮುಂದುವರೆಯುತ್ತಿರುವ ಸಂಸ್ಥೆಯ ಸ್ಥಿತಿಯನ್ನು ಬಳಸುವುದು ಕಂಪನಿಗಳ ಅನುಕ್ರಮವಾದ ನಿರ್ದೇಶಕ ಮಂಡಳಿಯ ಜವಾಬ್ದಾರಿಯಾಗಿದೆ.

ಕಂಪನಿಯ ಆರ್ಥಿಕ ವರದಿಗಾರಿಕೆಯ ಪ್ರಕ್ರಿಯೆಯೆ ಮೇಲ್ವಿಚಾರಣೆಯೂ ಸಹ ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.

ಪ್ರತ್ಯೇಕ ಇಂಡ್ ಎಎಸ್ ಹಣಕಾಸು ತಃಖ್ತೆಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧಕರ ಜವಾಬ್ದಾರಿ

ಹಣಕಾಸು ತಃಖ್ತೆಗಳು, ಒಟ್ಟಾರೆಯಾಗಿ, ಮೋಸ ಅಥವಾ ದೋಷಗಳಿಂದಾಗಿ ಉದ್ಭವಿಸಬಹುದಾದ ವಾಸ್ತವಿಕ ಅಪಹೇಳಿಕೆಗಳಿಂದ ಮುಕ್ತವಾಗಿದೆ ಎನ್ನುವ ಬಗ್ಗೆ ಸೂಕ್ತವಾದ ಭರವಸೆಯನ್ನು ಪಡೆದುಕೊಳ್ಳುವುದು ಮತ್ತು ನಮ್ಮ ಅಭಿಪ್ರಾಯವನ್ನು ಒಳಗೊಳ್ಳುವ ಲೆಕ್ಕಪರಿಶೋಧಕರ ವರದಿಯನ್ನು ನೀಡುವುದು ನಮ್ಮ ಉದ್ದೇಶವಾಗಿದೆ. ಸೂಕ್ತವಾದ ಭರವಸೆ ಭರವಸೆಯ ಉನ್ನತ ಮಟ್ಟವಾಗಿದ್ದರೂ ಎಸ್ಎ ಗಳಿಗೆ ಅನುಸಾರವಾಗಿ ನಡೆಸಲಾದ ಲೆಕ್ಕಪರಿಶೋಧನೆಯು ವಾಸ್ತವಿಕ ಅಪಹೇಳಿಕೆಯನ್ನು, ಅದು ಇದ್ದಲ್ಲಿ, ಪತ್ತೆಹಚ್ಚುತ್ತದೆ ಎನ್ನುವ ಖಾತರಿಯೇನಿರುವುದಿಲ್ಲ. ಅಪಹೇಳಿಕೆಗಳು ಮೋಸ ಅಥವಾ ದೋಷಗಳಿಂದ ಉದ್ಭವಿಸಬಹುದಾಗಿದ್ದು ಈ ಹಣಕಾಸು

ತಃಖ್ತೆಗಳ ಆಧಾರದ ಮೇಲೆ ಹೇಳುವುದಾದರೆ ಬಳಕೆದಾರರ ಆರ್ಥಿಕ ನಿರ್ಧಾರಗಳನ್ನು ಅವು ವೈಯಕ್ತಿಕವಾಗಿ ಅಥವಾ ಒಟ್ಟಾಗಿ ತಕ್ಕಮಟ್ಟಿಗೆ ಪ್ರಭಾವಿಸಲು ಸಾಧ್ಯವಿದ್ದ ಪಕ್ಷದಲ್ಲಿ ಅವು ಗಣನೀಯವಾಗುತ್ತವೆ. ಎಸ್ಎ ಗಳ ಅನುಸಾರವಾದ ಲೆಕ್ಕಪರಿಶೋಧನೆಯ ಭಾಗವಾಗಿ ನಾವು ಲೆಕ್ಕಪರಿಶೋಧನೆಯ ಉದ್ದಕ್ಕೂ ವೃತ್ತಿಪರವಾಗಿ ತೀರ್ಮಾನಮಾಡುವಿಕೆ ಮತ್ತು ವೃತ್ತಿಪರವಾದ ಸಂದೇಹಾತ್ಮಕ ದೃಷ್ಟಿಯಿಂದ ಮುಂದುವರೆದಿದ್ದೇವೆ. ಜೊತೆಗೆ,

- ಮೋಸ ಅಥವಾ ದೋಷದ ಕಾರಣದಿಂದಾಗಿ ಉದ್ಭವಿಸಿರುವ, ಕ್ರೋಢೀಕೃತ ಹಣಕಾಸು ತಃಖ್ತೆಗಳಲ್ಲಿನ ವಾಸ್ತವಿಕ ಅಪಹೇಳಿಕೆಗಳ ಅಪಾಯಗಳನ್ನು ಗುರುತಿಸಿ ಅಂದಾಜುಮಾಡಿ ಈ ಅಪಾಯಗಳಿಗೆ ಸ್ಪಂದಿಸುವಂತಹ ಲೆಕ್ಕಪರಿಶೋಧನಾ ಪ್ರಕ್ರಿಯೆಗಳನ್ನು ವಿನ್ಯಾಸಗೊಳಿಸಿ ತೊಡಗಿಸುವುದು ಮತ್ತು ನಮ್ಮ ಅಭಿಪ್ರಾಯಗಳಿಗೆ ಆಧಾರವನ್ನು ಒದಗಿಸಲು ಪರ್ಯಾಪ್ತವೂ ಸೂಕ್ತವೂ ಆದ ಲೆಕ್ಕಪರಿಶೋಧನಾ ಸಾಕ್ಷ್ಯಗಳನ್ನು ಪಡೆದುಕೊಳ್ಳುವುದು. ಮೋಸದಿಂದಾಗಿ ಉದ್ಭವಿಸುವ ವಾಸ್ತವಿಕ ಅಪಹೇಳಿಕೆಗಳನ್ನು ಪತ್ತೆಮಾಡದಿರುವಲ್ಲಿನ ಅಪಾಯವು ದೋಷದಿಂದ ಉದ್ಭವಿಸುವ ವಾಸ್ತವಿಕ ಅಪಹೇಳಿಕೆಗಳನ್ನು ಪತ್ತೆಮಾಡದಿರುವಲ್ಲಿನ ಅಪಾಯಕ್ಕಿಂತಲೂ ಹೆಚ್ಚಿನದಾಗಿದೆ, ಏಕೆಂದರೆ, ಮೋಸವು ದುರುದ್ದೇಶದ ಸಾಂಗತ್ಯ, ಖೋಟಾ ಸಹಿ, ಉದ್ದೇಶಪೂರ್ವಕವಾಗಿ ಕೈಬಿಡುವುದು, ತಪ್ಪಾಗಿ ನಿರೂಪಿಸುವುದು ಅಥವಾ ಆಂತರಿಕ ನಿಯಂತ್ರಣವನ್ನು ಮೀರುವುದು – ಇವನ್ನು ಒಳಗೊಳ್ಳಬಹುದಾಗಿದೆ.

- ಸಂದರ್ಭಕ್ಕೆ ಸೂಕ್ತವಾದ ಲೆಕ್ಕಪರಿಶೋಧನಾ ವಿಧಾನಗಳನ್ನು ವಿನ್ಯಾಸಗೊಳಿಸಲು ಲೆಕ್ಕಪರಿಶೋಧನೆಗೆ ಪ್ರಸ್ತುತವಾಗುವಂತೆ ಆಂತರಿಕ ನಿಯಂತ್ರಣ ವಿಧಾನದ ತಿಳುವಳಿಕೆಯನ್ನು ಹೊಂದುವುದು. ಕಾಯ್ದೆಯ ಪರಿಚ್ಛೇದ 143(3)(i)ರ ಅಡಿ, ಹೋಲ್ಡಿಂಗ್ ಕಂಪನಿಯು ಪರ್ಯಾಪ್ತವಾದ ಆಂತರಿಕ ನಿಯಂತ್ರಣ ವಿಧಾನಗಳನ್ನು ಹೊಂದಿದೆಯೇ ಮತ್ತು ಈ ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆಯೇ ಎಂಬ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವ ಜವಾಬ್ದಾರಿಯೂ ನಮ್ಮದಾಗಿದೆ.

- ಆಡಳಿತ ಮಂಡಳಿಯು ಬಳಸಿರುವ ಲೇಖಾ ನೀತಿಗಳ ಸೂಕ್ತತೆ ಹಾಗೂ ಲೇಖಾ ಅಂದಾಜುಗಳ ಮತ್ತು ಸಂಬಂಧಿತ ಪ್ರಕಟಣೆಗಳ ಯುಕ್ತತೆಯನ್ನು ಮೌಲ್ಯಮಾಪನ ಮಾಡುವುದು.

- ಮುಂದುವರೆಯುತ್ತಿರುವ ಸಂಸ್ಥೆ ಆಧಾರದ ಮೇಲೆ ಲೆಕ್ಕಗಳನ್ನು ಸಿದ್ಧಪಡಿಸುವಿಕೆಯ ಆಡಳಿತ ಮಂಡಳಿಯ ನಡೆಯ ಸೂಕ್ತತೆಯನ್ನು ಬಗ್ಗೆ ತೀರ್ಮಾನಮಾಡುವುದು ಮತ್ತು ಪಡೆದುಕೊಳ್ಳಲಾದ ಲೆಕ್ಕಪರಿಶೋಧನಾ ಸಾಕ್ಷ್ಯದ ಆಧಾರದ ಮೇಲೆ ಮುಂದುವರೆಯುವ ಸಂಸ್ಥೆಯಾಗಿ ಮುಂದುವರೆಯುವ ಗುಂಪಿನ ಸಾಮರ್ಥ್ಯದ ಬಗ್ಗೆ ಗಣನೀಯವಾದ ಅನುಮಾನಗಳನ್ನು ಹುಟ್ಟುಹಾಕುವ ಘಟನೆಗಳು ಅಥವಾ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ವಾಸ್ತವಿಕವಾದ ಅನಿಶ್ಚಿತತೆಯು ಇರುವುದೋ ಎಂಬ ಬಗ್ಗೆ ತೀರ್ಮಾನಮಾಡುವುದು. ವಾಸ್ತವಿಕ ಅನಿಶ್ಚಿತತೆ ಇದೆ ಎಂದು ನಾವು ತೀರ್ಮಾನಮಾಡಿದಲ್ಲಿ ಹಣಕಾಸು ತಃಖ್ತೆಗಳಲ್ಲಿನ ಸಂಬಂಧಿತ ಪ್ರಕಟಣೆಗಳಿಗೆ ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ನಾವು ಗಮನವನ್ನು ಸೆಳೆಯಬೇಕಾಗುತ್ತದೆ, ಅಥವಾ ಇಂತಹ ಪ್ರಕಟಣೆಗಳು ಪರ್ಯಾಪ್ತವಾಗಿರದಿದ್ದಲ್ಲಿ ನಾವು ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಿಕೊಳ್ಳಬೇಕಾಗುತ್ತದೆ. ನಮ್ಮ ತೀರ್ಮಾನಗಳು ನಮ್ಮ ಲೆಕ್ಕಪರಿಶೋಧಕರ ವರದಿಯ ದಿನಾಂಕದವರೆಗೆ ನಾವು ಕಲೆಹಾಕಿರುವ ಲೆಕ್ಕಪರಿಶೋಧನಾ ಸಾಕ್ಷ್ಯವನ್ನು ಆಧರಿಸಿರುತ್ತದೆ. ಆದರೆ, ಭವಿಷ್ಯದ ಘಟನೆಗಳು ಅಥವಾ ಸಂಗತಿಗಳು ಗುಂಪು ಮುಂದುವರೆಯು ಸಂಸ್ಥೆಯಾಗಿ ಉಳಿಯದಿರುವುದಕ್ಕೆ ಕಾರಣವಾಗಬಹುದು.

- ಪ್ರಕಟಣೆಗಳೂ ಸೇರಿದಂತೆ, ಹಣಕಾಸು ತಃಖ್ತೆಗಳ ಒಟ್ಟಾರೆ ಪ್ರಸ್ತುತಿ, ರಚನೆ ಮತ್ತು ವಸ್ತುವಿಷಯದ ಮೌಲ್ಯಮಾಪನ ಮಾಡುವುದು ಮತ್ತು ನ್ಯಾಯಬದ್ಧವಾದ ಪ್ರಸ್ತುತಿಯನ್ನು ಸಾಧಿಸುವ ರೀತಿಯಲ್ಲಿ ಹಣಕಾಸು ತಃಖ್ತೆಗಳು ಮೂಲದಲ್ಲಿನ ವ್ಯವಹಾರಗಳು ಮತ್ತು ಆಗುಹೋಗುಗಳನ್ನು ಪ್ರಕಟಿಸುವತ್ತವೆಯೇ ಎಂಬುವುದರತ್ತ ಗಮನಹರಿಸುವುದು.

ನಮ್ಮ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಗುರುತಿಸಲಾಗುವ ಆಂತರಿಕ ನಿಯಂತ್ರಣದಲ್ಲಿನ ಮಹತ್ವಪೂರ್ಣ ಕೊರತೆಗಳೂ ಸೇರಿದಂತೆ, ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಕಾಲ ಹಾಗೂ ಮಹತ್ವಪೂರ್ಣ ಲೆಕ್ಕಪರಿಶೋಧನಾ ಪರಿಶೀಲನೆಗಳನ್ನು ಸಂಸ್ಥೆಯ ಆಡಳಿತದ ಜವಾಬ್ದಾರಿಯನ್ನು ಹೊಂದಿರುವವರಿಗೆ ತಿಳಿಸುತ್ತೇವೆ.

ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಪ್ರಸ್ತುತವಾದ ನೈತಿಕ ಅಗತ್ಯಗಳನ್ನು ಪಾಲಿಸಿರುವ ಬಗ್ಗೆ ಒಂದು ಹೇಳಿಕೆಯನ್ನು ಸಹ ಸಂಸ್ಥೆಯ ಆಡಳಿತದ ಜವಾಬ್ದಾರಿಯನ್ನು ಹೊಂದಿರುವವರಿಗೆ ನಾವು ಒದಗಿಸಿರುತ್ತೇವೆ. ಜೊತೆಗೆ, ನಮ್ಮ ಸ್ವಾತಂತ್ರ್ಯದ ಮೇಲೆ ಪರಿಣಾಮವನ್ನು ತಕ್ಕಮಟ್ಟಿಗೆ ಬೀರಬಹುದಾದ ಎಲ್ಲ ಸಂಬಂಧಗಳು ಮತ್ತು ಇತರ ವಿಷಯಗಳ ಬಗ್ಗೆ ಹಾಗೂ ಅನ್ವಯವಾಗುವೆಡೆಗಳಲ್ಲಿ ಸಂಬಂಧಿತ ಸುರಕ್ಷಾಕ್ರಮಗಳ ಬಗ್ಗೆಯೂ ಅವರಿಗೆ ತಿಳಿಸಿರುತ್ತೇವೆ.

ಸಂಸ್ಥೆಯ ಆಡಳಿತದ ಜವಾಬ್ದಾರಿಯನ್ನು ಹೊಂದಿರುವವರಿಗೆ ನಾವು ತಿಳಿಸಿರುವ ವಿಷಯಗಳ ಪೈಕಿ, ಹಣಕಾಸು ತಃಖ್ತೆಗಳ ಲೆಕ್ಕಪರಿಶೋಧನೆಯಲ್ಲಿನ ಅತ್ಯಂತ ಮಹತ್ವಪೂರ್ಣ ಅಂಶಗಳನ್ನು ನಿರ್ಧರಿಸುತ್ತೇವೆ ಹಾಗೂ ಇವು ಪ್ರಧಾನ ಲೆಕ್ಕಪರಿಶೋಧನಾ ವಿಷಯಗಳಾಗುತ್ತವೆ. ಕಾನೂನು ಅಥವಾ ನಿಬಂಧನೆ ವಿಷಯದ ಸಾರ್ವಜನಿಕ ಪ್ರಕಟಣೆಗೆ ಅವಕಾಶವೀಯದ ಸಂದರ್ಭವನ್ನು ಹೊರತುಪಡಿಸಿ ನಾವು ಈ ವಿಷಯಗಳನ್ನು ನಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸುತ್ತೇವೆ. ಅಥವಾ ತೀರ ಅಪರೂಪದ ಸಂದರ್ಭಗಳಲ್ಲಿ, ಕೆಲವು ವಿಷಯಗಳನ್ನು, ಅವುಗಳನ್ನು ತಿಳಿಸಿದಲ್ಲಿ ಸಾರ್ವಜನಿಕ ಹಿತದ ಲಾಭಗಳಿಗಿಂತಲೂ ವ್ಯತಿರಿಕ್ತವಾದ ಪರಿಣಾಮಗಳೇ ಬಹುತೇಕ ಹೆಚ್ಚಾಗಬಹುದಾದ ಸಂದರ್ಭವಿದ್ದಲ್ಲಿ, ತಿಳಿಸಬಾರದೆಂದು ನಾವು ನಿರ್ಧರಿಸುತ್ತೇವೆ.

ಲೆಕ್ಕಪರಿಶೋಧನಾ ಅಭಿಪ್ರಾಯಗಳಿಗೆ ಆಧಾರ:

ಎ. ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಶನ್ ಲಿಮಿಟೆಡ್‌ನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ನಾವು ಕೆಳಗಿನ ಅಂಶಗಳನ್ನು ಗಮನಿಸಿರುತ್ತೇವೆ:

1. ಗುತ್ತಿಗೆ ವ್ಯಾಜ್ಯ:

ತಿಮ್ಮಪ್ಪನಗುಡಿ ಕಬ್ಬಿಣ ಅದಿರು ಗಣಿಯ 621.59 ಪ್ರದೇಶದ ಪೈಕಿ 36.5 ಹೆಕ್ಟೇರು ಪ್ರದೇಶವನ್ನು ಮೊದಲಿಗೆ ಕಂಪನಿಗೆ ಗುತ್ತಿಗೆ ನೀಡಲಾಗಿತ್ತು ಮತ್ತು ತದನಂತರದಲ್ಲಿ ಇವನ್ನು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಅನುಕ್ರಮವಾಗಿ ಶ್ರೀ ಬಿ. ಕುಮಾರ ಗೌಡ ಮತ್ತು ಶ್ರೀ ಎಚ್ ರಂಗನ್ ಗೌಡ ಅವರಿಗೆ ಗುತ್ತಿಗೆಗೆ ನೀಡಿತು. ಸಿಇಸಿ ವರದಿಯನ್ವಯ ಈ ಪ್ರದೇಶದಲ್ಲಿ 2.5 ಹೆಕ್ಟೇರು ಪ್ರದೇಶಗಳು ಅತಿಕ್ರಮಣವಾಗಿರುವ ಬಗ್ಗೆ ನ್ಯಾಯಾಲಯಗಳಲ್ಲಿ ವ್ಯಾಜ್ಯದಲ್ಲಿವೆ. ಈ ನಿಟ್ಟಿನಲ್ಲಿ ಹೊರಬರುವ ತೀರ್ಪು ಕಂಪನಿಯ ಮೇಲೆ ಆರ್ಥಿಕ ಪರಿಣಾಮವನ್ನು ಬೀರಲಿದೆ.

2. ಅರಣ್ಯ ಅಭಿವೃದ್ಧಿ ತೆರಿಗೆ:

1. ಕಂಪನಿಯು 1–4–2000 ದಿಂದ 26–08–2008ರ ವರೆಗಿನ ಅವಧಿಗೆ ಅರಣ್ಯ ಅಭಿವೃದ್ಧಿ ತೆರಿಗೆಯ ಹಕ್ಕುಸಲ್ಲಿಕೆಗೆ ವಿರುದ್ಧವಾಗಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹಿಂಪಡೆದಿದೆ. ಕರ್ನಾಟಕ ಸರ್ಕಾರದ ನಿರ್ದೇಶನಾನುಸಾರ ಹೊಂದಾಣಿಕೆ ಮಾಡಿಕೊಂಡ ನಂತರ ಕಂಪನಿ ಪಾವತಿಸಬೇಕಿರುವ ಮೊತ್ತ ಕಂಪನಿಯ ಲೆಕ್ಕದಂತೆ ರೂ. 71,16,51,454/– ಆಗಿರುತ್ತದೆ. ಕಂಪನಿಯು 2010–11ರ ಹಣಕಾಸು ವರ್ಷದಲ್ಲಿ ರೂ. 35,00,00,000/– ಮತ್ತು 2013–14ರ ಹಣಕಾಸು ವರ್ಷದಲ್ಲಿ ರೂ. 36,16,51,453/– ಪಾವತಿಸಿದೆ. ಈ ಪೈಕಿ ಹಣಕಾಸು ವರ್ಷ 2011–12ರಲ್ಲಿ ಕಂಪನಿಯು ರೂ. 11,04,19,823/– ಮೊತ್ತವನ್ನು ತೊಡೆದುಹಾಕಿದೆ ಮತ್ತು ಉಳಿಕೆ ರೂ. 60,12,31,631/– ಕ್ಕೆ 2013–14ರಲ್ಲಿ ಸಾಲಚೀಟಿಗಳನ್ನು ಸೃಷ್ಟಿಸಿದೆ. ಈ ಪೈಕಿ ರೂ. 6,94,98,677/– ಮೊತ್ತವನ್ನು ಕಂಪನಿ ಹೊಂದಿರುವ ಜಮಾಶಿಲ್ಕಿನೊಂದಿಗೆ ಹೊಂದಿಸುವ ಮೂಲಕ ವಸೂಲಿಮಾಡಲಾಗಿದೆ ಹಾಗೂ ಉಳಿಕೆ ರೂ. 53,17,32,954/– ಮೊತ್ತವನ್ನು ಸಂಬಂಧಿತ ಪಕ್ಷಗಳು ಗುರುತಿಸಿರುವುದೂ ಇಲ್ಲ, ಕಂಪನಿಯೂ ಇದಕ್ಕೆ ಹವಣಿಕೆ ಮಾಡಿರುವುದಿಲ್ಲ. ಆದರೆ, ಪರಿಷ್ಕೃತ ಲೆಕ್ಕಾಚಾರದ ಪ್ರಕಾರ ಸರ್ಕಾರಕ್ಕೆ ಪಾವತಿಸಬೇಕಿರುವ ನೈಜ ಮೊತ್ತ ರೂ. 6148.87 ಲಕ್ಷವಾಗಿದ್ದು ಪಾವತಿಸಲಾಗಿರುವ ರೂ 967.64 ಲಕ್ಷ ಹೆಚ್ಚುವರಿ ಮೊತ್ತವನ್ನು (7116.57 ಲಕ್ಷ –6148.87 ಲಕ್ಷ) ಸಕಾರದಿಂದ ವಸೂಲಿಮಾಡಬೇಕಿದೆ ಹಾಗೂ ಖರೀದಿದಾರರ ಮೇಲೆ ಸೃಷ್ಟಿಸಲಾದ ರೂ 967.64 ಲಕ್ಷ ಮೊತ್ತದ ಸಾಲಚೀಟಿಗಳನ್ನು ಹೊಂದಾಣಿಕೆಯ ನಂತರ ವ್ಯತಿರಿಕ್ತಗೊಳಿಸಬೇಕಿದೆ. ಈ ಮಟ್ಟಿಗೆ ಸರ್ಕರದಿಂದ ಬರಬೇಕಿರುವುದನ್ನು ಕಡಿಮೆ ತೋರಿಸಲಾಗಿದೆ ಹಾಗೂ ಖರೀದಿದಾರರಿಂದ ಬರಬೇಕಿರುವ ಮೊತ್ತವನ್ನು ಹೆಚ್ಚಿಗೆ ತೋರಿಸಲಾಗಿದೆ.

2. ಕಂಪನಿಯು ಎಫ್‌ಡಿಟಿ ಸಂದಾಯವನ್ನು 26.08.2008ರ ನಂತರ ಘಟಿಸಿದ ಮಾರಾಟಗಳ ಮೇಲೆ ಮೌಲ್ಯಾನುಸಾರವಾಗಿ 12% ಅಥವಾ 6% ದಂತೆ ಮಾಡುತ್ತಿದೆ. ಆದರೆ, ಮೇಲಿನದರ ಜೊತೆಗೆ ಅರಣ್ಯ ಇಲಾಖೆ ಮೌಲ್ಯಾನುಸಾರ ಆಧಾರಿತ ಶುಲ್ಕಕ್ಕೆ ಬದಲಾಗಿ, ಯಾವುದು ಹೆಚ್ಚಿದೆಯೋ ಅದರಂತೆ ಎನ್‌ಎಮ್ ಡಿಸಿ/ಎಮ್‌ಎಮ್‌ಎಲ್/ ಡಿಎಮ್‌ಜಿ (ಐಬಿಎಮ್) ಸೂಚಿತ ದರಗಳ ಪೈಕಿ ಹೆಚ್ಚಿನ ದರದ ಮೇಲೆ 12% ದಂತೆ ಎಫ್‌ಡಿಟಿ ಗಾಗಿ ರೂ. 58,37,89,827/– ಮೊತ್ತದ ಹೆಚ್ಚುವರಿ ಬೇಡಿಕೆಯನ್ನು ಮುಂದಿಟ್ಟಿದೆ. ಈ ಸಂಬಂಧವಾಗಿ ಕಂಪನಿಯು ಲೆಕ್ಕಪತ್ರಗಳಲ್ಲಿ ಯಾವುದೇ ಹವಣಿಕೆ ಮಾಡಿಲ್ಲ ಅಥವಾ ಹಕ್ಕಸಲ್ಲಿಕೆಗೆ ಪ್ರತಿಯಾಗಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಬದಲಿಗೆ ಅರಣ್ಯ ಇಲಾಖೆಯ ಬೇಡಿಕೆಯನ್ನು ಮನ್ನಾ ಮಾಡುವಂತೆ ಕರ್ನಾಟಕ ಸರ್ಕಾರವನ್ನು ಕೋರಿದೆ. ಇಷ್ಟರ

ಮಟ್ಟಿಗೆ ಲಾಭವನ್ನು ರೂ. 58.38 ಕೋಟಿಯಷ್ಟು ಹೆಚ್ಚಿಗೆ ತೋರಿಸಲಾಗಿದೆ ಹಾಗೂ ಬಾಕಿ ಹೊಣೆಗಳನ್ನು ರೂ. 58.38 ಕೋಟಿಯಷ್ಟು ಕಡಿಮೆ ತೋರಿಸಲಾಗಿದೆ.

3. ರಿಟ್ ಅರ್ಜಿ ಸಂ. 863/2009, ದಿನಾಂಕ 28.05.2009ಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದ ಆದೇಶದ ಅನುಸಾರ 2009ರಿಂದ 2015ರ ವರೆಗಿನ ಅವಧಿಗೆ ಎಫ್‌ಡಿಟಿ ಮೇಲಿನ ಬಾಕಿ ಮತ್ತು ಬಡ್ಡಿಯ ಕಡೆಗೆ ಉಪ ಅರಣ್ಯ ಸಂರಕ್ಷಕರಿಂದ ಪತ್ರ ಸಂ. ಎಸ್‌ಟಿಆರ್ /ಎಫ್‌ಡಿಟಿ/ಎಂಎಂಎಲ್/995/2015–16 ಮುಖಾಂತರ ಉಬ್ಬಲಗುಂಡಿ ಕಬ್ಬಿಣದ ಅದಿರು ಗಣಿಗಳಿಗೆ ಸಂಬಂಧಿಸಿದಂತೆ ರೂ. 78,47,614/– ಮೊತ್ತದ ಬೇಡಿಕೆಯನ್ನು ಪಡೆದುಕೊಂಡಿದೆ. ತತ್ಸಂಬಂಧವಾಗಿ ಉಪ ಅರಣ್ಯ ಸಂರಕ್ಷರು ಬಳ್ಳಾರಿ ಇವರು ತಮ್ಮ ಪತ್ರ ಸಂಖ್ಯೆ ಎಂನ್‌ಜಿ.ಸಿಆರ್ 67/92–93 (ಎಂಎಂಎಲ್) ದಿನಾಂಕ 11.03.2020 ರಲ್ಲಿ ಅರಣ್ಯ ತೆರಿಗೆ ಮತ್ತು ಬಡ್ಡಿ ಸೇರಿ ಒಟ್ಟು 319.25 ಲಕ್ಷಗಳನ್ನು ಪಾವತಿಸಲು ಬೇಡಿಕೆ ಪತ್ರ ಸಲ್ಲಿಸಿರುತ್ತಾರೆ ಈ ಸಂಬಂಧವಾಗಿ ಕಂಪನಿಯು ಲೆಕ್ಕಪತ್ರಗಳಲ್ಲಿ ಯಾವುದೇ ಹವಣಿಕೆ ಮಾಡಿಲ್ಲ ಅಥವಾ ಹಕ್ಕಸಲ್ಲಿಕೆಗೆ ಪ್ರತಿಯಾಗಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಇಷ್ಟರ ಮಟ್ಟಿಗೆ ಲಾಭವನ್ನು ಹೆಚ್ಚಿಗೆ ತೋರಿಸಲಾಗಿದೆ ಹಾಗೂ ಬಾಕಿ ಹೊಣೆಗಳನ್ನು ಕಡಿಮೆತೋರಿಸಲಾಗಿದೆ.

4. ರಿಟ್ ಅರ್ಜಿ ಸಂ. 863/2009, ದಿನಾಂಕ 28.05.2009ಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದ ಆದೇಶದ ಅನುಸಾರ 2009ರಿಂದ 2015ರ ವರೆಗಿನ ಅವಧಿಗೆ ಎಫ್‌ಡಿಟಿ ಮೇಲಿನ ಬಾಕಿ ಮತ್ತು ಬಡ್ಡಿಯ ಕಡೆಗೆ ಉಪ ಅರಣ್ಯ ಸಂರಕ್ಷಕರಿಂದ ಪತ್ರ ಸಂ. ಎಸ್‌ಟಿಆರ್/ಎಫ್‌ಡಿಟಿ/ಎಂಎಂಎಲ್/995/2015–16 ಮುಖಾಂತರ ತಿಮ್ಮಪ್ಪನಗುಂಡಿ ಕಬ್ಬಿಣದ ಅದಿರು ಗಣಿಗಳಿಗೆ ಸಂಬಂಧಿಸಿದಂತೆ ರೂ. 56,85,05,357/– ಮೊತ್ತದ ಬೇಡಿಕೆಯನ್ನು ಪಡೆದುಕೊಂಡಿದೆ. ತತ್ಸಂಬಂಧವಾಗಿ ಉಪ ಅರಣ್ಯ ಸಂರಕ್ಷರು ಬಳ್ಳಾರಿ ಇವರು ತಮ್ಮ ಪತ್ರ ಸಂಖ್ಯೆ ಎಂನ್‌ಜಿ.ಸಿಆರ್ 67/92–93 (ಎಂಎಂಎಲ್) ದಿನಾಂಕ 11.03.2020 ರಲ್ಲಿ ಅರಣ್ಯ ತೆರಿಗೆ ಮತ್ತು ಬಡ್ಡಿ ಸೇರಿ ಒಟ್ಟು 10606.14 ಲಕ್ಷಗಳನ್ನು ಪಾವತಿಸಲು ಬೇಡಿಕೆ ಪತ್ರ ಸಲ್ಲಿಸಿರುತ್ತಾರೆ ಈ ಸಂಬಂಧವಾಗಿ ಕಂಪನಿಯು ಲೆಕ್ಕಪತ್ರಗಳಲ್ಲಿ ಯಾವುದೇ ಹವಣಿಕೆ ಮಾಡಿಲ್ಲ ಅಥವಾ ಹಕ್ಕಸಲ್ಲಿಕೆಗೆ ಪ್ರತಿಯಾಗಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಇಷ್ಟರ ಮಟ್ಟಿಗೆ ಲಾಭವನ್ನು ಹೆಚ್ಚಿಗೆ ತೋರಿಸಲಾಗಿದೆ ಹಾಗೂ ಹೊಣೆಗಳನ್ನು ಕಡಿಮೆತೋರಿಸಲಾಗಿದೆ.

5. ಉಪ ಅರಣ್ಯ ಸಂರಕ್ಷರು ಬಳ್ಳಾರಿ ಇವರು ತಮ್ಮ ಪತ್ರ ಸಂಖ್ಯೆ ಎಂನ್‌ಜಿ.ಸಿಆರ್67/92–93 (ಎಂಎಂಎಲ್) ದಿನಾಂಕ 11.03.2020 ರಲ್ಲಿ ಸುಬ್ಬರಾಯನಹಳ್ಳಿ ಕಬ್ಬಿಣದ ಅದಿರು ಗಣಿಗೆ ಸಂಬಂಧಿಸಿದಂತೆ ಅರಣ್ಯ ತೆರಿಗೆ ಮತ್ತು ಬಡ್ಡಿ ಸೇರಿ ಒಟ್ಟು 4240.24 ಲಕ್ಷಗಳನ್ನು ಪಾವತಿಸಲು ಬೇಡಿಕೆ ಪತ್ರ ಸಲ್ಲಿಸಿರುತ್ತಾರೆ ಈ ಸಂಬಂಧವಾಗಿ ಕಂಪನಿಯು ಲೆಕ್ಕಪತ್ರಗಳಲ್ಲಿ ಯಾವುದೇ ಹವಣಿಕೆ ಮಾಡಿಲ್ಲ ಅಥವಾ ಹಕ್ಕಸಲ್ಲಿಕೆಗೆ ಪ್ರತಿಯಾಗಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಇಷ್ಟರ ಮಟ್ಟಿಗೆ ಲಾಭವನ್ನು ಹೆಚ್ಚಿಗೆ ತೋರಿಸಲಾಗಿದೆ ಹಾಗೂ ಹೊಣೆಗಳನ್ನು ಕಡಿಮೆತೋರಿಸಲಾಗಿದೆ.

3. ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ:

ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಸಲುವಾಗಿ ಕಂಪನಿ ರೂ. 421.13 ಲಕ್ಷ ಮೊತ್ತವನ್ನು ವ್ಯಯಿಸಿದೆ ಮತ್ತು ವೆಚ್ಚವನ್ನು ಅನುಭವಿಸಿದ್ದಕ್ಕಾಗಿ ಸಿಎಸ್‌ಆರ್‌ಗಾಗಿ ರೂ. 786.45 ಲಕ್ಷ ಮೊತ್ತವನ್ನು ಮುಂಗಡವಾಗಿ ಪಾವತಿಸಿದೆ; ಆದರೆ, ಕಳೆದ ಮೂರು ವರ್ಷಗಳ ಒಟ್ಟು ಲಾಭದ 2% ದಂತೆ ರೂ. 662.06 ಲಕ್ಷದಷ್ಟು ಮೊತ್ತವನ್ನು ಸಿಎಸ್‌ಆರ್ ಚಟುವಟಿಕೆಗೆ ವ್ಯಯಿಸಬೇಕಿರುತ್ತದೆ.

4. ಇತರ ಚಾಲ್ತಿಯಲ್ಲದ ಆಸ್ತಿಗಳು : ಟಿಪ್ಪಣಿ ಸಂಖ್ಯೆ 05 ರೂ. 57.19 ಕೋಟಿ:

ಈ ಮೊತ್ತದಲ್ಲಿ ವಿಜಯ ಬ್ಯಾಂಕ್, ಬೇಗೂರು–ಇಲ್ಲಿ ಇರಿಸಲಾಗಿದ್ದ ರೂ. 15.00 ಕೋಟಿ ಸೇರಿದ್ದು ಈ ಮೊತ್ತವನ್ನು ಪಕ್ವತೆಯ ನಂತರ ಭರಿಕೆಮಾಡಿರುವುದಿಲ್ಲ. ಮೊತ್ತವನ್ನು ಬ್ಯಾಂಕ್ ಪ್ರಬಂಧಕರು ಅಪಬಳಕೆ ಮಾಡಿಕೊಂಡಿದ್ದು ನ್ಯಾಯಾಲಯದ ಆದೇಶದಂತೆ ಬ್ಯಾಂಕು ಠೇವಣಿ ಇರಿಸಿದ ಮೊತ್ತವನ್ನು ಬಡ್ಡಿಯೊಂದಿಗೆ ಮರುಪಾವತಿಸಬೇಕಿದೆ.

5. **ಗಣಿಗಾರಿಕೆ ಮತ್ತು ಭೂಗರ್ಭಶಾಸ್ತ್ರ ಇಲಾಖೆ:**

ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಲೆಕ್ಕಪರಿಶೋಧನಾ ವರದಿಗಳ ಆಧಾರದ ಮೇಲೆ 2009–10, 2010–11 & 2011–12 ರ ಅವಧಿಗೆ (ಸುಬ್ಬರಾಯನಹಳ್ಳಿ, ತಿಮ್ಮಪ್ಪನಗುಡಿ ಮತ್ತು ಇತರ ಗಣಿಗಳಿಗೆ) ಮಾರ್ಚ್, 2013 ಮತ್ತು ಜುಲೈ, 2013ರ ತಿಂಗಳುಗಳ ವಿವಿಧ ದಿನಾಂಕಗಳಂದು ರೂ. 11,20,44,207/– ಮೊತ್ತದ ಹಕ್ಕುಸಲ್ಲಿಸಿದೆ. ಕಬ್ಬಿಣ ಅದಿರಿನ ಮಾರಾಟದಿಂದ ಬಂದ ರೂ. 11,20,44,207/– ಮೊತ್ತವನ್ನು ಮೇಲ್ವಿಚಾರಣಾ ಸಮಿತಿಯು ವಸೂಲು ಮಾಡಿತು. ಉಪನಿರ್ದೇಶಕರು, ಗಣಿಗಳು ಮತ್ತು ಭೂಗರ್ಭ ಇಲಾಖೆ – ಇವರು ತಮ್ಮ ಪತ್ರ ಸಂಖ್ಯೆ: ಡಿಡಿಎಚ್/ಎಂಎಲ್/ಎಸ್‌ವೈ/ಇ–ಆಕ್ಷನ್/2013–14/6822 ಅನ್ವಯ ತಿಮ್ಮಪ್ಪನಗುಡಿಗೆ ಸಂಬಂಧಿಸಿದ ಕಬ್ಬಿಣ ಅದಿರನ್ನು ಮನ್ನಾಮಾಡಬೇಕೆಂದು ಮೇಲ್ವಿಚಾರಣಾ ಸಮಿತಿಗೆ ಸೂಚಿಸಿತ್ತು. ಆದರೆ ಲೇಖಾ ಕಾರ್ಯನೀತಿಗಳ ಪ್ರಕಾರ ಕಂಪನಿಯು ಮೇಲ್ವಿಚಾರಣಾ ಸಮಿತಿಯಿಂದ ವಸೂಲಾಗಬೇಕಿರುವ ರೂ. 4,48,46,000/– ಮೊತ್ತವನ್ನು ಆದಾಯವೆಂದು ಪರಿಗಣಿಸಿಲ್ಲ. ಅಷ್ಟರ ಮಟ್ಟಿಗೆ ಲಾಭ ಮತ್ತು ಬರಬೇಕಾದವುಗಳನ್ನು ಕಡಿಮೆ ತೋರಿಸಲಾಗಿದೆ.

6. **ಪರಿಸರ ಸಂರಕ್ಷಣ ಶುಲ್ಕ:**

2009–10ರ ವರ್ಷದಲ್ಲಿ ಪಡೆಯಲಾದ ಅರಣ್ಯವಲ್ಲದ ಭೂಮಿಗೆ ಸಂಬಂಧಿಸಿದಂತೆ ಪರಿಸರ ಸಂರಕ್ಷಣಾ ಶುಲ್ಕವಾಗಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಗುತ್ತಿಗೆ ಭೂಮಿಯ ಮೇಲೆ ಪ್ರತಿ ಹೆಕ್ಟೇರಿಗೆ ರೂ. 84,000/– ರಷ್ಟು ಬೇಡಿಕೆ ಇರಿಸಿದೆ. ಒಟ್ಟು ಬೇಡಿಕೆ ರೂ. 44,89,74,204/– ಆಗಿದೆ. ಆದರೆ, ಕಂಪನಿ ಹಣಕಾಸು ವರ್ಷಗಳು 2009–19ರ ಅವಧಿಯಲ್ಲಿ ಕಾರ್ಯಯುಕ್ತ ಗುತ್ತಿಗೆಗಳ ಮೇಲೆ ರೂ. 25,85,50,584/– ರಷ್ಟು ಹವಣಿಕೆ ಒದಗಿಸಿ ಸಂದಾಯಮಾಡಿದೆ. ಮತ್ತು ಉಳಿಕೆ ರೂ. 19,04,23,620/– ರಷ್ಟು ಮೊತ್ತವನ್ನು ಕಾರ್ಯಯುಕ್ತವಲ್ಲದ ಗಣಿಗಳ ಮೇಲೆ ಹವಣಿಕೆ ಮಾಡಿದೆ. ಇದನ್ನು ಇತರ ದೀರ್ಘಾವಧಿ ಹೊಣೆ ಅಡಿ ತೋರಿಸಲಾಗಿದೆ.

7. **ದಾಸ್ತಾನುಗಳ ಮೌಲ್ಯಮಾಪನ:**

ಮೂರು ವರ್ಷಗಳಿಗೂ ಹೆಚ್ಚು ಕಾಲ ಸಂಗ್ರಹದಲ್ಲಿ ಉಳಿದಿರುವ ಮತ್ತು ಪ್ರದರ್ಶನಕ್ಕಿರಿಸಿರುವ ದಾಸ್ತಾನು ಹಾಗೂ ಮಾರ್ಪಡಿಸಲಾದ ಗ್ರಾನೈಟ್ ಸಾಮಗ್ರಿಗಳನ್ನು ದಾಸ್ತಾನಿನ ಮೌಲ್ಯದಲ್ಲಿ ಸೇರಿಸಿರುವುದಿಲ್ಲ. ಇಷ್ಟರ ಮಟ್ಟಿಗೆ ದಾಸ್ತಾನುಗಳನ್ನು ಕಡಿಮೆ ತೋರಿಸಲಾಗಿದೆ.

8. **ಭದ್ರತಾ ಠೇವಣಿ ಖಾತೆ : ರೂ. 930.85 ಲಕ್ಷ**

ಗ್ರಾಹಕರಿಗೆ ಸಂದಾಯವಾಗಬೇಕಿರುವ ಭದ್ರತಾ ಠೇವಣಿಯನ್ನು ಆಡಳಿತ ಮಂಡಳಿ ಸರಿಹೊಂದಿಸಿರುವುದಿಲ್ಲ ಹಾಗೂ ಇದನ್ನು ದೀರ್ಘಕಾಲೀನ ಹೊಣೆಗಳ ಅಡಿ ಪಾವತಿಯಾಗಬೇಕಾದ ಇತರೆ ಅಡಿ ತೋರಿಸಲಾಗಿದೆ. ಗ್ರಾಹಕರಿಂದ ಈ ಬಗ್ಗೆ ಸ್ಥಿರೀಕರಣಗಳನ್ನು ಸಹ ಪಡೆದುಕೊಂಡಿರುವುದಿಲ್ಲ. ಸ್ಥಿರೀಕರಣ/ಹೊಂದಾಣಿಕೆಗಳ ಅನುಪಸ್ಥಿತಿಯಲ್ಲಿ ಇವು ಕಂಪನಿಯ ಆರ್ಥಿಕ ತಖ್ತೆಗಳ ಮೇಲೆ ಬೀರುವ ಪರಿಣಾಮದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.

9. ವ್ಯಾಪಾರಿ ವಸೂಲಾತಿಗಳು/ವ್ಯಾಪಾರಿ ಸಂದಾಯಗಳು ಮುಂತಾದವು:

ಅನುಕ್ರಮವಾಗಿ ಟಿಪ್ಪಣಿ 14 ಮತ್ತು ಟಿಪ್ಪಣಿ 07 ರ ಪ್ರಕಾರ ವ್ಯಾಪಾರಿ ವಸೂಲಾತಿ/ವ್ಯಾಪಾರಿ ಸಂದಾಯದ ಶೀರ್ಷಿಕೆಯಡಿ ಇರುವ ಶಿಲ್ಕುಗಳು ಹೊಂದಾಣಿಕೆ ಮತ್ತು ಸ್ಥಿರೀಕರಣಕ್ಕೆ ಬದ್ಧವಾಗಿವೆ. ಸ್ಥಿರೀಕರಣ/ಹೊಂದಾಣಿಕೆಗಳ ಅನುಪಸ್ಥಿತಿಯಲ್ಲಿ ಇವು ಕಂಪನಿಯ ಆರ್ಥಿಕ ತಖ್ತೆಗಳ ಮೇಲೆ ಬೀರುವ ಪರಿಣಾಮದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.

10. **ಠೇವಣಿಗಳು, ಸಾಲಗಳು ಮತ್ತು ಮುಂಗಡ:**

ಠೇವಣಿಗಳು, ಸಾಲಗಳು ಮತ್ತು ಮುಂಗಡ ಶೀರ್ಷಿಕೆಯ ಅಡಿಯಲ್ಲಿನ ಶಿಲ್ಕುಗಳು ಸ್ಥಿರೀಕರಣ ಮತ್ತು ಹೊಂದಾಣಿಕೆಗೆ ಬದ್ಧವಾಗಿವೆ. ಸ್ಥಿರೀಕರಣ/ಹೊಂದಾಣಿಕೆಗಳ ಅನುಪಸ್ಥಿತಿಯಲ್ಲಿ ಇವು ಕಂಪನಿಯ ಆರ್ಥಿಕ ತಖ್ತೆಗಳ ಮೇಲೆ ಬೀರುವ ಪರಿಣಾಮದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.

11. **ಆಂತರಿಕ ಲೆಕ್ಕಪರಿಶೋಧನೆ ಮತ್ತು ಆಂತರಿಕ ನಿಯಂತ್ರಣ:**

ಕಂಪೆನಿಯು ಗುತ್ತಿಗೆಯಡಿ ಇರಿಸಿಕೊಳ್ಳಲಾದ ಗಣಿಗಳ ಗುರುತಿಸುವಿಕೆಯನ್ನು ರದ್ದುಗೊಳಿಸಲು ವ್ಯಯಿಸಲಾದ ಅಂದಾಜು ವೆಚ್ಚವನ್ನು ಬಂಡವಾಳೀಕರಿಸಿದೆ. ಇದರಲ್ಲಿ ನೆಲೆ ಮರುಸ್ಥಾಪನೆ ವೆಚ್ಚಗಳು, ಅರಣ್ಯೀಕರಣ ಗಣಿಗಳನ್ನು ಮುಚ್ಚುವ ಸಮಯದಲ್ಲಿ ವ್ಯಯಿಸಬೇಕಿರುವ ಹಾಗೂ ಗಣಿಯ ಉಪಯುಕ್ತ ಆಯುಷ್ಯದ ಅವಧಿಗೆ ಭೋಗ್ಯಕ್ಕೆ ಹಾಕುವ/ಸವಕಳಿ ಹಾಕುವ ಮತ್ತಿತರ ವೆಚ್ಚಗಳು ಸೇರುತ್ತವೆ.

ii. ತರುವಾಯದ ವೆಚ್ಚ

ವೆಚ್ಚದೊಂದಿಗೆ ಲಗತ್ತಾದ ಭವಿಷ್ಯದ ಆರ್ಥಿಕ ಲಾಭಗಳು ಕಂಪೆನಿಯ ಒಳಗೆ ಹರಿಯುವುದು ಸಂಭಾವ್ಯವಿದ್ದಲ್ಲಿ ಮಾತ್ರ ತರುವಾಯದ ವೆಚ್ಚವನ್ನು ಬಂಡವಾಳೀಕರಿಸಲಾಗುವುದು.

iii. ಸವಕಳಿ

ಸ್ವತ್ತು, ಸ್ಥಾವರ ಮತ್ತು ಸಲಕರಣೆಯ ಸಾಮಗ್ರಿಗಳ ವೆಚ್ಚದ ಮೇಲೆ ಸವಕಳಿಯನ್ನು ಲೆಕ್ಕಹಾಕಲಾಗುತ್ತದೆ. ಇದರಲ್ಲಿ ನೇರರೇಖೆ ವಿಧಾನವನ್ನು ಬಳಸಿ ಅಂದಾಜು ಉಪಯುಕ್ತ ಆಯುಷ್ಯದ ಉದ್ದಕ್ಕೇ ಲೆಕ್ಕಹಾಕಲಾದ ಉಳಿಕೆಯ ಮೌಲ್ಯವನ್ನು ಕಳೆಯಲಾಗುತ್ತದೆ ಹಾಗೂ ಸವಕಳಿಯನ್ನು ಸಾಧಾರಣವಾಗಿ ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಗುರುತಿಸಲಾಗುತ್ತದೆ.ಸ್ವಂತ ಭೂಮಿಗೆ ಸವಕಳಿಯನ್ನು ವಿಧಿಸಲಾಗುವುದಿಲ್ಲ. ಅಂದಾಜಿನ ಯಾವುದೇ ಬದಲಾವಣೆಯ ಪ್ರಭಾವವನ್ನು ಭವಿಷ್ಯದ ಆಧಾರದ ಮೇಲೆ ಲೆಕ್ಕಹಾಕುತ್ತ ಪ್ರತಿ ವರದಿಯ ಅವಧಿಯ ಕೊನೆಗೆ ಅಂದಾಜು ಉಪಯುಕ್ತ ಆಯುಷ್ಯಗಳು ಮತ್ತು ಉಳಿಕೆ ಮೌಲ್ಯಗಳನ್ನು ಪರಿಶೀಲಿಸಲಾಗುವುದು.

ಅಂದಾಜುಮಾಡಲಾದ ಉಪಯುಕ್ತ ಆಯುಷ್ಯಗಳು ಕೆಳಗಿನಂತಿವೆ:

ಆಸ್ತಿ ವಿಧ	ವಿಧಾನ	ಉಪಯುಕ್ತ ಆಯುಷ್ಯ
ಕಟ್ಟಡ	ನೇರ ರೇಖೆ	30 ವರ್ಷಗಳು
ಗುತ್ತಿಗೆ ಆಸ್ತಿಗಳು	ನೇರ ರೇಖೆ	ಗುತ್ತಿಗೆ ಅವಧಿ/ ಗಣಿಯ ಉಪಯುಕ್ತ ಆಯುಷ್ಯ
ಸ್ಥಾವರ ಮತ್ತು ಯಂತ್ರೋಪಕರಣ	ನೇರ ರೇಖೆ	8/10/15 ವರ್ಷಗಳು
ಕಂಪ್ಯೂಟರ್ ಸಲಕರಣೆ	ನೇರ ರೇಖೆ	3/6 ವರ್ಷಗಳು
ವಾಹನಗಳು	ನೇರ ರೇಖೆ	8 ವರ್ಷಗಳು
ಕಛೇರಿ ಸಲಕರಣೆ	ನೇರ ರೇಖೆ	5 ವರ್ಷಗಳು
ಪೀಠೋಪಕರಣ & ಜೋಡಣೆಗಳು	ನೇರ ರೇಖೆ	5 ವರ್ಷಗಳು

ನಿರ್ಮಾಣ ಮತ್ತು ಅನುಷ್ಠಾನ ಪೂರ್ಣಗೊಂಡು ಆಸ್ತಿಯು ಉದ್ದೇಶಿತ ಬಳಕೆಗೆ ಸಿದ್ಧವಾಗದ ಹೊರತು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯ ಮೇಲೆ ಸವಕಳಿಯನ್ನು ವಿಧಿಸಲಾಗುವುದಿಲ್ಲ.

ಸಿ) ಅಗ್ರಾಹ್ಯ ಆಸ್ತಿಗಳು – ಕಂಪ್ಯೂಟರ್ ತಂತ್ರಾಂಶ

i. ಅಗ್ರಾಹ್ಯ ಆಸ್ತಿಗಳನ್ನು ವೆಚ್ಚದಲ್ಲಿ ದಾಖಲಿಸಿ ಸಂಚಿತ ಭೋಗ್ಯ ವೆಚ್ಚ ಹಾಗೂ ಸಂಚಿತ ನಷ್ಟಗಳನ್ನು, ಅವು ಇದ್ದ ಪಕ್ಷದಲ್ಲಿ, ಕಳೆದ ವೆಚ್ಚದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ.

ತಂತ್ರಾಂಶದ ಭಾಗವಾಗಿ ನೇರವಾಗಿ ಬಂಡವಾಳೀಕರಿಸಲಾಗುವ ನೇರವಾಗಿ ಅಧ್ಯಾರೋಪಿಸಬಹುದಾದ ವೆಚ್ಚಗಳಲ್ಲಿ ಸಿಬ್ಬಂದಿ ವೆಚ್ಚಗಳು ಮತ್ತು ಪ್ರಸ್ತುತ ಮೇಲುವೆಚ್ಚಗಳ ಸೂಕ್ತ ಭಾಗ ಸೇರುತ್ತವೆ.

ಬಂಡವಾಳೀಕರಿಸಿದ ಅಭಿವೃದ್ಧಿ ವೆಚ್ಚಗಳನ್ನು ಅಗ್ರಾಹ್ಯ ಆಸ್ತಿಗಳಾಗಿ ದಾಖಲಿಸಿ ಆಸ್ತಿಯು ಬಳಕೆಗೆ ಲಭ್ಯವಿರುವ ಸಮಯದಿಂದ ಅದನ್ನು ಭೋಗ್ಯವೆಚ್ಚವಾಗಿಸಲಾಗುತ್ತದೆ.

ಯೋಜನೆಯ ತಾಂತ್ರಿಕ ಮತ್ತು ವಾಣಿಜ್ಯಕ ಕಾರ್ಯಸಾಧ್ಯತೆಯನ್ನು ಪ್ರದರ್ಶಿಸದ ಹೊರತು ಮತ್ತು ಭವಿಷ್ಯದ ಆರ್ಥಿಕ ಲಾಭಗಳು ಸಂಭವನೀಯವಲ್ಲದ ಹೊರತು ತಂತ್ರಾಂಶ ಉತ್ಪನ್ನ ಅಭಿವೃದ್ಧಿ ವೆಚ್ಚಗಳನ್ನು ವ್ಯಯವಾದುದೆಂದು ಖರ್ಚುತೋರಿಸಲಾಗುತ್ತದೆ. ಬಂಡವಾಳೀಕರಿಸಬಹುದಾದ ವೆಚ್ಚಗಳಲ್ಲಿ ಸಾಮಗ್ರಿಯ ವೆಚ್ಚ, ನೇರ ಕೂಲಿ, ಉದ್ದೇಶಿತ ಬಳಕೆಗೆ ಆಸ್ತಿಯನ್ನು ಸಿದ್ಧಗೊಳಿಸಲು ಅಧ್ಯಾರೋಪಿಸಬಹುದಾದ ಮೇಲುವೆಚ್ಚಗಳು ಸೇರುತ್ತವೆ.

ii. ತರುವಾಯದ ವೆಚ್ಚ:

ತರುವಾಯದ ವೆಚ್ಚವನ್ನು ನಿರ್ದಿಷ್ಟ ಆಸ್ತಿಯೊಂದು ತನ್ನಲ್ಲಿ ಹೊಂದಿರುವ ಭವಿಷ್ಯದ ಆರ್ಥಿಕ ಲಾಭಗಳನ್ನು ಹೆಚ್ಚಿಸುವಂತಿದ್ದರೆ ಆ ತರುವಾಯದ ವೆಚ್ಚವನ್ನು ಬಂಡವಾಳೀಕರಿಸಲಾಗುತ್ತದೆ. ಇತರ ಎಲ್ಲ ವೆಚ್ಚಗಳನ್ನೂ ಲಾಭ ಮತ್ತು ನಷ್ಟದಲ್ಲಿ ವ್ಯಯವಾದುದೆಂದು ಗುರುತಿಸಲಾಗುತ್ತದೆ.

ಡಿ) ದಾಸ್ತಾನುಗಳು

ದಾಸ್ತಾನುಗಳನ್ನು ವೆಚ್ಚದಲ್ಲಿ ಕಡಿಮೆಯಾದುದರಲ್ಲಿ ಹಾಗೂ ನಿವ್ವಳ ಸಾಕ್ಷಾತ್ಕಾರ ಮೌಲ್ಯದಲ್ಲಿ ಲೆಕ್ಕಹಾಕಲಾಗುತ್ತದೆ. ವೆಚ್ಚದಲ್ಲಿ ನೇರ ಸಾಮಗ್ರಿಗಳು, ಮತ್ತು ಅನ್ವಯವಾಗುವೆಡೆಗಳಲ್ಲಿ ನೇರ ಕೂಲಿ ವೆಚ್ಚ ಮತ್ತು ದಾಸ್ತಾನುಗಳನ್ನು ಚಾಲ್ತಿ ನೆಲೆ ಮತ್ತು ಸ್ಥಿತಿಗೆ ತರುವಲ್ಲಿ ವ್ಯಯಿಸಲಾಗಿರುವ ವೆಚ್ಚಗಳು ಸೇರುತ್ತವೆ. ಅಸ್ತಿತ್ವದ ಸ್ಥಿತಿಯಿಂದ ಪೂರ್ಣಗೊಂಡ ಉತ್ಪನ್ನವಾಗಿ ಪರಿವರ್ತಿಸಲು ತಗುಲುವ ವೆಚ್ಚ ಹಾಗೂ ಮಾರಾಟ ಪ್ರಕ್ರಿಯೆ, ಮಾರುವಿಕೆ ಮತ್ತು ಹಂಚಿಕೆಯ ವೆಚ್ಚಗಳಿಗೆ ಅವಕಾಶ ನೀಡಿದ ನಂತರ ವ್ಯಾಪಾರದ ಸಾಮಾನ್ಯ ನಡೆಯಲ್ಲಿ ದಾಸ್ತಾನುಗಳನ್ನು ಸಾಕ್ಷಾತ್ಕರಿಸಿಕೊಳ್ಳಬಹುದಾದ ಬೆಲೆಯನ್ನು ನಿವ್ವಳ ಸಾಕ್ಷಾತ್ಕಾರ ಮೌಲ್ಯ ಎಂದು ಗುರುತಿಸಲಾಗುತ್ತದೆ. ದಾಸ್ತಾನುಗಳು ಮತ್ತು ಬಿಡಿ ಭಾಗಗಳನ್ನು ವೆಚ್ಚದಲ್ಲಿ ಮೊದಲು ಒಳಗೆ ಮೊದಲು ಹೊರಗೆ (ಫಿಫೋ) ಪ್ರಕಾರ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ.

ಉತ್ಪನ್ನ ವರ್ಗ ಆಧಾರದ ಮೇಲೆ ಬಳಕೆಯ ಚಾರಿತ್ರಿಕ ಅನುಭವವನ್ನು ಆಧರಿಸಿ ನಿಧಾನಗತಿಯಲ್ಲಿ ಸಾಗುವ ಮತ್ತು ಬಳಕೆತಪ್ಪಿದ ಸಾಮಗ್ರಿಗಳನ್ನು ಒಳಗೊಳ್ಳುವಂತೆ ಹವಣಿಕೆಯನ್ನು ಮಾಡಲಾಗುವುದು. ಉತ್ಪನ್ನ ರೇಖಗಳು ಮತ್ತು ಮಾರುಕಟ್ಟೆ ಸ್ಥಿತಿಗತಿಗಳನ್ನು ಪರಿಗಣಿಸಿ ವೈಯಕ್ತಿಕ ವ್ಯಾಪಾರವನ್ನು ಆ ಆಧಾರವು ಒಳಗೊಳ್ಳುತ್ತದೆ.

ಇ) ಬಾಧೆ ತಟ್ಟುವಿಕೆ

i. ಹಣಕಾಸು ಸಾಧನಗಳಿಗೆ ಬಾಧೆತಟ್ಟುವಿಕೆ

ನಿರೀಕ್ಷಿತ ಸಾಲ ನಷ್ಟಗಳಿಗೆ ನಷ್ಟ ಹವಣಿಕೆಗಳನ್ನು ಕಂಪೆನಿಯು ಕೆಳಗಿನವುಗಳ ಮೇಲೆ ಗುರುತಿಸುತ್ತದೆ:

– ಭೋಗ್ಯ ವೆಚ್ಚದಲ್ಲಿ ಲೆಕ್ಕಹಾಕಲಾದ ಹಣಕಾಸು ಆಸ್ತಿಗಳು; ಮತ್ತು
– ಎಫ್‌ವಿಸಿಓಐ – ಸಾಲ ಸಾಧನಗಳಂತೆ ಲೆಕ್ಕಹಾಕಲಾದ ಹಣಕಾಸು ಆಸ್ತಿಗಳು.

ಪ್ರತಿ ವರದಿಯ ದಿನಾಂಕದಂದು, ಹಣಕಾಸು ಆಸ್ತಿಗಳನ್ನು ಭೋಗ್ಯದ ವೆಚ್ಚದಲ್ಲಿ ಗುರುತಿಸಲಾಗಿದೆಯೇ ಮತ್ತು ಎಫ್‌ವಿಸಿಓಐ ನಂತೆ ಸಾಲ ಭದ್ರತೆಗಳು ಸಾಲ–ಬಾಧಿತವೇ ಎಂದು ಕಂಪೆನಿ ಅಂದಾಜುಮಾಡುತ್ತದೆ. ಭವಿಷ್ಯದ ನಗದು ಹರಿವುಗಳ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುವ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಸಂಗತಿಗಳು ಘಟಿಸಿದ್ದರೆ ಅಂತಹ ಹಣಕಾಸು ಆಸ್ತಿಯನ್ನು 'ಸಾಲ–ಬಾಧಿತ' ಎಂದು ಗುರುತಿಸಲಾಗುತ್ತದೆ.

ಕಂಪೆನಿಯು ಆಯುಷ್ಯಾವಧಿಗೆ ನಿರೀಕ್ಷಿತ ಸಾಲ ನಷ್ಟಗಳಿಗೆ ಸಮನಾಗಿ ಹವಣಿಕೆಗಳನ್ನು ಲೆಕ್ಕಹಾಕುತ್ತದೆ, ಆದರೆ ಕೆಳಗಿನವುಗಳಿಗೆ 12 ತಿಂಗಳುಗಳ ನಿರೀಕ್ಷಿತ ಸಾಲ ನಷ್ಟಗಳ ನೆಲೆಯಲ್ಲಿ ಲೆಕ್ಕಹಾಕಲಾಗುತ್ತದೆ:

- ವರದಿಯ ದಿನಾಂಕದಂದು ಕಡಿಮೆ ಸಾಲ ಅಪಾಯವನ್ನು ಹೊಂದಿದೆ ಎಂದು ನಿರ್ಧರಿಸಲಾದ ಸಾಲ ಭದ್ರತೆಗಳು; ಮತ್ತು

– ಪ್ರಾರಂಭಿಕ ಗುರುತಿಸುವಿಕೆಯ ನಂತರ ಗಣನೀಯವಾಗಿ ಸಾಲ ಅಪಾಯವು (ಹಣಕಾಸು ಸಾಧನದ ನಿರೀಕ್ಷಿತ ಆಯುಷ್ಯದ ಅವಧಿಗೆ ಪಾವತಿ ತಪ್ಪುವಿಕೆಯ ಅಪಾಯ) ಹೆಚ್ಚಳ ಕಾಣದ ಇತರ ಸಾಲ ಭದ್ರತೆಗಳು ಮತ್ತು ಬ್ಯಾಂಕ್ ಶಿಲ್ಕುಗಳು.

ವ್ಯಾಪಾರದಲ್ಲಿ ಬರಬೇಕಾದವುಗಳಿಗೆ ನಷ್ಟ ಹವಣಿಕೆಗಳನ್ನು ಯಾವಾಗಲೂ ಜೀವಿತಾವಧಿಗೆ ನಿರೀಕ್ಷಿತ ಸಾಲ ನಷ್ಟಗಳಿಗೆ ಸಮನಾದ ಮೊತ್ತಕ್ಕೆ ಲೆಕ್ಕಹಾಕಲಾಗುತ್ತದೆ.

ಹಣಕಾಸು ಸಾಧನದ ನಿರೀಕ್ಷಿತ ಆಯುಷ್ಯದ ಉದ್ದಕ್ಕೆ ಎಲ್ಲ ಸಾಧ್ಯ ಪಾವತಿ ತಪ್ಪುವಿಕೆ ಘಟನೆಗಳಿಂದ ಉಂಟಾಗುವ ಎಲ್ಲ ನಿರೀಕ್ಷಿತ ಸಾಲ ನಷ್ಟಗಳು ಆಯುಷ್ಯಾವಧಿ ನಿರೀಕ್ಷಿತ ಸಾಲ ನಷ್ಟಗಳಾಗಿವೆ.

12 ತಿಂಗಳ ನಿರೀಕ್ಷಿತ ಸಾಲ ನಷ್ಟಗಳೆಂದರೆ ವರದಿಯ ದಿನಾಂಕದಿಂದ 12 ತಿಂಗಳ ಒಳಗೆ (ಅಥವಾ ಸಾಧನದ ನಿರೀಕ್ಷಿತ ಆಯುಷ್ಯವು 12 ತಿಂಗಳಿಗಿಂತಲೂ ಕಡಿಮೆ ಇದ್ದರೆ ಕಡಿಮೆ ಅವಧಿ) ಸಾಧ್ಯವಿರಬಹುದಾದ ಪಾವತಿ ತಪ್ಪುವ ಸಂದರ್ಭಗಳ ಕಾರಣವಾಗಿ ಘಟಿಸುವ ನಿರೀಕ್ಷಿತ ಸಾಲ–ನಷ್ಟಗಳ ಭಾಗವಾಗಿವೆ.

ಮೇಲಿನ ಎಲ್ಲ ಪ್ರಕರಣಗಳಲ್ಲೂ, ನಿರೀಕ್ಷಿತ ಸಾಲ ನಷ್ಟಗಳನ್ನು ಅಂದಾಜುಮಾಡುವಾಗ ಪರಿಗಣಿಸಲಾಗಿರುವ ಗರಿಷ್ಠ ಅವಧಿಯೆಂದರೆ ಕಂಪೆನಯು ಸಾಲ ಅಪಾಯಕ್ಕೆ ತೆರೆದುಕೊಂಡಿರುವ ಗರಿಷ್ಠ ಗುತ್ತಿಗೆಯ ಅವಧಿಯಾಗಿದೆ.

ಪ್ರಾರಂಭದ ಗುರುತಿಸುವಿಕೆಯ ನಂತರ ಹಣಕಾಸು ಆಸ್ತಿಯ ಸಾಲ ಅಪಾಯವು ಗಣನೀಯವಾಗಿ ಹೆಚ್ಚಿದೆಯೇ ಎನ್ನುವುದನ್ನು ನಿರ್ಧರಿಸುವಾಗ ಮತ್ತು ನಿರೀಕ್ಷಿತ ಸಾಲ ನಷ್ಟಗಳನ್ನು ಅಂದಾಜು ಮಾಡುವಾಗ ಯುಕ್ತವಲ್ಲದ ವೆಚ್ಚ ಅಥವಾ ಪ್ರಯತ್ನವನ್ನು ಒಳಗೊಳ್ಳದೆ ಲಭ್ಯವಿರುವ ಮತ್ತು ಪ್ರಸ್ತುತವಾಗಿರುವ ಸೂಕ್ತವಾದ ಮತ್ತು ಬೆಂಬಲವೀಯುವ ಮಾಹಿತಿಯನ್ನು ಪರಿಗಣಿಸುತ್ತದೆ. ಇದರಲ್ಲಿ ಕಂಪೆನಿಯ ಚಾರಿತ್ರಿಕ ಅನುಭವ ಮತ್ತು ತಿಳುವಳಿಕೆಯ ಸಾಲ ನಿರ್ಧಾರಣವನ್ನು ಆಧರಿಸಿದ ಪರಿಮಾಣಾತ್ಮಕ ಹಾಗೂ ಗುಣಾತ್ಮಕ ಮಾಹಿತಿ ಮತ್ತು ವಿಶ್ಲೇಷಣೆ ಹಾಗೂ ಮುನ್ನೋಟದ ಮಾಹಿತಿ ಸೇರುತ್ತದೆ.

ಹಣಕಾಸು ಆಸ್ತಿಯೊಂದರ ಸಾಲ ಅಪಾಯವು 90 ದಿನಗಳಿಗೂ ಅಧಿಕವಾಗಿ ಬಾಕಿ ಉಳಿದಿದ್ದರೆ ಅದು ಗಣನೀಯವಾಗಿ ಹೆಚ್ಚಳ ಕಂಡಿದೆ ಎಂದು ಕಂಪೆನಿ ತಿಳಿಯುತ್ತದೆ. ಆದರೆ, ಕಂಪೆನಿಯು ಎಲ್ಲ ಬರಬೇಕಾದವುಗಳನ್ನೂ ಯಾವುದೇ ನಷ್ಟವಿಲ್ಲದೇ ಬರುವುದೆಂದು ನಿರೀಕ್ಷಿಸುವ ಕಾರಣ 90 ದಿನಗಳಿಗೂ ಹೆಚ್ಚಿನ ಅವಧಿಗೆ ಬಾಕಿಯಾಗಿ ಉಳಿದಿರುವ ಬರಬೇಕಾದವುಗಳಿಗಾಗಿನ ಯಾವುದೇ ಸಾಲ ನಷ್ಟಗಳಿಗೆ ಕಂಪೆನಿಯು ಹವಣಿಕೆಯನ್ನು ಒದಗಿಸಿರುವುದಿಲ್ಲ.

ii. ಹಣಕಾಸೇತರ ಆಸ್ತಿಗಳಿಗೆ ಬಾಧೆ ತಟ್ಟುವಿಕೆ

ತೊಡೆದುಹಾಕುವಿಕೆ:

ನಿರ್ದಿಷ್ಟ ಅಂತ್ಯದ ಸ್ವತ್ತು, ಸ್ಥಾವರ ಮತ್ತು ಸಲಕರಣೆಗಳು ಹಾಗೂ ಅಗ್ರಾಹ್ಯ ಆಸ್ತಿಗಳನ್ನು ಅವುಗಳ ಮುಂದೊಯ್ಯುವ ಮೊತ್ತದ ವಸೂಲಿ ಸಾಧ್ಯವಿರುವುದಿಲ್ಲ ಎಂಬ ಸೂಚನೆ ಇದ್ದಲ್ಲಿ ವಸೂಲಾತಿಗೆ ಮೌಲ್ಯಮಾಪನ ಮಾಡಲಾಗುತ್ತದೆ. ಇಂತಹ ಯಾವುದೇ ಸಂದರ್ಭ ಉಂಟಾದರೆ, ಇತರ ಆಸ್ತಿಗಳಿಂದ ಬಹುತೇಕ ಸ್ವತಂತ್ರವಾಗಿ ನಗದು ಹರಿವುಗಳನ್ನು ಆಸ್ತಿಯು ಸೃಷ್ಟಿಸದಿದ್ದಲ್ಲಿ, ವಸೂಲಾಗಬೇಕಿರುವ ಮೊತ್ತವನ್ನು (ನ್ಯಾಯಯುತ ಮೌಲ್ಯದಲ್ಲಿ ಹೆಚ್ಚಿನ ಮೌಲ್ಯದಿಂದ ಮಾರಲು ತಗುಲುವ ವೆಚ್ಚ ಮತ್ತು ಬಳಕೆಯಲ್ಲಿನ ಮೌಲ್ಯವನ್ನು ಕಳೆದು) ವೈಯಕ್ತಿಕ ಆಸ್ತಿ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ಇಂತಹ ಪ್ರಕರಣಗಳಲ್ಲಿ, ಆಸ್ತಿಯು ಯಾವ ನಗದು ಉತ್ಪಾದನಾ ಘಟಕಕ್ಕೆ (ಸಿಜಿಯು) ಸೇರಿದೆಯೋ ಆ ಘಟಕಕ್ಕೆ ವಸೂಲಾಗಬೇಕಾದ ಮೊತ್ತವನ್ನು ನಿರ್ಧರಿಸಲಾಗುತ್ತದೆ. ಆಸ್ತಿಯೊಂದರ (ಅಥವಾ ಸಿಜಿಯು ಒಂದರ) ವಸೂಲಾಗಬಹುದಾದ ಮೊತ್ತವು ಅದರ ಒಯ್ಯುವ ಮೊತ್ತಕ್ಕಿಂತಲೂ ಕಡಿಮೆ ಎಂದು ಅಂದಾಜುಮಾಡಿದ್ದರೆ, ಆಸ್ತಿಯ (ಅಥವಾ ಸಿಜಿಯು ಒಂದರ) ಒಯ್ಯುವ ಮೊತ್ತವನ್ನು ಅದರ ವಸೂಲಾಗಬಹುದಾದ ಮೊತ್ತಕ್ಕೆ ತಗ್ಗಿಸಲಾಗುತ್ತದೆ. ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಬಾಧೆಯ ನಷ್ಟವನ್ನು ಗುರುತಿಸಲಾಗುತ್ತದೆ.

ಬಾಧೆಯ ಯಾವುದಾದರೂ ಸೂಚನೆ ಇದೆಯೇ ಎಂದು ನಿರ್ಧರಿಸಲು ಪ್ರತಿ ವರದಿಯ ದಿನಾಂಕದಂದು ದಾಸ್ತಾನುಗಳು ಮತ್ತು ಮುಂದೂಡಲಾದ ತೆರಿಗೆಗಳನ್ನು ಬಿಟ್ಟು ಹಣಕಾಸೇತರ ಆಸ್ತಿಗಳನ್ನು ಪರಿಶೀಲಿಸಲಾಗುವುದು. ಇಂತಹ ಯಾವುದಾದರೂ ಸೂಚನೆ ಇದ್ದಲ್ಲಿ, ಆಸ್ತಿಯ ವಸೂಲಾಗಬಹುದಾದ ಮೊತ್ತವನ್ನು ಅಂದಾಜುಮಾಡಲಾಗುತ್ತದೆ.

ಎಫ್) ಆದಾಯ ಗುರುತಿಸುವಿಕೆ

ಪಾವತಿ ಯಾವಾಗಲೇ ಆಗಿರಲಿ, ಕಂಪೆನಿಗೆ ಆರ್ಥಿಕ ಲಾಭಗಳ ಹರಿವು ಸಂಭಾವ್ಯವಿದ್ದು ಆದಾಯವನ್ನು ವಿಶ್ವಾಸಾರ್ಹವಾಗಿ ಲೆಕ್ಕಹಾಕಲು ಸಾಧ್ಯವಿರುವ ಮಟ್ಟಿಗೆ ಆದಾಯವನ್ನು ಗುರುತಿಸಲಾಗುತ್ತದೆ.

ಕೆಳಗಿನ ಬಾಬ್ತುಗಳ ಮೇಲೆ ಆದಾಯವನ್ನು ನಗದು ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ:

1) ಉತ್ಪಾದನೆಯಲ್ಲಿನ ಕೊರತೆಗಾಗಿ ಗುತ್ತಿಗೆದಾರರಿಂದ ವಸೂಲಾಗಬೇಕಿರುವ ದಂಡ

2) ಅಭಿವೃದ್ಧಿ ಉತ್ತೇಜಕಗಳು

3) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಮೇಲ್ಮಿಚಾರಣಾ ಸಮಿತಿಯ ಮೂಲಕ ಕಬ್ಬಿಣದ ಅದಿರಿನ ಮಾರಾಟ.

4) ಲಾಭಾಂಶ ಆದಾಯ

ಜಿ) ಗುತ್ತಿಗೆಗಳು

ಇಂಡ್ ಎಎಸ್ 116ರ ಪ್ರಕಾರ, ವ್ಯಾಪಾರಿ ಸಂಸ್ಥೆಯೊಂದು, ಖನಿಜಗಳು, ತೈಲ, ಪ್ರಾಕೃತಿಕ ಅನಿಲ ಮತ್ತು ಇತರ ಅನ್ವಯವಾಗದ ಪುನರ್‌ಸೃಷ್ಟಿಯಾಗುವ ಸಂಪನ್ಮೂಲಗಳ ಅನ್ವೇಷಣೆ ಅಥವಾ ಬಳಕೆಯನ್ನು ಹೊರತುಪಡಿಸಿ ಎಲ್ಲ ಬಗೆಯ ಗುತ್ತಿಗೆಗಳಿಗೆ, ಉಪಗುತ್ತಿಗೆಯಲ್ಲಿನ ಆಸ್ತಿಗಳ ಬಳಕೆಯ ಹಕ್ಕುಗಳ ಗುತ್ತಿಗೆಗಳೂ ಸೇರಿ, ಈ ಪ್ರಮಾಣವನ್ನು ಅನ್ವಯಿಸಬೇಕಾಗುತ್ತದೆ. ಇದಕ್ಕನುಗುಣವಾಗಿ ಗಣಿಗಾರಿಕೆ ಗುತ್ತಿಗೆಗೂ ಸಹ ಈ ಪ್ರಮಾಣ ಅನ್ವಯವಾಗುತ್ತದೆ.

ಇಂಡ್ ಎಎಸ್ 116 ಗುತ್ತಿಗೆಗಳ ಗುರುತಿಸುವಿಕೆಗೆ ಒಂದು ನಿಯಂತ್ರಣ ಮಾದರಿಯನ್ನು ಸ್ಥಾಪಿಸುತ್ತದೆ. ಗ್ರಾಹಕರಿಂದ ನಿಯಂತ್ರಿತವಾಗುವ ಗುರುತಿಸಲಾದ ಆಸ್ತಿಯೊಂದರ ಇರುವಿಕೆಯನ್ನು ಆಧರಿಸಿ ಗುತ್ತಿಗೆಗಳು ಮತ್ತು ಸೇವಾ ಗುತ್ತಿಗೆಗಳ ನಡುವೆ ಇದು ಭೇದವನ್ನು ಮಾಡುತ್ತದೆ.

ಕಂಪೆನಿಯು 1 ಏಪ್ರಿಲ್ 2019ರಿಂದ ಜಾರಿಗೆ ಬರುವಂತೆ ಎಲ್ಲೆಲ್ಲಿ ಅನ್ವಯವಾಗುವುದೋ ಅಲ್ಲೆಲ್ಲ ಇಂಡ್ ಎಎಸ್ 116 'ಗುತ್ತಿಗೆಗಳು'–ಈ ಪ್ರಮಾಣವನ್ನು ಅನ್ವಯಿಸಿದೆ. ಇಂಡ್ ಎಎಸ್ 116 ಗುತ್ತಿಗೆ, ಗುತ್ತಿಗೆ ಪಡೆದಿರುವಾತ ಮತ್ತು ಗುತ್ತಿಗೆ ನೀಡುವಾತ ಹಾಗೂ ಹೊಸ ಪ್ರಕಟಣೆಗಳಿಗೆ ಸಂಬಂಧಿಸಿದಂತೆ ನಿರ್ವಚನಗಳ ಹೊಸ ಅಗತ್ಯವನ್ನು ಪರಿಚಯಿಸಿದೆ. ಸಾಧಾರಣವಾಗಿ, ಇಂಡ್ ಎಎಸ್ 116ರ ವ್ಯಾಪ್ತಿಗೆ ಬರುವ ಎಲ್ಲ ಗುತ್ತಿಗೆಗಳನ್ನೂ ಗುತ್ತಿಗೆದಾರರು ಸಂತುಲನ ಪಟ್ಟಿಯಲ್ಲಿ ಸೇರಿಸುವುದು ಮತ್ತು 'ಬಳಕೆಯ ಹಕ್ಕಿನ' ಆಸ್ತಿ ಮತ್ತು ಗುತ್ತಿಗೆಯ ಪ್ರಾರಂಭದಲ್ಲಿ ಸಂಬಂಧಿತ ಗುತ್ತಿಗೆ ಹೊಣೆಯನ್ನು ಗುರುತಿಸುವುದು ಅಗತ್ಯವಾಗಿರುತ್ತದೆ.

ಕಂಪೆನಿಯು ತಾನು ಗುತ್ತಿಗೆಯನ್ನು ಪಡೆದಿರುವ ಸಂದರ್ಭದಲ್ಲಿ ಗುತ್ತಿಗೆ ವ್ಯವಸ್ಥೆಗಳಲ್ಲಿ ಆಸ್ತಿಗಳ ಬಳಕೆಯ ಹಕ್ಕುಗಳನ್ನು ಗುರುತಿಸುತ್ತದೆ. ಗುತ್ತಿಗೆ ವ್ಯವಸ್ಥೆಗಳಲ್ಲಿ ಮೂರನೆಯ ಪಕ್ಷಗಳ ಒಡೆತನದಲ್ಲಿರುವ ಆಸ್ತಿಗಳ ಬಳಕೆಯ ಹಕ್ಕನ್ನು ಗುತ್ತಿಗೆಯನ್ನು ಜಾರಿಗೊಳಿಸುವಾಗ ಬಂಡವಾಳೀಕರಿಸಿ ಸಂತುಲನ ಪಟ್ಟಿಯಲ್ಲಿ ಗುರುತಿಸಲಾಗುತ್ತದೆ. ಗುತ್ತಿಗೆ ನೀಡುವ ಪಕ್ಷದ ಹೊಣೆಯನ್ನು ಗುತ್ತಿಗೆ ಹೊಣೆ ಎಂದು ಗುರುತಿಸಲಾಗುತ್ತದೆ. ಒಯ್ಯಲಾಗುವ ಮೊತ್ತವನ್ನು, ಗುತ್ತಿಗೆ ಹೊಣೆಯ ಮೇಲಿನ ಬಡ್ಡಿಯನ್ನು ಪ್ರತಿಫಲಿಸಲು ಹೆಚ್ಚಿಸಲಾಗುತ್ತದೆ ಮತ್ತು ಮಾಡಲಾಗುವ ಗುತ್ತಿಗೆ ಪಾವತಿಗಳಿಂದಾಗಿ ತಗ್ಗಿಸಲಾಗುತ್ತದೆ.

ರಿಯಾಯಿತಿ ನೀಡಲಾದ ಗುತ್ತಿಗೆ ಹೊಣೆಯನ್ನು ಲೆಕ್ಕಹಾಕಲು ಗುತ್ತಿಗೆ ಪಡೆದಿರುವ ಪಕ್ಷದ ವೃದ್ಧಿದಾಯಕ ಸಾಲ ಪಡೆಯುವ ದರವನ್ನು ಬಳಸಲಾಗುತ್ತದೆ. ಸಮಾನವಾದ ಮಾರುಕಟ್ಟೆಯಲ್ಲ ಸಮಾನವಾದ ಆಸ್ತಿಯನ್ನು ಪಡೆದುಕೊಳ್ಳಲು ಅಗತ್ಯವಾದ ನಿಧಿಗಳನ್ನು ಸಮಾನವಾದ ಅವಧಿಗೆ ಸಮಾನವಾದ ಭದ್ರತೆಯಲ್ಲಿ ಕಂಪೆನಿಯು ಯಾವ ಬಡ್ಡಿ ದರದಲ್ಲಿ ಸಾಲವಾಗಿ ಪಡೆದುಕೊಳ್ಳಲು ಸಾಧ್ಯವಿರುವುದೋ ಅದೇ ದರದಲ್ಲಿ ವೃದ್ಧಿದಾಯಕ ಸಾಲ ಪಡೆಯುವ ದರವನ್ನು ಲೆಕ್ಕಹಾಕಲಾಗುತ್ತದೆ.

ಪ್ರತಿ ಲೆಕ್ಕ ಅವಧಿಯ ಉಳಿದುಕೊಂಡಿರುವ ಶಿಲ್ಕಿನ ಮೇಲೆ ನಿರಂತರ ಕಾಲಕಾಲಿಕ ವ್ಯತ್ಯಾಸದ ದರವನ್ನು ಸೃಷ್ಟಿಸು ದೃಷ್ಟಿಯಿಂದ ಹಣಕಾಸು ಕೂಡಿಸುವಿಕೆ ವೆಚ್ಚವನ್ನು ಆದಾಯ ತಃಖ್ತೆಗೆ ಖರ್ಚುಹಾಕಲಾಗುತ್ತದೆ.

ವ್ಯತ್ಯಾಸಗೊಳ್ಳುವ ಬಾಡಿಗೆಗಳು ಗುತ್ತಿಗೆ ಹೊಣೆ ಮತ್ತು ಆಸ್ತಿಯ ಬಳಕೆಯ ಹಕ್ಕಿನ ಭಾಗವಲ್ಲ. ಈ ಪಾವತಿಗಳನ್ನು ಅವು ವ್ಯಯವಾದಂತೆ ಆದಾಯ ತಃಖ್ತೆಗೆ ಖರ್ಚುಹಾಕಲಾಗುತ್ತದೆ. ಮಾರ್ಪಾಟುಗಳು ಅಥವಾ ಮರುಅಂದಾಜುಗಳು ಘಟಿಸಿದಲ್ಲಿ

ಗುತ್ತಿಗೆ ಹೊಣೆ ಮತ್ತು ಆಸ್ತಿಯ ಬಳಕೆಯ ಹಕ್ಕಿನ ಮರುಲೆಕ್ಕಾಚಾರ ನಡೆಯುತ್ತದೆ. ಆಸ್ತಿಯ ಬಳಕೆಯ ಹಕ್ಕನ್ನು ಆಸ್ತಿಗಳ ಉಪಯುಕ್ತ ಆಯುಷ್ಯ ಅಥವಾ ಗುತ್ತಿಗೆ ಅವಧಿಯಲ್ಲಿ ಕಡಿಮೆ ಅವಧಿಗೆ ಸವಕಳಿ ಹಾಕಲಾಗುತ್ತದೆ.

ಅನ್ವಯವಾಗುವ ಇಂಡ್ ಎಎಸ್ 116 ಕಂಪೆನಿಯ ಆದಾಯ ತಃಖ್ತೆ ಮತ್ತು ಪ್ರತಿ ಷೇರಿನ ಮೇಲೆ ಗಳಿಕೆ, ಅಥವಾ ಕಂಪೆನಿಯ ಒಟ್ಟಾರೆ ನಗದು ಹರಿವುಗಳ ಮೇಲೆ ಯಾವುದೇ ವಾಸ್ತವಿಕ ಪರಿಣಾಮಗಳನ್ನೂ ಹೊಂದಿರುವುದಿಲ್ಲ.

ಎಚ್) ಸಿಬ್ಬಂದಿ ಲಾಭಗಳು

ನಿರ್ವಚಿತ ಕೊಡುಗೆ ಯೋಜನೆಗಳು: ನಿರ್ವಚಿತ ಕೊಡುಗೆ ಯೋಜನೆಯು ಒಂದು ನಿವೃತ್ತಿ ನಂತರದ ಸಿಬ್ಬಂದಿ ಲಾಭ ಯೋಜನೆಯಾಗಿದ್ದು ಇದರಡಿ ಪ್ರತ್ಯೇಕ ಅಸ್ತಿತ್ವವೊಂದಕ್ಕೆ ನಿಶ್ಚಿತ ಕೊಡುಗೆಗಳನ್ನು ಪಾವತಿಸಲಾಗುತ್ತದೆ ಮತ್ತು ಹೆಚ್ಚಿನ ಮೊತ್ತಗಳನ್ನು ಪಾವತಿಸಲು ಯಾವುದೇ ಕಾನೂನಿನ ಅಥವಾ ರಚನಾತ್ಮಕ ಬಾಧ್ಯತೆಗಳು ಇರುವುದಿಲ್ಲ. ಕಂಪೆನಿಯು ಸರ್ಕಾರದ ಆಡಳಿತಕ್ಕೆ ಒಳಪಡುವ ಭವಿಷ್ಯ ನಿಧಿ ಯೋಜನೆ, ಸಿಬ್ಬಂದಿ ರಾಜ್ಯ ವಿಮಾ ಯೋಜನೆ, ಕುಟುಂಬ ಪಿಂಚಣಿ ನಿಧಿಗಳಿಗೆ ಕಂಪೆನಿಯು ನಿಗದಿತ ಮಾಸಿಕ ಪಾವತಿಗಳನ್ನು ಮಾಡುತ್ತದೆ. ರಾಜ್ಯ ಸರ್ಕಾರ ನಿರ್ವಹಿಸುವ ನಿವೃತ್ತಿ ಸವಲತ್ತು ಯೋಜನೆಗಳಿಗೆ ಮಾಡಲಾದ ಪಾವತಿಗಳನ್ನು ನಿರ್ವಚಿತ ಕೊಡುಗೆ ಯೋಜನೆಗಳಿಗೆ ಮಾಡಲಾದ ಪಾವತಿಗಳೆಂದು ಪರಿಗಣಿಸಲಾಗುತ್ತದೆ ಮತ್ತು ಇಲ್ಲಿ ಕಂಪೆನಿಯ ಬಾಧ್ಯತೆಗಳು ನಿರ್ವಚಿತ ಕೊಡುಗೆ ನಿವೃತ್ತಿ ಲಾಭ ಯೋಜನೆಯಲ್ಲಿ ಸೃಷ್ಟಿಯಾಗುವುದಕ್ಕೆ ಸಮಾನವಾಗಿ ಇರುತ್ತವೆ. ನಿರ್ವಚಿತ ಕೊಡುಗೆ ಯೋಜನೆಗಳಿಗೆ ಮಾಡಲಾದ ಕೊಡುಗೆಗಳ ಬಾಧ್ಯತೆಗಳನ್ನು, ಇಂತಹ ಲಾಭಗಳನ್ನು ಪಡೆದುಕೊಳ್ಳಲು ಅರ್ಹವಾದ ಸೇವೆಗಳನ್ನು ಸಿಬ್ಬಂದಿ ಸಲ್ಲಿಸಿರುವಾಗ, ಖರ್ಚು ಎಂದು ಗುರುತಿಸಲಾಗುತ್ತದೆ. ಭವಿಷ್ಯದ ಪಾವತಿಗಳಲ್ಲಿ ನಗದು ಮರುಭರಿಕೆ ಅಥವಾ ಕಡಿತವು ಲಭ್ಯವಾಗುವ ಮಟ್ಟಿಗೆ ಪೂರ್ವಸಂದಾಯಿತ ಕೊಡುಗೆಗಳನ್ನು ಆಸ್ತಿಗಳೆಂದು ಗುರುತಿಸಲಾಗುತ್ತದೆ.

ನಿರ್ವಚಿತ ಲಾಭ ಯೋಜನೆ: ನಿರ್ವಚಿತ ಲಾಭ ಯೋಜನೆಯು ನಿವೃತ್ತಿ ನಂತರದ ಸಿಬ್ಬಂದಿ ಲಾಭ ಯೋಜನೆಯಾಗಿದ್ದು ನಿರ್ವಚಿತ ಕೊಡುಗೆ ಯೋಜನೆಗಿಂತ ಹೊರತಾಗಿದೆ. ನಿರ್ವಚಿತ ಲಾಭ ಯೋಜನೆಗಳಿಗೆ ಲಾಭಗಳನ್ನು ಒದಗಿಸಲು ತಗುಲುವ ವೆಚ್ಚಗಳನ್ನು ಯೋಜಿತ ಘಟಕ ಕ್ರೆಡಿಟ್ ವಿಧಾನವನ್ನು ಬಳಸಿ, ಪ್ರತಿ ಸಂತುಲನ ಪಟ್ಟಿಯ ದಿನಾಂಕದಂದು ಕೈಗೊಳ್ಳುವ ವಿಮಾಗಣಕ ಮೌಲ್ಯಮಾಪನಗಳೊಂದಿಗೆ ನಿರ್ಧರಿಸಲಾಗುತ್ತದೆ. ವಿಮಾಗಣಕ ಲಾಭಗಳು ಮತ್ತು ನಷ್ಟಗಳು, ಆಸ್ತಿ ಮೇಲ್ಮಿತಿಯ ಬದಲಾವಣೆಗಳ ಪರಿಣಾಮಗಳು ಮತ್ತು ಯೋಜನಾ ಆಸ್ತಿಗಳ ಮೇಲಿನ ಉತ್ಪತ್ತಿಗಳನ್ನು (ಬಡ್ಡಿ ಹೊರತುಪಡಿಸಿ) ಒಳಗೊಳ್ಳುವ ಮರುಲೆಕ್ಕಾಚಾರವು ತಕ್ಷಣವೇ ಸಂತುಲನ ಪಟ್ಟಿಯಲ್ಲಿ ಪ್ರತಿಫಲಿತವಾಗುತ್ತದೆ ಹಾಗೂ ಭಾರ ಅಥವಾ ಜಮೆಯನ್ನು ಅದು ಘಟಿಸುವ ಅವಧಿಯಲ್ಲಿ ಇತರ ಸಮಗ್ರ ಆದಾಯದ ಅಡಿ ಗುರುತಿಸಲಾಗುತ್ತದೆ. ಗತ ಸೇವಾ ವೆಚ್ಚವನ್ನು, ನಿಯೋಜಿತ ಮತ್ತು ಅನಿಯೋಜಿತ ಎರಡೂ, ಎ) ಯೋಜನೆಯ ಪರಿಷ್ಕರಣೆ ಅಥವಾ ಕಡಿತಗೊಳಿಸುವಿಕೆ ಘಟಿಸಿದಾಗ; ಮತ್ತು ಬಿ) ಸಂಬಂಧಿತ ಮರುರಚನೆ ವೆಚ್ಚಗಳು ಅಥವಾ ಸಮಾಪ್ತಿಯ ಲಾಭಗಳನು ಗುರುತಿಸಿದಾಗ – ಇವೆರಡರಲ್ಲಿ ಮುಂಚಿತವಾದುದರ ನೆಲೆಯಲ್ಲಿ, ಖರ್ಚು ಎಂದು ಪರಿಗಣಿಅಲಾಗುತ್ತದೆ. ಸಂತುಲನ ಪಟ್ಟಿಯಲ್ಲಿ ಗುರುತಿಸಲಾದ ನಿವೃತ್ತಿ ಲಾಭ ಬಾಧ್ಯತೆಗಳನ್ನು ನಿರ್ವಚಿತ ಲಾಭ ಬಾಧ್ಯತೆಗಳ ಪ್ರಸ್ತುತ ಮೌಲ್ಯದಲ್ಲಿ ಯೋಜನಾ ಆಸ್ತಿಗಳ ನ್ಯಾಯಯುತ ಮೌಲ್ಯವನ್ನು ಕಳೆದ ಮೊತ್ತವನ್ನು ಪ್ರತಿನಿಧಿಸುತ್ತದೆ. ಈ ಲೆಕ್ಕಾಚಾರದಿಂದ ಪ್ರಾಪ್ತವಾಗುವ ಯಾವುದೇ ಆಸ್ತಿಯು ಲಭ್ಯ ಮರುಭರಿಕೆಗಳ ಪ್ರಸ್ತುತ ಮೌಲ್ಯ ಮತ್ತು ಯೋಜನೆಯ ಭವಿಷ್ಯದ ಕೊಡುಗೆಗಳಲ್ಲಿನ ಕಡಿತಗಳಿಗೆ ಸೀಮಿತವಾಗಿರುತ್ತದೆ.

ಪರಿಹಾರಬದ್ಧ ಗೈರುಹಾಜರಿಗಳು : ಸಿಬ್ಬಂದಿಯು ಸಂಬಂಧಿತ ಸೇವೆಗಳನ್ನು ಸಲ್ಲಿಸಿದ ಅವಧಿಯು ಕೊನೆಯಾದ ನಂತರ ಹನ್ನೆರಡು ತಿಂಗಳ ಒಳಗೆ ಘಟಿಸುವುದೆಂದು ನಿರೀಕ್ಷೆ ಇರುವ ಪರಿಹಾರಬದ್ಧ ಗೈರುಹಾಜರಿಗಳನ್ನು ಸಂತುಲನ ಪಟ್ಟಿಯ ದಿನಾಂಕದಂದು ರಿಯಾಯಿತಿರಹಿತ ಹೊಣೆಯಾಗಿ ಗುರುತಿಸಲಾಗುತ್ತದೆ. ಸಿಬ್ಬಂದಿಯು ಸಂಬಂಧಿತ ಸೇವೆಗಳನ್ನು ಸಲ್ಲಿಸಿದ ಅವಧಿಯು ಕೊನೆಯಾದ ನಂತರ ಹನ್ನೆರಡು ತಿಂಗಳ ಒಳಗೆ ಘಟಿಸುವುದೆಂದು ನಿರೀಕ್ಷೆಯಿರದ ಪರಿಹಾರಬದ್ಧ ಗೈರುಹಾಜರಿಗಳನ್ನು ಸಂತುಲನ ಪಟ್ಟಿಯ ದಿನಾಂಕದಂದು ನಿರ್ವಚಿತ ಲಾಭ ಹೊಣೆಯ ಪ್ರಸ್ತುತ ಮೌಲ್ಯದಲ್ಲಿ ವಿಮಾಗಣಕ ನಿರ್ಧಾರಿತ ಹೊಣೆಯಾಗಿ ಗುರುತಿಸಲಾಗುತ್ತದೆ.

i) ಹವಣಿಕೆಗಳು

ವಿಶ್ವಾಸಾರ್ಹವಾಗಿ ಅಂದಾಜು ಮಾಡಬಹುದಾದ ಆರ್ಥಿಕ ಲಾಭವನ್ನು ಒಳಗೊಳ್ಳುವ ಸಂಪನ್ಮೂಲಗಳ ಹೊರಹರಿವನ್ನು ಉಂಟುಮಾಡುವ ನಿರೀಕ್ಷೆಯಿರುವ ನಡೆದುಹೋದ ಘಟನೆಯ ಕಾರಣದಿಂದಾಗಿ ಕಂಪೆನಿಯು ಪ್ರಸ್ತುತ ಹೊಂದಿರುವ

(ಕಾನೂನಿನ ಅಥವಾ ರಚನಾತ್ಮಕ) ಹೊಣೆಯನ್ನು ಹೊಂದಿದ್ದಲ್ಲಿ ಸಂತುಲನ ಪಟ್ಟಿಯಲ್ಲಿ ಹವಣಿಕೆಗಳನ್ನು ಗುರುತಿಸಲಾಗುತ್ತದೆ. ಸಂತುಲನ ಪಟ್ಟಿಯ ದಿನಾಂಕದಂದು ಇದ್ದಂತೆ, ಪ್ರಸ್ತುತ ಹೊಣೆಯನ್ನು ಇತ್ಯರ್ಥಗೊಳಿಸಲು ಅಗತ್ಯವಾದ ವೆಚ್ಚದ ಅತ್ಯುತ್ತಮ ಅಂದಾಜನ್ನು ಪ್ರತಿ ಹವಣಿಕೆ ಆಧರಿಸಿರುತ್ತದೆ. ಹಣದ ಕಾಲ ಮೌಲ್ಯವು ಗಣನೀಯವಾಗಿದ್ದಲ್ಲಿ ಹವಣಿಕೆಯನ್ನು ರಿಯಾಯಿತಿ ಆಧಾರದಲ್ಲಿ ಲೆಕ್ಕಹಾಕಲಾಗುತ್ತದೆ.

ರಚನಾತ್ಮಕ ಹೊಣೆಯು ಅಸ್ತಿತ್ವವೊಂದರ ಕಾರ್ಯದಿಂದ ಕೆಳಗಿನ ಸಂದರ್ಭಗಳಲ್ಲಿ ನಿಷ್ಪನ್ನವಾಗುವ ಹೊಣೆಯಾಗಿದೆ: 1) ಹಿಂದಿನ ಪದ್ಧತಿಗಳು, ಪ್ರಕಟಿತ ನೀತಿಗಳ ಸ್ಥಾಪಿತ ಮಾದರಿ ಅಥವಾ ಗಣನೀಯವಾಗಿ ನಿರ್ದಿಷ್ಟವಾದ ಚಾಲ್ತಿ ತಃಖ್ತೆಯ ಮೂಲಕ ಅಸ್ತಿತ್ವವೊಂದು ಕೆಲವು ಜವಾಬ್ದಾರಿಗಳನ್ನು ತಾನು ಒಪ್ಪಿಕೊಳ್ಳುವುದಾಗಿ ಇತರ ಪಕ್ಷಗಳಿಗೆ ಸೂಚಿಸಿರುವುದು; ಮತ್ತು

2) ಇದರ ಪರಿಣಾಮವಾಗಿ, ಅಸ್ತಿತ್ವವು ಇತರ ಪಕ್ಷಗಳ ದೃಷ್ಟಿಯಲ್ಲಿ ತಾನು ಆ ಜವಾಬ್ದಾರಿಗಳನ್ನು ನಿರ್ವಹಿಸುವುದಾಗಿ ಯುಕ್ತವಾದ ನಿರೀಕ್ಷೆಯನ್ನು ಸೃಷ್ಟಿಸಿರುರುವುದು.

ನೆಲೆ ಪುನರುಜ್ಜೀವನ:

ಕಂಪೆನಿಯ ಪ್ರಕಟಿತ ಕಾರ್ಯನೀತಿಗೆ ಅನುಸಾರವಾಗಿ ಮತ್ತು ಅನ್ವಯವಾಗುವ ಕಾನೂನು ಅಗತ್ಯಗಳಂತೆ ಭೂಮಿಯು ಮಲಿನಗೊಂಡಲ್ಲಿ ಅಂತಹ ಭೂಮಿಯ ಪುನರುಜ್ಜೀವನಕ್ಕೆ ಸಂಬಂಧಿಸಿದಂತೆ ಹವಣಿಕೆಯನ್ನು ಗುರುತಿಸಲಾಗುತ್ತದೆ. ಪುನರುಜ್ಜೀವನ ವೆಚ್ಚದ ಅತ್ಯುತ್ತಮ ಅಂದಾಜಿನ ಪ್ರಸ್ತುತ ಮೌಲ್ಯದಂತೆ ಹವಣಿಕೆಯನ್ನು ಲೆಕ್ಕಹಾಕಲಾಗುವುದು.

ಜೆ) ಆದಾಯ ತೆರಿಗೆಗಳು

ಆದಾಯ ತೆರಿಗೆಗಳಲ್ಲಿ ಚಾಲ್ತಿ ಮತ್ತು ಮುಂದೂಡಲಾದ ತೆರಿಗೆಗಳು ಸೇರುತ್ತವೆ. ವ್ಯಾಪಾರ ಸಂಯೋಜನೆಯೊಂದಕ್ಕೆ ಅಥವಾ ಸ್ವಾಮ್ಯದಲ್ಲಿ ನೇರವಾಗಿ ಗುರುತಿಸಲಾದ ಬಾಬ್ತಿಗೆ ಸಂಬಂಧಿಸುವ ಮಟ್ಟಿಗೆ ಹೊರತುಪಡಿಸಿ ಇದನ್ನು ಲಾಭ ಮತ್ತು ನಷ್ಟದಲ್ಲಿ ಗುರುತಿಸಲಾಗುತ್ತದೆ ಅಥವಾ ಇತರ ಸಮಗ್ರ ಆದಾಯದಲ್ಲಿ ಗುರುತಿಸಲಾಗುತ್ತದೆ.

i. ಚಾಲ್ತಿ ತೆರಿಗೆ

ಪಾವತಿಸಬೇಕಾದ ಚಾಲ್ತಿ ತೆರಿಗೆಯು ವರ್ಷದ ತೆರಿಗೆಬದ್ಧ ಲಾಭವನ್ನು ಆಧರಿಸಿರುತ್ತದೆ. ಚಾಲ್ತಿ ತೆರಿಗೆಯು ವರ್ಷದ ತೆರಿಗೆಬದ್ಧ ಆದಾಯ ಅಥವಾ ನಷ್ಟದ ಮೇಲೆ ಪಾವತಿಸಬೇಕಾದ ಅಥವಾ ವಸೂಲಾಗಬೇಕಾದ ನಿರೀಕ್ಷಿತ ತೆರಿಗೆ ಹಾಗೂ ಹಿಂದಿನ ವರ್ಷಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾದ ಅಥವಾ ವಸೂಲಾಗಬೇಕಾದ ತೆರಿಗೆಯ ಹೊಂದಾಣಿಕೆಯನ್ನು ಒಳಗೊಳ್ಳುತ್ತದೆ. ಚಾಲ್ತಿ ತೆರಿಗೆ ಮೊತ್ತವು ಆದಾಯ ತೆರಿಗೆಗಳಿಗೆ ಸಂಬಂಧಿಸಿದ ಯಾವುದಾದರೂ ಅನಿಶ್ಚಿತತೆಗಳನ್ನು, ಅವು ಇದ್ದ ಪಕ್ಷದಲ್ಲಿ, ಪರಿಗಣಿಸಿದ ನಂತರ ಪಾವತಿಸಬೇಕಿರುವ ಅಥವಾ ವಸೂಲಾಗಬೇಕಿರುವ ತೆರಿಗೆ ಮೊತ್ತದ ಅತ್ಯುತ್ತಮ ಅಂದಾಜನ್ನು ಪ್ರತಿಫಲಿಸುತ್ತದೆ. ಜಾರಿಗೊಳಿಸಲಾದ ಅಥವಾ ವರದಿಯ ದಿನಾಂಕದಂದು ಇದ್ದಂತೆ ಪ್ರತ್ಯೇಕವಾಗಿ ಜಾರಿಗೊಳಿಸಲಾದ ತೆರಿಗೆ ದರಗಳನ್ನು (ಮತ್ತು ತೆರಿಗೆ ಕಾನೂನುಗಳು) ಬಳಸಿ ಇದನ್ನು ಲೆಕ್ಕಹಾಕಲಾಗುತ್ತದೆ. ತೆರಿಗೆಬದ್ಧ ಲಾಭವು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ವರದಿಮಾಡುವ ನಿವ್ವಳ ಲಾಭದಿಂದ ಭಿನ್ನವಾಗಿರುತ್ತದೆ, ಏಕೆಂದರೆ, ಇತರ ವರ್ಷಗಳಲ್ಲಿ ತೆರಿಗಬದ್ಧಗೊಳಿಸುವ ಅಥವಾ ಕಡಿತಗೊಳಿಸಬಹುದಾದ ಆದಾಯ ಮತ್ತು ಖರ್ಚುಗಳ ಬಾಬ್ತುಗಳನ್ನು ಹಾಗೂ ಎಂದಿಗೂ ತೆರಿಗೆಬದ್ಧಗೊಳಿಸಲಾಗದ ಅಥವಾ ಕಡಿತಗೊಳಿಸಲಾಗದ ಬಾಬ್ತುಗಳನ್ನು ಇದು ಹೊರಗಿರಿಸುವ ಕಾರಣದಿಂದಾಗಿ. ಜಾರಿಗೊಳಿಸಲಾದ ಅಥವಾ ವರದಿಯ ಅವಧಿಯ ಕೊನೆಯ ಹೊತ್ತಿಗೆ ಇದ್ದಂತೆ ಪ್ರತ್ಯೇಕವಾಗಿ ಜಾರಿಗೊಳಿಸಲಾದ ತೆರಿಗೆ ದರಗಳು ಮತ್ತು ತೆರಿಗೆ ಕಾನೂನುಗಳನ್ನು ಬಳಸಿ ಕಂಪೆನಿಯ ಚಾಲ್ತಿ ತೆರಿಗೆ ಹೊಣೆಯನ್ನು ಲೆಕ್ಕಹಾಕಲಾಗುತ್ತದೆ.

ಗುರುತಿಸಲಾದ ಮೊತ್ತಗಳನ್ನು ನಿಗದಿಪಡಿಸಲು ಕಾನೂನಿನ ಮೂಲಕ ಜರಿಗೊಳಿಸಬಹುದಾದ ಹಕ್ಕುಗಳಿದ್ದಲ್ಲಿ ಮತ್ತು ನಿವ್ವಳ ಆಧಾರದ ಮೇಲೆ ಅಥವಾ ಸಮಕಾಲಿಕವಾಗಿ ಆಸ್ತಿಯನ್ನು ಸಾಕ್ಷಾತ್ಕರಿಸಿ ಹೊಣೆಯನ್ನು ಇತ್ಯರ್ಥಗೊಳಿಸುವ ಉದ್ದೇಶವಿದ್ದಲ್ಲಿ ಮಾತ್ರವೇ ಚಾಲ್ತಿ ತೆರಿಗೆ ಆಸ್ತಿಗಳು ಮತ್ತು ಚಾಲ್ತಿ ತೆರಿಗೆ ಹೊಣೆಗಳನ್ನು ನಿಗದಿಪಡಿಸಲಾಗುತ್ತದೆ.

ii. ಮುಂದೂಡಲಾದ ತೆರಿಗೆ

ಹಣಕಾಸು ತಃಖ್ತೆಗಳಲ್ಲಿನ ಆಸ್ತಿಗಳು ಮತ್ತು ಹೊಣೆಗಳ ಒಯ್ಯುವ ಮೌಲ್ಯಗಳು ಮತ್ತು ತೆರಿಗೆಬದ್ಧ ಲಾಭದ ಲೆಕ್ಕಾಚಾರದಲ್ಲಿ ಬಳಸಲಾಗುವ ಸಂವಾದಿ ತೆರಿಗೆ ನೆಲೆಗಳ ನಡುವಿನ ವ್ಯತ್ಯಾಸದ ಮೇಲೆ ಪಾವತಿಸಬೇಕೆಂದು ಅಥವಾ ವಸೂಲಾಗಬೇಕೆಂದು

ನಿರೀಕ್ಷಿಸಲಾಗುವ ತೆರಿಗಯೇ ಮುಂದೂಡಲಾದ ತೆರಿಗೆ ಮತ್ತು ಇದನ್ನು ಸಂತುಲನ ಪಟ್ಟಿ ಹೊಣೆ ವಿಧಾನವನ್ನು ಬಳಸಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. ಮುಂದೂಡಲಾದ ತೆರಿಗೆ ಹೊಣೆಗಳನ್ನು ಸಾಧಾರಣವಾಗಿ ಎಲ್ಲ ತೆರಿಗೆಬದ್ಧ ತಾತ್ಕಾಲಿಕ ವ್ಯತ್ಯಾಸಗಳಿಗೆ ಗುರುತಿಸಲಾಗುತ್ತದೆ. ಇದಕ್ಕೆ ಪ್ರತಿಯಾಗಿ, ತಾತ್ಕಾಲಿಕ ವ್ಯತ್ಯಾಸಗಳನ್ನು ಯಾವ ತೆರಿಗೆಬದ್ಧ ಲಾಭಗಳಿಗೆ ಪ್ರತಿಯಾಗಿ ಬಳಸಿಕೊಳ್ಳಬಹುದೋ ಅಂತಹ ಭವಿಷ್ಯದ ತೆರಿಗೆಬದ್ಧ ಲಾಭಗಳು ಸಂಭವನೀಯ ಎನುವ ಮಟ್ಟಿಗೆ ಮಾತ್ರವೇ ಮುಂದೂಡಲಾದ ತೆರಿಗೆ ಹೊಣೆಗಳನ್ನು ಗುರುತಿಸಲಾಗುತ್ತದೆ.

ಮುಂದೂಡಲಾದ ತೆರಿಗೆ ಆಸ್ತಿಗಳ ಒಯ್ಯುವ ಮೌಲ್ಯವನ್ನು ಪ್ರತಿ ವರದಿಯ ಅವಧಿಯ ಕೊನೆಗೆ ಪರಿಶೀಲಿಸಲಾಗುವುದು ಮತ್ತು ಇಡೀ ಆಸ್ತಿ ಅಥವಾ ಆಸ್ತಿಯ ಭಾಗ ವಸೂಲಾಗಲು ಅವಕಾಶವೀಯುವ ಪರ್ಯಾಪ್ತವಾದ ತೆರಿಗೆಬದ್ಧ ಲಾಭವು ಲಭ್ಯವಿರುವ ಮಟ್ಟಿಗೆ ಅದನ್ನು ತಗ್ಗಿಸಲಾಗುತ್ತದೆ.

ಜಾರಿಗೊಳಿಸಲಾದ ಅಥವಾ ವರದಿಯ ಅವಧಿಯ ಕೊನೆಯ ಹೊತ್ತಿಗೆ ಇದ್ದಂತೆ ಪ್ರತ್ಯೇಕವಾಗಿ ಜಾರಿಗೊಳಿಸಲಾದ ತೆರಿಗೆ ದರಗಳು ಮತ್ತು ತೆರಿಗೆ ಕಾನೂನುಗಳನ್ನು ಆಧರಿಸಿ, ಹೊಣೆಯು ಇತ್ಯರ್ಥವಾದಾಗ ಅಥವಾ ಆಸ್ತಿಯ ಸಾಕ್ಷಾತ್ಕಾರವಾದಾಗಿನ ಅವಧಿಗೆ ಅನ್ವಯವಾಗುವುದೆಂದು ನಿರೀಕ್ಷಿಸಲಾಗುವ ತೆರಿಗೆ ದರಗಳಲ್ಲಿ ಮುಂದೂಡಲಾದ ತೆರಿಗೆಗಳನ್ನು ಲೆಕ್ಕಹಾಕಲಾಗುತ್ತದೆ. ವರದಿಯ ಅವಧಿಯ ಕೊನೆಯ ಹೊತ್ತಿಗೆ, ಕಂಪೆನಿಯು ತನ್ನ ಆಸ್ತಿಗಳು ಮತ್ತು ಹೊನೆಗಳ ಒಯ್ಯುವ ಮೌಲ್ಯವನ್ನು ಇತ್ಯರ್ಥಗೊಳಿಸಲು ನಿರೀಕ್ಷಿಸುವ ವಿಧಾನವು ಸೃಷ್ಟಿಸುವ ತೆರಿಗೆ ಪರಿಣಾಮಗಳನ್ನು ಮುಂದೂಡಲಾದ ತೆರಿಗೆ ಹೊಣೆಗಳು ಮತ್ತು ಆಸ್ತಿಗಳ ಲೆಕ್ಕಾಚಾರವು ಪ್ರತಿಫಲಿಸುತ್ತದೆ.

ಅದೇ ತೆರಿಗೆ ಪ್ರಾಧಿಕಾರವು ವಿಧಿಸುವ ತೆರಿಗೆಗಳಿಗೆ ಸಂಬಂಧಿಸುವ ಮತ್ತು ಸದರಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಚಾಲ್ತಿ ತೆರಿಗೆ ಆಸ್ತಿಗಳು ಮತ್ತು ಹೊಣೆಗಳನ್ನು ನಿಗದಿಪಡಿಸುವ ಕಾನೂನಾತ್ಮಕ ಹಕ್ಕುಗಳು ಇರುವ ಮಟ್ಟಿಗೆ ಮುಂದೂಡಲಾದ ತೆರಿಗೆ ಆಸ್ತಿಗಳು ಮತ್ತು ಹೊಣೆಗಳನ್ನು ನಿಗದಿಪಡಿಸಲಾಗುತ್ತದೆ.

ಇತರ ಸಮಗ್ರ ಆದಾಯದಲ್ಲಿ ಅಥವಾ ನೇರವಾಗಿ ಈಕ್ವಿಟಿಯಲ್ಲಿ ಜಮಾ ಅಥವಾ ಖರ್ಚುಹಾಕಲಾದ ಬಾಬ್ತುಗಳಿಗೆ ಸಂಬಂಧಿರುವುದನ್ನು ಹೊರತುಪಡಿಸಿ ಚಾಲ್ತಿ ಮತ್ತು ಮುಂದೂಡಲಾದ ತೆರಿಗೆಯನ್ನು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಖರ್ಚುಗಳು ಅಥವಾ ಆದಾಯವಾಗಿ ಗುರುತಿಸಲಾಗುತ್ತದೆ. ಇಲ್ಲ ಹೇಳಲಾದ ಸಂದರ್ಭದಲ್ಲಿ ತೆರಿಗೆಯನ್ನು ಇತರ ಸಮಗ್ರ ಆದಾಯದಲ್ಲಿಯೂ ಅಥವಾ ನೇರವಾಗಿ ಈಕ್ವಿಟಿಯಲ್ಲಿಯೂ ಗುರುತಿಸಲಾಗುತ್ತದೆ.

ಮುಂದೂಡಲಾದ ತೆರಿಗೆಯಲ್ಲಿ ಭಾರತದಲ್ಲಿನ ತೆರಿಗೆ ನಿಯಮಗಳಿಗೆ ಅನುಸಾರವಾಗಿ ಪಾವತಿಸಲಾಗುವ ಕನಿಷ್ಠ ಪರ್ಯಾಯ ತೆರಿಗೆ (ಎಂಎಟಿ) ಯನ್ನು ಒಳಗೊಳ್ಳುತ್ತದೆ. ಇದು ಭವಿಷ್ಯದ ಆದಾಯ ತೆರಿಗೆ ಹೊಣೆಗಳಿಗೆ ಪ್ರತಿಯಾಗಿ ನಿಗದಿಪಡಿಸಬಹುದಾದ ಲಭ್ಯತೆಗಳ ರೂಪದಲ್ಲಿ ಭವಿಷ್ಯದ ಆರ್ಥಿಕ ಲಾಭಗಳನ್ನು ನೀಡುವ ನಿರೀಕ್ಷೆ ಇದೆ. ಆಸ್ತಿಗಳನ್ನು ವಿಶ್ವಾಸಾರ್ಹವಾಗಿ ಲೆಕ್ಕಹಾಕಲು ಸಾಧ್ಯವಿರುವಾಗ ಮತ್ತು ಆಸ್ತಿಯೊಂದಿಗೆ ಸೇರಿರುವ ಭವಿಷ್ಯದ ಆರ್ಥಿಕ ಲಾಭವು ಸಾಕ್ಷಾತ್ಕಾರವಾಗುವುದು ಸಂಭವವಿದ್ದಾಗ ಮ್ಯಾಟ್ ಅನ್ನು ಸಂತುಲನ ಪಟ್ಟಿಯಲ್ಲಿ ಮುಂದೂಡಲಾದ ತೆರಿಗೆ ಹೊಣೆಯಾಗಿ ಗುರುತಿಸಲಾಗುತ್ತದೆ.

iii. ಲಾಭಾಂಶ ಹಂಚಿಕೆ ತೆರಿಗೆ

ಲಾಭಾಂಶಗಳ ಮೇಲೆ ಪಾವತಿಸಲಾಗುವ ಲಾಭಾಂಶ ಹಂಚಿಕೆ ತೆರಿಗೆಯನ್ನು ಆದಾಯ ತೆರಿಗೆ ಪರಿಣಾಮವನ್ನು ಸೃಷ್ಟಿಸುವ ವ್ಯವಹಾರದ ಪ್ರಸ್ತುತಿಗೆ ನಿಯತವಾಗಿ ಗುರುತಿಸಲಾಗುತ್ತದೆ. ಲಾಭಾಂಶ ಹಂಚಿಕೆ ತೆರಿಗೆಯನ್ನು ಈಕ್ವಿಟಿಯಲ್ಲಿ ಗುರುತಿಸಲಾಗುತ್ತದೆ.

ಕೆ) ಖನಿಜ ಸಂಪನ್ಮೂಲಗಳ ಅನ್ವೇಷಣೆ ಮತ್ತು ಮೌಲ್ಯಮಾಪನ

ನಿರ್ದಿಷ್ಟ ಖನಿಜ ಸಂಪನ್ಮೂಲಗಳ ಅನವೇಷಣೆಗೆ ಸಂಬಂಧಿಸಿದ ವೆಚ್ಚಗಳನ್ನು ಅನ್ವೇಷಣೆ ಮತ್ತು ಮೌಲ್ಯಮಾಪನ ಆಸ್ತಿಗಳಾಗಿ ಗುರುತಿಸಲಾಗುತ್ತದೆ. ಅನ್ವೇಷಣೆ ಮತ್ತು ಮೌಲ್ಯಮಾಪನ ಆಸ್ತಿಗಳ ವೆಚ್ಚವು ಕೆಳಗಿನವನ್ನು ಒಳಗೊಳ್ಳುತ್ತವೆ:

1. ಸ್ವಾಧೀನಕ್ಕೆ ನೇರವಾಗಿ ಸಂಬಂಧಿಸಿದ ವೆಚ್ಚವೂ ಸೇರಿ ಖನಿಜ ಸಂಪತ್ತು ಮತ್ತು ಸಂಪನ್ಮೂಲಗಳ ಅನ್ವೇಷಣೆ ಮತ್ತು ಮೌಲ್ಯಮಾಪನದ ಹಕ್ಕುಗಳನ್ನು ಪಡೆದುಕೊಳ್ಳುವುದು.

2. ಅಸ್ತಿತ್ವದಲ್ಲಿನ ಅನ್ವೇಷಣಾ ದತ್ತಾಂಶದ ಸಂಶೋಧನೆ, ವಿಶ್ಲೇಷಣೆ.

3. ಭೌಗೋಳಿಕ ಅಧ್ಯಯನಗಳು, ಅನ್ವೇಷಣಾ ಕೊರೆತ ಮತ್ತು ಮಾದರಿ ಪರೀಕ್ಷೆ ಮತ್ತು ಪರಿಶೀಲನೆ, ಹೊರತೆಗೆದವುಗಳನ್ನು ವಿವಿಧ ಪ್ರಕ್ರಿಯೆಗೆ ಒಳಪಡಿಸುವುದು ಮುಂತಾದವುಗಳನ್ನು ನಡೆಸುವುದು.

4. ಪೂರ್ವ–ಕಾರ್ಯಸಾಧ್ಯತೆ ಮತ್ತು ಕಾರ್ಯಸಾಧ್ಯತೆ ಅಧ್ಯಯನಗಳನ್ನು ನಡೆಸುವುದು.

5. ಖನಿಜ ಸಂಪನ್ಮೂಲವೊಂದನ್ನು ಹೊರತೆಗೆಯುವ ತಾಂತ್ರಿಕ ಕಾರ್ಯಸಾಧ್ಯತೆ ಮತ್ತು ಇತರ ಕಾರ್ಯಸಾಧ್ಯತೆಯ ಮೌಲ್ಯಮಾಪನಕ್ಕೆ ಸಂಬಂಧಿಸಿದ ಚಟುವಟಿಕೆಗಳು.

ಆಡಳಿತಾತ್ಮಕ ಮತ್ತು ಇತರ ಮೇಲುವೆಚ್ಚಗಳನ್ನು ಅವು ನೇರವಾಗಿ ಅನ್ವೇಷಣಾ ಮತ್ತು ಮೌಲ್ಯಮಾಪನ ಯೋಜನೆಗೆ ಸಂಬಂಧಿಸಿದ್ದರೆ ಅನ್ವೇಷಣಾ ಮತ್ತು ಮೌಲ್ಯಮಾಪನಾ ಆಸ್ತಿಗಳಿಗೆ ಖರ್ಚುಹಾಕಲಾಗುವುದು.

ಯೋಜನೆಯು ಕಾರ್ಯಸಾಧ್ಯವಲ್ಲ ಎಂದು ನಿರೂಪಿತವಾದರೆ, ಯೋಜನೆಗೆ ಸಂಬಂಧಿಸಿದ ಎಲ್ಲ ರದ್ದುಪಡಿಸಲಾಗದ ಅನ್ವೇಷಣಾ ಮತ್ತು ಮೌಲ್ಯಮಾಪನ ವೆಚ್ಚಗಳು ಮತ್ತು ಯಾವುದೇ ಬಾಧೆ ಹವಣಿಕೆಗಳ ನಿವ್ವಳವನ್ನು ಲಾಭ ಮತ್ತು ನಷ್ಟದ ತಃಖ್ತೆಗೆ ತೊಡೆದುಹಾಕಲಾಗುವುದು.

ಕಂಪೆನಿಯು ತನ್ನ ಅನ್ವೇಷಣಾ ಮತ್ತು ಮೌಲ್ಯಮಾಪನ ಆಸ್ತಿಗಳನ್ನು ವೆಚ್ಚದಲ್ಲಿ ಲೆಕ್ಕಹಾಕುತ್ತದೆ ಮತ್ತು ಸ್ವಾಧೀನಪಡಿಸಿಕೊಳ್ಳಲಾದ ಆಸ್ತಿಗಳ ಸ್ವರೂಪಕ್ಕೆ ಅನುಗುಣವಾಗಿ ಅವನ್ನು ಸ್ವತ್ತು, ಸ್ಥಾವರ ಮತ್ತು ಸಲಕರಣೆಯಾಗಿ ಅಥವಾ ಅಗ್ರಾಹ್ಯ ಆಸ್ತಿಗಳಾಗಿ ವರ್ಗೀಕರಿಸಿ ಸದರಿ ವರ್ಗೀಕರಣವನ್ನು ನಿಯತವಾಗಿ ಅನ್ವಯಿಸುತ್ತದೆ. ಗ್ರಾಹ್ಯ ಆಸ್ತಿಯನ್ನು ಅಗ್ರಾಹ್ಯ ಆಸ್ತಿಯನ್ನಾಗಿ ಬೆಳೆಸುವಲ್ಲಿ ಬಳಸುವ ಮಟ್ಟಿಗೆ, ಬಳಕೆಯನ್ನು ಪ್ರಕಟಿಸುವ ಮೊತ್ತವನ್ನು ಆ ಅಗ್ರಾಹ್ಯ ಆಸ್ತಿಯ ವೆಚ್ಚದ ಭಾಗವಾಗಿ ಬಂಡವಾಳೀಕರಿಸಲಾಗುತ್ತದೆ.

ಆಸ್ತಿಯು ಬಳಕೆಗೆ ಲಭ್ಯವಿರದ ಕಾರಣ ಅದಕ್ಕೆ ಸವಕಳಿಯನ್ನು ವಿಧಿಸಲಾಗುವುದಿಲ್ಲ. ಎಲ್ಲ ಅನ್ವೇಷಣಾ ಮತ್ತು ಮೌಲ್ಯಮಾಪನ ವೆಚ್ಚಗಳನ್ನು ಬಾಧೆಯ ಸೂಚನೆಗಳಿಗಾಗಿ ಮೇಲ್ವಿಚಾರಣೆಗೆ ಒಳಪಡಿಸಲಾಗುತ್ತದೆ. ಖನಿಜ ಸಂಪನ್ಮೂಲವನ್ನು ಹೊರತೆಗೆಯುವ ತಾಂತ್ರಿಕ ಮತ್ತು ಇತರ ನೆಲೆಯ ಕಾರ್ಯಸಾಧ್ಯತೆಯನ್ನು ಪ್ರಕಟಿಸಲು ಸಾಧ್ಯವಿದ್ದು ಸಂಪನ್ಮೂಲ ರಾಶಿಯ ಅಭಿವೃದ್ಧಿಯನ್ನು ಆಡಳಿತ ಮಂಡಳಿಯು ಅಂಗೀಕರಿಸಿದಾಗ ಅನ್ವೇಷಣಾ ಮತ್ತು ಮೌಲ್ಯಮಾಪನ ಆಸ್ತಿಯೊಂದನ್ನು ಹಾಗೆಂದು ವರ್ಗೀಕರಿಸಲಾಗುವುದಿಲ್ಲ. ಇಂತಹ ಅನ್ವೇಷಣಾ ಮತ್ತು ಮೌಲ್ಯಮಾಪನ ಆಸ್ತಿಯ ಒಯ್ಯುವ ಮೌಲ್ಯವನ್ನು ಗಣಿಗಾರಿಕೆ ಆಸ್ತಿಗಳಿಗೆ ಮರುವರ್ಗೀಕರಿಸಲಾಗುವುದು.

ಎಲ್) ಗಣಿ ಮುಚ್ಚುವಿಕೆ ಯೋಜನೆ

ಕೇಂದ್ರ ಸರ್ಕಾರವು ಅಧಿಸೂಚನೆ ಸಂಖ್ಯೆ ಜಿಎಸ್ಆರ್ 329 (ಇ) ದಿನಾಂಕ 10.04.2003 ಮತ್ತು ಸಂಖ್ಯೆ ಜಿಎಸ್ಆರ್ 330 (ಇ) ದಿನಾಂಕ. 10.04.2003 ರ ಅನ್ವಯ ಖನಿಜ ವಿನಾಯಿತಿ ನಿಯಮಗಳು, 1960 ಮತ್ತು ಖನಿಜ ಸಂರಕ್ಷಣಾ ಮತ್ತು ಅಭಿವೃದ್ಧಿ ನಿಯಮಗಳು, 1988 ಅನ್ನು ಅನುಕ್ರಮವಾಗಿ ಪರಿಷ್ಕರಿಸಿತು. ಈ ಪರಿಷ್ಕರಣೆಗಳ ಅನುಸಾರ ಅಸ್ತಿತ್ವದಲ್ಲಿರುವ ಎಲ್ಲ ಗಣಿಗಾರಿಕೆ ಗುತ್ತಿಗೆದಾರರೂ ಅಧಿಸೂಚನೆಯ ದಿನಾಂಕದಿಂದ 180 ದಿನಗಳ ಒಳಗೆ ನಿಗದಿಪಡಿಸಿದ ಹಣಕಾಸು ಭದ್ರತೆಗಳೊಂದಿಗೆ "ಪ್ರೊಗ್ರೆಸಿವ್ ಗಣಿ ಮುಚ್ಚುವಿಕೆ ಯೋಜನೆ"ಯನ್ನು ಸಲ್ಲಿಸುವುದು ಅಗತ್ಯವಾಗಿತ್ತು. ಜೊತೆಗೆ, ಗಣಿಗಾರಿಗೆ ಗುತ್ತಿಗೆದಾರರು ಗಣಿಯನ್ನು ಮುಚ್ಚಲು ಪ್ರಸ್ತಾಪಿಸಿರುವ ಒಂದು ವರ್ಷ ಮುನ್ನ "ಅಂತಿಮ ಗಣಿ ಮುಚ್ಚುವಿಕೆ ಯೋಜನೆ"ಯನ್ನು ಸಲ್ಲಿಸಬೇಕಿತ್ತು. "ಪ್ರೊಗ್ರೆಸಿವ್ ಗಣಿ ಮುಚ್ಚುವಿಕೆ ಯೋಜನೆ" ಮತ್ತು "ಅಂತಿಮ ಗಣಿ ಮುಚ್ಚುವಿಕೆ ಯೋಜನೆ" ಗಳು ಇಂಡಿಯನ್ ಬ್ಯೂರೋ ಆಫ್ ಮೈನ್ಸ್ ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ನಿಗದಿಪಡಿಸಿದ ನಮೂನೆಯಲ್ಲಿ ಇರಬೇಕೆನ್ನುವುದನ್ನು ಅಧಿಸೂಚನೆಯಲ್ಲಿ ಸ್ಪಷ್ಟಪಡಿಸಲಾಗಿತ್ತು.

ಗಣಿ ಮುಚ್ಚುವಿಕೆ ಕಾರ್ಯಾಚರಣೆಯು ಗಣಿಗಾರಿಕೆ ಯೋಜನೆಯನ್ನು ಪ್ರಾರಂಭಿಸಿದ ಮೊದಲ ದಿನದಿಂದ ಪ್ರಾರಂಭವಾಗುವ ಚಟುವಟಿಕೆಗಳ ನಿರಂತರ ಸರಣಿಯಾಗಿರುತ್ತದೆ. ಹಾಗಾಗಿ ಪ್ರೊಗ್ರೆಸಿವ್ ಗಣಿ ಮುಚ್ಚುವಿಕೆ ಯೋಜನೆಯು ಚಾಲ್ತಿ ಗಣಿಗಾರಿಕೆ ಯೋಜನೆಯಲ್ಲಿನ ಹೆಚ್ಚುವರಿ ಅಧ್ಯಾಯವಾಗಿದ್ದು ಗಣಿಗಾರಿಕೆ ಯೋಜನೆಯಲ್ಲಿ ಪ್ರತಿ ಐದು ವರ್ಷದ ನಂತರ ಅದನ್ನು ಪರಿಶೀಲಿಸಲಾಗುತ್ತದೆ. ಪ್ರೊಗ್ರೆಸಿವ್ ಗಣಿ ಮುಚ್ಚುವಿಕೆ ಯೋಜನೆಯು ಚಟುವಟಿಕೆಗಳ ನಿರಂತರ ಸರಣಿಯಾಗಿರುವ ಕಾರಣ ವೈಜ್ಞಾನಿಕ ಗಣಿಗಾರಿಕೆಯ ಪ್ರಸ್ತಾವಗಳು ಪ್ರೊಗ್ರೆಸಿವ್ ಗಣಿ ಮುಚ್ಚುವಿಕೆ ಯೋಜನೆಯಲ್ಲಿ ಸೇರಬೇಕಿರುವ ಹೆಚ್ಚಿನ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ ಎನ್ನುವುದು ಸ್ಪಷ್ಟ. ಹಾಗಾಗಿ, ಸೂಕ್ತ ಕಂಡಿಕೆಗಳ ಉಲ್ಲೇಕ ಮತ್ತು ಪ್ರೊಗ್ರೆಸಿವ್ ಗಣಿ ಮುಚ್ಚುವಿಕೆ ಯೋಜನೆಯಲ್ಲಿನ ಅದರ ಸಾರವನ್ನು ಒದಗಿಸಿದರೆ ಪರ್ಯಾಪ್ತವಾದೀತು.

ಶಾಸನದ ಪ್ರಕಾರ ಅಂತಿಮ ಗಣಿ ಮುಚ್ಚುವಿಕೆ ಯೋಜನೆಯು ಗಣಿಯನ್ನು ಮುಚ್ಚುವ ಪ್ರಸ್ತಾವಿತ ದಿನಾಂಕದಿಂದ ಕನಿಷ್ಠ ಒಂಬತ್ತು ತಿಂಗಳ ಮುಂಚೆ ಅಂಗೀಕಾರವನ್ನು ಹೊಂದಿರುತ್ತದೆ ಎಂದು ಪರಿಗಣಿಸಲಾಗಿರುತ್ತದೆ. ಒಂಬತ್ತು ತಿಂಗಳ ಈ ಅವಧಿಯನ್ನು ಅಂತಿಮ ಗಣಿ ಮುಚ್ಚುವಿಕೆ ಕಾರ್ಯಾಚರಣೆಗಳ ಪೂರ್ವಸಿದ್ಧತಾ ಅವಧಿ ಎಂದು ಪರಿಗಣಿಸಲಾಗುತ್ತದೆ.

ಗಣಿಯಿಂದ ಅಥವಾ ಗಣಿಗಾರಿಕೆಯಿಂದ ಖನಿಜದ ಉತ್ಪಾದನೆಯು ನಿಂತ ನಂತರ ಕೈಗೊಳ್ಳಬೇಕಿರುವ ಚಟುವಟಿಕೆಗಳ ಎಲ್ಲ ಪ್ರಸ್ತಾವನೆಗಳೂ ಅಂತಿಮ ಗಣಿ ಮುಚ್ಚುವಿಕೆ ಯೋಜನೆಯ ಭಾಗವಾಗುತ್ತವೆ. ಹೀಗೆ, ಅಂತಿಮ ಗಣಿ ಮುಚ್ಚುವಿಕೆ ಯೋಜನೆಯು, ಒದಗಿಸಲಾದ ಮಾರ್ಗಸೂಚಿಯ ಪ್ರಕಾರ ವಿವರವಾದ ಅಧ್ಯಾಯಗಳನ್ನು ಒಳಗೊಳ್ಳುವ ಪ್ರತ್ಯೇಕ ದಾಖಲೆಯಾಗುತ್ತದೆ. ಗಣಿ ಮುಚ್ಚುವಿಕೆ ಯೋಜನೆಯನ್ನು ಒದಗಿಸಲಾದ ಮಾರ್ಗಸೂಚಿಗಳ ಪ್ರಕಾರ ಸಿದ್ಧಪಡಿಸಲಾಗುತ್ತದೆ. ಮಾರ್ಗಸೂಚಿಗಳಲ್ಲಿ ಪ್ರೊಗ್ರೆಸಿವ್ ಮತ್ತು ಅಂತಿಮ ಗಣಿ ಮುಚ್ಚುವಿಕೆ ಯೋಜನೆಗಳೆರಡರ ನಿರ್ದಿಷ್ಟ ಚಟುವಟಿಕೆಗಳೂ ಸೇರುತ್ತವೆ.

ಕಂಪೆನಿಯು 2019–20 ಲ್ಲಿ ಪ್ರೊಗ್ರೆಸಿವ್ ಗಣಿ ಮುಚ್ಚುವಿಕೆ ಯೋಜನೆಯನ್ನು ಸಲ್ಲಿಸಿದ್ದು ಪ್ರತಿ ವರ್ಷದ ಕೊನೆಯ ಹೊತ್ತಿಗೆ ಕಂಪೆನಿಯು ಪ್ರೊಗ್ರೆಸಿವ್ ಗಣಿ ಮುಚ್ಚುವಿಕೆ ಯೋಜನೆಯನ್ನು ಪುನರ್‌ಪರಿಶೀಲಿಸುತ್ತದೆ ಹಾಗೂ ವ್ಯತ್ಯಾಸಕ್ಕೆ ಹವಣಿಕೆಯನ್ನು ಮಾಡಲಾಗುತ್ತದೆ ಮತ್ತು ಗಣಿ ಮುಚ್ಚುವಿಕೆ ಯೋಜನೆಗೆಂದು ವ್ಯಯಿಸಲಾಗಿರುವ ಯಾವುದೇ ವೆಚ್ಚವನ್ನು ಪ್ರೊಗ್ರೆಸಿವ್ ಗಣಿ ಮುಚ್ಚುವಿಕೆ ಯೋಜನೆಗೆ ಖರ್ಚುಹಾಕಲಾಗುತ್ತದೆ.

ಎಂ) ಕಾರ್ಯಯುಕ್ತ ಖಂಡಗಳು

ಎ) ಖಂಡ ಪ್ರಕ್ರಿಯೆಗೆ ಆಧಾರ:

ಕಾರ್ಯಯುಕ್ತ ಖಂಡವು ಕಂಪೆನಿಯ ಅಂಗವಾಗಿದ್ದು ಇದು ತೊಡಗಿಕೊಳ್ಳುವ ವ್ಯಾಪಾರಿ ಚಟುವಟಿಕೆಗಳ ಮೂಲಕ ಕಂಪೆನಿಯು ಆದಾಯಗಳನ್ನು ಗಳಿಸಬಹುದು ಮತ್ತು ವೆಚ್ಚಗಳನ್ನು ಅನುಭವಿಸಬಹುದು. ಇವುಗಳಲ್ಲಿ ಕಂಪೆನಿಯ ಇತರ ಯಾವುದೇ ಅಂಗಗಳೊಂದಿಗೆ ನಡೆಸಲಾಗು ವ್ಯವಹಾರಗಳಿಗೆ ಸಂಬಂಧಿಸಿದ ಆದಾಯಗಳು ಮತ್ತು ಖರ್ಚುಗಳು ಸೇರುತ್ತವೆ ಹಾಗೂ ಈ ವ್ಯವಹಾರಗಳಿಗೆ ಸಂಬಂಧಿಸಿದ ಸೂಕ್ಷ್ಮವಾದ ಹಣಕಾಸು ಮಾಹಿತಿ ಲಭ್ಯವಿರುತ್ತದೆ. ಕಂಪೆನಿಯ ಎಲ್ಲ ಕಾರ್ಯಯುಕ್ತ ಖಂಡಗಳ ಕಾರ್ಯಯುಕ್ತ ಫಲಿತಾಂಶಗಳನ್ನು ಕಂಪೆನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು (ಸಿಇಓ) ಕಾಲಕಾಲಕ್ಕೆ ಪರಿಶೀಲಿಸುತ್ತಾರೆ ಹಾಗೂ ತನ್ಮೂಲಕ ಖಂಡಗಳಿಗೆ ಹಂಚಬೇಕಿರುವ ಸಂಪನ್ಮೂಲಗಳನ್ನು ನಿರ್ಧರಿಸಿ ಅವುಗಳ ಸಾಧನೆಯನ್ನು ಅಂದಾಜುಮಾಡುತ್ತಾರೆ.

ವರದಿಮಾಡಬಹುದಾದ ಖಂಡಗಳು	ಕಾರ್ಯಾಚರಣೆಗಳು
ಕಬ್ಬಿಣದ ಅದಿರು	ಲಂಪಿ/ಸಿ – ಅದಿರು ಮತ್ತು ಫೈನ್ ಮತ್ತಿತರೆ ಹೊರತೆಗೆಯುವಿಕೆ ಮತ್ತು ಉತ್ಪಾದನೆ.
ಗ್ರಾನೈಟ್	ರೂಬಿ ಕೆಂಪು ಗ್ರಾನೈಟ್, ಹಾಸನ್ ಹಸಿರು ಗ್ರಾನೈಟ್, ಬಹುವರ್ಣೀಯ ಗ್ರಾನೈಟ್ ಹೊರತೆಗೆಯುವಿಕೆ ಮತ್ತು ಉತ್ಪಾದನೆ.
ಇತರೆ	ಲೈಮ್‌ಸ್ಟೋನ್, ಡಾಲಮೈಟ್, ಮ್ಯಾಗ್ನಸೈಟ್, ಜೇಡಿಮಣ್ಣು ಮುಂತಾದವುಗಳ ಹೊರತೆಗೆಯುವಿಕೆ ಮತ್ತು ಉತ್ಪಾದನೆ.

ಬಿ) ವರದಿಮಾಡಬಹುದಾದ ಖಂಡಗಳ ಬಗೆಗೆ ಮಾಹಿತಿ

ವರದಿ ಮಾಡಬಹುದಾದ ಪ್ರತಿ ಖಂಡದ ಬಗೆಗೆ ಮಾಹಿತಿಯನ್ನು ಅನುಬಂಧ 1 ರಲ್ಲಿ ಒದಗಿಸಲಾಗಿದೆ. ಸಾಧನೆಯನ್ನು ಖಂಡ ಲಾಭ (ತೆರಿಗೆಗೆ ಮುನ್ನ) ಬಳಸಿ ಮಾಡಲಾಗಿದೆ. ಖಂಡ ಲಾಭವು ಒದಗಿಸುವ ಮಾಹಿತಿಯು ಇಂತಹ ಕೈಗಾರಿಕೆಗಳಲ್ಲಿ ಕಾರ್ಯಯುಕ್ತವಾಗಿರುವ ಇತರ ಅಸ್ತಿತ್ವಗಳಿಗೆ ಸಂಬಂಧಿಸಿದ ಇತರ ಕೆಲವು ಖಂಡಗಳ ಫಲಿತಾಂಶಗಳನ್ನು ಮೌಲ್ಯಮಾಪನ ಮಾಡಲು ಅತ್ಯಂತ ಪ್ರಸ್ತುತವಾಗಿರುವ ಕಾರಣ ಆಡಳಿತ ಮಂಡಳಿಯು ಸಾಧನೆಯನ್ನು ಅಳೆಯಲು ಖಂಡ ಲಾಭವನ್ನು ಬಳಸುತ್ತದೆ.

ಎನ್) ನಗದು ಮತ್ತು ನಗದು ಸಮಾನಗಳು

ತಕ್ಷಣದಲ್ಲೇ ನಗದಾಗಿ ಪರಿವರ್ತನೆಯಾಗುವ ಮತ್ತು ಖರೀದಿಯ ದಿನಾಂಕದಿಂದ ಮೂರು ತಿಂಗಳು ಅಥವಾ ಕಡಿಮೆ ಅವಧಿಯ ಮೂಲ ಪಕ್ವತೆಗಳನ್ನು ಹೊಂದಿರುವ ಎಲ್ಲ ಅತ್ಯಂತ ಹೆಚ್ಚಿನ ದ್ರವ್ಯತೆಯನ್ನು ಹೊಂದಿರುವ ಹಣಕಾಸು ಸಾಧನಗಳನ್ನು ಕಂಪೆನಿಯು ನಗದು ಸಮಾನಗಳಾಗಿ ಪರಿಗಣಿಸುತ್ತದೆ.

ಓ) ನಗದು ಪ್ರವಹನ ತಃಖ್ತೆ

ನಗದು ಪ್ರವಹನಗಳನ್ನು ಪರೋಕ್ಷ ವಿಧಾನವನ್ನು ಅನುಸರಿಸಿ ವರದಿಮಾಡಲಾಗುತ್ತದೆ. ಇದರಂತೆ ನಗದೇತರ ಸ್ವರೂಪದ ವ್ಯವಹಾರಗಳ ಪರಿಣಾಮ, ಹಿಂದಿನ ಅಥವಾ ಭವಿಷ್ಯದ ಕಾರ್ಯಯುಕ್ತ ನಗದು ಸ್ವೀಕೃತಿಗಳು ಅಥವಾ ಪಾವತಿಗಳ ಯಾವುದೇ ಮುಂದೂಡಿಕೆಗಳು ಅಥವಾ ಪ್ರಾಪ್ತತೆಗಳು ಮತ್ತು ಹೂಡಿಕೆ ಇಲ್ಲವೇ ಹಣಕಾಸು ಪ್ರಕ್ರಿಯೆಯ ನಗದು ಪ್ರವಹನಗಳೊಂದಿಗೆ ಸಂಬಂಧ ಹೊಂದಿರುವ ಆದಾಯ ಅಥವಾ ಖರ್ಚಿನ ಬಾಬ್ತುಗಳಿಗೆ ತೆರಿಗೆಯ ಮುಂಚಿನ ನಿವ್ವಳ ಲಾಭವನ್ನು ಹೊಂದಿಸಲಾಗುತ್ತದೆ. ಕಂಪೆನಿಯ ಕಾರ್ಯಾಚರಣೆ, ಹೂಡಿಕೆ ಮತ್ತು ಹಣಕಾಸು ನೀಡಿಕೆ–ಪಡೆಯುವಿಕೆ ಚಟುವಟಿಕೆಗಳಿಂದ ಉಂಟಾಗುವ ನಗದು ಪ್ರವಹನಗಳನ್ನು ಪ್ರತ್ಯೇಕಿಸಲಾಗುತ್ತದೆ.

ನಮ್ಮ ಇದೇ ದಿನಾಂಕದ ಲಗತ್ತಾದ ವರದಿಯ ಪ್ರಕಾರ
ಎಸ್.ಆರ್.ಆರ್.ಕೆ ಶರ್ಮಾ ಅಸೋಸಿಯೇಟ್ಸ್ ಪರವಾಗಿ
ಸನದಿ ಲೆಕ್ಕಿಗರು
ಸಂಸ್ಥೆ ನೋಂದಣಿ ಸಂಖ್ಯೆ – 003790ಎಸ್

ಸಹಿ/–
ಎಸ್ ಆನಂದಕೃಷ್ಣ
ಪಾಲುದಾರರು
ಸದಸ್ಯತ್ವ ಸಂಖ್ಯೆ : 027896

ನಿರ್ದೇಶಕ ಮಂಡಳಿಯ ಪರವಾಗಿ

ಸಹಿ/–
ನವೀನ್ ರಾಜ್ ಸಿಂಗ್, ಭಾಆಸೇ
ನಿರ್ದೇಶಕರು
ಡಿಐಎನ್ ಸಂಖ್ಯೆ : 6854287

ಸಹಿ/–
ಸಲ್ಮಾ ಕೆ. ಫಾಹಿಮ್, ಭಾಆಸೇ
ನಿರ್ದೇಶಕರು
ಡಿಐಎನ್: 07773934

ಸಹಿ/–
ಡಾ. ಜೆ. ವಿ. ನಂದನ್‌ಕುಮಾರ್
ಪ್ರಧಾನ ವ್ಯವಸ್ಥಾಪಕರು
(ಹಣಕಾಸು & ಲೆಕ್ಕಪತ್ರಗಳು)

ಸ್ಥಳ : ಬೆಂಗಳೂರು
ದಿನಾಂಕ : 11.09.2020
UDIN : 20027986AAAACD9548

ಸ್ವತಂತ್ರ ಲೆಕ್ಕಪರಿಶೋಧಕರ ವರದಿ

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್‌ನ ಸದಸ್ಯರಿಗೆ ಸ್ವತಂತ್ರ ಲೆಕ್ಕಪರಿಶೋಧಕರ ವರದಿ

31ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷದ "ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್" ಸಂಸ್ಥೆಯ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸಿದ ನಂತರ ನಾವು 11 ಸೆಪ್ಟೆಂಬರ್ 2020ರಂದು ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಿದ್ದೇವೆ. ನಮ್ಮ ವರದಿಯ ತರುವಾಯದಲ್ಲಿ ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರು ನಡೆಸಿದ ಲೆಕ್ಕಪರಿಶೋಧನೆಯಿಂದ ಪ್ರಕಟವಾದ ಪರಿಶೀಲನೆಗಳ ಹಿನ್ನೆಲೆಯಲ್ಲಿ (ಎ) – ಇಲ್ಲಿನ "ಸಂಖ್ಯೆ 3 ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ" ಯಲ್ಲಿ ವರದಿಯಾದ ಅಂಕಿಯ ಬದಲಾವಣೆ, ಪರಿಶೀಲನಾತ್ಮಕ ಅಭಿಪ್ರಾಯ ಕಂಡಿಕೆಯ ಅಡಿಯಲ್ಲಿ ಎ ನಂತರ (1 ರಿಂದ 15) ಬಿ (II)(ಇ) ಸೇರಿಸಲು ಮತ್ತು ಬಿ (I & II) ಸೇರಿಸಲು (ಇವನ್ನು ಪ್ರತ್ಯೇಕವಾಗಿ ವರದಿಮಾಡಲಾಗಿದೆ) ಹಾಗೂ ಪರಿಶೀಲನಾತ್ಮಕ ಅಭಿಪ್ರಾಯ ಕಂಡಿಕೆಯಲ್ಲಿ ಬಿ (II) ಡಿ ಯನ್ನು ಸೇರಿಸಲು ಸಾಧ್ಯವಾಗುವಂತೆ ಹೇಳಲಾದ ವರದಿಯನ್ನು ಪರಿಷ್ಕರಿಸಲಾಗಿದೆ.

ಕ್ರೋಢೀಕೃತ ಇಂಡ್ ಎಎಸ್ ಹಣಕಾಸು ತಃಖ್ತೆಗಳ ಮೇಲಿನ ವರದಿ

ಪರಿಶೀಲನಾತ್ಮಕ ಅಭಿಪ್ರಾಯ

ನಾವು **ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್** ("ಹೋಲ್ಡಿಂಗ್ ಕಂಪೆನಿ" ಎಂದು ಇನ್ನು ಮುಂದೆ ಉಲ್ಲೇಖಿತ) ಹಾಗೂ ಅದರ ಜಂಟಿ ಉಪಕ್ರಮ ಹಾಗೂ ಸಹಯೋಗಿ ಸಂಸ್ಥೆಯ ("ಗ್ರೂಪ್" – 'ಗುಂಪು' ಎಂದು ಉಲ್ಲೇಖಿತ) ಲಗತ್ತಾದ ಕ್ರೋಢೀಕೃತ ಇಂಡ್ ಎಎಸ್ ಹಣಕಾಸು ತಃಖ್ತೆಗಳನ್ನು ಲೆಕ್ಕಪರಿಶೋಧಿಸಿದ್ದೇವೆ. ಈ ತಃಖ್ತೆಗಳಲ್ಲಿ 31 ಮಾರ್ಚ್ 2020ರಂದು ಇದ್ದಂತೆ ಕ್ರೋಢೀಕೃತ ಸಂತುಲನ ಪಟ್ಟಿ, ಅದೇ ದಿನಾಂಕಕ್ಕೆ ಕೊನೆಗೊಂಡ ವರ್ಷದ ಕ್ರೋಢೀಕೃತ ಲಾಭ ಮತ್ತು ನಷ್ಟದ ತಃಖ್ತೆ (ಇತರ ಸಮಗ್ರ ಆದಾಯವೂ ಸೇರಿ) ಹಾಗೂ ಕ್ರೋಢೀಕೃತ ನಗದು ಪ್ರವಹನ ತಃಖ್ತೆ, ಸ್ವಾಮ್ಯದಲ್ಲಿನ ಬದಲಾವಣೆಗಳ ತಃಖ್ತೆ ಮತ್ತು ಮಹತ್ವದ ಲೇಖಾ ಕಾರ್ಯನೀತಿಗಳ ಸಾರ ಮತ್ತು ಇತರ ವಿವರಣಾತ್ಮಕ ಮಾಹಿತಿ ಸೇರುತ್ತವೆ (ಇನ್ನು ಮುಂದೆ "ಕ್ರೋಢೀಕೃತ ಇಂಡ್ ಎಎಸ್ ಹಣಕಾಸು ತಃಖ್ತೆಗಳು ಎಂದು ಉಲ್ಲೇಖಿತ).

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮ್ಮ ಅತ್ಯುತ್ತಮ ತಿಳುವಳಿಕೆ ಹಾಗೂ ನಮಗೆ ಒದಗಿಸಲಾದ ವಿವರಣೆಗಳ ಪ್ರಕಾರ ಮತ್ತು ಪ್ರತ್ಯೇಕ ಇಂಡ್ ಎಎಸ್ ಹಣಕಾಸು ತಃಖ್ತೆಗಳ ಹಾಗೂ ಜಂಟಿ ಉಪಕ್ರಮ ಹಾಗೂ ಸಹಯೋಗಿ ಸಂಸ್ಥೆಯ ಆರ್ಥಿಕ ಮಾಹಿತಿಯ ಮೇಲಿನ ವರದಿಗಳ ಪರಿಗಣನೆಯ ಆಧಾರದಲ್ಲಿ ಹೇಳುವುದಾದರೆ, ಮೇಲೆ ಸೂಚಿಸಲಾಗಿರುವ ಕ್ರೋಢೀಕೃತ ಇಂಡ್ ಎಎಸ್ ಹಣಕಾಸು ತಃಖ್ತೆಗಳು ಕಂಪೆನಿ ಕಾಯ್ದೆ, 2013 ("ಕಾಯ್ದೆ") ಪರಿಚ್ಛೇದ 133 ರ ಅಡಿ ನಿರ್ದಿಷ್ಟಗೊಳಿಸಲಾಗಿರುವ ಲೇಖಾ ಪ್ರಮಾಣಗಳಿಗೆ ಅನುಸಾರವಾಗಿ ಮತ್ತು ತಿದ್ದುಪಡಿ ಮಾಡಲಾದಂತೆ, ಕಂಪೆನಿಗಳ (ಭಾರತೀಯ ಲೇಖಾ ಪ್ರಮಾಣಗಳು) ನಿಯಮಗಳು, 2015 ("ಇಂಡ್ ಎಎಸ್") ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಿತವಾದ ಲೇಖಾ ಸಿದ್ಧಾಂತಗಳಿಗೆ ಹೊಂದುವಂತೆ 31 ಮಾರ್ಚ್ 2020ರಂದು ಇದ್ದಂತೆ, ಕಂಪೆನಿಯ ಹಾಗೂ ಅದರ ಜಂಟಿ ಉಪಕ್ರಮ ಹಾಗೂ ಸಹಯೋಗಿ ಸಂಸ್ಥೆಯ ಸ್ಥಿತಿಗತಿಗಳು, ಇತರ ಸಮಗ್ರ ಆದಾಯವೂ ಸೇರಿದಂತೆ ಅವುಗಳ ಕ್ರೋಢೀಕೃತ ಲಾಭ, ಅವುಗಳ ಕ್ರೋಢೀಕೃತ ನಗದು ಹರಿವುಗಳು ಮತ್ತು ಅದೇ ದಿನಾಂಕದಂದು ಕೊನೆಯಾದ ವರ್ಷಕ್ಕೆ ಈಕ್ವಿಟಿಯಲ್ಲಿನ ಬದಲಾವಣೆಗಳ ಕ್ರೋಢೀಕೃತ ತಃಖ್ತೆಯ ಬಗ್ಗೆ ನೈಜ ಮತ್ತು ನಿಷ್ಪಕ್ಷಪಾತವಾದ ಚಿತ್ರವನ್ನು ನೀಡುತ್ತದೆ.

ಅಭಿಪ್ರಾಯಗಳಿಗೆ ಆಧಾರ

ನಾವು ನಮ್ಮ ಲೆಕ್ಕಪರಿಶೋಧನೆಯನ್ನು ಕಾಯ್ದೆಯ ಪರಿಚ್ಛೇದ 143(10)ರ ಅಡಿ ನಿರ್ದಿಷ್ಟಗೊಳಿಸಿರುವ ಲೆಕ್ಕಪರಿಶೋಧನಾ ಪ್ರಮಾಣಗಳ (ಎಸ್ಎಗಳು) ಅನುಸಾರ ನಡೆಸಿರುತ್ತೇವೆ. ನಮ್ಮ ವರದಿಯ ಕ್ರೋಢೀಕೃತ ಹಣಕಾಸು ತಃಖ್ತೆಗಳ ಲೆಕ್ಕಪರಿಶೋಧನೆಯ ಲೆಕ್ಕಪರಿಶೋಧಕರ ಅಭಿಪ್ರಾಯಗಳು ಭಾಗದಲ್ಲಿ ಈ ಪ್ರಮಾಣಗಳ ಅಡಿಯಲ್ಲಿನ ನಮ್ಮ ಜವಾಬ್ದಾರಿಗಳನ್ನು ಮತ್ತಷ್ಟು ವಿವರಿಸಲಾಗಿದೆ. ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯು ಹೊರಡಿಸಿರುವ ನೀತಿ ಸಂಹಿತೆಗೆ ಅನುಗುಣವಾಗಿ ಹಾಗೂ ಕಂಪೆನಿ ಕಾಯ್ದೆ 2013ರ ಉಪಬಂಧಗಳು ಮತ್ತು ಅದರಡಿಯ ನಿಯಮಗಳ ಅಡಿಯಲ್ಲಿ ಜೊತೆಗಿನ ಕ್ರೋಢೀಕೃತ ಹಣಕಾಸು ತಃಖ್ತೆಗಳ ಲೆಕ್ಕಪರಿಶೋಧನೆಗೆ ಪ್ರಸ್ತುತವಾದ ಉಪಬಂಧಗಳ ಅಡಿಯಲ್ಲಿನ ನೈತಿಕ ಅಗತ್ಯಗಳಿಗೆ ಅನುಗುಬಣವಾಗಿ ನಾವು ಗುಂಪಿನಿಂದ ಸ್ವತಂತ್ರರಾಗಿದ್ದೇವೆ ಹಾಗೂ ನಾವು ನೀತಿ ಸಂಹಿತೆಯ ಅಗತ್ಯಗೀಗೆ ಅನುಗುಣವಾಗಿ ನಾವು ನಮ್ಮ ನೈತಿಕ ಜವಾಬ್ದಾರಿಗಳನ್ನು ನಿಭಾಯಿಸಿರುತ್ತೇವೆ. ನಾವು ಪಡೆದುಕೊಂಡಿರುವ ಲೆಕ್ಕಪರಿಶೋಧನಾ ಆಧಾರಗಳು ಕ್ರೋಢೀಕೃತ ಇಂಡ್ ಎಎಸ್ ಹಣಕಾಸು ತಃಖ್ತೆಗಳ ಮೇಲಿನ ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಗಳಿಗೆ ಪರ್ಯಾಪ್ತ ಮತ್ತು ಸೂಕ್ತವಾಗಿದ್ದು ತಕ್ಕ ಆಧಾರಗಳನ್ನು ಒದಗಿಸುತ್ತವೆ ಎಂದು ನಾವು ನಂಬಿದ್ದೇವೆ.

ಪ್ರಧಾನ ಲೆಕ್ಕಪರಿಶೋಧನಾ ವಿಷಯಗಳು

ಪ್ರಧಾನ ಲೆಕ್ಕಪರಿಶೋಧನಾ ವಿಷಯಗಳೆಂದರೆ, 31 ಮಾರ್ಚ್ 2020ಕ್ಕೆ ಕೊನೆಗೊಂಡ ಹಣಕಾಸು ವರ್ಷದ ಹಣಕಾಸು ತಃಖ್ತೆಗಳ ನಮ್ಮ ಲೆಕ್ಕಪರಿಶೋಧನೆಯಲ್ಲಿ ನಮ್ಮ ವೃತ್ತಿಪರ ದೃಷ್ಟಿಗೆ ತೋರಿದಂತೆ ಅತ್ಯಂತ ಮಹತ್ವಪೂರ್ಣವಾದ ವಿಷಯಗಳಾಗಿವೆ. ಈ ವಿಷಯಗಳನ್ನು ಹಣಕಾಸು ತಃಖ್ತೆಗಳ ನಮ್ಮ ಒಟ್ಟಾರೆ ಲೆಕ್ಕಪರಿಶೋಧನೆಯ ಹಾಗೂ ಇವಕ್ಕೆ ಸಂಬಂಧಿಸಿದಂತೆ ಅಭಿಪ್ರಾಯಗಳನ್ನು ರೂಪಿಸುವ ಹಿನ್ನೆಲೆಯಲ್ಲಿ ನಾವು ಎದುರಾದೆವು ಮತ್ತು ಈ ವಿಷಯಗಳ ಮೇಲೆ ನಾವು ಪ್ರತ್ಯೇಕವಾದ ಅಭಿಪ್ರಾಯಗಳನ್ನು ಒದಗಿಸುವುದಿಲ್ಲ. ನಮ್ಮ ವರದಿಯಲ್ಲಿ ತಿಳಿಸುವ ಉದ್ದೇಶದಿಂದ ಕೆಳಗಿನವನ್ನು ನಾವು ಪ್ರಧಾನವಾದ ಅಂಶಗಳೆಂದು ತೀರ್ಮಾನಿಸಿದ್ದೇವೆ:

ಪ್ರಧಾನ ಲೆಕ್ಕಪರಿಶೋಧನಾ ವಿಷಯ	ಲೆಕ್ಕಪರಿಶೋಧಕರ ಪ್ರತಿಕ್ರಿಯೆ
1) ಗಣಿ ಮುಚ್ಚುವಿಕೆ ಹೊಣೆ (ಎಂಸಿಓ): ಕಂಪನಿಯು ತನ್ನ ಇತ್ತೀಚಿನ ಗಣಿಯನ್ನು ಆಧಾರವಾಗಿರಿಸಿ ಗಣಿಗಾರಿಕೆ ಯೋಜನೆಯ ಪ್ರಸ್ತುತ ಮುಚ್ಚುವಿಕೆ ವೆಚ್ಚವನ್ನು ಆಧರಿಸಿ ಗಣಿ ಮುಚ್ಚುವಿಕೆ ಹೊಣೆಯನ್ನು ಸೃಷ್ಟಿಸುತ್ತದೆ. ಇಂತಹ ವೆಚ್ಚವನ್ನು ಆಧರಿಸಿ ಲೆಕ್ಕಹಾಕಲಾದ ಮುಚ್ಚುವಿಕೆ ವೆಚ್ಚವನ್ನು ಏಕರೂಪವಾಗಿ ಇತರ ಗಣಿಗಳಿಗೂ ಅನ್ವಯಿಸಿ ಒಟ್ಟು ಗಣಿ ಮುಚ್ಚುವಿಕೆ ಹೊಣೆಯನ್ನು ಲೆಕ್ಕಹಾಕಲಾಗುತ್ತದೆ. ಆಡಳಿತ ಮಂಡಳಿಯ ಕಾರ್ಯನೀತಿಯ ಪ್ರಕಾರ ಈ ಪ್ರಕ್ರಿಯೆಯು ಅಂದಾಜಿಸುವಿಕೆಯನ್ನು ಒಳಗೊಳ್ಳುವ ಕಾರಣ ಈ ವಿಷಯವನ್ನು ಪ್ರಧಾನ ಲೆಕ್ಕಪರಿಶೋಧನಾ ವಿಷಯವಾಗಿ ಪರಿಗಣಿಸಲಾಯಿತು.	ಕಂಪನಿಯು ಪರಿಗಣಿಸಿರುವ ಗಣಿ ಮುಚ್ಚುವಿಕೆ ಹೊಣೆಯ ದರಗಳ ಅಂದಾಜುಗಳನ್ನು ಪರಿಶೀಲಿಸಲು ನಾವು ನಮ್ಮ ಆಂತರಿಕ ಪರಿಣತಿಯನ್ನು ತೊಡಗಿಸಿದ್ದೇವೆ.
2) ಆದಾಯ ತೆರಿಗೆ: ಕಂಪನಿಯು ವ್ಯಾಜ್ಯದಡಿಯ ವಿಷಯಗಳೂ ಸೇರಿದಂತೆ ಅನಿಶ್ಚಿತ ತೆರಿಗೆ ಸ್ಥಿತಿಯನ್ನು ಹೊಂದಿದ್ದು ಆದಾಯ ತೆರಿಗೆ ಹವಣಿಕೆಯ ಅಂದಾಜಿನ ಪ್ರಕ್ರಿಯೆಯಲ್ಲಿ ಈ ವ್ಯಾಜ್ಯಗಳ ಸಾಧ್ಯ ಪರಿಣಾಮಗಳಿಗೆ ಸಂಬಂಧಿಸಿದಂತೆ ಮಹತ್ವಪೂರ್ಣ ತೀರ್ಮಾನಗಳನ್ನು ಒಳಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಈ ವಿಷಯವನ್ನು ಪ್ರಧಾನ ಲೆಕ್ಕಪರಿಶೋಧನಾ ವಿಷಯವಾಗಿ ಪರಿಗಣಿಸಲಾಯಿತು. (ಹಣಕಾಸು ತಃಖ್ತೆಗಳ ಟಿಪ್ಪಣಿ ಸಂಖ್ಯೆ 3 ನೋಡಿ)	ನಮ್ಮ ಲೆಕ್ಕಪರಿಶೋಧನಾ ಪ್ರಕ್ರಿಯೆಗಳು 31, ಮಾರ್ಚ್ 2020ರಂದು ಇದ್ದಂತೆ ಪೂರ್ಣಗೊಂಡ ತೆರಿಗೆ ನಿರ್ಧಾರಣಗಳು ಮತ್ತು ಬಾಕಿ ಬೇಡಿಕೆಗಳ ವಿವರಗಳನ್ನು ಆಡಳಿತ ಮಂಡಳಿಯಿಂದ ಪಡೆದುಕೊಳ್ಳುವುದನ್ನು ಒಳಗೊಳ್ಳುತ್ತದೆ. ವ್ಯಾಜ್ಯ ಪ್ರಕರಣಗಳ ತೆರಿಗೆ ಹವಣಿಕೆಗಳನ್ನು ಲೆಕ್ಕಹಾಕಲು ಬಳಸಲಾಗುವ ಅಂದಾಜುಗಳನ್ನು ಕುರಿತಂತೆ ಆಡಳಿತ ಮಂಡಳಿಯೊಂದಿಗೆ ಚರ್ಚಿಸಲು ನಾವು ನಮ್ಮ ಆಂತರಿಕ ತಜ್ಞರನ್ನು ತೊಡಗಿಸುತ್ತೇವೆ.

ಕ್ರೋಢೀಕೃತ ಹಣಕಾಸು ತಃಖ್ತೆಗಳು ಮತ್ತು ಸಂವಾದಿ ಲೆಕ್ಕಪರಿಶೋಧಕರ ವರದಿಯನ್ನು ಉಳಿದು ಇತರ ಮಾಹಿತಿ:

ಹೋಲ್ಡಿಂಗ್ ಕಂಪೆನಿಯ ನಿರ್ದೇಶಕರ ಮಂಡಳಿಯು ಇತರ ಮಾಹಿತಿಯ ಸಿದ್ಧಪಡಿಸುವಿಕೆಯ ಜವಾಬ್ದಾರಿಯನ್ನು ಹೊಂದಿರುತ್ತದೆ. ವಾರ್ಷಿಕ ವರದಿಯಲ್ಲಿ ಸೇರಿರುವ, ಆದರೆ ಕ್ರೋಢೀಕೃತ ಹಣಕಾಸು ತಃಖ್ತೆಗಳು ಹಾಗೂ ಸಂವಾದಿ ಲೆಕ್ಕಪರಿಶೋಧಕರ ವರದಿಯ ಭಾಗವಾಗದ ಮಾಹಿತಿಯು ಇತರ ಮಾಹಿತಿಯಲ್ಲಿ ಸೇರುತ್ತದೆ.

ಈ ವರದಿಯ ಸಹಿಯ ದಿನಾಂಕದವರೆಗೆ ನಮಗೆ ಲಭ್ಯವಿರದಿದ್ದ ಮೇಲೆ ಪ್ರಸ್ತಾಪಿಸಲಾಗಿರುವ ಇತರ ಮಾಹಿತಿಯು ಈ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ದಿನಾಂಕದ ನಂತರ ನಮಗೆ ಲಭ್ಯವಾಗುವ ನಿರೀಕ್ಷೆಯಿದೆ.

ಇತರ ಮಾಹಿತಿಯನ್ನು ನಾವು ಓದಿದ ನಂತರ, ಅಲ್ಲಿ ವಾಸ್ತವಿಕ ಅಪಹೇಳಿಕೆಯು ಇರುವುದೆಂದು ನಮ್ಮ ತೀರ್ಮಾನವಾದಲ್ಲಿ, ಆಡಳಿತದ ಜವಾಬ್ದಾರಿಯನ್ನು ಹೊಂದಿರುವವರಿಗೆ ಆ ವಿಷಯವನ್ನು ನಾವು ತಿಳಿಸಬೇಕಾಗುತ್ತದೆ.

ಕ್ರೋಢೀಕೃತ ಹಣಕಾಸು ತಃಖ್ತೆಗಳ ಮೇಲಿನ ನಮ್ಮ ಅಭಿಪ್ರಾಯವು ಇತರ ಮಾಹಿತಿಯನ್ನು ಒಳಗೊಳ್ಳುವುದಿಲ್ಲ ಹಾಗು ಈ ನಿಟ್ಟಿನಲ್ಲಿ ನಾವು ಯಾವುದೇ ಭರವಸೆಯನ್ನಾಗಲೀ ತೀರ್ಮಾನವನ್ನಾಗಲೀ ವ್ಯಕ್ತಪಡಿಸುವುದಿಲ್ಲ.

ಕ್ರೋಢೀಕೃತ ಹಣಕಾಸು ತಃಖ್ತೆಗಳ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ನಮ್ಮ ಜವಾಬ್ದಾರಿ ಎಂದರೆ, ಇತರ ಮಾಹಿತಿಯನ್ನು ಓದುವುದು ಮತ್ತು ಹಾಗೆ ಮಾಡುವಾಗ, ಇತರ ಮಾಹಿತಿಯು ಕ್ರೋಢೀಕೃತ ಹಣಕಾಸು ತಃಖ್ತೆಗಳೊಂದಿಗೆ ವಾಸ್ತವಿಕ ನೆಲೆಯಲ್ಲಿ ಹೊಂದುತ್ತಿಲ್ಲವೇ ಅಥವಾ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ನಾವು ಪಡೆದುಕೊಂಡ ಜ್ಞಾನವು ವಾಸ್ತವಿಕವಾಗಿ ಅಪಹೇಳಿಕೆಗಳನ್ನು ಒಳಗೊಂಡಿದೆಯೋ ಎನ್ನುವುದನ್ನು ಪರಿಗಣಿಸುವುದಾಗಿದೆ. ನಾವು ಕೈಗೊಂಡ ಕಾರ್ಯದ ಆಧಾರದ ಮೇಲೆ, ಒಂದು ವೇಳೆ ಈ ಇತರ ಮಾಹಿತಿಯ ವಾಸ್ತವಿಕ ಅಪಹೇಳಿಕೆಗಳು ಇವೆ ಎಂದು ತೀರ್ಮಾನಿಸಿದ್ದೇ ಅದಲ್ಲಿ ನಾವು ಆ ಸಂಗತಿಯನ್ನು ವರದಿಮಾಡಬೇಕಾಗುತ್ತದೆ. ನಾವು ಈ ದಿಸೆಯಲ್ಲಿ ವರದಿಮಾಡುವುದು ಏನೂ ಇರುವುದಿಲ್ಲ.

ಕ್ರೋಢೀಕೃತ ಹಣಕಾಸು ತಃಖ್ತೆಗಳಿಗೆ ಸಂಬಂಧಿಸಿದಂತೆ ಆಡಳಿತ ಮಂಡಳಿಯ ಜವಾಬ್ದಾರಿ

ಕಂಪೆನಿಯ ಕ್ರೋಢೀಕೃತ ಹಣಕಾಸು ಸ್ಥಿತಿಗತಿ, ಕ್ರೋಢೀಕೃತ ಹಣಕಾಸು ಸ್ಥಿತಿಗತಿಗಳು, ಇತರ ಸಮಗ್ರ ಆದಾಯ, ಕ್ರೋಢೀಕೃತ ನಗದು ಹರಿವುಗಳು ಮತ್ತು ಸೇರಿದಂತೆ ಗುಂಪಿನ ಈಕ್ವಿಟಿಯಲ್ಲಿನ ಕ್ರೋಢೀಕೃತ ಬದಲಾವಣೆಗಳ ಬಗ್ಗೆ ನೈಜವಾದ ಮತ್ತು ನಿಷ್ಪಕ್ಷಪಾತವಾದ ಚಿತ್ರವನ್ನು ನೀಡುವಂತಹ ಈ ಕ್ರೋಢೀಕೃತ ಹಣಕಾಸು ತಃಖ್ತೆಗಳ ಸಿದ್ಧಪಡಿಸುವಿಕೆಗೆ ಸಂಬಂಧಿಸಿದಂತೆ "ಕಾಯ್ದೆ"ಯ ಪರಿಚ್ಛೇದ 134(5)ರಲ್ಲಿ ನಿರ್ದಿಷ್ಟಗೊಳಿಸಿರುವ ಅಂಶಗಳಿಗೆ ಬದ್ಧವಾಗಿರುವಂತೆ, ಕಾಯ್ದೆಯ ಪರಿಚ್ಛೇದ 133ರ ಅಡಿ ನಿರ್ದಿಷ್ಟಗೊಳಿಸಲಾಗಿರುವ ಲೇಖಾ ಪ್ರಮಾಣಗಳಿಗೂ ಸೇರಿ ಮತ್ತು ಕಂಪೆನಿಗಳ (ಭಾರತೀಯ ಲೇಖಾ ಪ್ರಮಾಣಗಳು) ನಿಯಮಗಳು, 2015ಕ್ಕೆ ಸಂಗತವಾಗುವಂತೆ ಕ್ರೋಢೀಕೃತ ಹಣಕಾಸು ತಃಖ್ತೆಗಳನ್ನು ಸಿದ್ಧಪಡಿಸುವುದು ಹೋಲ್ಡಿಂಗ್ ಕಂಪೆನಿಯ ನಿರ್ದೇಶಕ ಮಂಡಳಿಯ ಜವಾಬ್ದಾರಿಯಾಗಿದೆ.

ಗುಂಪಿನ ಭಾಗವಾಗಿರುವ ಕಂಪೆನಿಗಳ ಅನುಕ್ರಮವಾದ ನಿರ್ದೇಶಕ ಮಂಡಳಿಯು ಗುಂಪಿನ ಆಸ್ತಿಗಳ ಹಿತರಕ್ಷಣೆಯ ಸಲುವಾಗಿ ಹಾಗೂ ಮೋಸ ಮತ್ತಿತರ ಅಕ್ರಮಗಳನ್ನು ತಡಗಟ್ಟಲು ಮತ್ತು ಪತ್ತೆಮಾಡಲು ಸಾಧ್ಯವಾಗುವಂತೆ ಕಾಯ್ದೆಯ ಉಪಬಂಧಗಳ ಅನುಸಾರ ಪರ್ಯಾಪ್ತ ಲೆಕ್ಕದಾಖಲೆಗಳ ನಿರ್ವಹಣೆ; ಸೂಕ್ತ ಲೇಖಾ ಕಾರ್ಯನೀತಿಗಳ ಆಯ್ಕೆ ಮತ್ತು ಅನ್ವಯ; ಜವಾಬ್ದಾರಿಯುತವೂ ದೂರದೃಷ್ಟಿಯವೂ ಆದ ತೀರ್ಮಾನಗಳು ಮತ್ತು ಅಂದಾಜುಗಳನ್ನು ಮಾಡುವುದು; ನೈಜ ಮತ್ತು ನಿಷ್ಪಕ್ಷಪಾತವಾದ ನೋಟವನ್ನು ಒದಗಿಸುವ ಹಾಗೂ ಮೇಲೆ ಹೇಳಿದಂತೆ ಹೋಲ್ಡಿಂಗ್ ಕಂಪೆನಿಯ ನಿರ್ದೇಶಕರು ಕ್ರೋಢೀಕೃತ ಹಣಕಾಸು ತಃಖ್ತೆಗಳ ಸಿದ್ಧಪಡಿಸುವಿಕೆಯ ಉದ್ದೇಶಕ್ಕೆ ಬಳಸಿಕೊಂಡ ಮೋಸ ಅಥವಾ ತಪ್ಪುಗಳ ಕಾರಣದಿಂದ ಉಂಟಾದ ವಾಸ್ತವಿಕ ಅಪಹೇಳಿಕೆಗಳಿಲ್ಲದ ಇಂಡ್ ಎಎಸ್ ಹಣಕಾಸು ತಃಖ್ತೆಗಳ ಸಿದ್ಧಪಡಿಸುವಿಕೆ ಮತ್ತು ಪ್ರಸ್ತುತಿಗೆ ಸಂಗತವಾಗುವಂತೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಆಂತರಿಕ ನಿಯಂತ್ರಣ ವ್ಯವಸ್ಥೆಯ ವಿನ್ಯಾಸ, ಜಾರಿಗೊಳಿಸುವಿಕೆ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನೂ ಸಹ ಹೊಂದಿರುತ್ತದೆ.

ಕ್ರೋಢೀಕೃತ ಹಣಕಾಸು ತಃಖ್ತೆಗಳನ್ನು ಸಿದ್ಧಪಡಿಸುವಾಗ, ಮುಂದುವರೆಯುವ ಸಂಸ್ಥೆಯಾಗಿ ಗುಂಪಿನ ಸಾಮರ್ಥ್ಯವನ್ನು ಅಂದಾಜುಮಾಡುವುದು, ಅನ್ವಯವಾಗುವೆಡೆಗಳಲ್ಲಿ, ಮುಂದುವರೆಯುತ್ತಿರುವ ಸಂಸ್ಥೆಗೆ ಸಂಬಂಧಿಸಿದ ವಿಷಯಗಳನ್ನು ಪ್ರಕಟಿಸುವುದು ಹಾಗೂ ಆಡಳಿತ ಮಂಡಳಿಯು ಗುಂಪನ್ನು ನಿರಸನಗೊಳಿಸಲು, ಅಥವಾ ಕಾರ್ಯಾಚರಣೆಗಳನ್ನು ನಿಲ್ಲಿಸಲು ಉದ್ದೇಶಿಸದೆ ಇದ್ದಲ್ಲಿ ಅಥವಾ ವ್ಯಾವಹಾರಿಕವೂ ನೈಜವೂ ಆದ ಪರ್ಯಾಯವಾವುದೂ ಅದರ ಮುಂದೆ ಇಲ್ಲದಿರುವ ಸಂದರ್ಭ ಉದ್ಭವಿಸದಿದ್ದಲ್ಲಿ ಲೆಕ್ಕಪ್ರಕ್ರಿಯೆಗೆ ಮುಂದುವರೆಯುತ್ತಿರುವ ಸಂಸ್ಥೆಯ ಸ್ಥಿತಿಯನ್ನು ಬಳಸುವುದು ಕಂಪೆನಿಗಳ ಅನುಕ್ರಮವಾದ ನಿರ್ದೇಶಕ ಮಂಡಳಿಯ ಜವಾಬ್ದಾರಿಯಾಗಿದೆ.

ಗುಂಪಿಗೆ ಸಂಬಂಧಿಸಿದಂತೆ, ಕಂಪೆನಿಯ ಆರ್ಥಿಕ ವರದಿಗಾರಿಕೆಯ ಪ್ರಕ್ರಿಯೆಯೆ ಮೇಲ್ವಿಚಾರಣೆಯೂ ಸಹ ಕಂಪೆನಿಗಳ ಅನುಕ್ರಮವಾದ ನಿರ್ದೇಶಕ ಮಂಡಳಿಗಳ ಜವಾಬ್ದಾರಿಯಾಗಿರುತ್ತದೆ.

ಕ್ರೋಢೀಕೃತ ಇಂಡ್ ಎಎಸ್ ಹಣಕಾಸು ತಃಖ್ತೆಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧಕರ ಜವಾಬ್ದಾರಿ

ಕ್ರೋಢೀಕೃತ ಹಣಕಾಸು ತಃಖ್ತೆಗಳು, ಒಟ್ಟಾರೆಯಾಗಿ, ಮೋಸ ಅಥವಾ ದೋಷಗಳಿಂದಾಗಿ ಉದ್ಭವಿಸಬಹುದಾದ ವಾಸ್ತವಿಕ ಅಪಹೇಳಿಕೆಗಳಿಂದ ಮುಕ್ತವಾಗಿದೆ ಎನ್ನುವ ಬಗ್ಗೆ ಸೂಕ್ತವಾದ ಭರವಸೆಯನ್ನು ಪಡೆದುಕೊಳ್ಳುವುದು ಮತ್ತು ನಮ್ಮ ಅಭಿಪ್ರಾಯವನ್ನು ಒಳಗೊಳ್ಳುವ ಲೆಕ್ಕಪರಿಶೋಧಕರ ವರದಿಯನ್ನು ನೀಡುವುದು ನಮ್ಮ ಉದ್ದೇಶವಾಗಿದೆ. ಸೂಕ್ತವಾದ ಭರವಸೆ ಭರವಸೆಯ ಉನ್ನತ ಮಟ್ಟವಾಗಿದ್ದರೂ ಎಸ್ಎಗಳಿಗೆ ಅನುಸಾರವಾಗಿ ನಡೆಸಲಾದ ಲೆಕ್ಕಪರಿಶೋಧನೆಯು ವಾಸ್ತವಿಕ ಅಪಹೇಳಿಕೆಯನ್ನು, ಅದು ಇದ್ದಲ್ಲಿ, ಪತ್ತೆಹಚ್ಚುತ್ತದೆ ಎನ್ನುವ ಖಾತರಿಯೇನಿರುವುದಿಲ್ಲ. ಅಪಹೇಳಿಕೆಗಳು ಮೋಸ ಅಥವಾ ದೋಷಗಳಿಂದ ಉದ್ಭವಿಸಬಹುದಾಗಿದ್ದು ಈ ಹಣಕಾಸು ತಃಖ್ತೆಗಳ ಆಧಾರದ ಮೇಲೆ ಹೇಳುವುದಾದರೆ ಬಳಕೆದಾರರ ಆರ್ಥಿಕ ನಿರ್ಧಾರಗಳನ್ನು ಅವು ವೈಯಕ್ತಿಕವಾಗಿ ಅಥವಾ ಒಟ್ಟಾಗಿ ತಕ್ಕಮಟ್ಟಿಗೆ ಪ್ರಭಾವಿಸಲು ಸಾಧ್ಯವಿದ್ದ ಪಕ್ಷದಲ್ಲಿ ಅವು ಗಣನೀಯವಾಗುತ್ತವೆ. ಎಸ್ಎಗಳ ಅನುಸಾರವಾದ ಲೆಕ್ಕಪರಿಶೋಧನೆಯ ಭಾಗವಾಗಿ ನಾವು ಲೆಕ್ಕಪರಿಶೋಧನೆಯ ಉದ್ದಕ್ಕೂ ವೃತ್ತಿಪರವಾಗಿ ತೀರ್ಮಾನಮಾಡುವಿಕೆ ಮತ್ತು ವೃತ್ತಿಪರವಾದ ಸಂದೇಹಾತ್ಮಕ ದೃಷ್ಟಿಯಿಂದ ಮುಂದುವರೆದಿದ್ದೇವೆ. ಜೊತೆಗೆ,

- ಮೋಸ ಅಥವಾ ದೋಷದ ಕಾರಣದಿಂದಾಗಿ ಉದ್ಭವಿಸಿರುವ, ಕ್ರೋಢೀಕೃತ ಹಣಕಾಸು ತಃಖ್ತೆಗಳಲ್ಲಿನ ವಾಸ್ತವಿಕ ಅಪಹೇಳಿಕೆಗಳ ಅಪಾಯಗಳನ್ನು ಗುರುತಿಸಿ ಅಂದಾಜುಮಾಡಿ ಈ ಅಪಾಯಗಳಿಗೆ ಸ್ಪಂದಿಸುವಂತಹ ಲೆಕ್ಕಪರಿಶೋಧನಾ ಪ್ರಕ್ರಿಯೆಗಳನ್ನು ವಿನ್ಯಾಸಗೊಳಿಸಿ ತೊಡಗಿಸುವುದು ಮತ್ತು ನಮ್ಮ ಅಭಿಪ್ರಾಯಗಳಿಗೆ ಆಧಾರವನ್ನು ಒದಗಿಸಲು ಪರ್ಯಾಪ್ತವೂ ಸೂಕ್ತವೂ ಆದ ಲೆಕ್ಕಪರಿಶೋಧನಾ ಸಾಕ್ಷ್ಯಗಳನ್ನು ಪಡೆದುಕೊಳ್ಳುವುದು. ಮೋಸದಿಂದಾಗಿ ಉದ್ಭವಿಸುವ ವಾಸ್ತವಿಕ ಅಪಹೇಳಿಕೆಗಳನ್ನು ಪತ್ತೆಮಾಡದಿರುವಲ್ಲಿನ ಅಪಾಯವು ದೋಷದಿಂದ ಉದ್ಭವಿಸುವ ವಾಸ್ತವಿಕ ಅಪಹೇಳಿಕೆಗಳನ್ನು ಪತ್ತೆಮಾಡದಿರುವಲ್ಲಿನ ಅಪಾಯಕ್ಕಿಂತಲೂ ಹೆಚ್ಚಿನದಾಗಿದೆ, ಏಕೆಂದರೆ, ಮೋಸವು ದುರುದ್ದೇಶದ ಸಾಂಗತ್ಯ, ಖೋಟಾ ಸಹಿ, ಉದ್ದೇಶಪೂರ್ವಕವಾಗಿ ಕೈಬಿಡುವುದು, ತಪ್ಪಾಗಿ ನಿರೂಪಿಸುವುದು ಅಥವಾ ಆಂತರಿಕ ನಿಯಂತ್ರಣವನ್ನು ಮೀರುವುದು – ಇವನ್ನು ಒಳಗೊಳ್ಳಬಹುದಾಗಿದೆ.
- ಸಂದರ್ಭಕ್ಕೆ ಸೂಕ್ತವಾದ ಲೆಕ್ಕಪರಿಶೋಧನಾ ವಿಧಾನಗಳನ್ನು ವಿನ್ಯಾಸಗೊಳಿಸಲು ಲೆಕ್ಕಪರಿಶೋಧನೆಗೆ ಪ್ರಸ್ತುತವಾಗುವಂತೆ ಆಂತರಿಕ ನಿಯಂತ್ರಣ ವಿಧಾನದ ತಿಳುವಳಿಕೆಯನ್ನು ಹೊಂದುವುದು. ಕಾಯ್ದೆಯ ಪರಿಚ್ಛೇದ 143(3)(i)ರ ಅಡಿ, ಹೋಲ್ಡಿಂಗ್ ಕಂಪೆನಿಯು ಪರ್ಯಾಪ್ತವಾದ ಆಂತರಿಕ ನಿಯಂತ್ರಣ ವಿಧಾನಗಳನ್ನು ಹೊಂದಿದೆಯೇ ಮತ್ತು ಈ ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆಯೇ ಎಂಬ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವ ಜವಾಬ್ದಾರಿಯೂ ನಮ್ಮದಾಗಿದೆ.
- ಆಡಳಿತ ಮಂಡಳಿಯು ಬಳಸಿರುವ ಲೇಖಾ ನೀತಿಗಳ ಸೂಕ್ತತೆ ಹಾಗೂ ಲೇಖಾ ಅಂದಾಜುಗಳ ಮತ್ತು ಸಂಬಂಧಿತ ಪ್ರಕಟಣೆಗಳ ಯುಕ್ತತೆಯನ್ನು ಮೌಲ್ಯಮಾಪನ ಮಾಡುವುದು.
- ಮುಂದುವರೆಯುತ್ತಿರುವ ಸಂಸ್ಥೆ ಆಧಾರದ ಮೇಲೆ ಲೆಕ್ಕಗಳನ್ನು ಸಿದ್ಧಪಡಿಸುವಿಕೆಯ ಆಡಳಿತ ಮಂಡಳಿಯ ನಡೆಯ ಸೂಕ್ತತೆಯನ್ನು ಬಗ್ಗೆ ತೀರ್ಮಾನಮಾಡುವುದು ಮತ್ತು ಪಡೆದುಕೊಳ್ಳಲಾದ ಲೆಕ್ಕಪರಿಶೋಧನಾ ಸಾಕ್ಷ್ಯದ ಆಧಾರದ ಮೇಲೆ ಮುಂದುವರೆಯುವ ಸಂಸ್ಥೆಯಾಗಿ ಮುಂದುವರೆಯುವ ಗುಂಪಿನ ಸಾಮರ್ಥ್ಯದ ಬಗ್ಗೆ ಗಣನೀಯವಾದ ಅನುಮಾನಗಳನ್ನು ಹುಟ್ಟುಹಾಕುವ ಘಟನೆಗಳು ಅಥವಾ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ವಾಸ್ತವಿಕವಾದ ಅನಿಶ್ಚಿತತೆಯು ಇರುವುದೋ ಎಂಬ ಬಗ್ಗೆ ತೀರ್ಮಾನಮಾಡುವುದು. ವಾಸ್ತವಿಕ ಅನಿಶ್ಚಿತತೆ ಇದೆ ಎಂದು ನಾವು ತೀರ್ಮಾನಮಾಡಿದಲ್ಲಿ ಕ್ರೋಢೀಕೃತ ಹಣಕಾಸು ತಃಖ್ತೆಗಳಲ್ಲಿನ ಸಂಬಂಧಿತ ಪ್ರಕಟಣೆಗಳಿಗೆ ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ನಾವು ಗಮನವನ್ನು ಸೆಳೆಯಬೇಕಾಗುತ್ತದೆ, ಅಥವಾ ಇಂತಹ ಪ್ರಕಟಣೆಗಳು ಪರ್ಯಾಪ್ತವಾಗಿರದಿದ್ದಲ್ಲಿ ನಾವು ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಿಕೊಳ್ಳಬೇಕಾಗುತ್ತದೆ. ನಮ್ಮ ತೀರ್ಮಾನಗಳು ನಮ್ಮ ಲೆಕ್ಕಪರಿಶೋಧಕರ ವರದಿಯ ದಿನಾಂಕದವರೆಗೆ ನಾವು ಕಲೆಹಾಕಿರುವ ಲೆಕ್ಕಪರಿಶೋಧನಾ ಸಾಕ್ಷ್ಯವನ್ನು ಆಧರಿಸಿರುತ್ತದೆ. ಆದರೆ, ಭವಿಷ್ಯದ ಘಟನೆಗಳು ಅಥವಾ ಸಂಗತಿಗಳು ಗುಂಪು ಮುಂದುವರೆಯು ಸಂಸ್ಥೆಯಾಗಿ ಉಳಿಯದಿರುವುದಕ್ಕೆ ಕಾರಣವಾಗಬಹುದು.
- ಪ್ರಕಟಣೆಗಳೂ ಸೇರಿದಂತೆ, ಕ್ರೋಢೀಕೃತ ಹಣಕಾಸು ತಃಖ್ತೆಗಳ ಒಟ್ಟಾರೆ ಪ್ರಸ್ತುತಿ, ರಚನೆ ಮತ್ತು ವಸ್ತುವಿಷಯದ ಮೌಲ್ಯಮಾಪನ ಮಾಡುವುದು ಮತ್ತು ನ್ಯಾಯಬದ್ಧವಾದ ಪ್ರಸ್ತುತಿಯನ್ನು ಸಾಧಿಸುವ ರೀತಿಯಲ್ಲಿ ಕ್ರೋಢೀಕೃತ ಹಣಕಾಸು ತಃಖ್ತೆಗಳು ಮೂಲದಲ್ಲಿನ ವ್ಯವಹಾರಗಳು ಮತ್ತು ಆಗುಹೋಗುಗಳನ್ನು ಪ್ರಕಟಿಸುವತ್ತವೆಯೇ ಎಂಬುವುದರತ್ತ ಗಮನಹರಿಸುವುದು.
- ಕ್ರೋಢೀಕೃತ ಇಂಡ್ ಎಎಸ್ ಹಣಕಾಸು ತಃಖ್ತೆಗಳ ಮೇಲೆ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಾಧ್ಯವಾಗುವಂತೆ, ಗುಂಪಿನ ಒಳಗಿನ ಸಂಸ್ಥೆಗಳು ಅಥವಾ ವ್ಯಾಪಾರಿ ಚಟುವಟಿಕೆಗಳ ಹಣಕಾಸು ಸ್ಥಿತಿಗತಿಗಳ ಬಗ್ಗೆ ಹಾಗೂ ನಾವು ಯಾವ ಸಹಯೋಗಿ ಸಂಸ್ಥೆಗಳು ಮತ್ತು ಜಂಟಿ ಉಪಕ್ರಮಗಳ ಸ್ವತಂತ್ರ ಲೆಕ್ಕಪರಿಶೋಧಕರಾಗಿ ಹಣಕಾಸು ಮಾಹಿತಿಯ ಲೆಕ್ಕಪರಿಶೋಧನೆಯನ್ನು ನಡೆಸಿದ್ದೇವೆಯೋ ಅವುಗಳ ಆರ್ಥಿಕ ಮಾಹಿತಿಯನ್ನು ಕುರಿತಾಗಿ ಪರ್ಯಾಪ್ತವೂ ಸೂಕ್ತವೂ ಆದ ಲೆಕ್ಕಪರಿಶೋಧನಾ ಸಾಕ್ಷ್ಯವನ್ನು ಪಡೆದುಕೊಳ್ಳುವುದು. ನಾವು ಯಾವ ಉಪಕ್ರಮಗಳ ಸ್ವತಂತ್ರ ಲೆಕ್ಕಪರಿಶೋಧಕರಾಗಿರುವೆವೋ ಮತ್ತು ಯಾವು ಸಂಸ್ಥೆಗಳು ಕ್ರೋಢೀಕೃತ ಹಣಕಾಸು ತಃಖ್ತೆಗಳ ಭಾಗವಾಗಿವೆಯೋ ಅಂತಹವುಗಳ ಇಂಡ್ ಎಎಸ್ ಹಣಕಾಸು ತಃಖ್ತೆಗಳ ಲೆಕ್ಕಪರಿಶೋಧನೆಯ ನಿರ್ದೇಶನ, ಮೇಲ್ವಿಚಾರಣೆ ಮತ್ತು ನಡೆಸುವಿಕೆಯ ಜವಾಬ್ದಾರಿ ನಮ್ಮದಾಗಿರುತ್ತದೆ. ಕ್ರೋಢೀಕೃತ ಹಣಕಾಸು ತಃಖ್ತೆಗಳ ಭಾಗವಾಗಿರುವ ಇತರ ಸಂಸ್ಥೆಗಳಿಗೆ ಅನ್ಯರು ಲೆಕ್ಕಪರಿಶೋಧಕರಾಗಿದ್ದು ಅವುಗಳ ಲೆಕ್ಕಪರಿಶೋಧನೆಯ ನಿರ್ದೇಶನ, ಮೇಲ್ವಿಚಾರಣೆ ಮತ್ತು ನಡೆಸುವಿಕೆಯ ಜವಾಬ್ದಾರಿ ಅನುಕ್ರಮವಾದ ಲೆಕ್ಕಪರಿಶೋಧಕರದ್ದಾಗಿರುತ್ತದೆ. ನಾವು ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಗಳಿಗೆ ಮಾತ್ರ ಜವಾಬ್ದಾರರಾಗಿರುತ್ತೇವೆ.

ನಮ್ಮ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಗುರುತಿಸಲಾಗುವ ಆಂತರಿಕ ನಿಯಂತ್ರಣದಲ್ಲಿನ ಮಹತ್ವಪೂರ್ಣ ಕೊರತೆಗಳೂ ಸೇರಿದಂತೆ, ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಕಾಲ ಹಾಗೂ ಮಹತ್ವಪೂರ್ಣ ಲೆಕ್ಕಪರಿಶೋಧನಾ ಪರಿಶೀಲನೆಗಳನ್ನು ಸಂಸ್ಥೆಯ ಆಡಳಿತದ ಜವಾಬ್ದಾರಿಯನ್ನು ಹೊಂದಿರುವವರಿಗೆ ತಿಳಿಸುತ್ತೇವೆ.

ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಪ್ರಸ್ತುತವಾದ ನೈತಿಕ ಅಗತ್ಯಗಳನ್ನು ಪಾಲಿಸಿರುವ ಬಗ್ಗೆ ಒಂದು ಹೇಳಿಕೆಯನ್ನು ಸಹ ಸಂಸ್ಥೆಯ ಆಡಳಿತದ ಜವಾಬ್ದಾರಿಯನ್ನು ಹೊಂದಿರುವವರಿಗೆ ನಾವು ಒದಗಿಸಿರುತ್ತೇವೆ. ಜೊತೆಗೆ, ನಮ್ಮ ಸ್ವಾತಂತ್ರ್ಯದ ಮೇಲೆ ಪರಿಣಾಮವನ್ನು ತಕ್ಕಮಟ್ಟಿಗೆ ಬೀರಬಹುದಾದ ಎಲ್ಲ ಸಂಬಂಧಗಳು ಮತ್ತು ಇತರ ವಿಷಯಗಳ ಬಗ್ಗೆ ಹಾಗೂ ಅನ್ವಯವಾಗುವೆಡೆಗಳಲ್ಲಿ ಸಂಬಂಧಿತ ಸುರಕ್ಷಾಕ್ರಮಗಳ ಬಗ್ಗೆಯೂ ಅವರಿಗೆ ತಿಳಿಸಿರುತ್ತೇವೆ.

ಸಂಸ್ಥೆಯ ಆಡಳಿತದ ಜವಾಬ್ದಾರಿಯನ್ನು ಹೊಂದಿರುವವರಿಗೆ ನಾವು ತಿಳಿಸಿರುವ ವಿಷಯಗಳ ಪೈಕಿ, 31 ಮಾರ್ಚ್ 2020ಕ್ಕೆ ಕೊನೆಗೊಂಡ ಹಣಕಾಸು ವರ್ಷದ ಕ್ರೋಢೀಕೃತ ಹಣಕಾಸು ತಃಖ್ತೆಗಳ ಲೆಕ್ಕಪರಿಶೋಧನೆಯಲ್ಲಿನ ಅತ್ಯಂತ ಮಹತ್ವಪೂರ್ಣ ಅಂಶಗಳನ್ನು ನಿರ್ಧರಿಸುತ್ತೇವೆ

ಹಾಗೂ ಇವು ಪ್ರಧಾನ ಲೆಕ್ಕಪರಿಶೋಧನಾ ವಿಷಯಗಳಾಗುತ್ತವೆ. ಕಾನೂನು ಅಥವಾ ನಿಬಂಧನೆ ವಿಷಯದ ಸಾರ್ವಜನಿಕ ಪ್ರಕಟಣೆಗೆ ಅವಕಾಶವೀಯದ ಸಂದರ್ಭವನ್ನು ಹೊರತುಪಡಿಸಿ ನಾವು ಈ ವಿಷಯಗಳನ್ನು ನಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸುತ್ತೇವೆ. ಅಥವಾ ತೀರ ಅಪರೂಪದ ಸಂದರ್ಭಗಳಲ್ಲಿ, ಕೆಲವು ವಿಷಯಗಳನ್ನು, ಅವುಗಳನ್ನು ತಿಳಿಸಿದಲ್ಲಿ ಸಾರ್ವಜನಿಕ ಹಿತದ ಲಾಭಗಳಿಗಿಂತಲೂ ವ್ಯತಿರಿಕ್ತವಾದ ಪರಿಣಾಮಗಳೇ ಬಹುತೇಕ ಹೆಚ್ಚಾಗಬಹುದಾದ ಸಂದರ್ಭವಿದ್ದಲ್ಲಿ, ತಿಳಿಸಬಾರದೆಂದು ನಾವು ನಿರ್ಧರಿಸುತ್ತೇವೆ.

ಲೆಕ್ಕಪರಿಶೋಧನಾ ಅಭಿಪ್ರಾಯಗಳಿಗೆ ಆಧಾರ:

ಎ. ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್‌ನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ನಾವು ಕೆಳಗಿನ ಅಂಶಗಳನ್ನು ಗಮನಿಸಿರುತ್ತೇವೆ:

1. ಗುತ್ತಿಗೆ ವ್ಯಾಜ್ಯ:

ತಿಮ್ಮಪ್ಪನಗುಡಿ ಕಬ್ಬಿಣ ಅದಿರು ಗಣಿಯ 621.59 ಪ್ರದೇಶದ ಪೈಕಿ 36.5 ಹೆಕ್ಟೇರು ಪ್ರದೇಶವನ್ನು ಮೊದಲಿಗೆ ಕಂಪೆನಿಗೆ ಗುತ್ತಿಗೆ ನೀಡಲಾಗಿತ್ತು ಮತ್ತು ತದನಂತರದಲ್ಲಿ ಇವನ್ನು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಅನುಕ್ರಮವಾಗಿ ಶ್ರೀ ಎಚ್ ರಂಗನ್ ಗೌಡ ಅವರಿಗೆ ಗುತ್ತಿಗೆಗೆ ನೀಡಿತು. ಸಿಇಸಿ ವರದಿಯನ್ನು ಸರ್ವೋಚ್ಚ ನ್ಯಾಯಾಲಯವು ಒಪ್ಪಿಕೊಂಡಿದ್ದು, ಈ ಪೈಕಿ 2.54 ಹೆಕ್ಟೇರು ಪ್ರದೇಶ ಅತಿಕ್ರಮಣವಾಗಿರುವ ಕುರಿತು ನ್ಯಾಯಾಲಯದಲ್ಲಿ ವ್ಯಾಜ್ಯದಲ್ಲಿವೆ. ಈ ನಿಟ್ಟಿನಲ್ಲಿ ಹೊರಬರುವ ತೀರ್ಪು ಕಂಪೆನಿಯ ಮೇಲೆ ಆರ್ಥಿಕ ಪರಿಣಾಮವನ್ನು ಬೀರಲಿದೆ.

2. ಅರಣ್ಯ ಅಭಿವೃದ್ಧಿ ತೆರಿಗೆ:

i) ಗುಂಪು 1–4–2000 ದಿಂದ 26–08–2008ರ ವರೆಗಿನ ಅವಧಿಗೆ ಅರಣ್ಯ ಅಭಿವೃದ್ಧಿ ತೆರಿಗೆಯ ಹಕ್ಕುಸಲ್ಲಿಕೆಗೆ ವಿರುದ್ಧವಾಗಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹಿಂಪಡೆದಿದೆ. ಕರ್ನಾಟಕ ಸರ್ಕಾರದ ನಿರ್ದೇಶನಾನುಸಾರ ಹೊಂದಾಣಿಕೆ ಮಾಡಿಕೊಂಡ ನಂತರ ಕಂಪನಿ ಪಾವತಿಸಬೇಕಿರುವ ಮೊತ್ತ ಕಂಪನಿಯ ಲೆಕ್ಕದಂತೆ ರೂ. 71,16,51,454/– ಆಗಿರುತ್ತದೆ. ಕಂಪನಿಯು 2010–11ರ ಹಣಕಾಸು ವರ್ಷದಲ್ಲಿ ರೂ. 35,00,00,000/– ಮತ್ತು 2013–14ರ ಹಣಕಾಸು ವರ್ಷದಲ್ಲಿ ರೂ. 36,16,51,453/– ಪಾವತಿಸಿದೆ. ಈ ಪೈಕಿ ಹಣಕಾಸು ವರ್ಷ 2011–12ರಲ್ಲಿ ಕಂಪನಿಯು ರೂ. 11,04,19,823/– ಮೊತ್ತವನ್ನು ತೊಡೆದುಹಾಕಿದೆ ಮತ್ತು ಉಳಿಕೆ ರೂ. 60,12,31,631/– ಕ್ಕೆ 2013–14ರಲ್ಲಿ ಸಾಲಚೀಟಿಗಳನ್ನು ಸೃಷ್ಟಿಸಿದೆ. ಈ ಪೈಕಿ ರೂ. 6,94,98,677/– ಮೊತ್ತವನ್ನು ಕಂಪನಿ ಹೊಂದಿರುವ ಜಮಾ ಶಿಲ್ಕಿನೊಂದಿಗೆ ಹೊಂದಿಸುವ ಮೂಲಕ ವಸೂಲಿಮಾಡಲಾಗಿದೆ ಹಾಗೂ ಉಳಿಕೆ ರೂ. 53,17,32,954/– ಮೊತ್ತವನ್ನು ಸಂಬಂಧಿತ ಪಕ್ಷಗಳು ಗುರುತಿಸಿರುವುದೂ ಇಲ್ಲ, ಕಂಪನಿಯೂ ಇದಕ್ಕೆ ಹವಣಿಕೆ ಮಾಡಿರುವುದಿಲ್ಲ. ಆದರೆ, ಪರಿಷ್ಕೃತ ಲೆಕ್ಕಾಚಾರದ ಪ್ರಕಾರ ಸರ್ಕಾರಕ್ಕೆ ಪಾವತಿಸಬೇಕಿರುವ ನೈಜ ಮೊತ್ತ ರೂ. 6148.87 ಲಕ್ಷವಾಗಿದ್ದು ಪಾವತಿಸಲಾಗಿರುವ ರೂ 967.64 ಲಕ್ಷ ಹೆಚ್ಚುವರಿ ಮೊತ್ತವನ್ನು (7116.57 ಲಕ್ಷ–6148.87 ಲಕ್ಷ) ಸಕಾರದಿಂದ ವಸೂಲಿಮಾಡಬೇಕಿದೆ ಹಾಗೂ ಖರೀದಿದಾರರ ಮೇಲೆ ಸೃಷ್ಟಿಸಲಾದ ರೂ 967.64 ಲಕ್ಷ ಮೊತ್ತದ ಸಾಲಚೀಟಿಗಳನ್ನು ಹೊಂದಾಣಿಕೆಯ ನಂತರ ವ್ಯತಿರಿಕ್ತಗೊಳಿಸಬೇಕಿದೆ. ಈ ಮಟ್ಟಿಗೆ ಸರ್ಕರದಿಂದ ಬರಬೇಕಿರುವುದನ್ನು ಕಡಿಮೆ ತೋರಿಸಲಾಗಿದೆ ಹಾಗೂ ಖರೀದಿದಾರರಿಂದ ಬರಬೇಕಿರುವ ಮೊತ್ತವನ್ನು ಹೆಚ್ಚಿಗೆ ತೋರಿಸಲಾಗಿದೆ.

ii) ಗುಂಪು ಎಫ್‌ಡಿಟಿ ಸಂದಾಯವನ್ನು 26.08.2008ರ ನಂತರ ಘಟಿಸಿದ ಮಾರಾಟಗಳ ಮೇಲೆ ಮೌಲ್ಯಾನುಸಾರವಾಗಿ 12% ಅಥವಾ 6% ದಂತೆ ಮಾಡುತ್ತಿದೆ. ಆದರೆ, ಮೇಲಿನದರ ಜೊತೆಗೆ ಅರಣ್ಯ ಇಲಾಖೆ ಮೌಲ್ಯಾನುಸಾರ ಆಧಾರಿತ ಶುಲ್ಕಕ್ಕೆ ಬದಲಾಗಿ, ಯಾವುದು ಹೆಚ್ಚಿದೆಯೋ ಅದರಂತೆ ಎನ್‌ಎಮ್ ಡಿಸಿ/ಎಮ್‌ಎಮ್‌ಎಲ್/ಡಿಎಮ್‌ಜಿ (ಐಬಿಎಮ್) ಸೂಚಿತ ದರಗಳ ಪೈಕಿ ಹೆಚ್ಚಿನ ದರದ ಮೇಲೆ 12% ದಂತೆ ಎಫ್‌ಡಿಟಿಗಾಗಿ ರೂ. 58,37,89,827/– ಮೊತ್ತದ ಹೆಚ್ಚುವರಿ ಬೇಡಿಕೆಯನ್ನು ಮುಂದಿಟ್ಟಿದೆ. ಈ ಸಂಬಂಧವಾಗಿ ಕಂಪನಿಯು ಲೆಕ್ಕಪತ್ರಗಳಲ್ಲಿ ಯಾವುದೇ ಹವಣಿಕೆ ಮಾಡಿಲ್ಲ ಅಥವಾ ಹಕ್ಕಸಲ್ಲಿಕೆಗೆ ಪ್ರತಿಯಾಗಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಬದಲಿಗೆ ಅರಣ್ಯ ಇಲಾಖೆಯ ಬೇಡಿಕೆಯನ್ನು ಮನ್ನಾ ಮಾಡುವಂತೆ ಕರ್ನಾಟಕ ಸರ್ಕಾರವನ್ನು ಕೋರಿದೆ. ಇಷ್ಟರ ಮಟ್ಟಿಗೆ ಲಾಭವನ್ನು ರೂ. 58.38 ಕೋಟಿಯಷ್ಟು ಹೆಚ್ಚಿಗೆ ತೋರಿಸಲಾಗಿದೆ ಹಾಗೂ ಬಾಕಿ ಹೊಣೆಗಳನ್ನು ರೂ. 58.38 ಕೋಟಿಯಷ್ಟು ಕಡಿಮೆ ತೋರಿಸಲಾಗಿದೆ.

iii) ರಿಟ್ ಅರ್ಜಿ ಸಂ. 863/2009, ದಿನಾಂಕ 28.05.2009ಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದ ಆದೇಶದ ಅನುಸಾರ 2009ರಿಂದ 2015ರ ವರೆಗಿನ ಅವಧಿಗೆ ಎಫ್‌ಡಿಟಿ ಮೇಲಿನ ಬಾಕಿ ಮತ್ತು ಬಡ್ಡಿಯ ಕಡೆಗೆ ಉಪ ಅರಣ್ಯ ಸಂರಕ್ಷಕರಿಂದ ಪತ್ರ ಸಂ. ಎಸ್‌ಟಿಆರ್/ಎಫ್‌ಡಿಟಿ/ಎಂಎಂಎಲ್/995/2015–16 ಮುಖಾಂತರ ಉಬ್ಬಲಗುಂಡಿ ಕಬ್ಬಿಣದ ಅದಿರು ಗಣಿಗಳಿಗೆ ಸಂಬಂಧಿಸಿದಂತೆ ರೂ. 78,47,614/– ಮೊತ್ತದ ಬೇಡಿಕೆಯನ್ನು ಗುಂಪು ಪಡೆದುಕೊಂಡಿದೆ. ತತ್ಸಂಬಂಧವಾಗಿ ಉಪ ಅರಣ್ಯ ಸಂರಕ್ಷರು ಬಳ್ಳಾರಿ ಇವರು ತಮ್ಮ ಪತ್ರ ಸಂಖ್ಯೆ ಎಂಎಂಜಿ.ಸಿಆರ್ 67/92–93 (ಎಂಎಂಎಲ್) ದಿನಾಂಕ 11.03.2020 ರಲ್ಲಿ ಅರಣ್ಯ ತೆರಿಗೆ ಮತ್ತು ಬಡ್ಡಿ ಸೇರಿ ಒಟ್ಟು 319.25 ಲಕ್ಷಗಳನ್ನು ಪಾವತಿಸಲು

ಬೇಡಿಕೆ ಪತ್ರ ಸಲ್ಲಿಸಿರುತ್ತಾರೆ ಈ ಸಂಬಂಧವಾಗಿ ಕಂಪನಿಯು ಲೆಕ್ಕಪತ್ರಗಳಲ್ಲಿ ಯಾವುದೇ ಹವಣಿಕೆ ಮಾಡಿಲ್ಲ ಅಥವಾ ಹಕ್ಕಸಲ್ಲಿಕೆಗೆ ಪ್ರತಿಯಾಗಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಇಷ್ಟರ ಮಟ್ಟಿಗೆ ಲಾಭವನ್ನು ಹೆಚ್ಚಿಗೆ ತೋರಿಸಲಾಗಿದೆ ಹಾಗೂ ಬಾಕಿ ಹೊಣೆಗಳನ್ನು ಕಡಿಮೆತೋರಿಸಲಾಗಿದೆ.

iv) ರಿಟ್ ಅರ್ಜಿ ಸಂ. 863/2009, ದಿನಾಂಕ 28.05.2009ಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದ ಆದೇಶದ ಅನುಸಾರ 2009ರಿಂದ 2015ರ ವರೆಗಿನ ಅವಧಿಗೆ ಎಫ್‌ಡಿಟಿ ಮೇಲಿನ ಬಾಕಿ ಮತ್ತು ಬಡ್ಡಿಯ ಕಡೆಗೆ ಉಪ ಅರಣ್ಯ ಸಂರಕ್ಷಕರಿಂದ ಪತ್ರ ಸಂ. ಎಸ್‌ಟಿಆರ್/ಎಫ್‌ಡಿಟಿ/ಎಂಎಂಎಲ್/995/2015–16 ಮುಖಾಂತರ ತಿಮ್ಮಪ್ಪನಗುಂಡಿ ಕಬ್ಬಿಣದ ಅದಿರು ಗಣಿಗಳಿಗೆ ಸಂಬಂಧಿಸಿದಂತೆ ರೂ. 56,85,05,357/– ಮೊತ್ತದ ಬೇಡಿಕೆಯನ್ನು ಗುಂಪು ಪಡೆದುಕೊಂಡಿದೆ. ತತ್ಸಂಬಂಧವಾಗಿ ಉಪ ಅರಣ್ಯ ಸಂರಕ್ಷರು ಬಳ್ಳಾರಿ ಇವರು ತಮ್ಮ ಪತ್ರ ಸಂಖ್ಯೆ ಎಂಎಂಜಿ.ಸಿಆರ್ 67/92–93 (ಎಂಎಂಎಲ್) ದಿನಾಂಕ 11.03.2020 ರಲ್ಲಿ ಅರಣ್ಯ ತೆರಿಗೆ ಮತ್ತು ಬಡ್ಡಿ ಸೇರಿ ಒಟ್ಟು 10606.14 ಲಕ್ಷಗಳನ್ನು ಪಾವತಿಸಲು ಬೇಡಿಕೆ ಪತ್ರ ಸಲ್ಲಿಸಿರುತ್ತಾರೆ ಈ ಸಂಬಂಧವಾಗಿ ಕಂಪನಿಯು ಲೆಕ್ಕಪತ್ರಗಳಲ್ಲಿ ಯಾವುದೇ ಹವಣಿಕೆ ಮಾಡಿಲ್ಲ ಅಥವಾ ಹಕ್ಕಸಲ್ಲಿಕೆಗೆ ಪ್ರತಿಯಾಗಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಇಷ್ಟರ ಮಟ್ಟಿಗೆ ಲಾಭವನ್ನು ಹೆಚ್ಚಿಗೆ ತೋರಿಸಲಾಗಿದೆ ಹಾಗೂ ಹೊಣೆಗಳನ್ನು ಕಡಿಮೆತೋರಿಸಲಾಗಿದೆ.

v) ಉಪ ಅರಣ್ಯ ಸಂರಕ್ಷರು ಬಳ್ಳಾರಿ ಇವರು ತಮ್ಮ ಪತ್ರ ಸಂಖ್ಯೆ ಎಂಎಂಜಿ.ಸಿಆರ್ 67/92–93 (ಎಂಎಂಎಲ್) ದಿನಾಂಕ 11.03.2020 ರಲ್ಲಿ ಸುಬ್ಬರಾಯನಹಳ್ಳಿ ಕಬ್ಬಿಣದ ಅದಿರು ಗಣಿಗೆ ಸಂಬಂಧಿಸಿದಂತೆ ಅರಣ್ಯ ತೆರಿಗೆ ಮತ್ತು ಬಡ್ಡಿ ಸೇರಿ ಒಟ್ಟು 4240.24 ಲಕ್ಷಗಳನ್ನು ಪಾವತಿಸಲು ಗುಂಪಿಗೆ ಬೇಡಿಕೆ ಪತ್ರ ಸಲ್ಲಿಸಿರುತ್ತಾರೆ ಈ ಸಂಬಂಧವಾಗಿ ಕಂಪನಿಯು ಲೆಕ್ಕಪತ್ರಗಳಲ್ಲಿ ಯಾವುದೇ ಹವಣಿಕೆ ಮಾಡಿಲ್ಲ ಅಥವಾ ಹಕ್ಕಸಲ್ಲಿಕೆಗೆ ಪ್ರತಿಯಾಗಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಇಷ್ಟರ ಮಟ್ಟಿಗೆ ಲಾಭವನ್ನು ಹೆಚ್ಚಿಗೆ ತೋರಿಸಲಾಗಿದೆ ಹಾಗೂ ಹೊಣೆಗಳನ್ನು ಕಡಿಮೆತೋರಿಸಲಾಗಿದೆ.

3. ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ:

ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಸಲುವಾಗಿ ಗುಂಪು ರೂ. 421.13 ಲಕ್ಷ ಮೊತ್ತವನ್ನು ವ್ಯಯಿಸಿದೆ ಮತ್ತು ವೆಚ್ಚವನ್ನು ಅನುಭವಿಸಿದ್ದಕ್ಕಾಗಿ ಸಿಎಸ್‌ಆರ್‌ಗಾಗಿ ರೂ. 786.45 ಲಕ್ಷ ಮೊತ್ತವನ್ನು ಮುಂಗಡವಾಗಿ ಪಾವತಿಸಿದೆ; ಆದರೆ, ಕಳೆದ ಮೂರು ವರ್ಷಗಳ ಒಟ್ಟು ಲಾಭದ 2% ದಂತೆ ರೂ. 662.06 ಲಕ್ಷದಷ್ಟು ಮೊತ್ತವನ್ನು ಸಿಎಸ್‌ಆರ್ ಚಟುವಟಿಕೆಗೆ ವ್ಯಯಿಸಬೇಕಿರುತ್ತದೆ.

4. ಇತರ ಚಾಲ್ತಿಯಲ್ಲದ ಆಸ್ತಿಗಳು : ಟಿಪ್ಪಣಿ ಸಂಖ್ಯೆ 05 ರೂ. 57.19 ಕೋಟಿ:

ಈ ಮೊತ್ತದಲ್ಲಿ ವಿಜಯ ಬ್ಯಾಂಕ್ (ಪ್ರಸ್ತುತ ಬ್ಯಾಂಕ್ ಆಫ್ ಬರೋಡ), ಬೇಗೂರು – ಇಲ್ಲಿ ಇರಿಸಲಾಗಿದ್ದ ರೂ. 15.00 ಕೋಟಿ ಸೇರಿದ್ದು ಈ ಮೊತ್ತವನ್ನು ಪಕ್ವತೆಯ ನಂತರ ಭರಿಕೆಮಾಡಿರುವುದಿಲ್ಲ. ಮೊತ್ತವನ್ನು ಬ್ಯಾಂಕ್ ಪ್ರಬಂಧಕರು ಅಪಬಳಕೆ ಮಾಡಿಕೊಂಡಿದ್ದು ನ್ಯಾಯಾಲಯದ ಆದೇಶದಂತೆ ಬ್ಯಾಂಕು ಠೇವಣಿ ಇರಿಸಿದ ಮೊತ್ತವನ್ನು ಬಡ್ಡಿಯೊಂದಿಗೆ ಮರುಪಾವತಿಸಬೇಕಿದೆ.

5. ಗಣಿಗಾರಿಕೆ ಮತ್ತು ಭೂಗರ್ಭಶಾಸ್ತ್ರ ಇಲಾಖೆ:

ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಲೆಕ್ಕಪರಿಶೋಧನಾ ವರದಿಗಳ ಆಧಾರದ ಮೇಲೆ 2009–10, 2010–11 & 2011–12 ರ ಅವಧಿಗೆ (ಸುಬ್ಬರಾಯನಹಳ್ಳಿ, ತಿಮ್ಮಪ್ಪನಗುಡಿ ಮತ್ತು ಇತರ ಗಣಿಗಳಿಗೆ) ಮಾರ್ಚ್, 2013 ಮತ್ತು ಜುಲೈ, 2013ರ ತಿಂಗಳುಗಳ ವಿವಿಧ ದಿನಾಂಕಗಳಂದು ರೂ. 11,20,44,207/– ಮೊತ್ತದ ಹಕ್ಕುಸಲ್ಲಿಸಿದೆ. ಕಬ್ಬಿಣ ಅದಿರಿನ ಮಾರಾಟದಿಂದ ಬಂದ ರೂ. 11,20,44,207/– ಮೊತ್ತವನ್ನು ಮೇಲ್ವಿಚಾರಣಾ ಸಮಿತಿಯು ವಸೂಲುಮಾಡಿತು. ಉಪನಿರ್ದೇಶಕರು, ಗಣಿಗಳು ಮತ್ತು ಭೂಗರ್ಭ ಇಲಾಖೆ – ಇವರು ತಮ್ಮ ಪತ್ರ ಸಂಖ್ಯೆ: ಡಿಡಿಎಚ್/ಎಂಎಲ್/ಎಸ್‌ವೈ/ಇ–ಆಕ್ಷನ್/2013–14/6822 ಅನ್ವಯ ತಿಮ್ಮಪ್ಪನಗುಡಿಗೆ ಸಂಬಂಧಿಸಿದ ಕಬ್ಬಿಣ ಅದಿರನ್ನು ಮನ್ನಾಮಾಡಬೇಕೆಂದು ಮೇಲ್ವಿಚಾರಣಾ ಸಮಿತಿಗೆ ಸೂಚಿಸಿತ್ತು. ಆದರೆ ಲೇಖಾ ಕಾರ್ಯನೀತಿಗಳ ಪ್ರಕಾರ ಕಂಪೆನಿಯು ಮೇಲ್ವಿಚಾರಣಾ ಸಮಿತಿಯಿಂದ ವಸೂಲಾಗಬೇಕಿರುವ ರೂ. 4,48,46,000/– ಮೊತ್ತವನ್ನು ಆದಾಯವೆಂದು ಪರಿಗಣಿಸಿಲ್ಲ. ಅಷ್ಟರ ಮಟ್ಟಿಗೆ ಲಾಭ ಮತ್ತು ಬರಬೇಕಾದವುಗಳನ್ನು ಕಡಿಮೆ ತೋರಿಸಲಾಗಿದೆ.

6. ಪರಿಸರ ಸಂರಕ್ಷಣ ಶುಲ್ಕ:

2009–10ರ ವರ್ಷದಲ್ಲಿ ಪಡೆಯಲಾದ ಅರಣ್ಯವಲ್ಲದ ಭೂಮಿಗೆ ಸಂಬಂಧಿಸಿದಂತೆ ಪರಿಸರ ಸಂರಕ್ಷಣಾ ಶುಲ್ಕವಾಗಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಗುತ್ತಿಗೆ ಭೂಮಿಯ ಮೇಲೆ ಪ್ರತಿ ಹೆಕ್ಟೇರಿಗೆ ರೂ. 84,000/– ರಷ್ಟು ಬೇಡಿಕೆ ಇರಿಸಿದೆ. ಒಟ್ಟು ಬೇಡಿಕೆ ರೂ. 44,89,74,204/– ಆಗಿದೆ. ಆದರೆ, ಕಂಪೆನಿ ಹಣಕಾಸು ವರ್ಷಗಳು 2009–19ರ ಅವಧಿಯಲ್ಲಿ ಕಾರ್ಯಯುಕ್ತ ಗುತ್ತಿಗೆಗಳ ಮೇಲೆ ರೂ. 25,85,50,584/– ರಷ್ಟು ಹವಣಿಕೆ ಒದಗಿಸಿ ಸಂದಾಯಮಾಡಿದೆ ಮತ್ತು ಉಳಿಕೆ ರೂ. 19,04,23,620/– ರಷ್ಟು ಮೊತ್ತವನ್ನು ಕಾರ್ಯಯುಕ್ತವಲ್ಲದ ಗಣಿಗಳ ಮೇಲೆ ಹವಣಿಕೆ ಮಾಡಿದೆ. ಇದನ್ನು ಇತರ ದೀರ್ಘಾವಧಿ ಹೊಣೆ ಅಡಿ ತೋರಿಸಲಾಗಿದೆ.

7. **ದಾಸ್ತಾನುಗಳ ಮೌಲ್ಯಮಾಪನ:**

ಮೂರು ವರ್ಷಗಳಿಗೂ ಹೆಚ್ಚು ಕಾಲ ಸಂಗ್ರಹದಲ್ಲಿ ಉಳಿದಿರುವ ಮತ್ತು ಪ್ರದರ್ಶನಕ್ಕಿರಿಸಿರುವ ದಾಸ್ತಾನು ಹಾಗೂ ಮಾರ್ಪಡಿಸಲಾದ ಗ್ರಾನೈಟ್ ಸಾಮಗ್ರಿಗಳನ್ನು ದಾಸ್ತಾನಿನ ಮೌಲ್ಯದಲ್ಲಿ ಸೇರಿಸಿರುವುದಿಲ್ಲ. ಇಷ್ಟರ ಮಟ್ಟಿಗೆ ದಾಸ್ತಾನುಗಳನ್ನು ಕಡಿಮೆ ತೋರಿಸಲಾಗಿದೆ.

8. **ಭದ್ರತಾ ಠೇವಣಿ ಖಾತೆ : ರೂ. 877.23 ಲಕ್ಷ**

ಗ್ರಾಹಕರಿಗೆ ಸಂದಾಯವಾಗಬೇಕಿರುವ ಭದ್ರತಾ ಠೇವಣಿಯನ್ನು ಆಡಳಿತ ಮಂಡಳಿ ಸರಿಹೊಂದಿಸಿರುವುದಿಲ್ಲ ಹಾಗೂ ಇದನ್ನು ದೀರ್ಘಕಾಲೀನ ಹೊಣೆಗಳ ಅಡಿ ಪಾವತಿಯಾಗಬೇಕಾದ ಇತರೆ ಅಡಿ ತೋರಿಸಲಾಗಿದೆ. ಗ್ರಾಹಕರಿಂದ ಈ ಬಗ್ಗೆ ಸ್ಥಿರೀಕರಣಗಳನ್ನು ಸಹ ಪಡೆದುಕೊಂಡಿರುವುದಿಲ್ಲ. ಸ್ಥಿರೀಕರಣ/ಹೊಂದಾಣಿಕೆಗಳ ಅನುಪಸ್ಥಿತಿಯಲ್ಲಿ ಇವು ಕಂಪೆನಿಯ ಆರ್ಥಿಕ ತಖ್ತೆಗಳ ಮೇಲೆ ಬೀರುವ ಪರಿಣಾಮದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.

9. **ವ್ಯಾಪಾರಿ ವಸೂಲಾತಿಗಳು/ವ್ಯಾಪಾರಿ ಸಂದಾಯಗಳು ಮುಂತಾದವು:**

ಅನುಕ್ರಮವಾಗಿ ಟಿಪ್ಪಣಿ 14 ಮತ್ತು ಟಿಪ್ಪಣಿ 07 ರ ಪ್ರಕಾರ ವ್ಯಾಪಾರಿ ವಸೂಲಾತಿ/ವ್ಯಾಪಾರಿ ಸಂದಾಯದ ಶೀರ್ಷಿಕೆಯಡಿ ಇರುವ ಶಿಲ್ಕುಗಳು ಹೊಂದಾಣಿಕೆ ಮತ್ತು ಸ್ಥಿರೀಕರಣಕ್ಕೆ ಬದ್ಧವಾಗಿವೆ. ಸ್ಥಿರೀಕರಣ/ಹೊಂದಾಣಿಕೆಗಳ ಅನುಪಸ್ಥಿತಿಯಲ್ಲಿ ಇವು ಕಂಪೆನಿಯ ಆರ್ಥಿಕ ತಖ್ತೆಗಳ ಮೇಲೆ ಬೀರುವ ಪರಿಣಾಮದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.

10. **ಠೇವಣಿಗಳು, ಸಾಲಗಳು ಮತ್ತು ಮುಂಗಡ:**

ಠೇವಣಿಗಳು, ಸಾಲಗಳು ಮತ್ತು ಮುಂಗಡ ಶೀರ್ಷಿಕೆಯ ಅಡಿಯಲ್ಲಿನ ಶಿಲ್ಕುಗಳು ಸ್ಥಿರೀಕರಣ ಮತ್ತು ಹೊಂದಾಣಿಕೆಗೆ ಬದ್ಧವಾಗಿವೆ. ಸ್ಥಿರೀಕರಣ/ಹೊಂದಾಣಿಕೆಗಳ ಅನುಪಸ್ಥಿತಿಯಲ್ಲಿ ಇವು ಕಂಪೆನಿಯ ಆರ್ಥಿಕ ತಖ್ತೆಗಳ ಮೇಲೆ ಬೀರುವ ಪರಿಣಾಮದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.

11. **ಆಂತರಿಕ ಲೆಕ್ಕಪರಿಶೋಧನೆ ಮತ್ತು ಆಂತರಿಕ ನಿಯಂತ್ರಣ:**

ವಿಭಾಗಗಳು ಆಂತರಿಕ ಲೆಕ್ಕಪರಿಶೋಧನೆಯ ವ್ಯವಸ್ಥೆಯನ್ನು ಹೊಂದಿವೆ. ಆದರೆ, ಇತರ ಸಾಲಗಾರರ ಹೊಂದಾಣಿಕೆ, ದರಪಟ್ಟಿಗಳ ಸೃಷ್ಟಿ, ಇತರ ಸಾಲದಾರರ ಹೊಂದಾಣಿಕೆ, ಮೃತ ಬಾಡಿಗೆಯ ಹೊಂದಾಣಿಕೆ, ಯಂತ್ರೋಪಕರಣ ಬಾಡಿಗೆ ಶುಲ್ಕ, ಬ್ಯಾಂಕ್ ಹೊಂದಾಣಿಕೆ ಮತ್ತು ವ್ಯಾಟ್, ಸೇವಾ ತೆರಿಗೆ ಹಾಗೂ ಜಿಎಸ್‌ಟಿಗಳ ಅನುಸರಣೆಯಲ್ಲಿನ ಕೊರತೆಗಳು ನಮ್ಮನ್ನು ಕಂಪೆನಿಯಲ್ಲಿ ಅಸ್ತಿತ್ವದಲ್ಲಿರುವ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಪರಿಶೀಲಿಸಲು ಹಾಗೂ ಕಂಪೆನಿಯ ಆಂತರಿಕ ಲೆಕ್ಕಪರಿಶೋಧನೆ ಮತ್ತು ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಬಲಪಡಿಸಬೇಕೆಂದು ಅಭಿಪ್ರಾಯಪಡಲು ಒತ್ತಾಯಿಸುತ್ತದೆ. ಹಾಗೂ ಕಂಪೆನಿಯು ವರ್ಷದ ಆಂತರಿಕ ಲೆಕ್ಕಪರಿಶೋಧನಾ ವರದಿಗಳಲ್ಲಿನ ಪರಿಶೀಲನೆಗಳಿಗೆ ಅನುಸರಣೆಗಳನ್ನು ಸಲ್ಲಿಸಿರುವುದಿಲ್ಲ.

12. **ವಿಮೆ:**

ಕಂಪೆನಿಯ ಸ್ಥಿರಾಸ್ತಿಗಳು, ದಾಸ್ತಾನು ಮತ್ತು ನಗದು ಶಿಲ್ಕುಗಳ ವಿಮೆಯನ್ನು ಮಾಡಲಾಗಿಲ್ಲ. ಹಾಗಾಗಿ ಕಂಪೆನಿಯು ಮಾನವನಿರ್ಮಿತ ಅಥವಾ ಪ್ರಾಕೃತಿಕ ವಿಪತ್ತುಗಳು, ಅಪಘಾತಗಳು ಮತ್ತು ಕಳವು ಮುಂತಾದವುಗಳಿಂದ ಸಂಭವಿಸಬಹುದಾದ ಅಪಾಯಗಳಿಗೆ ಎದುರಾಗುವ ಸಾಧ್ಯತೆಯಿದೆ.

13. **ಕಂಪೆನಿಯ ವಿರುದ್ಧ ಬಾಕಿ ಇರುವ ಪ್ರಕರಣಗಳು**

ನಮಗೆ ಒದಗಿಸಲಾದ ಮಾಹಿತಿಯ ಪ್ರಕಾರ 31.03.2020ರಂದು ಇದ್ದಂತೆ ವಿವಿಧ ನ್ಯಾಯಾಲಯಗಳಲ್ಲಿ ಕಂಪೆನಿಯ ವಿರುದ್ಧ ಬಾಕಿ ಇರುವ ಪ್ರಕರಣಗಳ ವಿವರ ಇಂತಿವೆ:

ಮಧ್ಯಸ್ಥಿಕೆ ಪ್ರಕರಣಗಳು	07 ಪ್ರಕರಣಗಳು
ಟ್ರಯಲ್ ನ್ಯಾಯಾಲಯ ಪ್ರಕರಣಗಳು	19 ಪ್ರಕರಣಗಳು
ಸರ್ವೋಚ್ಚ ನ್ಯಾಯಾಲಯ ಪ್ರಕರಣಗಳು	05 ಪ್ರಕರಣಗಳು
ಉಚ್ಚ ನ್ಯಾಯಾಲಯ ಪ್ರಕರಣಗಳು	85 ಪ್ರಕರಣಗಳು
ಸಿಜಿಐಟಿ/ಕಾರ್ಮಿಕ ನ್ಯಾಯಾಲಯ ಪ್ರಕರಣಗಳು	14 ಪ್ರಕರಣಗಳು
ಒಟ್ಟು	**130 ಪ್ರಕರಣಗಳು**

ಕಂಪೆನಿಯು ಮೇಲಿನ ಪ್ರಕರಣಗಳಿಗೆ ಸಂಬಂಧಿಸಿದ ಯಾವುದೇ ಹಕ್ಕುಸಲ್ಲಿಕೆಗಳನ್ನು ಈದಿನದವರೆಗೆ ಗುರುತಿಸಿರುವುದಿಲ್ಲ ಮತ್ತು ಲೆಕ್ಕಪುಸ್ತಕಗಳಲ್ಲಿ ಈ ಸಂಬಂಧ ಹವಣಿಕೆ ಮಾಡಿರುವುದಿಲ್ಲ. ಆ ಮಟ್ಟಿಗೆ ಇಂಡ್ ಎಎಸ್ 37ರ ಅನುಸರಣೆ ಆಗಿರುವುದಿಲ್ಲ.

14. ಲೆಕ್ಕಪರಿಶೋಧನಾ ವರದಿಯಲ್ಲಿನ ನಮ್ಮ ಪರಿಶೀಲನೆಗಳ ಪರಿಣಾಮ

ಮೇಲೆ ಹೇಳಲಾಗಿರುವ ಪರಿಶೀಲನೆಗಳಿಂದ ಹಣಕಾಸು ತಃಖ್ತೆಯ ಮೇಲಿನ ಒಟ್ಟಾರೆ ಪರಿಣಾಮ ಕೆಳಗಿನಂತಿದೆ:

(ಲಕ್ಷ ರೂಗಳಲ್ಲಿ)

ವರದಿಯ ಕಂಡಿಕೆ ಸಂ.	ಪರಿಶೀಲನೆಯ ವಿಧ	2018–19ರ ಲಾಭವನ್ನು ಹೆಚ್ಚಿಗೆ ತೋರಿಸಿರುವುದು	2018–19ರ ಲಾಭವನ್ನು ಕಡಿಮೆ ತೋರಿಸಿರುವುದು	2018–19ರ ಹೊಣೆ	2018–19ರ ಆಸ್ತಿ
ಎ2(ii)	ಎಫ್‌ಡಿಟಿ ಪಾವತಿ	58.38	–	58.38	–
ಎ2(iii)	ಎಫ್‌ಡಿಟಿ ಮೇಲಿನ ಬಾಕಿ ಮತ್ತು ಬಡ್ಡಿ	3.19	–	3.19	–
ಎ2(iv)	ಎಫ್‌ಡಿಟಿ ಮೇಲಿನ ಬಾಕಿ ಮತ್ತು ಬಡ್ಡಿ	106.06	–	106.06	–
ಎ2(v)	ಎಫ್‌ಡಿಟಿ ಮೇಲಿನ ಬಾಕಿ ಮತ್ತು ಬಡ್ಡಿ	42.40	–	42.40	–
ಎ6	ಡಿಎಂಜಿ	–	4.48	–	4.48
	ಒಟ್ಟು ಪರಿಣಾಮ	**210.03**	**4.48**	**210.03**	**4.48**

ಮೇಲಿನ ಪರಿಶೀಲನೆಗಳ ಒಟ್ಟಾರೆ ಪರಿಣಾಮವು ಲಾಭವನ್ನು ರೂ. 210.03 ಕೋಟಿಯಷ್ಟು ಹೆಚ್ಚಿಗೆ ತೋರಿಸಲು, ಹೊಣೆಯನ್ನು ರೂ. 210.03 ಕೋಟಿಯಷ್ಟು ಕಡಿಮೆ ತೋರಿಸಲು, ಲಾಭವನ್ನು ರೂ. 4.48 ಕೋಟಿಯಷ್ಟು ಕಡಿಮೆ ತೋರಿಸಲು ಮತ್ತು ಬರಬೇಕಾದವುಗಳನ್ನು ರೂ. 4.48 ಕೊಟಿಯಷ್ಟು ಹೆಚ್ಚಿಗೆ ತೋರಿಸಲು ಕಾರಣವಾಗಿವೆ.

15. ಗಣಿ ಸಂರಕ್ಷಣಾ ಮತ್ತು ಅಭಿವೃದ್ಧಿ ನಿಯಮ 1988 ರ ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 329 (ಇ) ದಿನಾಂಕ 10.04.20003 ರ ಅನ್ವಯ ಗಮನ 25ಲ ರಲ್ಲಿ ಗಣಿ ಮುಚ್ಚುವಿಕೆ ಯೋಜನೆಗಾಗಿ ರೂ.14.55 ಕೋಟಿಗಳನ್ನು ಹವಣಿಕೆ ಮಾಡಲಾಗಿದೆ. ಅಧಿಸೂಚನೆಯನ್ವಯ ಈ ಮೊತ್ತವನ್ನು ಪ್ರತ್ಯೇಕ ಖಾತೆಯಲ್ಲಿ ಹವಣಿಸಬೇಕಾಗಿದ್ದು, ಕಂಪನಿಯು ಇದುವರೆವಿಗೂ ಪ್ರತ್ಯೇಕ ಖಾತೆಗೆ ಜಮಾ ಮಾಡಿರುವುದಿಲ್ಲ.

ಬಿ. ಲೆಕ್ಕಪತ್ರಗಳ ಮೇಲಿನ ಟಿಪ್ಪಣಿಯಲ್ಲಿ ಲೆಕ್ಕ ತಖ್ತೆಗಳನ್ನು ಯಾವ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ ಎಂದು ಕಂಪೆನಿ ತಿಳಿಸಿದೆಯಾದರೂ ಕೆಳಗಿನ ಪ್ರಕರಣಗಳಲ್ಲಿ ಇಂಡ್ ಎಎಸ್‌ನಿಂದ ಪಥಾಂತರವನ್ನು ಗಮನಿಸಲಾಗಿದೆ :

1. ದಾಸ್ತಾನುಗಳ ಮೌಲ್ಯಮಾಪನ:

ಲೆಕ್ಕಪತ್ರಗಳ ಮೇಲಿನ ಟಿಪ್ಪಣಿ ಸಂಖ್ಯೆ 6ರಲ್ಲಿ ಹೇಳಿರುವಂತೆ ಕಂಪೆನಿಯು ಮೂರು ವರ್ಷಗಳಿಗೂ ಹೆಚ್ಚು ಅವಧಿಗೆ ದಾಸ್ತಾನುಗಳ ಮೌಲ್ಯಮಾಪನವನ್ನು ಮಾಡಿರುವುದಿಲ್ಲ ಮತ್ತು ಇದು ಇಂಡ್ ಎಎಸ್–2 ರ ಅನುಸಾರ ಇರುವುದಿಲ್ಲ. ಇಂಡ್ ಎಎಸ್ ದಾಸ್ತಾನುಗಳನ್ನು ವೆಚ್ಚ ಅಥವಾ ನಿವ್ವಳ ಸಾಕಾರ ಮೊತ್ತದಲ್ಲಿನ ಕಡಿಮೆ ಮೌಲ್ಯಕ್ಕೆ ಮೌಲ್ಯಮಾಪನಮಾಡಬೇಕೆಂದು ನಿಗದಿಪಡಿಸುತ್ತದೆ.

ವಿವಿಧ ವಿಭಾಗಗಳಲ್ಲಿ ಕಂಪೆನಿಯ ದಾಸ್ತಾನಿನಲ್ಲಿರುವ ಕೆಲವು ಸಾಮಗ್ರಿಗಳು ಬಹಳ ಹಳೆಯದಾಗಿವೆ. ಈ ದಾಸ್ತಾನಿನ ಉಪಯುಕ್ತತೆ ಮತ್ತು ಸೇವಾಯೋಗ್ಯತೆಯು ಪರಿಶೀಲನೆ, ಗುರುತಿಸುವಿಕೆ ಮತ್ತು ತಪಾಸಣೆಗೆ ಬದ್ಧವಾಗಿವೆ. ಹಾಗಾಗಿ ಇಂಡ್ ಎಎಸ್–2ರ ಅನುಸರಣೆಯ ಮತ್ತು ಕಂಪೆನಿಯ ಹಣಕಾಸು ತಖ್ತೆಗಳ ಮೇಲಿನ ಅದರ ಪರಿಣಾಮದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.

2. ಆದಾಯದ ಲೆಕ್ಕ:

ಕಂಪೆನಿಯ ಕೆಳಗಿನ ಆದಾಯಗಳನ್ನು ಗುರುತಿಸುವಾಗ ವ್ಯಾಪಾರಿ ಲೆಕ್ಕ ವ್ಯವಸ್ಥೆಯನ್ನು ಅನುಸರಿಸುತ್ತಿಲ್ಲ :

a. ಉತ್ಪಾದನೆಯಲ್ಲಿನ ಕೊರತೆಗಾಗಿ ಗುತ್ತಿಗೆದಾರರಿಂದ ವಸೂಲಾಗಬೇಕಾದ ದಂಡ

b. ಲಾಭಾಂಶ ಆದಾಯ

c. ಅಭಿವೃದ್ಧಿ ಉತ್ತೇಜಕಗಳು

d. ಸರ್ವೋಚ್ಚ ನ್ಯಾಯಲಯದ ಆದೇಶನ್ವಯ ಮಾನಿಟರಿಂಗ್ ಕಮಿಟಿ ಮುಖಾಂತರ ಕಬ್ಬಿಣದ ಅದಿರು ಮಾರಾಟ ಮಾಡುತ್ತಿರುವುದು ಡಿವಿಡೆಂಡ್ ಆದಾಯ

e. ಗುತ್ತಿಗೆ ಬಾಡಿಗೆ ಮತ್ತು ಮೇಲ್ವಿಚಾರಣೆ ವೆಚ್ಚವನ್ನು ಅರಣ್ಯ ಸಂರಕ್ಷರಿಗೆ ಪಾವತಿಸುತ್ತಿರುವುದು.

ಹಾಗಾಗಿ, ಈ ಮಟ್ಟಿಗೆ ಇಂಡ್ ಎಎಸ್–1 ಮತ್ತು ಇಂಡ್ ಎಎಸ್–115ರ ಅನುಸರಣೆ ಆಗಿರುವುದಿಲ್ಲ.

ಲೆಕ್ಕಪರಿಶೋಧನಾ ಪರಿಶೀಲನೆಗಳು:

ಸಾಧಾರಣ ಷೇರುಗಳ ಸಾಮಾನ್ಯ ಮೌಲ್ಯ ರೂ.	100	100
ಪ್ರತಿ ಸಾಧಾರಣ ಷೇರಿಗೆ ಮೂಲ ಮತ್ತು ನಿಸ್ಸಾರಗೊಂಡ ಗಳಿಕೆ ರೂ.	2156	313

2. ಸಿಬ್ಬಂದಿ ಲಾಭ

ಲಾಭದ ಹೊಣೆ ಮತ್ತು ಯೋಜನಾ ಆಸ್ತಿಗಳ ವಿವರಗಳ
ಗಳಿಕೆ ರಜೆ
31 ಮಾರ್ಚ್ 2020ರಂದು ಇದ್ದಂತೆ ರಜೆ ಹೊಣೆಯ ಮೌಲ್ಯಮಾಪನ ಫಲಿತಾಂಶಗಳು ಕೆಳಗಿನಂತಿವೆ:

(ಮೊತ್ತ ಲಕ್ಷ ರೂಗಳಲ್ಲಿ)

ವಿವರಗಳು	31, ಮಾರ್ಚ್ ರಂದು ಇದ್ದಂತೆ	
	2020	2019
ಹೊಣೆಯ ಪ್ರಸ್ತುತ ಮೌಲ್ಯದಲ್ಲಿನ ಬದಲಾವಣೆ		
ಪ್ರಾರಂಭದಲ್ಲಿದ್ದಂತೆ ಹೊಣೆಯ ಪ್ರಸ್ತುತ ಮೌಲ್ಯ	1,347.91	1,216.73
ಬಡ್ಡಿ ವೆಚ್ಚ	103.79	86.70
ಚಾಲ್ತಿ ಸೇವಾ ವೆಚ್ಚ	60.29	141.98
ಪಾವತಿಸಿದ ಲಾಭ	(299.22)	(181.42)
ಹೊಣೆಯ ಮೇಲಿನ ವಿಮಾಗಣಕ (ಗಳಿಕೆ)/ನಷ್ಟ	187.69	83.92
ಕೊನೆಯಲ್ಲಿದ್ದಂತೆ ಹೊಣೆಯ ಪ್ರಸ್ತುತ ಮೌಲ್ಯ	**1,400.45**	**1,347.91**
ಆಸ್ತಿಗಳ ಪ್ರಸ್ತುತ ಮೌಲ್ಯದಲ್ಲಿನ ಬದಲಾವಣೆ		
ಪ್ರಾರಂಭದಲ್ಲಿದ್ದಂತೆ ಯೋಜನಾ ಆಸ್ತಿಗಳ ನ್ಯಾಯಯುತ ಮೌಲ್ಯ	-	-
ಉದ್ಯೋಗದಾತರ ಕೊಡುಗೆ	299.22	181.42
ಪಾವತಿಸಲಾದ ಲಾಭ	(299.22)	(181.42)
ಕೊನೆಯಲ್ಲಿದ್ದಂತೆ ಯೋಜನಾ ಆಸ್ತಿಗಳ ನ್ಯಾಯಯುತ ಮೌಲ್ಯ	-	-
ಯೋಜನಾ ಆಸ್ತಿಗಳ ನ್ಯಾಯಯುತ ಮೌಲ್ಯ		
ಉದ್ಯೋಗದಾತರ ಕೊಡುಗೆ	299.22	181.42
ಪಾವತಿಸಲಾದ ಲಾಭ	(299.22)	(181.42)
ಕೊನೆಯಲ್ಲಿದ್ದಂತೆ ಯೋಜನಾ ಆಸ್ತಿಗಳ ನ್ಯಾಯಯುತ ಮೌಲ್ಯ	-	-

ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಗುರುತಿಸಲಾದ ಖರ್ಚುಗಳು		
ಚಾಲ್ತಿ ಸೇವಾ ವೆಚ್ಚ	60.29	141.98
ಬಡ್ಡಿ ವೆಚ್ಚ	103.79	86.70
ಪ್ರಸ್ತುತ ಅವಧಿಯಲ್ಲಿ ಗುರುತಿಸಲಾದ ನಿವ್ವಳ ವಿಮಾಗಣಕ (ಗಳಿಕೆ)/ನಷ್ಟ	187.69	83.92
ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಗುರುತಿಸಲಾದ ಖರ್ಚುಗಳು	**351.77**	**312.61**

ಗ್ರಾಚುಟಿ

31 ಮಾರ್ಚ್ 2020ರಂದು ಇದ್ದಂತೆ ಗ್ರಾಚುಟಿ ಹೊಣೆಯ ಮೌಲ್ಯಮಾಪನ ಫಲಿತಾಂಶಗಳು ಕೆಳಗಿನಂತಿವೆ:

(ಮೊತ್ತ ಲಕ್ಷ ರೂಗಳಲ್ಲಿ)

ವಿವರಗಳು	31, ಮಾರ್ಚ್ ರಂದು ಇದ್ದಂತೆ	
	2020	2019
ಹೊಣೆಯ ಪ್ರಸ್ತುತ ಮೌಲ್ಯದಲ್ಲಿನ ಬದಲಾವಣೆ		
ಪ್ರಾರಂಭದಲ್ಲಿದ್ದಂತೆ ಹೊಣೆಯ ಪ್ರಸ್ತುತ ಮೌಲ್ಯ	3,793.79	3,214.59
ಬಡ್ಡಿ ವೆಚ್ಚ	292.12	235.55
ಚಾಲ್ತಿ ಸೇವಾ ವೆಚ್ಚ	118.61	118.01
ಪಾವತಿಸಿದ ಲಾಭ	(703.42)	(310.95)
ಹೊಣೆಯ ಮೇಲಿನ ವಿಮಾಗಣಕ (ಗಳಿಕೆ)/ನಷ್ಟ	391.33	536.59
ಕೊನೆಯಲ್ಲಿದ್ದಂತೆ ಹೊಣೆಯ ಪ್ರಸ್ತುತ ಮೌಲ್ಯ	**3892.43**	**3793.79**
ಆಸ್ತಿಗಳ ಪ್ರಸ್ತುತ ಮೌಲ್ಯದಲ್ಲಿನ ಬದಲಾವಣೆ		
ಪ್ರಾರಂಭದಲ್ಲಿದ್ದಂತೆ ಯೋಜನಾ ಆಸ್ತಿಗಳ ನ್ಯಾಯಯುತ ಮೌಲ್ಯ	2,893.03	2,968.80
ಯೋಜನಾ ಆಸ್ತಿಗಳ ಮೇಲಿನ ನಿರೀಕ್ಷಿತ ಗಳಿಕೆ	230.36	228.60
ಉದ್ಯೋಗದಾತರ ಕೊಡುಗೆ	900.86	14.86
ಪಾವತಿಸಲಾದ ಲಾಭ	(703.42)	(310.95)
ಹೊಣೆಯ ಮೇಲಿನ ವಿಮಾಗಣಕ (ಗಳಿಕೆ)/ನಷ್ಟ	(39.54)	(8.28)
ಕೊನೆಯಲ್ಲಿದ್ದಂತೆ ಯೋಜನಾ ಆಸ್ತಿಗಳ ನ್ಯಾಯಯುತ ಮೌಲ್ಯ	**3281.29**	**2893.03**
ಯೋಜನಾ ಆಸ್ತಿಗಳ ನ್ಯಾಯಯುತ ಮೌಲ್ಯ		
ಪ್ರಾರಂಭದಲ್ಲಿದ್ದಂತೆ ಯೋಜನಾ ಆಸ್ತಿಗಳ ನ್ಯಾಯಯುತ ಮೌಲ್ಯ	2,893.03	2,968.80
ಯೋಜನಾ ಆಸ್ತಿಗಳ ಮೇಲಿನ ನೈಜ ಗಳಿಕೆ	1,091.68	235.18
ಪಾವತಿಸಲಾದ ಲಾಭ	(703.42)	(310.95)
ಕೊನೆಯಲ್ಲಿದ್ದಂತೆ ಯೋಜನಾ ಆಸ್ತಿಗಳ ನ್ಯಾಯಯುತ ಮೌಲ್ಯ	**3281.29**	**2893.03**
ಲಾಭ ಮತ್ತು ನಷ್ಟದ ಖಾತೆಯಲ್ಲಿ ಗುರುತಿಸಲಾದ ಖರ್ಚುಗಳು		
ಚಾಲ್ತಿ ಸೇವಾ ವೆಚ್ಚ	118.61	118.01
ಬಡ್ಡಿ ವೆಚ್ಚ	292.12	235.55
ಯೋಜನಾ ಆಸ್ತಿಗಳ ಮೇಲಿನ ನಿರೀಕ್ಷಿತ ಗಳಿಕೆ	(230.36)	(228.60)
ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಗುರುತಿಸಲಾದ ಖರ್ಚುಗಳು	**180.37**	**124.97**
ಪ್ರಸ್ತುತ ಅವಧಿಯಲ್ಲಿ ಗುರುತಿಸಲಾದ ನಿವ್ವಳ ವಿಮಾಗಣಕ (ಗಳಿಕೆ)/ನಷ್ಟ	430.86	544.86
ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ನಿರ್ವಚಿತ ಸಿಬ್ಬಂದಿ ಹಿತ ಯೋಜನೆಗಳ ಮರುಲೆಕ್ಕಾಚಾರವಾಗಿ ಗುರುತಿಸಲಾದ ಖರ್ಚುಗಳು	**430.86**	**544.86**
ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಗುರುತಿಸಲಾದ ಒಟ್ಟು ಗ್ರಾಚುಟಿ ಖರ್ಚುಗಳು	**611.24**	**669.83**

3. ಸಾದಿಲ್ವಾರುಗಳು

ತನ್ನ ಸಾಮಾನ್ಯ ವ್ಯಾಪಾರ ನಡೆಯಲ್ಲಿ ಕಂಪೆನಿಯು ವಿವಿಧ ಪಕ್ಷಗಳಿಂದ ಹಕ್ಕುಸಲ್ಲಿಕೆ ಮತ್ತು ಸಮರ್ಥನೆಗಳನ್ನು ಎದುರಿಸುತ್ತದೆ. ಕಂಪೆನಿಯು ಇಂತಹ ಹಕ್ಕುಸಲ್ಲಿಕೆ ಮತ್ತು ಸಮರ್ಥನೆಗಳನ್ನು ಅಂದಾಜುಮಾಡಿ ಅದು ಮುಂದುವರೆದಂತೆ ಅಗತ್ಯವಾದಂತೆಲ್ಲಾ ಬಾಹ್ಯ ಕಾನೂನು ಸಲಹೆಗಾರರಿಂದ ಕಾನೂನು ಸ್ಥಿತಿಗತಿಗಳ ಮೇಲೆ ನಿಗಾವಹಿಸುತ್ತದೆ. ಯಾವ ಹಕ್ಕುಸಲ್ಲಿಕೆಗಳಿಂದ ಒದಗಬಹುದಾದ ನಷ್ಟ ಸಂಭಾವ್ಯವಾಗಬಹುದಾದೋ ಮತ್ತು ಯಾವುದನ್ನು ಅಂದಾಜುಮಾಡಲು ಸಾಧ್ಯವೋ ಅಂಥವಕ್ಕೆ ಸಂಬಂಧಿಸಿದಂತೆ ಕಂಪೆನಿಯು ಹೊಣೆಯನ್ನು ದಾಖಲಿಸುತ್ತದೆ ಮತ್ತು ಅದು ಗಣನೀಯವಾಗಿದ್ದಲ್ಲಿ ಹಣಕಾಸು ತಃಖ್ತೆಗಳನ್ನು ಅದನ್ನು ಪ್ರಕಟಿಸುತ್ತದೆ. ಸಾಧ್ಯವೆಂದು ಪರಿಗಣಿತವಾದ ಒದಗಬಹುದಾದ ಆದರೆ ಸಂಭಾವ್ಯವಲ್ಲದ ನಷ್ಟಗಳಿಗೆ ಕಂಪೆನಿಯು ಹಣಕಾಸು ತಃಖ್ತೆಗಳಲ್ಲಿ ಪ್ರಕಟಣೆಗಳನ್ನು ಮಾಡುತ್ತದೆ ಆದರೆ ಸಂಭಾವ್ಯವಾಗದ ಹೊರತು ತನ್ನ ಲೆಕ್ಕಗಳಲ್ಲಿ ಅದನ್ನು ದಾಖಲಿಸುವುದಿಲ್ಲ.

ಕೆಳಗಿನವು ಸಾಧ್ಯವೆಂದು ಪರಿಗಣಿತವಾದ, ಒದಗಬಹುದಾದ ಆದರೆ ಸಂಭಾವ್ಯವಲ್ಲದ ನಷ್ಟಗಳಿಗೆ ಸಂಬಂಧಿಸಿದ ಹಕ್ಕುಸಲ್ಲಿಕೆ ಮತ್ತು ಸಮರ್ಥನೆಗಳ ವಿವರ.

ಮೇಲೆ ವಿವರಿಸಲಾದ ಯಾವುದೇ ಸಾದಿಲ್ವಾರುಗಳೂ ಕಂಪೆನಿಯ ಆರ್ಥಿಕ ಪರಿಸ್ಥಿತಿ, ಕಾರ್ಯಾಚರಣೆಗಳು ಅಥವಾ ನಗದು ಹರಿವುಗಳ ಫಲಿತಾಂಶದ ಮೇಲೆ ಗಣನೀಯವಾದ ವ್ಯತಿರಿಕ್ತ ಪರಿಣಾಮವನ್ನು ಹೊಂದಿರುವುದಿಲ್ಲ ಎಂದು ಕಂಪೆನಿಯು ಭಾವಿಸಿದೆ.

ಸಾದಿಲ್ವಾರುಗಳು

ಎ) ಕಂಪೆನಿಯ ಪರವಾಗಿ ಬ್ಯಾಂಕರುಗಳು ನೀಡಿರುವ ಬ್ಯಾಂಕ್ ಖಾತರಿ ರೂ. 961.86 ಲಕ್ಷ. (ಹಿಂದಿನ ವರ್ಷ ರೂ. 703.21 ಲಕ್ಷ)

ಬಿ) ಕೆಳಗಿನ ಸಾದಿಲ್ವಾರು ಹೊಣೆಗಳಿಗೆ ಸಂಬಂಧಿಸಿದಂತೆ ಕಂಪೆನಿಯು ಹಣಕಾಸು ವರ್ಷ 2019–20ರ ಬೆಳವಣಿಗೆಗಳನ್ನು ತಿಳಿಸುವ ಸ್ಥಿತಿಯಲ್ಲಿ ಇರುವುದಿಲ್ಲ.

i) ಕಂಪೆನಿಯು 1–4–2000 ದಿಂದ 26–08–2008ರ ವರೆಗಿನ ಅವಧಿಗೆ ಅರಣ್ಯ ಅಭಿವೃದ್ಧಿ ತೆರಿಗೆಯ ಹಕ್ಕುಸಲ್ಲಿಕೆಗೆ ವಿರುದ್ಧವಾಗಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹಿಂಪಡೆದಿದೆ. ಕರ್ನಾಟಕ ಸರ್ಕಾರದ ನಿರ್ದೇಶನಾನುಸಾರ ಹೊಂದಾಣಿಕೆ ಮಾಡಿಕೊಂಡ ನಂತರ ಕಂಪೆನಿ ಪಾವತಿಸಬೇಕಿರುವ ಮೊತ್ತ ಕಂಪೆನಿಯ ಲೆಕ್ಕದಂತೆ ರೂ. 7116.51/– ಲಕ್ಷ ಆಗಿರುತ್ತದೆ. ಕಂಪೆನಿಯು 2010–11ರ ಹಣಕಾಸು ವರ್ಷದಲ್ಲಿ ರೂ. 3500.00/– ಲಕ್ಷ ಮತ್ತು 2013–14ರ ಹಣಕಾಸು ವರ್ಷದಲ್ಲಿ ರೂ. 3616.51/– ಲಕ್ಷ ಪಾವತಿಸಿದೆ. ಈ ಪೈಕಿ ಕಂಪೆನಿಯು ತನ್ನಲ್ಲಿ ಲಭ್ಯವಿರುವ ಅವರುಗಳ ಉಪಕ್ರಮಗಳು/ಜಮಾ ಶಿಲ್ಕಿಗೆ ಪ್ರತಿಯಾಗಿ ಖರೀದುದಾರರ ಖಾತೆಯ ಮೇಲೆ ಕಂಪೆನಿಯು ರೂ. 6148.87 ಲಕ್ಷ ಮೊತ್ತದ ಸಾಲಚೀಟಿಗಳನ್ನು ಸೃಷ್ಟಿಸಿದೆ. ಇವನ್ನು ಸಂಬಂಧಿತ ಪಕ್ಷಗಳು ಗುರುತಿಸಿರುವುದಿಲ್ಲ. ಉಳಿಕೆ ವ್ಯತ್ಯಾಸದ ರೂ. 1104.20 ಲಕ್ಷ ಮೊತ್ತವನ್ನು ಹಣಕಾಸು ವರ್ಷ 2011–12 ರಲ್ಲಿ ತೊಡೆದುಹಾಕಲಾಗಿದೆ. ಆದರೆ, ಸರ್ಕಾರಕ್ಕೆ ಪಾವತಿಸಬೇಕಿರುವ ನೈಜ ಹೊಣೆ ರೂ. 6148.87 ಲಕ್ಷ ವಾಗಿದ್ದು ಪಾವತಿಸಲಾದ ರೂ. 967.64 ಲಕ್ಷ (7116.51 ಲಕ್ಷ – 6148.87 ಲಕ್ಷ) ಹೆಚ್ಚುವರಿ ಮೊತ್ತವನ್ನು ಸರ್ಕಾರದಿಂದ ವಸೂಲಿಮಾಡಬೇಕಿದ್ದು ಖರೀದಿದಾರರ ಮೇಲೆ ಸೃಷ್ಟಿಸದ ರೂ 967.64 ಲಕ್ಷ ಮೊತ್ತದ ಸಾಲಚೀಟಿಗಳನ್ನು ಹೊಂದಾಣಿಕೆಯ ನಂತರ ಪರಿಷ್ಕರಿಸಬೇಕಿದೆ.

ii) ಕಂಪೆನಿಯು ಎಫ್‌ಡಿಟಿ ಸಂದಾಯವನ್ನು 26.08.2008ರ ನಂತರ ಘಟಿಸಿದ ಮಾರಾಟಗಳ ಮೇಲೆ ಮೌಲ್ಯಾನುಸಾರವಾಗಿ 12% ಅಥವಾ 6% ದಂತೆ ಮಾಡುತ್ತಿದೆ. ಆದರೆ, ಮೇಲಿನದರ ಜೊತೆಗೆ ಅರಣ್ಯ ಇಲಾಖೆ ಮೌಲ್ಯಾನುಸಾರ ಆಧಾರಿತ ಶುಲ್ಕಕ್ಕೆ ಬದಲಾಗಿ, ಯಾವುದು ಹೆಚ್ಚಿದೆಯೋ ಅದರಂತೆ ಎನ್‌ಎಮ್ ಡಿಸಿ/ಎಮ್‌ಎಮ್‌ಎಲ್/ಡಿಎಮ್‌ಜಿ (ಐಬಿಎಮ್) ಸೂಚಿತ ದರಗಳ ಪೈಕಿ ಹೆಚ್ಚಿನ ದರದ ಮೇಲೆ 12% ದಂತೆ ಎಫ್‌ಡಿಟಿ ಗಾಗಿ ರೂ. 5837.90/– ಲಕ್ಷ ಮೊತ್ತದ ಹೆಚ್ಚುವರಿ ಬೇಡಿಕೆಯನ್ನು ಮುಂದಿಟ್ಟಿದೆ. ಅರಣ್ಯ ಇಲಾಖೆಯ ಬೇಡಿಕೆಯನ್ನು ಮನ್ನಾ ಮಾಡುವಂತೆ ಕಂಪೆನಿಯು ಕರ್ನಾಟಕ ಸರ್ಕಾರವನ್ನು ಕೋರಿದೆ. 05.12.2014 ರಂದು ಇದ್ದಂತೆ ಕಂಪೆನಿಯು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಅರಣ್ಯ ಮತ್ತು ಪರಿಸರ ಇಲಾಖೆ – ಇವರಿಂದ ಪತ್ರವೊಮದನ್ನು ಪಡೆದಿದ್ದು ಇದರಲ್ಲಿ ಕಂಪೆನಿಯು ಅಳವಡಿಸಿಕೊಂಡಿರುವ ದರಗಳು ಅರಣ್ಯ ಅಭಿವೃದ್ಧಿ ತೆರಿಗೆ ಲೆಕ್ಕಾಚಾರಕ್ಕೆ ಮಾರ್ಗಸೂಚಿ ಎಂದು ತಿಳಿಸಲಾಗಿದೆ. ಹಾಗಾಗಿ ಮೇಲಿನ ಬೇಡಿಕೆಯನ್ನು ಸರ್ಕಾರ ಮನ್ನಾಮಾಡುವುದೆಂದು ನಿರೀಕ್ಷಿಸಲಾಗಿದೆ.

iii) ಕಂಪೆನಿಯು ಮಾನ್ಯ ನ್ಯಾಯಾಲಯದ ಆದೇಶದಂತೆ ಡಬ್ಲ್ಯೂಪಿ ಸಂ. 863/2009 ದಿನಾಂಕ: 28.05.2009ರ ಅನ್ವಯ 2009–15 ರ ಅವಧಿಗೆ ಎಫ್‌ಡಿಟಿ ಮೇಲಿನ ಬಾಕಿ ಮತ್ತು ಬಡ್ಡಿಗೆ ಸಂಬಂಧಿಸಿದಂತೆ ಉಪ–ಸಂರಕ್ಷಣಾಧಿಕಾರಿಗಳು, ಅರಣ್ಯ ಇಲಾಖೆ ಇವರಿಂದ ಪತ್ರ ಸಂ. ಎಸ್‌ಟಿಆರ್/ಎಫ್‌ಡಿಟಿ/ಎಂಎಂಎಲ್/995/2015–16 ಮೂಲಕ ಉಬ್ಬಲಗುಂಡಿ ಕಬ್ಬಿಣ ಅದಿರು ಗಣಿಗೆ ಸಂಬಂಧಿಸಿದಂತೆ ರೂ. 78.48 ಲಕ್ಷ ಮೊತ್ತದ ಬೇಡಿಕೆಯನ್ನು ಪಡೆದುಕೊಂಡಿದೆ. ತರುವಾಯದಲ್ಲಿ ಮುಖ್ಯ ಅರಣ್ಯ ಸಂರಕ್ಷಕರು, ಬಳ್ಳಾರಿ – ಇವರು ಪತ್ರ ಸಂಖ್ಯೆ. ಎಂಎನ್‌ಜಿ/ಸಿಆರ್–67/92–93 (ಎಂಎಂಎಲ್) ದಿನಾಂಕ 11–03–2020 ರ ಅನ್ವಯ ಬಡ್ಡಿ ಸಹಿತ ರೂ. 319.25 ಲಕ್ಷ ಮೊತ್ತದ ಎಫ್‌ಡಿಟಿ ಬಾಕಿ ಪಾವತಿಗಳಿಗೆ ಸಂಬಂಧಿಸಿದಂತೆ ಬೇಡಿಕೆ ನೋಟೀಸನ್ನು ಕಳುಹಿಸಿರುತ್ತಾರೆ.

iv) ಕಂಪೆನಿಯು ಮಾನ್ಯ ನ್ಯಾಯಾಲಯದ ಆದೇಶದಂತೆ ಡಬ್ಲ್ಯೂಪಿ ಸಂ. 863/2009 ದಿನಾಂಕ: 28.05.2009ರ ಅನ್ವಯ 2009–15 ರ ಅವಧಿಗೆ ಎಫ್‌ಡಿಟಿ ಮೇಲಿನ ಬಾಕಿ ಮತ್ತು ಬಡ್ಡಿಗೆ ಸಂಬಂಧಿಸಿದಂತೆ ಉಪ–ಸಂರಕ್ಷಣಾಧಿಕಾರಿಗಳು, ಅರಣ್ಯ ಇಲಾಖೆ ಇವರಿಂದ ಪತ್ರ ಸಂ. ಎಸ್‌ಟಿಆರ್/ಎಫ್‌ಡಿಟಿ/ಎಂಎಂಎಲ್/995/2015–16 ಮೂಲಕ ಉಬ್ಬಲಗುಂಡಿ ಕಬ್ಬಿಣ ಅದಿರು ಗಣಿಗೆ ಸಂಬಂಧಿಸಿದಂತೆ ರೂ. 5685.05 ಲಕ್ಷ ಮೊತ್ತದ ಬೇಡಿಕೆಯನ್ನು ಪಡೆದುಕೊಂಡಿದೆ. ತರುವಾಯದಲ್ಲಿ ಮುಖ್ಯ ಅರಣ್ಯ ಸಂರಕ್ಷಕರು, ಬಳ್ಳಾರಿ – ಇವರು ಪತ್ರ ಸಂಖ್ಯೆ. ಎಂಎನ್‌ಜಿ/ಸಿಆರ್–67/92–93 (ಎಂಎಂಎಲ್) ದಿನಾಂಕ 11–03–2020 ರ ಅನ್ವಯ ಬಡ್ಡಿ ಸಹಿತ ರೂ. 10606.14 ಲಕ್ಷ ಮೊತ್ತದ ಎಫ್‌ಡಿಟಿ ಬಾಕಿ ಪಾವತಿಗಳಿಗೆ ಸಂಬಂಧಿಸಿದಂತೆ ಬೇಡಿಕೆ ನೋಟೀಸನ್ನು ಕಳುಹಿಸಿರುತ್ತಾರೆ.

v) ಸುಬ್ಬರಾಯನಹಳ್ಳಿ ಕಬ್ಬಿಣದ ಅದಿರು ಗಣಿಗೆ ಸಂಬಂದಿಸಿದಂತೆ ಮುಖ್ಯ ಅರಣ್ಯ ಸಂರಕ್ಷಕರು, ಬಳ್ಳಾರಿ – ಇವರು ಪತ್ರ ಸಂಖ್ಯೆ. ಎಂಎನ್‌ಜಿ/ಸಿಆರ್–67/92–93 (ಎಂಎಂಎಲ್) ದಿನಾಂಕ 11–03–2020 ರ ಅನ್ವಯ ಬಡ್ಡಿ ಸಹಿತ ರೂ. 4240.24 ಲಕ್ಷ ಮೊತ್ತದ ಎಫ್‌ಡಿಟಿ ಬಾಕಿ ಪಾವತಿಗಳಿಗೆ ಸಂಬಂಧಿಸಿದಂತೆ ಬೇಡಿಕೆ ನೋಟೀಸನ್ನು ಕಳುಹಿಸಿರುತ್ತಾರೆ.

vi) ಉಪ–ಆಯುಕ್ತರು, ವಾಣಿಜ್ಯ ತೆರಿಗೆಗಳು, (ಲೆಕ್ಕಪರಿಶೋಧನೆ)–45 ಡಿವಿಓ–4 ಬೆಂಗಳೂರು ಇವರು 2008–2009ರ ವರ್ಷಕ್ಕೆ ರೂ. 525.00 ಲಕ್ಷ ಮೊತ್ತದ ಬೇಡಿಕೆಯನ್ನು ಕಂಪೆನಿಯ ಮುಂದೆ ಇರಿಸಿದ್ದು ಇದಕ್ಕೆ ಪ್ರತಿಯಾಗಿ ಜೆಸಿಸಿಟಿ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಲಾಗಿದೆ.

vii) 2009–10 ರಿಂದ 2018–19ರ ಅವಧಿಗೆ ಗುತ್ತಿಗೆ ಸಂಖ್ಯೆ 2629 ಮತ್ತು ಸಂಖ್ಯೆ 2605ಕ್ಕೆ ಸಂಬಂಧಿಸಿದಂತೆ ತಮ್ಮ ಪತ್ರ ಸಂಖ್ಯೆ 2629/2019–2612 ದಿನಾಂಕ 20 ಜುಲೈ 2019 ಮತ್ತು 2605/2019–20/1983 ದಿನಾಂಕ 26.06.201ರ ಅನ್ವಯ ಡಿಎಂಜಿ ಅನುಕ್ರಮವಾಗಿ ರೂ. 15.62 ಕೋಟಿ ಮತ್ತು 9.69 ಕೋಟಿ ಬೇಡಿಕೆಯನ್ನು ಇರಿಸಿದೆ. ಕಂಪೆನಿಯು ಈ ಬೇಡಿಕೆಯನ್ನು ಪ್ರತಿಭಟಿಸಿ ಹಿಂತೆಗೆದುಕೊಳ್ಳುವಂತೆ ಆಗ್ರಹಿಸಿತು.

vii) ಸಹಯೋಗಿ ಉದ್ಯಮವಾದ ತುಂಗಭದ್ರಾ ಮಿನರಲ್ಸ್ ಪ್ರೈವೇಟ್ ಗೆ ಸಂಬಂಧಿಸಿದಂತೆ ಕೆಳಗಿನವು ಸಾದಿಲ್ವಾರು ಹೊಣೆಗಳಾಗಿರುತ್ತವೆ:
ಎ. ಆದಾಯ ತೆರಿಗೆ ಪ್ರಾಧಿಕಾರದ ವ್ಯಾಜ್ಯಯುಕ್ತ ಬೇಡಿಕೆಗಳು – ರೂ. 2577.75 ಲಕ್ಷ
ಬಿ. ಪ್ರಾದೇಶಿಕ ನಿಯಂತ್ರಕರು – ಗಣಿ ಇಲಾಖೆ ಇವರಿಗೆ ನೀಡಲಾದ ಭದ್ರತೆ, ಬ್ಯಾಂಕ್ ಆಫ್ ಬರೋಡ – ಮೊತ್ತ ರೂ. 23.47 ಲಕ್ಷ.

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್

ಟಿ.ಟಿ.ಎಂ.ಸಿ. ಕಟ್ಟಡ, 'ಎ' ಬ್ಲಾಕ್, 5ನೇ ಮಹಡಿ, ಬಿ.ಎಂ.ಟಿ.ಸಿ., ಶಾಂತಿನಗರ, ಬೆಂಗಳೂರು – 560 027.

ಇಂಡ್ ಎಎಸ್ 108ರ ಪ್ರಕಾರ ಕಾರ್ಯಯುಕ್ತ ಖಂಡ

4. ಖಂಡ ರಚನೆ

ಆದಾಯ

(ಮೊತ್ತ ಲಕ್ಷ ರೂಗಳಲ್ಲಿ)

ವಿವರಗಳು	31 ಮಾರ್ಚ್ 2020	31 ಮಾರ್ಚ್ 2019
ಕಬ್ಬಿಣದ ಅದಿರು	18439.23	764.37
ಗ್ರಾನೈಟ್	795.30	467.51
ಇತರೆ	16487.31	17319.12
ಒಟ್ಟು ವೆಚ್ಚ	**35721.84**	**18551.00**
ವೆಚ್ಚ		
ಕಬ್ಬಿಣದ ಅದಿರು	5423.91	1973.58
ಗ್ರಾನೈಟ್	2130.70	2082.68
ಇತರೆ	8516.09	10176.91
ಒಟ್ಟು ವೆಚ್ಚ	**16070.70**	**14233.16**
ಪಿಬಿಟಿ	19651.14	4317.83
ತೆರಿಗೆಗಾಗಿ ಹವಣಿಕೆ	-6007.00	-2402.00
ಮುಂದೂಡಲಾದ ತೆರಿಗೆ	-432.91	541.14
ಆದಾಯ ತೆರಿಗೆ – ಮುಂಚಿನ ವರ್ಷಗಳು	212.32	
ಇತರ ಸಮಗ್ರ ಆದಾಯ	-430.86	-544.86
ತೆರಿಗೆಯ ನಂತರ ಲಾಭ/ನಷ್ಟ	12992.69	1912.11
ಲಾಭಾಂಶ ತೆರಿಗೆಯೂ ಸೇರಿ ಪ್ರಸ್ತಾವಿತ ಲಾಭಾಂಶ		
ಷೇರಿನ ನಿವ್ವಳ ಲಾಭ(ನಷ್ಟ) – ಜಂಟಿ ಸಹಯೋಗದಿಂದಿಗೆ ಲೆಕ್ಕ ಹಾಕಿರುವುದು	-58.15	-36.71
ಲಾಭಾಂಶ ಮತ್ತು ಲಾಭಾಂಶ ತೆರಿಗೆಯ ನಂತರ ನಿವ್ವಳ ಲಾಭ	**12934.55**	**1875.41**

ಖಂಡ ಆಸ್ತಿಗಳು	31 ಮಾರ್ಚ್ 2020	31 ಮಾರ್ಚ್ 2019
ವಿವರಗಳು	ಖಂಡ ಆಸ್ತಿಗಳು	ಖಂಡ ಆಸ್ತಿಗಳು
ಕಬ್ಬಿಣದ ಅದಿರು	17344.06	13071.58
ಗ್ರಾನೈಟ್	877.68	826.29
ಹಂಚಿದ ಆಸ್ತಿಗಳು		
ಡಿಟಿಎ	1171.57	1604.48
ಹೂಡಿಕೆ	7211.05	7269.19
ಇತರ ಆಸ್ತಿಗಳು	262864.97	252045.41
ಒಟ್ಟು ಖಂಡ ಆಸ್ತಿಗಳು	**289469.33**	**274816.96**

ಖಂಡ ಹೊಣೆಗಳು	31 ಮಾರ್ಚ್ 2020	31 ಮಾರ್ಚ್ 2019
ವಿವರಗಳು	ಖಂಡ ಹೊಣೆಗಳು	ಖಂಡ ಹೊಣೆಗಳು
ಕಬ್ಬಿಣದ ಅದಿರು	5942.38	5720.86
ಗ್ರಾನೈಟ್	1933.03	2213.08
ಹಂಚಿದ ಹೊಣೆಗಳು		
ಈಕ್ವಿಟಿ	239339.17	227851.35
ಇತರ ಹೊಣೆ	42254.75	39031.68
ಒಟ್ಟು ಖಂಡ ಹೊಣೆಗಳು	**289469.33**	**274816.96**

5. **ಸಂಸ್ಥೆಯ ವಿರುದ್ದ ಬಾಕಿ ಇರುವ ಪ್ರಕರಣಗಳ ಪಟ್ಟಿ**

ಕಂಪೆನಿಯ ವಿರುದ್ಧ ವಿವಿಧ ನ್ಯಾಯಾಲಯಗಳಲ್ಲಿ 31.03.2020ರಂದು ಇದ್ದಂತೆ ಕೆಳಗಿನ ಪ್ರಕರಣಗಳು ಬಾಕಿ ಇವೆ:

ಮಧ್ಯಸ್ಥಿಕೆ ಪ್ರಕರಣಗಳು	07 ಪ್ರಕರಣಗಳು
ಟ್ರಯಲ್ ನ್ಯಾಯಾಲಯ ಪ್ರಕರಣಗಳು	19 ಪ್ರಕರಣಗಳು
ಸರ್ವೋಚ್ಚ ನ್ಯಾಯಾಲಯ ಪ್ರಕರಣಗಳು	05 ಪ್ರಕರಣಗಳು
ಉಚ್ಚ ನ್ಯಾಯಾಲಯ ಪ್ರಕರಣಗಳು	85 ಪ್ರಕರಣಗಳು
ಸಿಜಿಐಟಿ/ಕಾರ್ಮಿಕ ನ್ಯಾಯಾಲಯ ಪ್ರಕರಣಗಳು	14 ಪ್ರಕರಣಗಳು
ಒಟ್ಟು	**130 ಪ್ರಕರಣಗಳು**

ಮೇಲಿನ ಎಲ್ಲ ಪ್ರಕರಣಗಳು ವಿವಿಧ ವೇದಿಕೆಗಳಲ್ಲಿ ವಿವಿಧ ಹಂತಗಳಲ್ಲಿ ಇದ್ದು ಹಣಕಾಸು ತಃಖ್ತೆಗಳ ಮೇಲೆ ಇವುಗಳ ಪರಿಣಾಮವನ್ನು ತಿಳಿಯಲು ಸಾಧ್ಯವಿಲ್ಲ. ಪ್ರಕರಣಗಳು ಇತ್ಯರ್ಥವಾದ ನಂತರ ಪರಿಣಾಮವನ್ನು ಗುರುತಿಸಿ ಅವುಗಳನ್ನು ಲೆಕ್ಕಪುಸ್ತಕಗಳ ಭಾಗವಾಗಿಸಲಾಗುವುದು.

6. **ಸಂಬಂಧಿತ ಪಕ್ಷ ವ್ಯವಹಾರಗಳು**

ಕಂಪೆನಿಯು ತನ್ನ ವ್ಯಾಪಾರದ ದೈನಂದಿನ ನಡೆಯಲ್ಲಿ ಸಂಬಂಧಿತ ಪಕ್ಷಗಳೊಂದಿಗೆ ಕೆಳಗಿನಂತೆ ವ್ಯವಹಾರಗಳಲ್ಲಿ ತೊಡಗಿರುತ್ತದೆ:

ಎ) **ವ್ಯವಹಾರದ ಸ್ವರೂಪ, ಮೊತ್ತಗಳೊಂದಿಗೆ** **(ಮೊತ್ತ ಲಕ್ಷ. ರೂಗಳು)**

ಸಂಬಂಧಿತ ಪಕ್ಷದ ಹೆಸರು ಮತ್ತು (ಸಂಬಂಧ)	ವ್ಯವಹಾರದ ಸ್ವರೂಪ	31.03.2020	31.03.2019
ನವೀನ್ ರಾಜ್ ಸಿಂಗ್ (ವ್ಯವಸ್ಥಾಪಕ ನರ್ದೇಶಕರು)	ನಿರ್ದೇಶಕರುಸಂಭಾವನೆ	17.37	22.86
ಲಕ್ಷ್ಮಿ ಆರ್ ಹೆಬ್ಬಾಳಕರ್	ನಿರ್ದೇಶಕರು ಸಭಾ ಭತ್ಯೆ	0.01	0.02
ಎನ್ ಎಸ್ ಪ್ರಸನ್ನಕುಮಾರ್	ನಿರ್ದೇಶಕರು ಸಭಾ ಭತ್ಯೆ	-	0.03
ರಿಚರ್ಡ್ ವಿನ್ಸೆಂಟ್ ಡಿಸೋಝಾ	ನಿರ್ದೇಶಕರು ಸಭಾ ಭತ್ಯೆ	0.02	0.06
ಅನಲ್ ಕುಮಾರ್ ಝಾ	ನಿರ್ದೇಶಕರು ಸಭಾ ಭತ್ಯೆ	-	0.03
ಎಂ ಮಹೇಶ್ವರ್ ರಾವ್	ನಿರ್ದೇಶಕರು ಸಭಾ ಭತ್ಯೆ	0.07	0.01
ನವೀನ್ ರಾಜ್ ಸಿಂಗ್	ನಿರ್ದೇಶಕರು ಸಭಾ ಭತ್ಯೆ	0.01	0.01
ರಾಜೇಂದ್ರ ಕುಮಾರ್ ಕಟಾರಿಯಾ	ನಿರ್ದೇಶಕರು ಸಭಾ ಭತ್ಯೆ	-	0.02
ವಿ ಚೈತ್ರಾ	ನಿರ್ದೇಶಕರು ಸಭಾ ಭತ್ಯೆ	0.02	0.02
ಡಾ. ಎಸ್ ಸೆಲ್ವ ಕುಮಾರ್	ನಿರ್ದೇಶಕರು ಸಭಾ ಭತ್ಯೆ	0.01	0.02
ಪ್ರಭಾಶ್ ಚಂದ್ರ ರೇ	ನಿರ್ದೇಶಕರು ಸಭಾ ಭತ್ಯೆ	0.01	-
ಸಲ್ಮಾ ಕೆ. ಫಾಹಿಮ್	ನಿರ್ದೇಶಕರು ಸಭಾ ಭತ್ಯೆ	0.03	-
ಎನ್ ಶಿವಶಂಕರ್	ನಿರ್ದೇಶಕರು ಸಭಾ ಭತ್ಯೆ	0.02	-
ಸಾಲಗಾಂವಕರ್ ಮೈನಿಂಗ್ ಇಂಡಸ್ಟ್ರೀಸ್ (ತುಂಗಭದ್ರ ಮಿನರಲ್ಸ್ ಪ್ರೈ.ಲಿ ನಲ್ಲಿ ಗಣನೀಯ ಹಿತಾಸಕ್ತಿ)	ಸ್ವೀಕತಾವಾಗಿರುವ ಮುಂಗಡ	1085.48	1035.15

ಬಿ) **ಮುಕ್ತಾಯದ ಶಿಲ್ಕು** **(ಮೊತ್ತ ಲಕ್ಷ. ರೂಗಳು)**

ಸಂಬಂಧಿತ ಪಕ್ಷದ ಹೆಸರು ಮತ್ತು (ಸಂಬಂಧ)	ವ್ಯವಹಾರದ ಸ್ವರೂಪ	31.03.2020	31.03.2019
ಜೆಎಸ್‌ಡಬ್ಲ್ಯೂ ಸ್ಟೀಲ್ ಲಿಮಿಟೆಡ್ (ವಿಜಯನಗರ ಮಿನರಲ್ಸ್ ಪ್ರೈ ಲಿ ನಲ್ಲಿ ಗಣನೀಯ ಹಿತಾಸಕ್ತಿ)	ವ್ಯಾಪಾರಿ ಖರ್ಚುಗಳು	39.10	39.10

7) ಆದಾಯ ತೆರಿಗೆ ಆಸ್ತಿ (ಟಿಪ್ಪಣಿ) (ಮೊತ್ತ ಲಕ್ಷ. ರೂಗಳು)

ವರ್ಷ	ಮುಂಗಡ ಆದಾಯ ತೆರಿಗೆ (I)	ಪಡೆಯಬೇಕಾದ ಟಿಡಿಎಸ್ (II)	ಆದಾಯ ತೆರಿಗೆ ಆಸ್ತಿ III = (I+II)	ಆದಾಯ ತೆರಿಗೆ ಹೊಣೆ (ಹವಣಿಕೆ) (IV)	ಮುಗಡ ತೆರಿಗೆ (ಹವಣಿಕೆಯ ನಿವ್ವಳ) (III – IV)	ತೆರಿಗೆಗಾಗಿ ಹವಣಿಕೆ (ಮುಂಗಡ ತೆರಿಗೆಯ ನಿವ್ವಳ) (IV-III)
2013-14	10,530.00	708.83	11,238.83	(11,692.00)	-	(453.17)
2015-16	18,900.00	1,449.13	20,349.13	(15,254.00)	5,095.13	-
2019-20	5,400.00	1,510.69	6,910.69	(6,007.00)	903.69	
Total	**34,830.00**	**3,668.65**	**38,498.65**	**(32,953.00)**	**5,998.82**	**(453.17)**

8) ಲೆಕ್ಕಪರಿಶೋಧಕರ ಸಂಭಾವನೆ (ಮೊತ್ತ ಲಕ್ಷ. ರೂಗಳು)

ವಿವರಗಳು	ಮಾರ್ಚ್ 31, 2020	ಮಾರ್ಚ್ 31, 2019
ಶಾಸನಬದ್ಧ ಲೆಕ್ಕಪರಿಶೋಧನೆ	5.00	5.00
ಒಟ್ಟು	**5.00**	**5.00**

9) ಕೆಳಗಿನ ಹಿಂದಿನ ವರ್ಷದ ಅಂಕಿ–ಅಂಶಗಳನ್ನು ಚಾಲ್ತಿ ವರ್ಷದ ಅಂಕಿ–ಅಂಶಗಳೊಂದಿಗೆ ಹೊಂದಿಸುವ ಸಲುವಾಗಿ ಮರುವಿಂಗಡಣೆ ಮಾಡಲಾಗಿದೆ:

ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ	ಕಳೆದ ವರ್ಷದಲ್ಲಿ ಇದರ ಭಾಗ	ಚಾಲ್ತಿ ವರ್ಷದಲ್ಲಿ ಇದರ ಭಾಗ	ಮೊತ್ತ
ಇತರ ಚಾಲ್ತಿ ಹೊಣೆಗಾರಿಕೆಗಳು	ಇತರೆ ಪಾವತಿಗಳು	ಇತರ ಚಾಲ್ತಿಯಲ್ಲದ ಹೊಣೆಗಳು – ಶಾಸನಬದ್ಧ ಹೊಣೆಗಳು	851.25

10) ಪಾವತಿಸಲಾದ ಲಾಭಾಂಶ

ದಿನಾಂಕ 27 ಸೆಪ್ಟೆಂಬರ್ 2019 ರಂದು ನಡೆದ ಸಭೆಯಲ್ಲಿ ನಿರ್ದೇಶಕರ ಮಂಡಳಿಯು ಪ್ರತಿ ಷೇರಿಗೆ ರೂ. 200 ರಂತೆ ಲಾಭಾಂಶವನ್ನು ಘೋಷಿಸಿದ್ದು ಇದು ಕಂಪೆನಿ ಕಾಯ್ದೆ 2013ರ ಪರಿಚ್ಛೇದ 123ರ ಅನುಸಾರವಾಗಿ ಇದೆ. ಇದಕ್ಕನುಗುಣವಾಗಿ ಕಂಪೆನಿಯು ತನ್ನ ನಿವಾಸಿ ಷೇರುದಾರರಿಗೆ ರೂ. 1200 ಲಕ್ಷದಷ್ಟು (ಹಿಂದಿನ ವರ್ಷ ರೂ. 600 ಲಕ್ಷ) ಲಾಭಾಂಶವನ್ನು ಪಾವತಿಸಿದೆ ಹಾಗೂ ರೂ246.72 ಲಕ್ಷದಷ್ಟು ಹಂಚಿಕೆ ತೆರಿಗೆಯನ್ನು (ಹಿಂದಿನ ವರ್ಷ ರೂ. 123.36 ಲಕ್ಷ) ಪಾವತಿಸಿದೆ.

ನಮ್ಮ ಇದೇ ದಿನಾಂಕದ ಲಗತ್ತಾದ ವರದಿಯ ಪ್ರಕಾರ
ಎಸ್.ಆರ್.ಆರ್.ಕೆ ಶರ್ಮಾ ಅಸೋಸಿಯೇಟ್ಸ್ ಪರವಾಗಿ
ಸನದಿ ಲೆಕ್ಕಿಗರು
ಸಂಸ್ಥೆ ನೋಂದಣಿ ಸಂಖ್ಯೆ – 003790ಎಸ್

ಸಹಿ/–
ಎಸ್ ಆನಂದಕೃಷ್ಣ
ಪಾಲುದಾರರು
ಸದಸ್ಯತ್ವ ಸಂಖ್ಯೆ : 027896

ಸ್ಥಳ : ಬೆಂಗಳೂರು
ದಿನಾಂಕ : 11.09.2020
UDIN : 20027986AAAACC5676

ನಿರ್ದೇಶಕ ಮಂಡಳಿಯ ಪರವಾಗಿ

ಸಹಿ/–
ನವೀನ್ ರಾಜ್ ಸಿಂಗ್, ಭಾಆಸೇ
ನಿರ್ದೇಶಕರು
ಡಿಐಎನ್ ಸಂಖ್ಯೆ : 6854287

ಸಹಿ/–
ಸಲ್ಮಾ ಕೆ. ಫಾಹಿಮ್, ಭಾಆಸೇ
ನಿರ್ದೇಶಕರು
ಡಿಐಎನ್: 07773934

ಸಹಿ/–
ಡಾ. ಜೆ. ವಿ. ನಂದನ್‌ಕುಮಾರ್
ಪ್ರಧಾನ ವ್ಯವಸ್ಥಾಪಕರು
(ಹಣಕಾಸು & ಲೆಕ್ಕಪತ್ರಗಳು)

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್

ಟಿ.ಟಿ.ಎಂ.ಸಿ. ಕಟ್ಟಡ, 'ಎ' ಬ್ಲಾಕ್, 5ನೇ ಮಹಡಿ, ಬಿ.ಎಂ.ಟಿ.ಸಿ., ಶಾಂತಿನಗರ, ಬೆಂಗಳೂರು – 560 027.

31 ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷದ ಕ್ರೋಢೀಕೃತ ಸಂತುಲನ ಪಟ್ಟಿಯ ಉಪ–ಅನುಸೂಚಿಗಳು

(ಮೊತ್ತ ಲಕ್ಷ ರೂಗಳಲ್ಲಿ)

ವಿವರಗಳು	ಟಿಪ್ಪಣಿ	31, ಮಾರ್ಚ್ ರಂದು ಇದ್ದಂತೆ	
		2020	2019
ಇತರರಿಗೆ:	**5.1**		
ಇತರರಿಗೆ ಮುಂಗಡ		1,771.88	1,510.28
ಶಿವಪುರ ಭೂಮಿ ಮುಂಗಡ		1.07	1.07
ಒಟ್ಟು		**1,772.95**	**1,511.35**
ಇತರ ಠೇವಣಿಗಳು	**5.2**		
ಎಸ್ ಎಂ ಕಣ್ಣಪ್ಪ ಆಟೋಮೊಬೈಲ್ಸ್		1.00	1.00
ಶ್ರೀ ಚೌಡೇಶ್ವರಿ ಎಂಟರ್‌ಪ್ರೈಸಸ್		0.50	0.50
ಎಮ್ಎಮ್‌ಟಿಸಿ ಯಲ್ಲಿ ಸ್ಫೋಟಕ ಠೇವಣಿ		0.06	0.06
ನ್ಯಾಯಾಲಯದಲ್ಲಿ ಠೇವಣಿ		273.18	64.01
ಸುರಕ್ಷತಾ ವಲಯ ಠೇವಣಿ		6.68	6.68
ಡಿಎಮ್‌ಜಿ ಯಲ್ಲಿ ಭದ್ರತಾ ಠೇವಣಿ		1.88	1.88
ಪ್ಲಾಟ್ ಬಾಡಿಗೆ ಭದ್ರತಾ ಠೇವಣಿ (ಎಮ್ಎಮ್‌ಟಿಸಿ)		0.53	0.53
ಮಾರಾಟ ತೆರಿಗೆ ಮೇಲ್ಮನವಿ ನಿರ್ಧಾರಣ ವರ್ಷ 2007–08		14.09	14.09
ಮಾರಾಟ ತೆರಿಗೆ ಮೇಲ್ಮನವಿ ನಿರ್ಧಾರಣ ವರ್ಷ 2008–09		157.52	157.52
ಮಾರಾಟ ತೆರಿಗೆ ಮೇಲ್ಮನವಿ 10–11		32.02	32.02
ಮಾರಾಟ ತೆರಿಗೆ ಮೇಲ್ಮನವಿ (ಸಿಎಸ್‌ಟಿ) 2010–11		22.63	22.63
ಬಾಡಿಗೆ ಠೇವಣಿ		8.51	8.91
ಆದಾಯ ತೆರಿಗೆ ಮೇಲ್ಮನವಿ ನಿರ್ಧಾರಣ ವರ್ಷ 09–10		579.46	579.46
ಆದಾಯ ತೆರಿಗೆ ಮೇಲ್ಮನವಿ ನಿರ್ಧಾರಣ ವರ್ಷ 14–15		512.98	512.98
ಟಿಸಿಎಸ್		0.01	0.01
ಒಟ್ಟು		**1,611.04**	**1,402.27**
ಸರ್ಕಾರಿ ಇಲಾಖೆಗಳಲ್ಲಿ ಠೇವಣಿ	**5.3**		
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಭದ್ರತಾ ಠೇವಣಿ		2.00	2.00
ಅರಣ್ಯ ಇಲಾಖೆಯಲ್ಲಿ ಠೇವಣಿ		0.75	0.75
ರೈಲ್ವೆ ಯಲ್ಲಿ ಠೇವಣಿ		2.95	2.95
ವಿದ್ಯುಚ್ಛಕ್ತಿ ಠೇವಣಿ		10.63	10.52
ಮೆಸ್ಕಾಂ		0.03	0.03
ದೂರವಾಣಿ ಠೇವಣಿ		1.46	1.46
ವ್ಯಾಗನ್ ಠೇವಣಿ		1.21	1.21

ವಿವರಗಳು	ಟಿಪ್ಪಣಿ	31, ಮಾರ್ಚ್ ರಂದು ಇದ್ದಂತೆ	
		2020	2019
ಗಣಿ ಮತ್ತು ಭೂಗರ್ಭಶಾಸ್ತ್ರ ಇಲಾಖೆಯಲ್ಲಿ ಠೇವಣಿ		39.13	39.13
ಮಾರಾಟ ತೆರಿಗೆ ಇಲಾಖೆಯಲ್ಲಿ ಠೇವಣಿ		0.24	0.24
ಮುಖ್ಯ ಕಾರ್ಮಿಕ ಆಯುಕ್ತರಲ್ಲಿ ಠೇವಣಿ		10.00	10.00
ಒಟ್ಟು		**68.40**	**68.29**
ಸಿಬ್ಬಂದಿ ಮುಂಗಡ	**9.1**		
ಕಂಪ್ಯೂಟರ್ ಮುಂಗಡ		1.81	1.71
ವೇತನ ಮುಂಗಡ		3.09	2.83
ಸಿಬ್ಬಂದಿಗೆ ಹಬ್ಬದ ಮುಂಗಡ		36.15	12.89
ವಾಹನ ಭತ್ಯೆ ಮುಂಗಡ		-	0.15
ಒಟ್ಟು		**41.06**	**17.57**
ಸಿಬ್ಬಂದಿ ಮುಂಗಡ	**10.1**		
ಗಣಿ ಸಿಬ್ಬಂದಿ ಮುಂಗಡ		10.56	10.41
ಕೇಂದ್ರ ಕಛೇರಿ ಸಿಬ್ಬಂದಿ ಮುಂಗಡ		1.64	2.03
ಟಿ.ಎ ಮುಂಗಡ		36.21	35.30
ಒಟ್ಟು		**48.41**	**47.74**
ಇತರ ಮುಂಗಡಗಳು/ಠೇವಣಿ	**10.2**		
ಕಲ್ಲು ಕೊರೆಯುವವರಿಗೆ ಮುಂಗಡ		0.54	1.74
ಇತರರಿಗೆ ಮುಂಗಡ		385.42	492.62
ಒಟ್ಟು		**385.96**	**494.36**
ಇತರ ಚಾಲ್ತಿ ಆಸ್ತಿಗಳು	**10.3**		
ಪೂರ್ವಸಂದಾಯಿತ ವಿಮೆ		27.36	10.11
ಇತರ ಖರ್ಚುಗಳು		0.74	1.00
ಎಫ್‌ಡಿ ಮೇಲೆ ಪ್ರಾಪ್ತವಾದ ಬಡ್ಡಿ		5,263.00	5,629.39
ಆದಾಯ ತೆರಿಗೆ ಮರುಭರಿಕೆ – ನಿರ್ಧಾರಣ ವರ್ಷ 12–13		24.19	24.19
ಆದಾಯ ತೆರಿಗೆ ಮರುಭರಿಕೆ – ನಿರ್ಧಾರಣ ವರ್ಷ 10–11		49.05	49.05
ಆದಾಯ ತೆರಿಗೆ ಮರುಭರಿಕೆ – ನಿರ್ಧಾರಣ ವರ್ಷ 11–12		135.44	135.44
ಆದಾಯ ತೆರಿಗೆ ಮರುಭರಿಕೆ – ನಿರ್ಧಾರಣ ವರ್ಷ 17.18		975.89	
ಆದಾಯ ತೆರಿಗೆ ಮರುಭರಿಕೆ – ನಿರ್ಧಾರಣ ವರ್ಷ 18–19		6,126.63	
ಆದಾಯ ತೆರಿಗೆ ಮರುಭರಿಕೆ – ನಿರ್ಧಾರಣ ವರ್ಷ 19–20		4,013.59	
ಟಿಡಿಎಸ್ ಲೋಡಿಂಗ್		7.48	
ರಾಜಧನ – ಮಾರಾಟ		215.35	209.60
ಹಕ್ಕುಸಲ್ಲಿಸಲಾದ ಸರಕು ಮತ್ತು ಸೇವಾ ತೆರಿಗೆ		122.80	728.31
ಹಕ್ಕುಸಲ್ಲಿಸಬಹುದಾದ ಸರಕು ಮತ್ತು ಸೇವಾ ತೆರಿಗೆ		548.05	409.60
ಒಟ್ಟು		**17,509.57**	**7,196.70**

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್

ಟಿ.ಟಿ.ಎಂ.ಸಿ. ಕಟ್ಟಡ, 'ಎ' ಬ್ಲಾಕ್, 5ನೇ ಮಹಡಿ, ಬಿ.ಎಂ.ಟಿ.ಸಿ., ಶಾಂತಿನಗರ, ಬೆಂಗಳೂರು – 560 027.

31 ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷದ ಕ್ರೋಢೀಕೃತ ಸಂತುಲನ ಪಟ್ಟಿಯ ಉಪ–ಅನುಸೂಚಿಗಳು

(ಮೊತ್ತ ಲಕ್ಷ ರೂಗಳಲ್ಲಿ)

ವಿವರಗಳು	ಟಿಪ್ಪಣಿ	31, ಮಾರ್ಚ್ ರಂದು ಇದ್ದಂತೆ	
		2020	2019
ಶಾಸನಬದ್ಧ ಹೊಣೆಗಳು	13.1		
ಅರಣ್ಯ ಅಭಿವೃದ್ಧಿ ತೆರಿಗೆ		233.75	233.75
ಪರಿಸರ ಸಂರಕ್ಷಣ ಶುಲ್ಕ		1,904.24	1,904.24
ಭವಿಷ್ಯ ನಿಧಿ ದಂಡ & ಬಡ್ಡಿ		41.37	41.37
ಭದ್ರತಾ / ಟೆಂಡರ್ ಮುಂಗಡ		776.40	851.25
ಒಟ್ಟು		**2,955.76**	**3,030.61**

ವಿವರಗಳು	ಟಿಪ್ಪಣಿ	31, ಮಾರ್ಚ್ ರಂದು ಇದ್ದಂತೆ	
		2020	2019
ಶಾಸನಬದ್ಧ ಹೊಣೆಗಳು	**17.1**		
ಮೂಲದಲ್ಲಿ ಕಡಿತಮಾಡಲಾದ ತೆರಿಗೆ – ವೇತನವಲ್ಲದ್ದು		26.69	21.97
ಮೂಲದಲ್ಲಿ ಕಡಿತಮಾಡಲಾದ ತೆರಿಗೆ – ವೇತನ		15.15	4.60
ಜಿಎಸ್‌ಟಿ ಅಡಿಯಲ್ಲಿ ಟಿಡಿಎಸ್		19.44	9.38
ಮಾರಾಟ ತೆರಿಗೆ (ವ್ಯಾಟ್ & ಸಿಎಸ್‌ಟಿ)		5.32	5.32
ಇಎಸ್‌ಐ		-	0.02
ಕೆಜಿಐಡಿ		0.16	0.16
ಪಿಎಲ್‌ಐ		0.07	0.09
ಜಿ.ಪಿಎಫ್		1.65	0.59
ಗುಂಪು ವಿಮಾ ಯೋಜನೆ		0.02	0.04
ಮನೆ ಬಾಡಿಗೆ ಭತ್ಯೆ		0.37	0.74
ವೃತ್ತಿ ತೆರಿಗೆ		1.49	1.45
ಉಪಕರ – ಸಿವಿಲ್ ಕಾಮಗಾರಿ		-	1.14
ಸಿಬಿಎಫ್ – ಸಿವಿಲ್ ಕಾಮಗಾರಿ		0.67	0.67
ರಾಜಧನ – ಸಿವಿಲ್ ಕಾಮಗಾರಿ		1.15	1.15
ಇಪಿಎಫ್		60.21	135.85
ರಾಜಧನ – ಸಂಸ್ಕರಣಾ ಶುಲ್ಕ		0.83	0.99
ರಾಯಧನದ ಮೇಲಿನ ಬಡ್ಡಿ		12.01	12.01
ಕಲ್ಯಾಣ ಉಪಕರ		5.26	5.26
ಪಾವತಿಸಬೇಕಾದ ಸೇವಾ ತೆರಿಗೆ		0.98	0.98
ಜಿಲ್ಲಾ ಖನಿಜ ನಿಧಿ (ಡಿಎಂಎಫ್)		1,476.32	1,645.74
ರಾಷ್ಟ್ರೀಯ ಖನಿಜ ಅನ್ವೇಷಣಾ ಟ್ರಸ್ಟ್ (ಎನ್‌ಎಂಇಟಿ)		0.70	7.12
ಪಾವತಿಸಬೇಕಾದ ಸರಕು ಮತ್ತು ಸೇವಾ ತೆರಿಗೆ (ಆರ್‌ಸಿಎಂ)		413.12	363.02
ಒಟ್ಟು		**2,041.62**	**2,218.29**

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್

ಟಿ.ಟಿ.ಎಂ.ಸಿ. ಕಟ್ಟಡ, 'ಎ' ಬ್ಲಾಕ್, 5ನೇ ಮಹಡಿ, ಬಿ.ಎಂ.ಟಿ.ಸಿ., ಶಾಂತಿನಗರ, ಬೆಂಗಳೂರು – 560 027.

31 ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷದ ಕ್ರೋಢೀಕೃತ ಸಂತುಲನ ಪಟ್ಟಿಯ ಉಪ–ಅನುಸೂಚಿಗಳು

(ಮೊತ್ತ ಲಕ್ಷ ರೂಗಳಲ್ಲಿ)

ವಿವರಗಳು	ಟಿಪ್ಪಣಿ	31, ಮಾರ್ಚ್ ರಂದು ಇದ್ದಂತೆ	
		2020	2019
ಸಂದಾಯವಾಗಬೇಕಾದ ಇತರೆ	**17.2**		
ಸಂದಾಯವಾಗಬೇಕಾದ ಲೆಕ್ಕಪರಿಶೋಧನಾ ಶುಲ್ಕ		4.50	4.35
ಬ್ಯಾಂಕ್ ಸಾಲ, ಸರಕು ಸಾಲ, ಎಚ್‌ಬಿಎ & ಚಿಟ್ ಫಂಡ್ – ಸಿಬ್ಬಂದಿ		3.42	3.64
ಭದ್ರತೆ/ಟೆಂಡರ್ ಠೇವಣಿ		100.83	79.60
ಸಂದಾಯವಾಗಬೇಕಾದ ಬೋನಸ್ 2015–2016		66.22	66.29
ಸಂದಾಯವಾಗಬೇಕಾದ ಬೋನಸ್ 2016–2017		-	46.60
ಸಂದಾಯವಾಗಬೇಕಾದ ಬೋನಸ್ 2017–2018		63.06	63.06
ಸಂದಾಯವಾಗಬೇಕಾದ ಬೋನಸ್ 2018–2019		49.07	75.60
ಸಂದಾಯವಾಗಬೇಕಾದ ಬೋನಸ್ 2019–2020		5.25	
ಸಂದಾಯವಾಗಬೇಕಾದ ಗುಂಪು ಪ್ರೋತ್ಸಾಹಕ ಧನ 15–16		193.83	193.83
ಸಂದಾಯವಾಗಬೇಕಾದ ಗುಂಪು ಪ್ರೋತ್ಸಾಹಕ ಧನ 16–17		192.15	192.15
ಸಂದಾಯವಾಗಬೇಕಾದ ಗುಂಪು ಪ್ರೋತ್ಸಾಹಕ ಧನ 17–18		184.59	184.59
ಕಂಪೆನಿಯ ಸುವರ್ಣ ಮಹೋತ್ಸವ ಪಾವತಿಯಾಗಬೇಕಿರುವ ಪ್ರೋತ್ಸಾಹಕ ಧನ		-	5.40
4ನೇ ವೇತನ ಆಯೋಗದ ಬಾಕಿ		221.55	221.97
ಪಾವತಿಯಾಗದ ಬೋನಸ್		0.13	0.13
ಪಾವತಿಯಾಗದ ವೇತನಗಳು		0.35	0.42
ಸಿಬ್ಬಂದಿ ವಿಮಾ ಪ್ರೀಮಿಯಂ		6.91	6.92
ರಾಷ್ಟ್ರೀಯ ಪಿಂಚಣಿ ಯೋಜನೆ		1.87	1.34
ಇತರೆ ಖರ್ಚುಗಳಿಗಾಗಿ ಚಿಲ್ಲರೆ ಸಾಲದಾರರು		458.18	379.49
ಗ್ರಾಹಕರಿಂದ ವ್ಯಾಪಾರಿ ಮುಂಗಡ		2,254.16	1,130.42
ರಿಟೆನ್ಷನ್ ಹಣ		775.93	728.60
ನಿಷ್ಕ್ರಿಯ / ಮೇಲ್ಮೆ ಬಾಡಿಗೆ		221.86	196.08
ಒಟ್ಟು		**4,803.85**	**3,580.47**

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್

ಟಿ.ಟಿ.ಎಂ.ಸಿ. ಕಟ್ಟಡ, 'ಎ' ಬ್ಲಾಕ್, 5ನೇ ಮಹಡಿ, ಬಿ.ಎಂ.ಟಿ.ಸಿ., ಶಾಂತಿನಗರ, ಬೆಂಗಳೂರು – 560 027.

31 ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷದ ಕ್ರೋಢೀಕೃತ ಲಾಭ ಮತ್ತು ನಷ್ಟದ ತಃಖ್ತೆಗೆ ಉಪ–ಅನುಸೂಚಿಗಳು

(ಮೊತ್ತ ಲಕ್ಷ ರೂಗಳಲ್ಲಿ)

ವಿವರಗಳು	ಟಿಪ್ಪಣಿ	31, ಮಾರ್ಚ್ ರಂದು ಇದ್ದಂತೆ	
		2020	2019
ಭವಿಷ್ಯ ನಿಧಿ ಮತ್ತು ಇತರ ನಿಧಿಗಳಿಗೆ ವಂತಿಗೆ	**22.1**		
ಕಂಪೆನಿಯ ಇಪಿಎಫ್ ವಂತಿಗೆ		225.35	216.63
ರಜೆ & ಪಿಂಚಣಿ ವಂತಿಗೆ		7.75	9.47
ಕುಟುಂಬ ಪಿಂಚಣಿ ವಂತಿಗೆ		88.02	101.15
ಸೇವಾನಿವೃತ್ತಿ ನಿಧಿಗೆ ವಂತಿಗೆ		48.70	54.94
ಇಎಸ್ಐ ಗೆ ಕಂಪೆನಿಯ ವಂತಿಗೆ		-	0.12
ಇಡಿಎಲ್ಐಎಸ್ ಆಡಳಿತಾತ್ಮಕ ಶುಲ್ಕ		-	-
ಪಿಎಫ್ ಆಡಳಿತಾತ್ಮಕ ಶುಲ್ಕ		13.06	13.81
ಗ್ರಾಚುಟಿ ಜೀವ ವಿಮೆ		6.19	5.31
ಒಟ್ಟು		**389.07**	**401.43**
ವೇತನಗಳು, ಕೂಲಿ ಮತ್ತು ಬೋನಸ್	**22.2**		
ವೇತನ (ನೌಕರರು)		3,338.38	3,467.91
ವೇತನ (ವ್ಯವಸ್ಥಾಪಕ ನಿರ್ದೇಶಕರು)		29.63	22.86
ಬೋನಸ್		5.25	75.60
ಗಳಿಕೆ ರಜೆ ವೇತನ		351.77	312.61
ಉತ್ಪಾದನಾ ಪ್ರೋತ್ಸಾಹಧನ		-	0.26
ಒಟ್ಟು		**3,725.02**	**3,879.23**
ಕಾರ್ಮಿಕರು & ಸಿಬ್ಬಂದಿ ಕಲ್ಯಾಣ	**22.3**		
ಕಾರ್ಮಿಕರು & ಸಿಬ್ಬಂದಿ ಕಲ್ಯಾಣ		47.75	73.40
ವೈದ್ಯಕೀಯ ಸಮಾಲೋಚನೆ ಶುಲ್ಕ & ವೈದ್ಯಕೀಯ ಸಹಾಯ		17.97	14.15
ಇಡಿಎಲ್ಐಎಸ್ – ಜೀವ ವಿಮೆ		13.88	36.89
ಒಟ್ಟು		**79.61**	**124.43**
ಅರಣ್ಯೀಕರಣ ಶುಲ್ಕ	**25.1**		
ಅರಣ್ಯೀಕರಣ ಶುಲ್ಕ		0.41	0.01
ಪರಿಸರ ಖರ್ಚುಗಳು		3.07	4.49
ಗಣಿ ಸುರಕ್ಷಾ ಸಪ್ತಾಹ ಖರ್ಚುಗಳು		3.80	2.37
ಒಟ್ಟು		**7.29**	**6.87**
ಗಣಿಗಾರಿಕೆ ಉಪ–ಗುತ್ತಿಗೆ ವೆಚ್ಚ	**25.2**		
ಗ್ರಾನೈಟ್		155.41	81.76
ಕಬ್ಬಿಣದ ಅದಿರು		-	156.00
ಸುಣ್ಣದ ಕಲ್ಲು/ಡಾಲಮೈಟ್		71.25	-
ಒಟ್ಟು		**226.66**	**237.76**

ವಿವರಗಳು	ಟಿಪ್ಪಣಿ	31, ಮಾರ್ಚ್ ರಂದು ಇದ್ದಂತೆ	
		2020	2019
ದುರಸ್ತಿ ಮತ್ತು ನಿರ್ವಹಣೆ	**25.3**		
-ಕಟ್ಟಡ		14.95	1.94
-ಸ್ಥಾವರ & ಯಂತ್ರೋಪಕರಣ		4.76	1.25
-ಇತರೆ			
i) ಸಾಮಾನ್ಯ		38.26	10.75
ii) ವಾಹನ		34.33	38.01
iii) ಕಂಪ್ಯೂಟರ್		5.21	3.46
ಒಟ್ಟು		**97.50**	**55.42**
ವಿಮೆ	**25.4**		
ವಿಮೆ – ಸಾಮಾನ್ಯ		0.64	0.54
ವಿಮೆ – ವಾಹನ		22.36	21.16
ಒಟ್ಟು		**23.00**	**21.70**
ಅಂಚೆ & ತಂತಿ, ದೂರವಾಣಿ & ಟ್ರಂಕ್ ಕಾಲ್	**25.5**		
ದೂರವಾಣಿ & ಟ್ರಂಕ್ ಕಾಲ್		8.90	11.20
ಅಂಚೆ & ತಂತಿ		2.91	2.98
ಇಂಟರ್‌ನೆಟ್ ಶುಲ್ಕಗಳು		13.21	20.72
ಒಟ್ಟು		**25.02**	**34.91**
ದರಗಳು & ತೆರಿಗೆ	**25.6**		
ವಾಹನ ತೆರಿಗೆ & ಶುಲ್ಕ		5.62	6.29
ಪರವಾನಗಿ & ಶುಲ್ಕಗಳು		24.45	13.94
ಒಟ್ಟು		**30.07**	**20.23**
ಬಾಡಿಗೆ	**25.7**		
ಬಾಡಿಗೆ		73.08	55.87
ನಿವೇಶನ ಬಾಡಿಗೆ		6.98	1.78
ಒಟ್ಟು		**80.07**	**57.65**
ಪ್ರಯಾಣ ವೆಚ್ಚ	**25.8**		
ಪ್ರಯಾಣ ವೆಚ್ಚಗಳು		32.95	48.02
ವಾಹನಭತ್ಯೆ ವೆಚ್ಚ		5.17	3.66
ಒಟ್ಟು		**38.11**	**51.68**
ಮಾರಾಟ ಪ್ರೋತ್ಸಾಹ ಖರ್ಚುಗಳು	**25.9**		
ಪ್ರದರ್ಶನ ಖರ್ಚುಗಳು		6.26	12.13
ಮಾರಾಟ ಪ್ರೋತ್ಸಾಹ ಖರ್ಚುಗಳು		-	0.56
ವ್ಯಾಪಾರ ಪ್ರೋತ್ಸಾಹಕ		3.42	4.59
ಜಾಹೀರಾತು ಖರ್ಚುಗಳು		13.11	23.80
ಒಟ್ಟು		**22.80**	**41.08**

i) **ಸಹಯೋಗಿ ಕಂಪೆನಿಗಳು ಮತ್ತು ಜಂಟಿ ಉಪಕ್ರಮಗಳಿಗೆ ಸಂಬಂಧಿಸಿದಂತೆ ಕಂಪೆನಿ ಕಾಯ್ದೆ, 2013ರ ಪರಿಚ್ಛೇದ 129(3)ರ ಅನುಸಾರದ ತಃಖ್ತೆ**

ಕ್ರ.ಸಂ	ಸಹಯೋಗಿ ಸಂಸ್ಥೆಯ ಹೆಸರು	ತುಂಗಭದ್ರಾ ಮಿನರಲ್ಸ್ ಪ್ರೈವೇಟ್ ಲಿಮಿಟೆಡ್
1	ಇತ್ತೀಚಿನ ಲೆಕ್ಕಪರಿಶೋಧಿತ ಸಂತುಲನ ಪಟ್ಟಿಯ ದಿನಾಂಕ	31 ಮಾರ್ಚ್ 20
2	**ವರ್ಷದ ಕೊನೆಯ ಹೊತ್ತಿಗೆ ಕಂಪೆನಿ ಹೊಂದಿರುವ ಸಹಯೋಗಿ ಸಂಸ್ಥೆಯ ಷೇರುಗಳು**	
	ಸಂಖ್ಯೆ	31,208
	ಸಹಯೋಗಿ ಸಂಸ್ಥೆಯಲ್ಲಿ ಹೂಡಿಕೆಯ ಮೊತ್ತ (ಲಕ್ಷ ರೂ.ಗಳಲ್ಲಿ)	31.21
	ಷೇರುದಾರಿಕೆಯ %	26%
	ಮಹತ್ವದ ಪ್ರಭಾವ ಹೇಗೆ ಇದೆ ಎಂಬ ಬಗ್ಗೆ ವಿವರಣೆ	ಮತದಾನದ ಹಕ್ಕುಗಳು
4	ಸಹಯೋಗಿ ಸಂಸ್ಥೆ ಏಕೆ ಕ್ರೋಢೀಕೃತವಾಗಿಲ್ಲ ಎನ್ನುವುದಕ್ಕೆ ಕಾರಣ	ಅನ್ವಯವಾಗುವುದಿಲ್ಲ
5	ಇತ್ತೀಚಿನ ಲೆಕ್ಕಪರಿಶೋಧಿತ ಸಂತುಲನ ಪಟ್ಟಿಯ ಪ್ರಕಾರ ಷೇರುದಾರಿಕೆಗೆ ಅಧ್ಯಾರೋಪಿಸಬಹುದಾದ ನಿವ್ವಳ ಮೌಲ್ಯ (ಲಕ್ಷ ರೂ.ಗಳಲ್ಲಿ)	8,152.26
6	ವರ್ಷದ ಲಾಭ/ನಷ್ಟ	
	i) ಕ್ರೋಢೀಕರಣದಲ್ಲಿ ಪರಿಗಣಿತವಾದದ್ದು (ಲಕ್ಷ ರೂ.ಗಳಲ್ಲಿ)	(50.93)

ಕ್ರ.ಸಂ	ಜಂಟಿ ಉಪಕ್ರಮದ ಹೆಸರು	ವಿಜಯನಗರ ಮಿನರಲ್ಸ್ ಪ್ರೈವೇಟ್ ಲಿಮಿಟೆಡ್
1	ಇತ್ತೀಚಿನ ಲೆಕ್ಕಪರಿಶೋಧಿತ ಸಂತುಲನ ಪಟ್ಟಿಯ ದಿನಾಂಕ	31 ಮಾರ್ಚ್ 20
2	**ವರ್ಷದ ಕೊನೆಯ ಹೊತ್ತಿಗೆ ಕಂಪೆನಿ ಹೊಂದಿರುವ ಸಹಯೋಗಿ ಸಂಸ್ಥೆಯ ಷೇರುಗಳು**	
	ಸಂಖ್ಯೆ	3,000
	ಸಹಯೋಗಿ ಸಂಸ್ಥೆಯಲ್ಲಿ ಹೂಡಿಕೆಯ ಮೊತ್ತ (ಲಕ್ಷ ರೂ.ಗಳಲ್ಲಿ)	0.30
	ಷೇರುದಾರಿಕೆಯ %	30%
	ಮಹತ್ವದ ಪ್ರಭಾವ ಹೇಗೆ ಇದೆ ಎಂಬ ಬಗ್ಗೆ ವಿವರಣೆ	ಮತದಾನದ ಹಕ್ಕುಗಳು
4	ಸಹಯೋಗಿ ಸಂಸ್ಥೆ ಏಕೆ ಕ್ರೋಢೀಕೃತವಾಗಿಲ್ಲ ಎನ್ನುವುದಕ್ಕೆ ಕಾರಣ	ಅನ್ವಯವಾಗುವುದಿಲ್ಲ
5	ಇತ್ತೀಚಿನ ಲೆಕ್ಕಪರಿಶೋಧಿತ ಸಂತುಲನ ಪಟ್ಟಿಯ ಪ್ರಕಾರ ಷೇರುದಾರಿಕೆಗೆ ಅಧ್ಯಾರೋಪಿಸಬಹುದಾದ ನಿವ್ವಳ ಮೌಲ್ಯ (ಲಕ್ಷ ರೂ.ಗಳಲ್ಲಿ)	254.87
6	ವರ್ಷದ ಲಾಭ/ನಷ್ಟ	
	i) ಕ್ರೋಢೀಕರಣದಲ್ಲಿ ಪರಿಗಣಿತವಾದದ್ದು (ಲಕ್ಷ ರೂ.ಗಳಲ್ಲಿ)	(7.22)

2019–20 ಹಣಕಾಸು ವರ್ಷದ ಕ್ರೋಢೀಕೃತ ಹಣಕಾಸು ತಃಖ್ತೆಗಳ ಭಾಗವಾದ ಟಿಪ್ಪಣಿಗಳು

1. **ಕಂಪೆನಿ ಮಾಹಿತಿ:**

ಕರ್ನಾಟಕ ರಾಜ್ಯ ಖನಿಜ ನಿಗಮ ನಿಯಮಿತ (ಕೆಎಸ್ಎಂಸಿಎಲ್) ಇನ್ನು ಮುಂದೆ "ಕಂಪೆನಿ" ಎಂದು ಉಲ್ಲೇಖಿತ, ಕರ್ನಾಟಕ ಸರ್ಕಾರದ ಒಂದು ಉದ್ಯಮವಾಗಿದ್ದು ಕಂಪೆನಿ ಕಾಯ್ದೆ ಅಡಿಯಲ್ಲಿ 1956ರಲ್ಲಿ ನಿಗಮನಗೊಂಡಿತು. ಸ್ಥಳೀಯ ಕೈಗಾರಿಕೆಯ ಅಗತ್ಯಗಳನ್ನು ಪೂರೈಸುವ ಹಾಗೂ ಸ್ಥಳೀಯ ಸಮುದಾಯಗಳಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ರಾಜ್ಯದ ವಿವಿಧ ಪ್ರದೇಶಗಳಲ್ಲಿ ಲಭ್ಯವಿರುವ ಖನಿಜ ಸಂಪನ್ಮೂಲಗಳನ್ನು ಅನ್ವೇಷಿಸುವುದು ಕೆಎಸ್ಸಿಎಂಎಲ್ ಉದ್ದೇಶವಾಗಿದೆ. ಕೆಎಸ್ಸಿಎಂಎಲ್ ಕ್ರೋಮೈಟ್, ಲೈಮ್‌ಸ್ಟೋನ್, ಡಾಲಮೈಟ್, ಕಬ್ಬಿಣದ ಅದಿರು, ಜೇಡಿಮಣ್ಣು ಮತ್ತು ಗ್ರಾನೈಟ್‌ಗಳನ್ನು ಉತ್ಪಾದಿಸುವ ರಾಜ್ಯದ ಅತಿದೊಡ್ಡ ಉಪಕ್ರಮಗಳಲ್ಲಿ ಒಂದಾಗಿದೆ. ಕರ್ನಾಟಕ ರಾಜ್ಯ ಖನಿಜ ನಿಗಮ ನಿಯಮಿತವು ಕರ್ನಾಟಕ ರಾಜ್ಯದಲ್ಲಿ ವೈಜ್ಞಾನಿಕವಾಗಿ ಮತ್ತು ಪರಿಸರಸ್ನೇಹಿ ರೀತಿಯಲ್ಲಿ ವಿವಿಧ ಖನಿಜಗಳನ್ನು ಅನ್ವೇಷಿಸುವ ಮತ್ತು ಮಾರುವ ಪ್ರಕ್ರಿಯೆಯಲ್ಲಿ ತೊಡಗಿದೆ.

31 ಮಾರ್ಚ್ 2020ರಂದು ಇದ್ದಂತೆ ಕಂಪೆನಿಯ ಹಣಕಾಸು ಸ್ಥಿತಿಯನ್ನು ಹಣಕಾಸು ತಃಖ್ತೆ ಪ್ರಸ್ತುತಪಡಿಸುತ್ತದೆ.

ಕಂಪೆನಿಯ ಕಾರ್ಯಯುಕ್ತ ಮತ್ತು ಪ್ರಸ್ತುತಿಯ ಚಲಾವಣೆಯ ಹಣ ಭಾರತೀಯ ರೂಪಾಯಿ (ರೂ.) ಆಗಿದ್ದು ಇದು ಕಂಪೆನಿಯು ಕಾರ್ಯಾಚರಣೆ ನಡೆಸಿರುವ ಪ್ರಧಾನ ಆರ್ಥಿಕ ಪರಿಸರದ ಚಲಾವಣೆಯ ಹಣವಾಗಿದೆ.

31 ಮಾರ್ಚ್ 2020ರಂದು ಇದ್ದಂತೆ ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ಖನಿಜ ನಿಗಮ ನಿಯಮಿತದ ಸಾಮಾನ್ಯ ಷೇರುಗಳಲ್ಲಿ 99% ದಷ್ಟನ್ನು ಹೊಂದಿದ್ದು ಕಂಪೆನಿಯ ಕಾರ್ಯಾಚರಣೆಗಳನ್ನು ಪ್ರಭಾವಿಸುವ ಸಾಮರ್ಥ್ಯವನ್ನು ಹೊಂದಿದೆ.

2. **ಸಿದ್ಧಪಡಿಸುವಿಕೆಗೆ ಆಧಾರ:**

ಎ) **ಅನುಪಾಲನೆಯ ತಃಖ್ತೆ**

ಪ್ರತ್ಯೇಕ ಹಣಕಾಸು ತಃಖ್ತೆಯನ್ನು ಕಂಪೆನಿ ಕಾಯ್ದೆ, 2013ರ ಪರಿಚ್ಛೇದ 133ರ ಅಡಿಯಲ್ಲಿ ನಿಗದಿಪಡಿಸಲಾಗಿರುವ ಭಾರತೀಯ ಲೇಖಾ ಪ್ರಮಾಣಗಳ ("ಇಂಡ್ ಎಎಸ್" ಎಂದು ಉಲ್ಲೇಖಿತ) ಅನುಸಾರ, ಕಾಲದಿಂದ ಕಾಲಕ್ಕೆ ಪರಿಷ್ಕೃತವಾಗುವ ಕಂಪೆನಿಗಳ (ಭಾರತೀಯ ಲೇಖಾ ಪ್ರಮಾಣಗಳು) ನಿಯಮಗಳಿಗೆ ಹೊಂದುವಂತೆ ಸಿದ್ಧಪಡಿಸಲಾಗಿದೆ.

ಬಿ) **ಕಾರ್ಯಯುಕ್ತ ಮತ್ತು ಪ್ರಸ್ತುತಿಯ ಚಲಾವಣೆಯ ಹಣ**

ಈ ಪ್ರತ್ಯೇಕ ಹಣಕಾಸು ತಃಖ್ತೆಗಳನ್ನು ಕಂಪೆನಿಯ ಕಾರ್ಯಯುಕ್ತ ಚಲಾವಣೆಯ ಹಣವಾಗಿರುವ ಭಾರತೀಯ ರೂಪಾಯಿಗಳಲ್ಲಿ (ಐಎನ್ಆರ್) ಪ್ರಸ್ತುತಪಡಿಸಲಾಗಿದೆ. ಅನ್ಯ ಸೂಚನೆಗಳನ್ನು ನೀಡದ ಹೊರತು, ಎಲ್ಲ ಮೊತ್ತಗಳನ್ನೂ ಹತ್ತಿರದ ಪೂರ್ಣ ಲಕ್ಷಕ್ಕೆ ಹೊಂದಿಸಲಾಗಿದೆ.

ಸಿ) **ಲೆಕ್ಕಹಾಕುವಿಕೆಗೆ ಆಧಾರ**

ಈ ಪ್ರತ್ಯೇಕ ಹಣಕಾಸು ತಃಖ್ತೆಗಳನ್ನು ಚಾರಿತ್ರಿಕ ವೆಚ್ಚ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ. ಆದರೆ ಕೆಳಗೆ ಪಟ್ಟಿಮಾಡಿರುವ ಕೆಲವು ಆಸ್ತಿಗಳು ಮತ್ತು ಹೊಣೆಗಳನ್ನು ಇಂಡ್ ಎಎಸ್ ಪ್ರಕಾರ ನ್ಯಾಯಯುತ ಮೌಲ್ಯಗಳಲ್ಲಿ ಪ್ರಸ್ತುತಪಡಿಸಲಾಗಿದೆ:

ಬಾಬ್ತುಗಳು	ಲೆಕ್ಕಹಾಕುವಿಕೆಗೆ ಆಧಾರ
ಕೆಲವು ಹಣಕಾಸು ಆಸ್ತಿಗಳು ಮತ್ತು ಹೊಣೆಗಳು	ನ್ಯಾಯಯುತ ಮೌಲ್ಯ
ನಿವ್ವಳ ನಿರ್ವಚಿತ ಲಾಭ (ಆಸ್ತಿ)/ಹೊಣೆ	ಯೋಜನಾ ಆಸ್ತಿಗಳ ನ್ಯಾಯಯುತ ಮೌಲ್ಯದಲ್ಲಿ ನಿರ್ವಚಿತ ಹೊಣೆಗಳ ಪ್ರಸ್ತುತ ಮೌಲ್ಯವನ್ನು ಕಳೆದದ್ದು

ಚಾರಿತ್ರಿಕ ವೆಚ್ಚವು ಸರಕುಗಳು ಮತ್ತು ಸೇವೆಗಳಿಗೆ ಬದಲಾಗಿ ಒದಗಿಸಲಾಗುವ ಪರಿಗಣನೆಯ ನ್ಯಾಯಯುತ ಮೌಲ್ಯವನ್ನು ಸಾಮಾನ್ಯವಾಗಿ ಆಧರಿಸಿದೆ. ಮಾರುಕಟ್ಟೆಯ ಭಾಗಿಗಳ ನಡುವೆ ಲೆಕ್ಕಹಾಕುವಿಕೆಯ ದಿನಾಂಕದಂದು ನಡೆಯುವ ಕ್ರಮಬದ್ಧವಾದ ವ್ಯವಹಾರದಲ್ಲಿ ಆಸ್ತಿಯೊಂದನ್ನು ಮಾರಿದಾಗ ಪಡೆಯುವ ಅಥವಾ ಹೊಣೆಯೊಂದನ್ನು ವರ್ಗಾಯಿಸಲು ನೀಡಲಾಗುವ ಬೆಲೆಯನ್ನು ನ್ಯಾಯಯುತ ಮೌಲ್ಯ ಎಂದು ಕರೆಯಲಾಗುತ್ತದೆ.

ಡಿ) **ಕ್ರೋಢೀಕರಣಕ್ಕೆ ಆಧಾರ**

ನಿಯಂತ್ರಣವು ಪ್ರಾರಂಭವಾದ ದಿನಾಂಕದಿಂದ ನಿಯಂತ್ರಣವು ಅಸ್ತಿತ್ವದಲ್ಲಿ ಇರದ ದಿನಾಂಕದವರೆಗೆ ಮಹತ್ವದ ಪ್ರಭಾವವನ್ನು ಬೀರುವ ಎಲ್ಲ ಅಸ್ತಿತ್ವಗಳನ್ನೂ ಕಂಪೆನಿಯು ಕ್ರೋಢೀಕರಿಸುತ್ತದೆ.

ಕಂಪೆನಿಯು ಹಟ್ಟಿ ಚಿನ್ನದ ಗಣಿ ಕಂಪೆನಿ ಲಿಮಿಟೆಡ್ ಮತ್ತು ಕರ್ನಾಟಕ ರಸ್ತೆ ಸಾರಿಗೆ ಅಭಿವೃದ್ಧಿ ನಿಗಮ ನಿಯಮಿತಗಳಲ್ಲಿ ಮಹತ್ವದ ಪ್ರಭಾವವನ್ನು ಈ ಎರಡೂ ಸಂಸ್ಥೆಗಳ ಸಮಾನ ನಿರ್ದೇಶಕರುಗಳನ್ನು ಸರ್ಕಾರಿ ಆದೇಶಗಳ ಅನುಸಾರ ನೇಮಿಸಿರುವ ಕಾರಣದಿಂದಾಗಿ ಹೊಂದಿರುವುದಿಲ್ಲ.

ಸಹಯೋಗಿ ಸಂಸ್ಥೆಗಳು ಮತ್ತು ಜಂಟಿ ಉಪಕ್ರಮಗಳಲ್ಲಿನ ಹೂಡಿಕೆಗಳನ್ನು ಈಕ್ವಿಟಿ ಲೆಕ್ಕ ವಿಧಾನವನ್ನು ಬಳಸಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ

ಸಂಸ್ಥೆಯ ಹೆಸರು ಮತ್ತು ಸಂಬಂಧ	2019-2020		2018-2019	
	ನಿಗಮನ ಪ್ರಕ್ರಿಯೆಯ ದೇಶ	ಷೇರುದಾರಿಕೆಯ %	ನಿಗಮನ ಪ್ರಕ್ರಿಯೆಯ ದೇಶ	ಷೇರುದಾರಿಕೆಯ %
ವಿಜಯನಗರ ಮಿನರಲ್ಸ್ ಪ್ರೈವೇಟ್ ಲಿಮಿಟೆಡ್ (ಜಂಟಿ ಉದ್ಯಮ)	ಭಾರತ	30%	ಭಾರತ	30%
ತುಂಗಭದ್ರ ಮಿನರಲ್ಸ್ ಪ್ರೈವೇಟ್ ಲಿಮಿಟೆಡ್ (ಸಹಯೋಗಿ ಉದ್ಯಮ)	ಭಾರತ	26%	ಭಾರತ	26%

ಈಕ್ವಿಟಿ ವಿಧಾನ:

ಈ ವಿಧಾನದ ಅಡಿಯಲ್ಲಿ, ಹೂಡಿಕೆಗಳನ್ನು ಪ್ರಾರಂಭದಲ್ಲಿ ವೆಚ್ಚದಲ್ಲಿ ಗುರುತಿಸಲಾಗುತ್ತದೆ ಮತ್ತು ನಂತರದಲ್ಲಿ ಸ್ವಾಧೀನೋತ್ತರ ಲಾಭ ಅಥವಾ ನಷ್ಟಗಳಲ್ಲಿ ಹೂಡಿಕೆದಾರರ ಪಾಲು ಮತ್ತು ಇತರ ಸಮಗ್ರ ಆದಾಯದಲ್ಲಿನ ಹೂಡಿಕೆದಾರರ ಇತರ ಸಮಗ್ರ ಆದಾಯದಲ್ಲಿ ಕಂಪೆನಿಯ ಪಾಲನ್ನು ಗುರುತಿಸುವ ಸಲುವಾಗಿ ಹೊಂದಿಸಲಾಗುತ್ತದೆ. ಜಂಟಿ ಉಪಕ್ರಮಗಳಿಂದ ಪಡೆಯಲಾದ ಅಥವಾ ಪಡೆಯಬೇಕಿರುವ ಲಾಭಾಂಶಗಳನ್ನು ಹೂಡಿಕೆಯ ಒಯ್ಯು ಮೊತ್ತದಲ್ಲಿನ ಇಳಿಕೆ ಎಂದು ಗುರುತಿಸಲಾಗುತ್ತದೆ. ಇತರ ಆಧಾರರರಹಿತವಾದ ದೀರ್ಘಾವಧಿ ವಸೂಲಾಗಬೇಕಾದವುಗಳೂ ಸೇರಿ ಈಕ್ವಿಟಿ ಆಧಾರದ ಹೂಡಿಕೆಯಲ್ಲಿನ ನಷ್ಟದಲ್ಲಿನ ಕಂಪೆನಿಯ ಪಾಲು ಸಂಸ್ಥೆಯಲ್ಲಿನ ಹಿತಾಸಕ್ತಿಗೆ ಸಮನಾದಾಗ ಅಥವಾ ಅದಕ್ಕಿಂತ ಹೆಚ್ಚಾದಾಗ ಕಂಪೆನಿಯು ಅನ್ಯ ಸಂಸ್ಥೆಯ ಪರವಾಗಿ ಹೊಣೆಗಳನ್ನು ನಿಭಾಯಿಸಿದಲ್ಲದೆ ಅಥವಾ ಪಾವತಿಗಳನ್ನು ಮಾಡಿದಲ್ಲದೆ ಹೆಚ್ಚುವರಿ ನಷ್ಟಗಳನ್ನು ಗುರುತಿಸುವುದಿಲ್ಲ. ಜಂಟಿ ಉಪಕ್ರಮಗಳು ಮತ್ತು ಸಹಯೋಗಿ ಸಂಸ್ಥೆಗಳೊಂದಿಗಿನ ವ್ಯವಹಾರಗಳ ಸಂಬಂಧ ಕಂಪೆನಿಯು ಸಾಕ್ಷಾತ್ಕರಿಸಿಕೊಳ್ಳದ ಲಾಭಗಳನ್ನು ಈ ಸಂಸ್ಥೆಗಳಲ್ಲಿನ ಕಂಪೆನಿಯ ಹಿತಾಸಕ್ತಿಯ ಮಟ್ಟಿಗೆ ತೊಡೆದುಹಾಕಲಾಗುತ್ತದೆ. ವರ್ಗಾಯಿಸಲಾದ ಆಸ್ತಿಯು ಬಾಧೆಗೊಳಗಾದುದಕ್ಕೆ ಆಧಾರವನ್ನು ವ್ಯವಹಾರವು ಒದಗಿಸದಿದ್ದರೆ ಸಾಕ್ಷಾತ್ಕಾರವಾಗದ ನಷ್ಟಗಳನ್ನೂ ಸಹ ತೊಡೆದುಹಾಕಲಾಗುವುದು. ಈಕ್ವಿಟಿ ಆಧಾರದ ಹೂಡಿಕೆದಾರರ ಲೇಖಾ ನೀತಿಗಳನ್ನು ಕಂಪೆನಿಯು ಅಳವಡಿಸಿಕೊಂಡಿರುವ ನೀತಿಗಳೊಂದಿಗೆ ಸ್ಥಿರತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಬದಲಾಯಿಸಲಾಗಿದೆ.

ಎಲ್ಲ ಅಂತರ್–ಕಂಪೆನಿ ವ್ಯವಹಾರಗಳು, ಶಿಲ್ಕುಗಳು ಮತ್ತು ಆದಾಯ ಹಾಗೂ ಖರ್ಚುಗಳನ್ನು ಪೂರ್ಣಪ್ರಮಾಣದ ಕ್ರೋಢೀಕರಣದಲ್ಲಿ ತೊಡೆದುಹಾಕಲಾಗುವುದು.

ಸಹಯೋಗಿ ಸಂಸ್ಥೆಗಳಲ್ಲಿನ ಕಂಪೆನಿಯ ಹೂಡಿಕೆಗಳಲ್ಲಿ ಹೂಡಿಕೆಯ ವೆಚ್ಚ ಮತ್ತು ಸಹಯೋಗಿ ಸಂಸ್ಥೆಯ ಗುರುತಿಸಬಹುದಾದ ಆಸ್ತಿಗಳು ಮತ್ತು ಹೊಣೆಗಳ ನಿವ್ವಳ ನ್ಯಾಯಯುತ ಮೌಲ್ಯದಲ್ಲಿನ ಹೂಡಿಕೆದಾರರ ಪಾಲಿನ ನಡುವಿನ ವ್ಯತ್ಯಾಸದ ಮೇಲೆ ಗುರುತಿಸಲಾದ ಬಂಡವಾಳ ಮುಡಿಪು ಸೇರುತ್ತದೆ.

ಇ) **ಅಂದಾಜುಗಳು ಮತ್ತು ತೀರ್ಮಾನಗಳ ಬಳಕೆ**

ಇಂಡ್ ಎಎಸ್ ಗುರುತಿಸುವಿಕೆ ಮತ್ತು ಲೆಕ್ಕಹಾಕುವಿಕೆಯ ಸಿದ್ಧಾಂತಗಳಿಗೆ ಹೊಂದುವಂತೆ ಪ್ರತ್ಯೇಕ ಹಣಕಾಸು ತಃಖ್ತೆಗಳ ಸಿದ್ಧಪಡಿಸುವಿಕೆಯು ಆಸ್ತಿಗಳು ಮತ್ತು ಹೊಣೆಗಳ ವರದಿಮಾಡಿದ ಉಳಿಕೆಗಳು, ಕ್ರೋಢೀಕೃತ ಹಣಕಾಸು ತಃಖ್ತೆಗಳ ದಿನಾಂಕದಂದು ಇದ್ದಂತೆ ಸಾದಿಲ್ವಾರು ಹೊಣೆಗಳ ಪ್ರಕಟಣೆ ಮತ್ತು ಪ್ರಸ್ತುತಪಡಿಸಲಾದ ಅವದಿಗಳಿಗಾಗಿನ ಆದಾಯ

ಮತ್ತು ಖರ್ಚುಗಳ ವರದಿಮಾಡಲಾದ ಮೊತ್ತಗಳನ್ನು ಪ್ರಭಾವಿಸುವ ಅಂದಾಜುಗಳು ಮತ್ತು ತೀರ್ಮಾನಗಳನ್ನು ಆಡಳಿತ ಮಂಡಳಿಯು ತೆಗೆದುಕೊಳ್ಳುವುದನ್ನು ಅಗತ್ಯವಾಗಿಸುತ್ತದೆ.

ಅಂದಾಜುಗಳು ಮತ್ತು ಅವುಗಳಿಗೆ ಮೂಲವಾದ ಊಹನಗಳನ್ನು ಮುಂದುವರಿಕೆಯ ನೆಲೆಯಲ್ಲಿ ಪರಿಶೀಲಿಸಲಾಗುತ್ತದೆ. ಅಂದಾಜುಗಳನ್ನು ಪರಿಷ್ಕರಿಸಿದ ಅವಧಿಯಲ್ಲಿ ಲೆಕ್ಕ ಅಂದಾಜುಗಳ ಪರಿಷ್ಕರಣೆಗಳನ್ನು ಗುರುತಿಸಲಾಗುತ್ತದೆ ಮತ್ತು ಭವಿಷ್ಯದ ಅವಧಿಗಳನ್ನು ಇದು ಪ್ರಭಾವಿಸುತ್ತದೆ.

ಆಸ್ತಿಗಳು ಮತ್ತು ಹೊಣೆಗಳ ಮಂದೊಯ್ಯುವ ಮೌಲ್ಯಗಳಿಗೆ ಸಂಬಂಧಿಸಿದಂತೆ ಮಹತ್ವದ ತೀರ್ಮಾಗಳು ಮತ್ತು ಅಂದಾಜುಗಳಲ್ಲಿ ಸ್ವತ್ತುಗಳು, ಸ್ಥಾವರ ಹಾಗೂ ಸಲಕರಣೆ ಮತ್ತು ಅಗ್ರಾಹ್ಯ ಆಸ್ತಿಗಳ ಉಪಯುಕ್ತ ಆಯುಷ್ಯ, ಆಸ್ತಿಗಳು, ಸ್ವತ್ತುಗಳು, ಸ್ಥಾವರ ಹಾಗೂ ಸಲಕರಣೆ, ಅಗ್ರಾಹ್ಯ ಆಸ್ತಿಗಳು ಮತ್ತು ಹೂಡಿಕೆಗಳಿಗೆ ಬಾಧೆತಟ್ಟುವುದು, ಸಿಬ್ಬಂದಿ ಸವಲತ್ತುಗಳಿಗೆ ಹವಣಿಕೆ ಮತ್ತು ಇತರ ಹವಣಿಕೆಗಳು, ಮುಂದೂಡಲಾದ ತೆರಿಗೆ ಆಸ್ತಿಗಳು, ಬಾಧ್ಯತೆಗಳು ಮತ್ತು ಸಾದಿಲ್ವಾರುಗಳ ವಸೂಲಿಸಾಧ್ಯತೆ ಸೇರುತ್ತವೆ.

ಊಹನಗಳು ಮತ್ತು ಅಂದಾಜುಗಳ ಅನಿಶ್ಚಿತತೆಗಳು:

31 ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷದಲ್ಲಿ ಗಣನೀಯ ಹೊಂದಾಣಿಕೆಗೆ ಕಾರಣವಾಗಬಹುದಾದ ಮಹತ್ವದ ಅಪಾಯವುಳ್ಳ ಊಹನಗಳು ಮತ್ತು ಅಂದಾಜುಗಳ ಅನಿಶ್ಚಿತತೆಗಳ ಬಗೆಗಿನ ಮಾಹಿತಿಯನ್ನು ಕೆಳಗಿನ ಟಿಪ್ಪಣಿಗಳಲ್ಲಿ ಸೇರಿಸಲಾಗಿದೆ:

ಟಿಪ್ಪಣಿ 3 (ಇ) (i) – ಹಣಕಾಸು ಆಸ್ತಿಗಳಿಗೆ ಬಾಧೆತಟ್ಟುವುದು

ಟಿಪ್ಪಣಿ 3 (ಇ) (ii) – ಹಣಕಾಸೇತರ ಆಸ್ತಿಗಳ ಬಾಧೆತಟ್ಟುವಿಕೆ ಪರೀಕ್ಷೆ: ಆಂತರಿಕವಾಗಿ ಸೃಷ್ಟಿಸಲಾದ ಅಗ್ರಾಹ್ಯ ಆಸ್ತಿಗಳೂ ಸೇರಿದಂತೆ ವಸೂಲಾಗಬಹುದಾದ ಮೊತ್ತಗಳ ಮೂಲದಲ್ಲಿನ ಪ್ರಧಾನ ಊಹನಗಳು;

ಟಿಪ್ಪಣಿ 3 (i) – ನಿರ್ವಚಿತ ಲಾಭ ಹೊಣೆಗಳು: ಪ್ರಧಾನ ವಿಮಾಗಣಕ ಊಹನಗಳ ಲೆಕ್ಕಾಚಾರ

ಟಿಪ್ಪಣಿ 3 (ಕೆ) (ii) – ಮುಂದೂಡಲಾದ ತೆರಿಗೆ ಆಸ್ತಿಗಳ ಗುರುತಿಸುವಿಕೆ: ಬಳಸಬಹುದಾದ ಮುಂದಕ್ಕೆ ಒಯ್ಯಲಾದ ತೆರಿಗೆ ನಷ್ಟಗಳಿಗೆ ಪ್ರತಿಯಾಗಿ ಭವಿಷ್ಯದ ತೆರಿಗೆಬದ್ಧ ಲಾಭಗಳ ಲಭ್ಯತೆ;

ಸ್ವತ್ತುಗಳು, ಸ್ಥಾವರ ಹಾಗೂ ಸಲಕರಣೆಯ ಉಪಯುಕ್ತ ಆಯುಷ್ಯ

ಸ್ವತ್ತುಗಳು, ಸ್ಥಾವರ ಹಾಗೂ ಸಲಕರಣೆಯ ಉಪಯುಕ್ತ ಆಯುಷ್ಯವನ್ನು ಕಂಪೆನಿಯು ಪ್ರತಿ ವರದಿಯ ಅವಧಿಯ ಕೊನೆಯಲ್ಲಿ ಪರಿಶೀಲಿಸುತ್ತದೆ. ಈ ಮರುಅಂದಾಜು ಪ್ರಕ್ರಿಯೆಯು ಭವಿಷ್ಯದ ಅವಧಿಗಳಲ್ಲಿ ಸವಕಳಿ ಖರ್ಚಿನ ಬದಲಾವಣೆಗೆ ಕಾರಣವಾಗಬಹುದು.

ಸಾದಿಲ್ವಾರು ಹೊಣೆಗಳಿಗೆ ಹವಣಿಕೆಗಳು

ಕಂಪೆನಿಯು ಗತಿಸಿದ ಕಾಲದಲ್ಲಿನ ಘಟನೆಯಿಂದಾಗಿ ಪ್ರಸ್ತುತ ಹೊಣೆಯೊಂದನ್ನು ಹೊಂದಿದ್ದರೆ ಹಾಗೂ ಆ ಹೊಣೆಯನ್ನು ಇತ್ಯರ್ಥಗೊಳಿಸಲು ಸಂಪನ್ಮೂಲಗಳ ಹೊರಹರಿವಿನ ಅಗತ್ಯವಿದ್ದರೆ, ಮತ್ತು ಆ ಹೊಣೆಯ ಬಗ್ಗೆ ವಿಶ್ವಾಸಾರ್ಹ ಅಂದಾಜನ್ನು ಮಾಡಲು ಸಾಧ್ಯವಿದ್ದರೆ ಅಂತಹ ಸಮದರ್ಭದಲ್ಲಿ ಹವಣಿಕೆಯನ್ನು ಮಾಡುತ್ತದೆ. ಇವನ್ನು ಪ್ರತಿ ಸಂತುಲನ ಪಟ್ಟಿಯ ದಿನಾಂಕದಂದು ಪರಿಶೀಲಿಸಲಾಗುತ್ತದೆ ಮತ್ತು ಚಾಲ್ತಿ ಉತ್ತಮ ಅಂದಾಜುಗಳನ್ನು ಪ್ರಕಟಿಸಲು ಹೊಂದಿಸಲಾಗುತ್ತದೆ. ಸಾದಿಲ್ವಾರು ಹೊಣೆಗಳನ್ನು ಹಣಕಾಸು ತಃಖ್ತೆಗಳಲ್ಲಿ ಗುರುತಿಸಲಾಗುವುದಿಲ್ಲ. ಸಾದಿಲ್ವಾರು ಆಸ್ತಿಗಳನ್ನು ಹಣಕಾಸು ಆಸ್ತಿಗಳಲ್ಲಿ ಗುರುತಿಸಲಾಗುವುದಿಲ್ಲ, ಪ್ರಕಟಿಸಲಾಗುವುದೂ ಇಲ್ಲ.

ಎಫ್) ನ್ಯಾಯಯುತ ಮೌಲ್ಯಗಳ ಲೆಕ್ಕಹಾಕುವಿಕೆ:

ಕಂಪೆನಿಯ ಅನೇಕ ಲೇಖಾ ನೀತಿಗಳು ಮತ್ತು ಪ್ರಕಟಣೆಗಳು ಹಣಕಾಸು ಮತ್ತು ಹಣಕಾಸೇತರ ಆಸ್ತಿಗಳು ಹಾಗೂ ಹೊಣೆಗಳಿಗೆ ನ್ಯಾಯಯುತ ಮೌಲ್ಯಗಳ ಲೆಕ್ಕಹಾಕುವಿಕೆಯನ್ನು ಅಗತ್ಯವಾಗಿಸುತ್ತದೆ.

ನ್ಯಾಯಯುತ ಮೌಲ್ಯಗಳ ಲೆಕ್ಕಹಾಕುವಿಕೆಗೆ ಸಂಬಂಧಿಸಿದಂತೆ ಕಂಪೆನಿಯು ಸ್ಥಾಪಿತವಾದ ನಿಯಂತ್ರಣ ಚೌಕಟ್ಟನ್ನು ಹೊಂದಿರುತ್ತದೆ.

ಆಸ್ತಿ ಅಥವಾ ಹೊಣೆಯ ನ್ಯಾಯಯುತ ಮೌಲ್ಯವನ್ನು ಲೆಕ್ಕಹಾಕುವಾಗ ಕಂಪೆನಿಯು ಸಾಧ್ಯವಾದಷ್ಟು ಮಟ್ಟಿಗೆ ಗಮನಿಸಬಹುದಾದ ಮಾರುಕಟ್ಟೆ ದತ್ತಾಂಶವನ್ನು ಬಳಸುತ್ತದೆ.

3. **ಮಹತ್ವದ ಲೇಖಾ ನೀತಿಗಳು:**

ಎ) **ಹಣಕಾಸು ಸಾಧನಗಳು**

i. ಗುರುತಿಸುವಿಕೆ ಮತ್ತು ಪ್ರಾರಂಭದ ಲೆಕ್ಕಹಾಕುವಿಕೆ

ವ್ಯಾಪಾರದಲ್ಲಿ ವಸೂಲಾಗಬೇಕಾದವು ಮತ್ತು ಸಾಲ ಭದ್ರತೆಗಳನ್ನು ಪ್ರಾರಂಭಿಕವಾಗಿ ಅವು ಸೃಷ್ಟಿಯಾದಾಗ ಗುರುತಿಸಲಾಗುತ್ತದೆ. ಇತರ ಎಲ್ಲ ಹಣಕಾಸು ಆಸ್ತಿಗಳು ಮತ್ತು ಹಣಕಾಸು ಹೊಣೆಗಳನ್ನು ಕಂಪೆನಿಯು ಸಾಧನದ ಗುತ್ತಿಗೆ ಉಪಬಂಧಗಳಿಗೆ ಪಕ್ಷವಾದಾಗ ಪ್ರಾರಂಭದಲ್ಲಿ ಗುರುತಿಸಲಾಗುತ್ತದೆ.

ಹಣಕಾಸು ಆಸ್ತಿ ಅಥವಾ ಹಣಕಾಸು ಹೊಣೆಯನ್ನು ಪ್ರಾರಂಭದಲ್ಲಿ ನ್ಯಾಯಯುತ ಮೌಲ್ಯದಲ್ಲಿ ಜೊತೆಗೆ – ಲಾಭ ಮತ್ತು ನಷ್ಟದ ಮೂಲಕ ನ್ಯಾಯಯುತ ಮೌಲ್ಯದಲ್ಲಿ (ಎಫ್‌ವಿಟಿಪಿಎಲ್) ಲೆಕ್ಕಹಾಕದ ಬಾಬ್ತಿಗೆ–ಆಸ್ತಿ ಅಥವಾ ಹೊಣೆಯ ಸಾಧೀನ ಅಥವಾ ನೀಡುವಿಕೆಗೆ ಅಧ್ಯಾರೋಪಿಸಬಹುದಾದ ವ್ಯಾವಹಾರಿಕ ವೆಚ್ಚವನ್ನು ಸೇರಿಸಿ ಲೆಕ್ಕಹಾಕಲಾಗುತ್ತದೆ.

ii. ವರ್ಗೀಕರಣ ಮತ್ತು ತರುವಾಯದ ಲೆಕ್ಕಹಾಕುವಿಕೆ

ಹಣಕಾಸು ಆಸ್ತಿಗಳು

ಪ್ರಾರಂಭದ ಗುರುತಿಸುವಿಕೆಯ ನಂತರ ಹಣಕಾಸು ಆಸ್ತಿಯೊಂದನ್ನು ಕೆಳಗಿನಂತೆ ಲೆಕ್ಕಹಾಕಲಾಗುತ್ತದೆ:

– ಭೋಗ್ಯದ ವೆಚ್ಚದಲ್ಲಿ;
– ಎಫ್‌ವಿಓಸಿಐ – ಸಾಲ ಹೂಡಿಕೆ;
– ಎಫ್‌ವಿಓಸಿಐ – ಈಕ್ವಿಟಿ ಹೂಡಿಕೆ; ಅಥವಾ
– ಎಫ್‌ವಿಟಿಪಿಎಲ್.

ಕಂಪೆನಿಯು ಆಸ್ತಿಗಳನ್ನು ನಿಭಾಯಿಸುವ ಅವಧಿಯಲ್ಲಿ ಅವುಗಳನ್ನು ನಿಭಾಯಿಸಲು ತನ್ನ ವ್ಯಾಪಾರಿ ಮಾದರಿಯನ್ನು ಬದಲಿಸದ ಹೊರತು ಹಣಕಾಸು ಆಸ್ತಿಗಳನ್ನು ಪ್ರಾರಂಭದ ಗುರುತಿಸುವಿಕೆಯ ನಂತರ ಮರುವರ್ಗೀಕರಿಸಲಾಗುವುದಿಲ್ಲ.

ಕೆಳಗಿನ ಎರಡೂ ಷರತ್ತುಗಳನ್ನು ಪೂರೈಸಿದ್ದು ಎಫ್‌ವಿಟಿಪಿಎಲ್ ನಲ್ಲಿ ಇದ್ದಂತೆ ವಿಧಿಸದಿದ್ದಲ್ಲಿ ಹಣಕಾಸು ಆಸ್ತಿಯನ್ನು ಭೋಗ್ಯದ ವೆಚ್ಚದಲ್ಲಿ ಲೆಕ್ಕಹಾಕಲಾಗುತ್ತದೆ:

– ಆಸ್ತಿಗಳನ್ನು ಇರಿಸಿಕೊಂಡು ತನ್ಮೂಲಕ ಗುತ್ತಿಗೆಯ ನಗದು ಪ್ರವಹನಗಳನ್ನು ಸಂಗ್ರಹಿಸುವ ಉದ್ದೇಶವುಳ್ಳ ವ್ಯಾಪಾರಿ ಮಾದರಿಯೊಳಗೆ ಆಸ್ತಿಯನ್ನು ಇರಿಸಿಕೊಂಡಿದ್ದಲ್ಲಿ; ಮತ್ತು

– ನಿರ್ದಿಷ್ಟ ದಿನಾಂಕಗಳಂದು ಹಣಕಾಸು ಆಸ್ತಿಯ ಗುತ್ತಿಗೆಯ ಕರಾರುಗಳು ನಗದು ಪ್ರವಹನಗಳಿಗೆ ದಾರಿಮಾಡಿಕೊಡುತ್ತಿದ್ದು ಈ ಪ್ರವಹನಗಳು ಕೇವಲ ಅಸಲು ಮತ್ತು ಬಾಕಿ ಇರುವ ಅಸಲು ಮೊತ್ತದ ಮೇಲಿನ ಬಡ್ಡಿಯ ಪಾವತಿಗಳಾಗಿದ್ದಾಗ.

ಕೆಳಗಿನ ಎರಡೂ ಷರತ್ತುಗಳನ್ನು ಪೂರೈಸಿದ್ದು ಎಫ್‌ವಿಟಿಪಿಎಲ್ ನಲ್ಲಿ ಇದ್ದಂತೆ ವಿಧಿಸದಿದ್ದಲ್ಲಿ ಸಾಲ ಹೂಡಿಕೆಯನ್ನು ಎಫ್‌ವಿಒಸಿಐ ವೆಚ್ಚದಲ್ಲಿ ಲೆಕ್ಕಹಾಕಲಾಗುತ್ತದೆ:

– ಆಸ್ತಿಗಳನ್ನು ಇರಿಸಿಕೊಂಡು ತನ್ಮೂಲಕ ಗುತ್ತಿಗೆಯ ನಗದು ಪ್ರವಹನಗಳನ್ನು ಸಂಗ್ರಹಿಸುವ ಮತ್ತು ಹಣಕಾಸು ಆಸ್ತಿಗಳನ್ನು ಮಾರುವ ಮೂಲಕ ಉದ್ದೇಶಗಳನ್ನು ಸಾಧಿಸಿಕೊಳ್ಳುವ ವ್ಯಾಪಾರಿ ಮಾದರಿಯೊಳಗೆ ಆಸ್ತಿಯನ್ನು ಇರಿಸಿಕೊಂಡಿದ್ದಲ್ಲಿ; ಮತ್ತು

– ನಿರ್ದಿಷ್ಟ ದಿನಾಂಕಗಳಂದು ಹಣಕಾಸು ಆಸ್ತಿಯ ಗುತ್ತಿಗೆಯ ಕರಾರುಗಸಳು ನಗದು ಪ್ರವಹನಗಳಿಗೆ ದಾರಿಮಾಡಿಕೊಡುತ್ತಿದ್ದು ಈ ಪ್ರವಹನಗಳು ಕೇವಲ ಅಸಲು ಮತ್ತು ಬಾಕಿ ಇರುವ ಅಸಲು ಮೊತ್ತದ ಮೇಲಿನ ಬಡ್ಡಿಯ ಪಾವತಿಗಳಾಗಿದ್ದಾಗ.

ವ್ಯಾಪಾರಕ್ಕೆಂದು ಇರಿಸಿಕೊಳ್ಳದ ಈಕ್ವಿಟಿ ಸಾಧನದ ಪ್ರಾರಂಭದ ಗುರುತಿಸುವಿಕೆಯ ನಂತರ ಕಂಪೆನಿಯು ಓಸಿಐ ನಲ್ಲಿನ ಹೂಡಿಕೆಯ ನ್ಯಾಯಯುತ ಮೌಲ್ಯದಲ್ಲಿನ (ಎಫ್‌ವಿಓಸಿಐ ಎಂದು ನಿರ್ದೇಶಿತ) ತರುವಾಯದ ಬದಲಾವಣೆಗಳನ್ನು ಮತ್ತೆ ಮಾರ್ಪಡಿಸದಂತೆ ಪ್ರಸ್ತುತಪಡಿಸಲು ಆಯ್ಕೆಮಾಡಬಹುದಾಗಿದೆ. ಈ ಆಯ್ಕೆಯನ್ನು ಹೂಡಿಕೆಯಿಂದ ಹೂಡಿಕೆಯ ಆಧಾರದ ಮೇಲೆ ಮಾಡಲಾಗುತ್ತದೆ.

ಮೇಲೆ ವಿವರಿಸಲಾದಂತೆ ಭೋಗ್ಯದ ವೆಚ್ಚದಲ್ಲಿ ಅಥವಾ ಎಫ್‌ವಿಟಿಪಿಐ ನಂತೆ ವರ್ಗೀಕರಿಸದ ಅಥವಾ ಲೆಕ್ಕಹಾಕದ ಹಣಕಾಸು ಆಸ್ತಿಗಳನ್ನು ಎಫ್‌ವಿಟಿಪಿಎಲ್ ನಲ್ಲಿ ಲೆಕ್ಕಹಾಕಲಾಗುತ್ತದೆ. ಇದು ಎಲ್ಲ ನಿಷ್ಪನ್ನ ಆಸ್ತಿಗಳನ್ನು ಒಳಗೊಳ್ಳುತ್ತದೆ. ಪ್ರಾರಂಭದ ಗುರುತಿಸುವಿಕೆಯ ನಂತರ, ಭೋಗ್ಯದ ವೆಚ್ಚ ಅಥವಾ ಎಫ್‌ವಿಟಿಪಿಐ ನಲ್ಲಿ ಲೆಕ್ಕಹಾಕಬೇಕಾದ ಅಗತ್ಯವನ್ನು ಅನ್ಯರೀತಿಯಲ್ಲಿ ಪೂರೈಸುವ ಹಣಕಾಸು ಆಸ್ತಿಯನ್ನು ಎಫ್‌ವಿಟಿಪಿಎಲ್ ಎಂದು ತಿರುಗಿ ಮಾರ್ಪಡಿಸಲಾಗದಂತೆ ನಿಗದಿಪಡಿಸಬಹುದಾಗಿದೆ, ಹೀಗೆ ಮಾಡುವುದು ಲೆಕ್ಕದ ತಪ್ಪುಹೊಂದಾಣಿಕೆಯನ್ನು ಇಲ್ಲವಾಗಿಸುವುದು ಅತವಾ ಗಣನೀಯವಾಗಿ ತಗಿಸುವುದನ್ನು ಸಾಧ್ಯವಾಗಿಸಿದಾಗ.

ಹಣಕಾಸು ಆಸ್ತಿಗಳು: ವ್ಯಾಪಾರಿ ಮಾದರಿ ಅಂದಾಜು

ಕಂಪೆನಿಯು ಹಣಕಾಸು ಆಸ್ತಿಯನ್ನು ಖಾತೆಯ ಹಂತದಲ್ಲಿ ಇರಿಸಿರುವ ವ್ಯಾಪಾರಿ ಮಾದರಿಯ ಉದ್ದೇಶದ ಅಂದಾಜನ್ನು ಮಾಡುತ್ತದೆ, ಏಕೆಂದರೆ ಇದು ವ್ಯಾಪಾರವನ್ನು ಯಾವ ರೀತಿ ನಿರ್ವಹಿಸಲಾಗುತ್ತಿದೆ ಮತ್ತು ಮಾಹಿತಿಯನ್ನು ಆಡಳಿತ ಮಂಡಳಿಗೆ ಹೇಗೆ ಒದಗಿಸಲಾಗುತ್ತದೆ ಎನ್ನುವುದನ್ನು ಪ್ರಕಟಿಸುತ್ತದೆ. ಪರಿಗಣಿಸಲಾದ ಮಾಹಿತಿಯು ಕೆಳಗಿನವನ್ನು ಒಳಗೊಳ್ಳುತ್ತದೆ:

– ಖಾತೆಯ ಹೇಳಲಾದ ನೀತಿಗಳು ಮತ್ತು ಉದ್ದೇಶಗಳು ಹಾಗೂ ಆ ನೀತಿಗಳನ್ನು ಕಾರ್ಯರೂಪದಲ್ಲಿ ಆಚರಣೆಗೆ ತಂದಿರುವುದು. ಇದರಲ್ಲಿ ಆಡಳಿತ ಮಂಡಳಿಯ ಕಾರ್ಯತಂತ್ರವು ಗುತ್ತಿಗೆಬದ್ಧ ಬಡ್ಡಿ ಆದಾಯದ ಗಳಿಗೆಯ ಮೇಲೆ ಗಮನವಿರಿಸಿದೆಯೇ, ನಿರ್ದಿಷ್ಟ ಬಡ್ಡಿ ದರದ ಚಿತ್ರವನ್ನು ಕಾಯ್ದುಕೊಳ್ಳುವತ್ತ ಗಮನವಿರಿಸಿದೆಯೇ, ಹಣಕಾಸು ಆಸ್ತಿಗಳ ಅವಧಿಯನ್ನು ಯಾವುದೇ ಸಂಬಂಧಿತ ಹೊಣೆಗಳ ಅಥವಾ ನಿರೀಕ್ಷಿತ ಹೊರಹರಿವುಗಳ ಅವಧಿಯೊಂದಿಗೆ ಹೊಂದಿಸುವುದರತ್ತ ಅಥವಾ ಆಸ್ತಿಗಳ ಮಾರಟದ ಮೂಲಕ ನಗದು ಪ್ರವಹನಗಳನ್ನು ಸಾಕಾರಗೊಳಿಸಲು ಉದ್ದೇಶಿಸಿದೆಯೇ ಎನ್ನುವುದು ಸೇರಿದೆ;

– ಖಾತೆಯ ಸಾಧನೆಯನ್ನು ಹೇಗೆ ಮೌಲ್ಯಮಾಪನ ಮಾಡಲಾಗಿದೆ ಮತ್ತು ಆಡಳಿತ ಮಂಡಳಿಗೆ ವರದಿಮಾಡಲಾಗಿದೆ ಎಂದು;

– ವ್ಯಾಪಾರಿ ಮಾದರಿಯ (ಮತ್ತು ವ್ಯಾಪಾರಿ ಮಾದರಿಯೊಳಗೆ ಇರಿಸಲಾದ ಹಣಕಾಸು ಆಸ್ತಿಗಳ) ಸಾಧನೆಯನ್ನು ಪ್ರಭಾವಿಸುವ ಅಪಾಯಗಳು ಮತ್ತು ಈ ಅಪಾಯಗಳನ್ನು ನಿಭಾಯಿಸುವ ಬಗೆ;

– ವ್ಯಾಪಾರದ ಪ್ರಬಂಧಕರಿಗೆ ಪರಿಹಾರ ದೊರೆತಿರುವ ಬಗೆ – ಉದಾ. ಪರಿಹಾರವು ನಿರ್ವಹಿಸಲಾಗುತ್ತಿರುವ ಆಸ್ತಿಗಳ ನ್ಯಾಯಯುತ ಮೌಲ್ಯವನ್ನು ಆಧರಿಸಿದೆಯೇ ಅಥವಾ ಸಂಗ್ರಹಿಸಲಾದ ಗುತ್ತಿಗೆಬದ್ಧ ನಗದು ಪ್ರವಹನಗಳನ್ನು ಆಧರಿಸಿವೆಯೇ ಎಂಬುದು; ಮತ್ತು

– ಪೂರ್ವ ಅವಧಿಗಳಲ್ಲಿ ಹಣಕಾಸು ಆಸ್ತಿಗಳ ಮಾರಾಟದ ಆವರ್ತನ, ಗಾತ್ರ ಮತ್ತು ಕಾಲ, ಭವಿಷ್ಯದ ಮಾರಾಟದ ಚಟುವಟಿಕೆಯ ಬಗ್ಗೆ ಅಂತಹ ಮಾರಾಟ ಹಾಗೂ ನಿರೀಕ್ಷೆಗಳ ಕಾರಣ.

ಗುರುತಿಸದಿರುವಿಕೆಗೆ ಅರ್ಹವಾಗದ ವ್ಯವಹಾರಗಳಲ್ಲಿ ಮೂರನೆಯ ಪಕ್ಷಗಳಿಗೆ ಹಣಕಾಸು ಆಸ್ತಿಗಳ ವರ್ಗಾವಣೆಗಳನ್ನು ಈ ಉದ್ದೇಶಕ್ಕೆ ಮಾರಾಟಗಳೆಂದು ಪರಿಗಣಿಸಲಾಗುವುದಿಲ್ಲ. ಇದು ಕಂಪೆನಿಯು ಅನುಸರಿಸುತ್ತಿರುವ ಆಸ್ತಿಗಳ ಮುಂದುವರೆದ ಗುರುತಿಸುವಿಕೆಯ ಪ್ರಕ್ರಿಯೆಗೆ ಹೊಂದುವಂತೆ ಇದೆ.

ವ್ಯಾಪಾರಕ್ಕೆಂದು ಇರಿಸಿಕೊಳ್ಳಲಾದ ಅಥವಾ ನಿರ್ವಹಿಸಲಾದ ಹಾಗೂ ನ್ಯಾಯಯುತ ಮೌಲ್ಯದ ಆಧಾರದ ಮೇಲೆ ಸಾಧನೆಯನ್ನು ಮೌಲ್ಯಮಾಪನ ಮಾಡಲಾದ ಹಣಕಾಸು ಆಸ್ತಿಗಳನ್ನು ಎಫ್‌ವಿಟಿಪಿಎಲ್ ನಂತೆ ಲೆಕ್ಕಹಾಕಲಾಗುತ್ತದೆ.

ಹಣಕಾಸು ಆಸ್ತಿಗಳು: ಗುತ್ತಿಗೆಬದ್ಧ ನಗದು ಪ್ರವಹನಗಳು ಅಸಲು ಮತ್ತು ಬಡ್ಡಿಯ ಪಾವತಿ ಮಾತ್ರವೇ ಎಂಬ ಅಂದಾಜು

ಈ ಅಂದಾಜಿನ ಉದ್ದೇಶಕ್ಕೆ ಸಂಬಂಧಿಸಿದಂತೆ, 'ಅಸಲ'ನ್ನು ಪ್ರಾರಂಭಿಕ ಗುರುತಿಸುವಿಕೆಯ ನಂತರ ಹಣಕಾಸು ಆಸ್ತಿಯ ನ್ಯಾಯಯುತ ಮೌಲ್ಯ ಎಂದು ನಿರ್ವಚಿಸಲಾಗಿದೆ. 'ಬಡ್ಡಿ'ಯನ್ನು ನಿರ್ದಿಷ್ಟ ಕಾಲಾವಧಿಗೆ ಬಾಕಿ ಇರುವ ಅಸಲು ಮೊತ್ತದೊಂದಿಗೆ ಸಂಬಂಧಿಸಿದ ಸಾಲದ ಅಪಾಯಕ್ಕೆ ಹಣದ ಕಾಲಮೌಲ್ಯದ ಮತ್ತು ಸಾಲ ನೀಡುವಲ್ಲಿನ ಇತರ ಮೂಲಭೂತ ಅಪಾಯಗಳು ಮತ್ತು ವೆಚ್ಚಗಳ (ಉದಾ. ದ್ರವ್ಯತೆಯ ಅಪಾಯ ಮತ್ತು ಆಡಳಿತಾತ್ಮಕ ವೆಚ್ಚ) ಹಾಗೂ ಲಾಭದ ಅವಕಾಶದ ಪರಿಗಣನೆ ಎಂದು ನಿರ್ವಚಿಸಲಾಗಿದೆ.

ಗುತ್ತಿಗೆಬದ್ಧ ನಗದು ಪ್ರವಹನಗಳು ಅಸಲು ಮತ್ತು ಬಡ್ಡಿಯ ಪಾವತಿ ಮಾತ್ರವೇ ಎಂಬ ಅಂದಾಜು ಮಾಡುವಾಗ ಕಂಪೆನಿಯು ಸಾಧನದ ಗುತ್ತಿಗೆ ಕರಾರುಗಳನ್ನು ಪರಿಗಣಿಸುತ್ತದೆ. ಈ ಷರತ್ತುಗಳನ್ನು ಪೂರೈಸದಿರುವಂತೆ ಗುತ್ತಿಗೆಬದ್ಧ ನಗದು ಪ್ರವಹನಗಳ ಕಾಲ ಅಥವಾ ಮೊತ್ತವನ್ನು ಬದಲಿಸಬಲ್ಲ ಗುತ್ತಿಗೆಯ ಕರಾರನ್ನು ಹಣಕಾಸು ಆಸ್ತಿಯು ಹೊಮದಿದೆಯೇ ಎನ್ನುವದರ ಅಂದಾಜನ್ನು ಇದು ಒಳಗೊಳ್ಳುತ್ತದೆ. ಈ ಅಂದಾಜನ್ನು ಮಾಡುವಾಗ ಕಂಪೆನಿಯು ಕೆಳಗಿನವನ್ನು ಪರಿಗಣಿಸುತ್ತದೆ:

– ನಗದು ಪ್ರವಹನಗಳ ಮೊತ್ತ ಅಥವಾ ಕಾಲವನ್ನು ಬದಲಿಸಬಲ್ಲ ಸಾದಿಲ್ವಾರು ಸಂಗತಿಗಳು;

– ವ್ಯತ್ಯಾಸಗೊಳ್ಳುವ ಬಡ್ಡಿ ದರ ಲಕ್ಷಣಗಳೂ ಸೇರಿದಂತೆ, ಗುತ್ತಿಗೆಯ ಕೂಪನ್ ದರವನ್ನು ಹೊಂದಿಸಬಹುದಾದ ಷರತ್ತುಗಳು;

– ವಿಸ್ತರಣಾ ಲಕ್ಷಣಗಳ ಪೂರ್ವಪಾವತಿ; ಮತ್ತು

– ನಿರ್ದಿಷ್ಟ ಆಸ್ತಿಗಳಿಂದ ಒದಗುವ ನಗದು ಪ್ರವಹನಗಳ ಮೇಲಿನ ಕಂಪೆನಿಯ ಹಕ್ಕನ್ನು ಮಿತಗೊಳಿಸುವ ಷರತ್ತುಗಳು (ಉದಾ. ನಾನ್ ರೀಕೋರ್ಸ್ ಲಕ್ಷಣಗಳು)

ಪೂರ್ವಸಂದಾಯದ ಮೊತ್ತಗಳು ಪಾವತಿಸದ ಅಸಲು ಮತ್ತು ಅಸಲಿನ ಮೇಲಿನ ಬಾಕಿ ಬಡ್ಡಿಯನ್ನು ಗಣನೀಯವಾಗಿ ಪ್ರತಿನಿಧಿಸಿದಾಗ ಅಸಲು ಮತ್ತು ಬಡ್ಡಿ ಮಾತ್ರದ ಪಾವತಿಗಳೊಂದಿಗೆ ಪೂರ್ವಸಂದಾಯದ ಲಕ್ಷಣವು ಹೊಂದುತ್ತದೆ. ಬಾಕಿ ಮೊತ್ತಗಳಲ್ಲಿ ಗುತ್ತಿಗೆಯ ಅವಧಿಪೂರ್ವ ಮುಕ್ತಾಯಕ್ಕಾಗಿ ಯುಕ್ತವಾದ ಹೆಚ್ಚುವರಿ ಪರಿಹಾರವು ಸೇರುತ್ತದೆ. ಹೆಚ್ಚುವರಿಯಾಗಿ, ಗುತ್ತಿಗೆಯ ಸಮಾನ ಮೊತ್ತಕ್ಕೆ ಗಣನೀಯವಾದ ರಿಯಾಯಿತಿ ಅಥವಾ ಪ್ರೀಮಿಯಂನಲ್ಲಿ ಪಡೆದುಕೊಳ್ಳಲಾದ ಹಣಕಾಸು ಆಸ್ತಿಗೆ, ಗುತ್ತಿಗೆಯ ಸಮಾನ ಮೊತ್ತದ ಜೊತೆಗೆ ಪ್ರಾಪ್ತವಾದ (ಆದರೆ ಪಾವತಿಸದ) ಗುತ್ತಿಗೆಬದ್ಧ ಬಡ್ಡಿಯನ್ನು (ಅವಧಿಪೂರ್ವ ಮುಕ್ತಾಯಕ್ಕಾಗಿ ಯುಕ್ತವಾದ ಹೆಚ್ಚುವರಿ ಪರಿಹಾರವನ್ನೂ ಸಹ ಇದು ಒಳಗೊಳ್ಳಬಹುದಾಗಿದೆ) ಗಣನೀಯವಾಗಿ ಪ್ರತಿನಿಧಿಸುವ ಮೊತ್ತದ ಪೂರ್ವಪಾವತಿಯನ್ನು ಅನುಮತಿಸುವ ಅಥವಾ ಅಗತ್ಯವಾಗಿಸುವ ಲಕ್ಷಣವನ್ನು ಈ ಮಾನದಂಡದೊಂದಿಗೆ ಹೊಂದುವುದೆಂದು ಪರಿಗಣಿಸಲಾಗಿದೆ, ಪ್ರಾರಂಭಿಕ ಗುರುತಿಸುವಿಕೆಯಲ್ಲಿ ಪೂರ್ವಸಂದಾಯ ಅಂಗದ ನ್ಯಾಯಯುತ ಮೌಲ್ಯವು ಗಣನೀಯವಲ್ಲದ ಪಕ್ಷದಲ್ಲಿ.

ಹಣಕಾಸು ಆಸ್ತಿಗಳು: ತರುವಾಯದ ಲೆಕ್ಕಹಾಕುವಿಕೆ ಮತ್ತು ಲಾಭ ಹಾಗೂ ನಷ್ಟಗಳು

ಎಫ್‌ವಿಟಿಪಿಎಲ್ ನಲ್ಲಿ ಹಣಕಾಸು ಆಸ್ತಿಗಳು	ಈ ಆಸ್ತಿಗಳನ್ನು ತರುವಾಯದಲ್ಲಿ ನ್ಯಾಯಯುತ ಮೌಲ್ಯದಲ್ಲಿ ಲೆಕ್ಕಹಾಕಲಾಗುವುದು. ಬಡ್ಡಿ ಅಥವಾ ಲಾಭಾಂಶ ಆದಾಯವೂ ಸೇರಿದಂತೆ ನಿವ್ವಳ ಲಾಭಗಳು ಮತ್ತು ನಷ್ಟಗಳನ್ನು ಲಾಭ ಮತ್ತು ನಷ್ಟದಲ್ಲಿ ಗುರುತಿಸಲಾಗುತ್ತದೆ.
ಭೋಗ್ಯದ ವೆಚ್ಚದಲ್ಲಿ ಹಣಕಾಸು ಆಸ್ತಿಗಳು	ಪರಿಣಾಮಕಾರಿ ಬಡ್ಡಿ ವಿಧಾನವನ್ನು ಬಳಸಿ ಈ ಆಸ್ತಿಗಳನ್ನು ತರುವಾಯದಲ್ಲಿ ಭೋಗ್ಯದ ವೆಚ್ಚದಲ್ಲಿ ಲೆಕ್ಕಹಾಕಲಾಗುತ್ತದೆ. ಆಸ್ತಿಗಳಿಗೆ ಬಾಧೆ ತಟ್ಟುವುದರಿಂದ ಉಂಟಾಗುವ ನಷ್ಟಗಳು ಭೋಗ್ಯದ ವೆಚ್ಚವನ್ನು ತಗ್ಗಿಸುತ್ತವೆ. ಬಡ್ಡಿ ಆದಾಯ, ವಿದೇಶೀ ವಿನಿಮಯ ಗಳಿಕೆಗಳು ಮತ್ತು ನಷ್ಟಗಳು ಹಾಗೂ ಬಾಧೆಯನ್ನು ಲಾಭ ಮತ್ತು ನಷ್ಟದಲ್ಲಿ ಗುರುತಿಸಲಾಗುತ್ತದೆ. ಲಾಭ ಅಥವಾ ನಷ್ಟದ ಗುರುತಿಸದಿರುವಿಕೆಯನ್ನು ಲಾಭ ಮತ್ತು ನಷ್ಟದಲ್ಲಿ ಗುರುತಿಸಲಾಗುತ್ತದೆ.
ಎಫ್‌ವಿಒಸಿಐ ನಂತೆ ಸಾಲ ಹೂಡಿಕೆಗಳು	ಈ ಆಸ್ತಿಗಳನ್ನು ತರುವಾಯದಲ್ಲಿ ನ್ಯಾಯಯುತ ಮೌಲ್ಯದಲ್ಲಿ ಲೆಕ್ಕಹಾಕಲಾಗುತ್ತದೆ. ಪರಿಣಾಮಕಾರಿ ಬಡ್ಡಿ ವಿಧಾನದ ಅಡಿ ಬರುವ ಬಡ್ಡಿ, ವಿದೇಶೀ ವಿನಿಮಯ ಗಳಿಕೆಗಳು ಮತ್ತು ನಷ್ಟಗಳು ಹಾಗೂ ಬಾಧೆಯನ್ನು ಲಾಭ ಮತ್ತು ನಷ್ಟದಲ್ಲಿ ಗುರುತಿಸಲಾಗುತ್ತದೆ. ಇತರ ನಿವ್ವಳ ಲಾಭಗಳು ಮತ್ತು ನಷ್ಟಗಳನ್ನು ಓಸಿಐ ಯಲ್ಲಿ ಗುರುತಿಸಲಾಗುತ್ತದೆ. ಗುರುತಿಸದಿರುವಿಕೆಯ ನಂತರ, ಓಸಿಐ ನಲ್ಲಿ ಸಂಚಿತಗೊಂಡಿರುವ ಲಾಭಗಳು ಮತ್ತು ನಷ್ಟಗಳನ್ನು ಲಾಭ ಮತ್ತು ನಷ್ಟಕ್ಕೆ ಮರುವರ್ಗೀಕರಿಸಲಾಗುವುದು.
ಎಫ್‌ವಿಒಸಿಐ ನಂತೆ ಈಕ್ವಿಟಿ ಹೂಡಿಕೆಗಳು	ಈ ಆಸ್ತಿಗಳನ್ನು ತರುವಾಯದಲ್ಲಿ ನ್ಯಾಯಯುತ ಮೌಲ್ಯದಲ್ಲಿ ಲೆಕ್ಕಹಾಕಲಾಗುತ್ತದೆ. ಹೂಡಿಕೆಯ ವೆಚ್ಚದ ಭಾಗವೊಂದರ ವಸೂಲಿಯನ್ನು ಲಾಭಾಂಶವು ಸ್ಪಷ್ಟವಾಗಿ ಪ್ರತಿನಿಧಿಸದಿದ್ದರೆ ಲಾಭಾಂಶಗಳನ್ನು ಲಾಭ ಮತ್ತು ನಷ್ಟದಲ್ಲಿ ಆದಾಯವಾಗಿ ಗುರುತಿಸಲಾಗುತ್ತದೆ. ಇತರ ನಿವ್ವಳ ಲಾಭಗಳು ಮತ್ತು ಗಳಿಕೆಗಳನ್ನು ಓಸಿಐ ನಲ್ಲಿ ಗುರುತಿಸಲಾಗುವುದು ಹಾಗೂ ಲಾಭ ಮತ್ತು ನಷ್ಟಗಳಲ್ಲಿ ಮರುವರ್ಗೀಕರಿಸಲಾಗುವುದಿಲ್ಲ.

ಹಣಕಾಸು ಹೊಣೆಗಳು: ವರ್ಗೀಕರಣ, ತರುವಾಯದ ಲೆಕ್ಕಹಾಕುವಿಕೆ ಹಾಗೂ ಲಾಭ ಮತ್ತು ನಷ್ಟಗಳು

ಹಣಕಾಸು ಹೊಣೆಗಳನ್ನು ಭೋಗ್ಯದ ವೆಚ್ಚ ಅಥವಾ ಎಫ್‌ವಿಟಿಪಿಎಲ್ ನಂತೆ ಲೆಕ್ಕಹಾಕುವಂತೆ ವರ್ಗೀಕರಿಸಲಾಗುವುದು. ವ್ಯಾಪಾರಕ್ಕಾಗಿ ಇರಿಸಿಕೊಂಡಿರುವುದು ಎಂದು ವರ್ಗೀಕರಿಸಲಾಗಿದ್ದರೆ ಅಥವಾ ಜನ್ಯವಾಗಿದ್ದರೆ ಅಥವಾ ಅಂತಹ ಪ್ರಾರಂಭದ ಗುರುತಿಸುವಿಕೆಯ ನಂತರ ಹಾಗೆ ಪರಿಗಣಿಸಿದ್ದರೆ ಅದನ್ನು ಎಫ್‌ವಿಟಿಪಿಎಲ್ ನಂತೆ ವರ್ಗೀಕರಿಸಲಾಗುತ್ತದೆ. ಎಫ್‌ವಿಟಿಪಿಎಲ್ ನಂತೆ ಹಣಕಾಸು ಹೊಣೆಗಳನ್ನು ನ್ಯಾಯಯುತ ಮೌಲ್ಯದಲ್ಲಿ ಲೆಕ್ಕಹಾಕಲಾಗುವುದು ಮತ್ತು ಬಡ್ಡಿ ಆದಾಯ ಇದ್ದರೆ ಅದೂ ಸೇರುವಂತೆ ನಿವ್ವಳ ಲಾಭಗಳು ಮತ್ತು ನಷ್ಟಗಳನ್ನು ಲಾಭ ಮತ್ತು ನಷ್ಟದಲ್ಲಿ ಗುರುತಿಸಲಾಗುವುದು. ಪರಿಣಾಮಕಾರಿ ಬಡ್ಡಿ ವಿಧಾನವನ್ನು ಬಳಸಿ ಇತರ ಹಣಕಾಸು ಆಸ್ತಿಗಳನ್ನು ತರುವಾಯದಲ್ಲಿ ಭೋಗ್ಯದ ವೆಚ್ಚದಲ್ಲಿ ಲೆಕ್ಕಹಾಕಲಾಗುತ್ತದೆ. ಬಡ್ಡಿ ಖರ್ಚನ್ನು ಲಾಭ ಮತ್ತು ನಷ್ಟದಲ್ಲಿ ಗುರುತಿಸಲಾಗುತ್ತದೆ. ಗುರುತಿಸದಿರುವಿಕೆಯ ನಂತರದ ಯಾವುದೇ ಲಾಭ ಅಥವಾ ನಷ್ಟವನ್ನು ಸಹ ಲಾಭ ಮತ್ತು ನಷ್ಟದಲ್ಲಿ ಗುರುತಿಸಲಾಗುತ್ತದೆ.

iii. ಗುರುತಿಸದಿರುವಿಕೆ:

1. ಹಣಕಾಸು ಆಸ್ತಿಗಳು:

ಹಣಕಾಸು ಆಸ್ತಿಯಿಂದ ಒದಗುವ ನಗದು ಪ್ರವಹನಗಳ ಗುತ್ತಿಗೆಯ ಹಕ್ಕುಗಳು ಇಲ್ಲವಾದಾಗ, ಅಥವಾ ಹನಕಾಸು ಆಸ್ತಿಯ ಸ್ವಾಮ್ಯದ ಎಲ್ಲ ಅಪಾಯಗಳು ಮತ್ತು ಫಲಗಳನ್ನು ಗಣನೀಯವಾಗಿ ವರ್ಗಾಯಿಸುವ ವ್ಯವಹಾರದಲ್ಲಿನ ಗುತ್ತಿಗೆಯ ನಗದು ಪ್ರವಹನಗಳನ್ನು ಪಡೆಯುವ ಹಕ್ಕುಗಳನ್ನು ಅದು ವರ್ಗಾಯಿಸಿದಾಗ ಅಥವಾ ಸ್ವಾಮ್ಯದ ಎಲ್ಲ ಅಪಾಯಗಳು ಮತ್ತು ಫಲಗಳನ್ನು ಕಂಪೆನಿಯು ವರ್ಗಾಯಿಸದೆಯೇ ಇಲ್ಲವೇ ಉಳಿಸಕೊಳ್ಳದೆಯೇ ಇದ್ದು ಹಣಕಾಸು ಆಸ್ತಿಯ ನಿಯಂತ್ರಣವನ್ನು ಉಳಿಸಿಕೊಳ್ಳದಿರುವಾಗ ಕಂಪೆನಯು ಹಣಕಾಸು ಆಸ್ತಿಯ ಗುರುತಿಸುವಿಕೆಯನ್ನು ನಕಾರಗೊಳಿಸುತ್ತದೆ.

2. ಹಣಕಾಸು ಹೊಣೆಗಳು:

ಹಣಕಾಸು ಹೊಣೆಯ ಗುತ್ತಿಗೆಯ ಬಾಧ್ಯತೆಗಳನ್ನು ನಿಭಾಯಿಸಿದಾಗ ಅಥವಾ ರದ್ದುಗೊಳಿಸಿದಾಗ ಅಥವಾ ವಾಯಿದೆ ತೀರಿದಾಗ ಅದರ ಗುರುತಿಸುವಿಕೆಯನ್ನು ಕಂಪೆನಿಯು ನಕಾರಗೊಳಿಸುತ್ತದೆ.

ಹಣಕಾಸು ಹೊಣೆಯ ಕರಾರುಗಳನ್ನು ಮಾರ್ಪಡಿಸಿದಾಗ ಮತ್ತು ಮಾರ್ಪಟ್ಟ ಕರಾರುಗಳ ಅಡಿಯಲ್ಲಿನ ನಗದು ಹರಿವುಗಳು ಗಣನೀಯವಾಗಿ ಭಿನ್ನವಾದಾಗ ಸಹ ಕಂಪೆನಿಯು ಅದರ ಗುರುತಿಸುವಿಕೆಯನ್ನು ಕಂಪೆನಿಯು ನಕಾರಗೊಳಿಸುತ್ತದೆ. ಇಂತಹ ಸಂದರ್ಭದಲ್ಲಿ ಮಾರ್ಪಟ್ಟ ಕರಾರುಗಳನ್ನು ಆಧರಿಸಿದ ಹೊಸ ಹಣಕಾಸು ಹೊಣೆಯನ್ನು ನ್ಯಾಯಯುತ ಮೌಲ್ಯದಲ್ಲಿ ಗುರುತಿಸಲಾಗುತ್ತದೆ. ಇಲ್ಲವಾಗಿಸಲಾದ ಹಣಕಾಸು ಹೊಣೆಯ ಒಯ್ಯುವ ಮೊತ್ತ ಹಾಗೂ ಮಾರ್ಪಟ್ಟ ಕರಾರುಗಳೊಂದಿಗಿನ ಹೊಸ ಹಣಕಾಸು ಹೊಣೆಯ ನಡುವಿನ ವ್ಯತ್ಯಾಸವನ್ನು ಲಾಭ ಮತ್ತು ನಷ್ಟದಲ್ಲಿ ಗುರುತಿಸಲಾಗುತ್ತದೆ.

iv. ಮೊತ್ತಗಳ ನಿಗದಿಪಡಿಸುವಿಕೆ

ಕಂಪೆನಿಯು ಚಾಲ್ತಿ ಸ್ಥಿತಿಯಲ್ಲಿ ಮೊತ್ತಗಳನ್ನು ನಿರ್ದಿಷ್ಟ ಉದ್ದೇಶಕ್ಕೆ ನಿಗದಿಪಡಿಸಲು ಕಾನೂನಿನ ನೆಲೆಯಲ್ಲಿ ಹಕ್ಕುಗಳನ್ನು ಹೊಂದಿರುವ ಸಂದರ್ಭದಲ್ಲಿ ಹಾಗೂ ಅವನ್ನು ನಿವ್ವಳ ನೆಲೆಯಲ್ಲಿ ವಿಲೇವಾರಿ ಮಾಡಲು ಅಥವಾ ಆಸ್ತಿಯನ್ನು ಸಾಕಾರಗೊಳಿಸಿ ಸಮಕಾಲಿಕವಾಗಿ ಹೊಣೆಯನ್ನು ಇತ್ಯರ್ಥಗೊಳಿಸಲು ಉದ್ದೇಶಿಸದಾಗ ಮಾತ್ರವೇ ಹಣಕಾಸು ಆಸ್ತಿಗಳು ಮತ್ತು ಹಣಕಾಸು ತಃಖ್ತೆ ಹೊಣೆಗಳನ್ನು ಪ್ರತ್ಯೇಕಗೊಳಿಸಲಾಗುತ್ತದೆ.

ಬಿ) ಸ್ವತ್ತು, ಸ್ಥಾವರ ಮತ್ತು ಸಲಕರಣೆ

i. ಗುರುತಿಸುವಿಕೆ ಮತ್ತು ಲೆಕ್ಕಹಾಕುವಿಕೆ

ಸ್ವತ್ತು, ಸ್ಥಾವರ ಮತ್ತು ಸಲಕರಣೆಯ ಸಾಮಗ್ರಿಗಳನ್ನು ವೆಚ್ಚದಲ್ಲಿ ಲೆಕ್ಕಹಾಕಲಾಗುವುದು ಮತ್ತು ಇದರಲ್ಲಿ ಸಂಚಿತ ಸವಕಳಿ ಮತ್ತು ಸಂಚಿತ ಆಸ್ತಿ ಬಾಧೆಯ ನಷ್ಟಗಳನ್ನು, ಅವು ಇದ್ದಲ್ಲಿ, ಕಳೆದು ಬಂಡವಾಳೀಕರಿಸಿದ ವೆಚ್ಚಗಳು ಸೇರುತ್ತವೆ.

ಸ್ವತ್ತು, ಸ್ಥಾವರ ಮತ್ತು ಸಲಕರಣೆಯ ಯಾವುದೇ ಸಾಮಗ್ರಿಯೊಂದರ ವೆಚ್ಚವು ಆಮದು ಸುಂಕಗಳು ಮತ್ತು ಮರುಭರಿಕೆಯಾಗದ ಖರೀದಿ ತೆರಿಗೆಗಳೂ ಸೇರಿ ಅದರ ಖರೀದಿ ಬೆಲೆಯನ್ನು ಒಳಗೊಳ್ಳುತ್ತದೆ. ವ್ಯಾಪಾರಿ ರಿಯಾಯಿತಿಗಳು ಮತ್ತು ಕಡಿತಗಳು, ಉದ್ದೇಶಿತ ಬಳಕೆಯ ಕಾರ್ಯಯುಕ್ತ ಸ್ಥಿತಿಗೆ ಸಾಮಗ್ರಿಯನ್ನು ತರಲು ನೇರವಾಗಿ ಅಧ್ಯಾರೋಪಿಸಬಹುದಾದ ವೆಚ್ಚ ಮತ್ತು ಸಾಮಗ್ರಿಯನ್ನು ಕೆಡವಿ ತೆಗೆದುಹಾಕುವ ಹಾಗೂ ಅದನ್ನು ನಿಲ್ಲಿಸಲಾಗಿದ್ದ ನೆಲೆಯನ್ನು ಹಿಂದಿನ ಸ್ಥಿತಿಗೆ ತರುವ ಅಂದಾಜು ವೆಚ್ಚಗಳನ್ನು ಈ ಖರೀದಿ ಬೆಲೆಯಿಂದ ಕಳೆಯಲಾಗುತ್ತದೆ.

ಸ್ವ–ನಿರ್ಮಿತ ಸ್ವತ್ತು, ಸ್ಥಾವರ ಮತ್ತು ಸಲಕರಣೆಯ ಯಾವುದೇ ಸಾಮಗ್ರಿಯೊಂದರ ವೆಚ್ಚವು ಸಾಮಗ್ರಿಗಳು ಮತ್ತು ನೇರ ಕಾರ್ಮಿಕ ವೆಚ್ಚ ಮತ್ತು ಉದ್ದೇಶಿತ ಬಳಕೆಯ ಕಾರ್ಯಯುಕ್ತ ಸ್ಥಿತಿಗೆ ಸಾಮಗ್ರಿಯನ್ನು ತರಲು ನೇರವಾಗಿ ಅಧ್ಯಾರೋಪಿಸಬಹುದಾದ ವೆಚ್ಚ ಮತ್ತು ಸಾಮಗ್ರಿಯನ್ನು ಕೆಡವಿ ತೆಗೆದುಹಾಕುವ ಹಾಗೂ ಅದನ್ನು ನಿಲ್ಲಿಸಲಾಗಿದ್ದ ನೆಲೆಯನ್ನು ಹಿಂದಿನ ಸ್ಥಿತಿಗೆ ತರುವ ಅಂದಾಜು ವೆಚ್ಚಗಳನ್ನು ಒಳಗೊಳ್ಳುತ್ತವೆ.

ಸ್ವತ್ತು, ಸ್ಥಾವರ ಮತ್ತು ಸಲಕರಣೆಯ ಯಾವುದೇ ಸಾಮಗ್ರಿಯೊಂದರ ಮಹತ್ವದ ಭಾಗಗಳು ವಿಭಿನ್ನ ಉಪಯುಕ್ತ ಆಯುಷ್ಯಗಳನ್ನು ಹೊಂದಿದ್ದರೆ, ಅವುಗಳನ್ನು ಸ್ವತ್ತು, ಸ್ಥಾವರ ಮತ್ತು ಸಲಕರಣೆಯ ಪ್ರತ್ಯೇಕ ಸಾಮಗ್ರಿಗಳೆಂಬಂತೆ (ಪ್ರಧಾನ ಅಂಗಗಳು) ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ.

ಆಸ್ತಿಯೊಂದನ್ನು ವಿಲೇವಾರಿ ಮಾಡಿದಾಗ ಉಂಟಾಗುವ ಲಾಭ ಅಥವಾ ನಷ್ಟವನ್ನು ಆಸ್ತಿಯ ಮಾರಾಟ ಉತ್ಪತ್ತಿ ಹಾಗೂ ಅದರ ಒಯ್ಯುವ ಮೌಲ್ಯದ ನಡುವಿನ ವ್ಯತ್ಯಾಸವಾಗಿ ಲೆಕ್ಕಹಾಕಲಾಗುತ್ತದೆ ಮತ್ತು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಗುರುತಿಸಲಾಗುತ್ತದೆ.

ಕಂಪೆನಿಯು ಗುತ್ತಿಗೆಯಡಿ ಇರಿಸಿಕೊಳ್ಳಲಾದ ಗಣಿಗಳ ಗುರುತಿಸುವಿಕೆಯನ್ನು ರದ್ದುಗೊಳಿಸಲು ವ್ಯಯಿಸಲಾದ ಅಂದಾಜು ವೆಚ್ಚವನ್ನು ಬಂಡವಾಳೀಕರಿಸಿದೆ. ಇದರಲ್ಲಿ ನೆಲೆ ಮರುಸ್ಥಾಪನೆ ವೆಚ್ಚಗಳು, ಅರಣ್ಯೀಕರಣ ಗಣಿಗಳನ್ನು ಮುಚ್ಚುವ ಸಮಯದಲ್ಲಿ ವ್ಯಯಿಸಬೇಕಿರುವ ಹಾಗೂ ಗಣಿಯ ಉಪಯುಕ್ತ ಆಯುಷ್ಯದ ಅವಧಿಗೆ ಭೋಗ್ಯಕ್ಕೆ ಹಾಕುವ/ಸವಕಳಿ ಹಾಕುವ ಮತ್ತಿತರ ವೆಚ್ಚಗಳು ಸೇರುತ್ತವೆ.

ii. ತರುವಾಯದ ವೆಚ್ಚ

ವೆಚ್ಚದೊಂದಿಗೆ ಲಗತ್ತಾದ ಭವಿಷ್ಯದ ಆರ್ಥಿಕ ಲಾಭಗಳು ಕಂಪೆನಿಯ ಒಳಗೆ ಹರಿಯುವುದು ಸಂಭಾವ್ಯವಿದ್ದಲ್ಲಿ ಮಾತ್ರ ತರುವಾಯದ ವೆಚ್ಚವನ್ನು ಬಂಡವಾಳೀಕರಿಸಲಾಗುವುದು.

iii. ಸವಕಳಿ

ಸ್ವತ್ತು, ಸ್ಥಾವರ ಮತ್ತು ಸಲಕರಣೆಯ ಸಾಮಗ್ರಿಗಳ ವೆಚ್ಚದ ಮೇಲೆ ಸವಕಳಿಯನ್ನು ಲೆಕ್ಕಹಾಕಲಾಗುತ್ತದೆ. ಇದರಲ್ಲಿ ನೇರರೇಖೆ ವಿಧಾನವನ್ನು ಬಳಸಿ ಅಂದಾಜು ಉಪಯುಕ್ತ ಆಯುಷ್ಯದ ಉದ್ದಕ್ಕೇ ಲೆಕ್ಕಹಾಕಲಾದ ಉಳಿಕೆಯ ಮೌಲ್ಯವನ್ನು ಕಳೆಯಲಾಗುತ್ತದೆ ಹಾಗೂ ಸವಕಳಿಯನ್ನು ಸಾಧಾರಣವಾಗಿ ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಗುರುತಿಸಲಾಗುತ್ತದೆ. ಸ್ವಂತ ಭೂಮಿಗೆ ಸವಕಳಿಯನ್ನು ವಿಧಿಸಲಾಗುವುದಿಲ್ಲ. ಅಂದಾಜಿನ ಯಾವುದೇ ಬದಲಾವಣೆಯ ಪ್ರಭಾವವನ್ನು ಭವಿಷ್ಯದ ಆಧಾರದ ಮೇಲೆ ಲೆಕ್ಕಹಾಕುತ್ತ ಪ್ರತಿ ವರದಿಯ ಅವಧಿಯ ಕೊನೆಗೆ ಅಂದಾಜು ಉಪಯುಕ್ತ ಆಯುಷ್ಯಗಳು ಮತ್ತು ಉಳಿಕೆ ಮೌಲ್ಯಗಳನ್ನು ಪರಿಶೀಲಿಸಲಾಗುವುದು.

ಅಂದಾಜು ಮಾಡಲಾದ ಉಪಯುಕ್ತ ಆಯುಷ್ಯಗಳು ಕೆಳಗಿನಂತಿವೆ:

ಆಸ್ತಿ ವಿಧ	ವಿಧಾನ	ಉಪಯುಕ್ತ ಆಯುಷ್ಯ
ಕಟ್ಟಡ	ನೇರ ರೇಖೆ	30 ವರ್ಷಗಳು
ಗುತ್ತಿಗೆ ಆಸ್ತಿಗಳು	ನೇರ ರೇಖೆ	ಗುತ್ತಿಗೆ ಅವಧಿ/ ಗಣಿಯ ಉಪಯುಕ್ತ ಆಯುಷ್ಯ
ಸ್ಥಾವರ ಮತ್ತು ಯಂತ್ರೋಪಕರಣ	ನೇರ ರೇಖೆ	8/10/15 ವರ್ಷಗಳು
ಕಂಪ್ಯೂಟರ್ ಸಲಕರಣೆ	ನೇರ ರೇಖೆ	3/6 ವರ್ಷಗಳು
ವಾಹನಗಳು	ನೇರ ರೇಖೆ	8 ವರ್ಷಗಳು
ಕಛೇರಿ ಸಲಕರಣೆ	ನೇರ ರೇಖೆ	5 ವರ್ಷಗಳು
ಪೀಠೋಪಕರಣ & ಜೋಡಣೆಗಳು	ನೇರ ರೇಖೆ	5 ವರ್ಷಗಳು

ನಿರ್ಮಾಣ ಮತ್ತು ಅನುಷ್ಠಾನ ಪೂರ್ಣಗೊಂಡು ಆಸ್ತಿಯು ಉದ್ದೇಶಿತ ಬಳಕೆಗೆ ಸಿದ್ಧವಾಗದ ಹೊರತು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯ ಮೇಲೆ ಸವಕಳಿಯನ್ನು ವಿಧಿಸಲಾಗುವುದಿಲ್ಲ.

ಸಿ) **ಅಗ್ರಾಹ್ಯ ಆಸ್ತಿಗಳು – ಕಂಪ್ಯೂಟರ್ ತಂತ್ರಾಂಶ**

i. ಅಗ್ರಾಹ್ಯ ಆಸ್ತಿಗಳನ್ನು ವೆಚ್ಚದಲ್ಲಿ ದಾಖಲಿಸಿ ಸಂಚಿತ ಭೋಗ್ಯ ವೆಚ್ಚ ಹಾಗೂ ಸಂಚಿತ ನಷ್ಟಗಳನ್ನು, ಅವು ಇದ್ದ ಪಕ್ಷದಲ್ಲಿ, ಕಳೆದ ವೆಚ್ಚದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ.

ತಂತ್ರಾಂಶದ ಭಾಗವಾಗಿ ನೇರವಾಗಿ ಬಂಡವಾಳೀಕರಿಸಲಾಗುವ ನೇರವಾಗಿ ಅಧ್ಯಾರೋಪಿಸಬಹುದಾದ ವೆಚ್ಚಗಳಲ್ಲಿ ಸಿಬ್ಬಂದಿ ವೆಚ್ಚಗಳು ಮತ್ತು ಪ್ರಸ್ತುತ ಮೇಲುವೆಚ್ಚಗಳ ಸೂಕ್ತ ಭಾಗ ಸೇರುತ್ತವೆ.

ಬಂಡವಾಳೀಕರಿಸಿದ ಅಭಿವೃದ್ಧಿ ವೆಚ್ಚಗಳನ್ನು ಅಗ್ರಾಹ್ಯ ಆಸ್ತಿಗಳಾಗಿ ದಾಖಲಿಸಿ ಆಸ್ತಿಯು ಬಳಕೆಗೆ ಲಭ್ಯವಿರುವ ಸಮಯದಿಂದ ಅದನ್ನು ಭೋಗ್ಯವೆಚ್ಚವಾಗಿಸಲಾಗುತ್ತದೆ.

ಯೋಜನೆಯ ತಾಂತ್ರಿಕ ಮತ್ತು ವಾಣಿಜ್ಯಕ ಕಾರ್ಯಸಾಧ್ಯತೆಯನ್ನು ಪ್ರದರ್ಶಿಸದ ಹೊರತು ಮತ್ತು ಭವಿಷ್ಯದ ಆರ್ಥಿಕ ಲಾಭಗಳು ಸಂಭವನೀಯವಲ್ಲದ ಹೊರತು ತಂತ್ರಾಂಶ ಉತ್ಪನ್ನ ಅಭಿವೃದ್ಧಿ ವೆಚ್ಚಗಳನ್ನು ವ್ಯಯವಾದುದೆಂದು ಖರ್ಚುತೋರಿಸಲಾಗುತ್ತದೆ. ಬಂಡವಾಳೀಕರಿಸಬಹುದಾದ ವೆಚ್ಚಗಳಲ್ಲಿ ಸಾಮಗ್ರಿಯ ವೆಚ್ಚ, ನೇರ ಕೂಲಿ, ಉದ್ದೇಶಿತ ಬಳಕೆಗೆ ಆಸ್ತಿಯನ್ನು ಸಿದ್ಧಗೊಳಿಸಲು ಅಧ್ಯಾರೋಪಿಸಬಹುದಾದ ಮೇಲುವೆಚ್ಚಗಳು ಸೇರುತ್ತವೆ.

ii. ತರುವಾಯದ ವೆಚ್ಚ:

ತರುವಾಯದ ವೆಚ್ಚವನ್ನು ನಿರ್ದಿಷ್ಟ ಆಸ್ತಿಯೊಂದು ತನ್ನಲ್ಲಿ ಹೊಂದಿರುವ ಭವಿಷ್ಯದ ಆರ್ಥಿಕ ಲಾಭಗಳನ್ನು ಹೆಚ್ಚಿಸುವಂತಿದ್ದರೆ ಮಾತ್ರ ತರುವಾಯದ ವೆಚ್ಚವನ್ನು ಬಂಡವಾಳೀಕರಿಸಲಾಗುತ್ತದೆ. ಇತರ ಎಲ್ಲ ವೆಚ್ಚಗಳನ್ನೂ ಲಾಭ ಮತ್ತು ನಷ್ಟದಲ್ಲಿ ವ್ಯಯವಾದುದೆಂದು ಗುರುತಿಸಲಾಗುತ್ತದೆ.

ಡಿ) **ದಾಸ್ತಾನುಗಳು**

ದಾಸ್ತಾನುಗಳನ್ನು ವೆಚ್ಚದಲ್ಲಿ ಕಡಿಮೆಯಾದುದರಲ್ಲಿ ಹಾಗೂ ನಿವ್ವಳ ಸಾಕ್ಷಾತ್ಕಾರ ಮೌಲ್ಯದಲ್ಲಿ ಲೆಕ್ಕಹಾಕಲಾಗುತ್ತದೆ. ವೆಚ್ಚದಲ್ಲಿ ನೇರ ಸಾಮಗ್ರಿಗಳು, ಮತ್ತು ಅನ್ವಯವಾಗುವೆಡೆಗಳಲ್ಲಿ ನೇರ ಕೂಲಿ ವೆಚ್ಚ ಮತ್ತು ದಾಸ್ತಾನುಗಳನ್ನು ಚಾಲ್ತಿ ನೆಲೆ ಮತ್ತು ಸ್ಥಿತಿಗೆ ತರುವಲ್ಲಿ ವ್ಯಯಿಸಲಾಗಿರುವ ವೆಚ್ಚಗಳು ಸೇರುತ್ತವೆ. ಅಸ್ತಿತ್ವದ ಸ್ಥಿತಿಯಿಂದ ಪೂರ್ಣಗೊಂಡ ಉತ್ಪನ್ನವಾಗಿ ಪರಿವರ್ತಿಸಲು ತಗುಲುವ ವೆಚ್ಚ ಹಾಗೂ ಮಾರಾಟ ಪ್ರಕ್ರಿಯೆ, ಮಾರುವಿಕೆ ಮತ್ತು ಹಂಚಿಕೆಯ ವೆಚ್ಚಗಳಿಗೆ ಅವಕಾಶ ನೀಡಿದ ನಂತರ ವ್ಯಾಪಾರದ ಸಾಮಾನ್ಯ ನಡೆಯಲ್ಲಿ ದಾಸ್ತಾನುಗಳನ್ನು ಸಾಕ್ಷಾತ್ಕರಿಸಿಕೊಳ್ಳಬಹುದಾದ ಬೆಲೆಯನ್ನು ನಿವ್ವಳ ಸಾಕ್ಷಾತ್ಕಾರ ಮೌಲ್ಯ ಎಂದು ಗುರುತಿಸಲಾಗುತ್ತದೆ. ದಾಸ್ತಾನುಗಳು ಮತ್ತು ಬಿಡಿ ಭಾಗಗಳನ್ನು ವೆಚ್ಚದಲ್ಲಿ ಮೊದಲು ಒಳಗೆ ಮೊದಲು ಹೊರಗೆ (ಫಿಫೋ) ಪದ್ಧತಿಯಂತೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ.

ಉತ್ಪನ್ನ ವರ್ಗ ಆಧಾರದ ಮೇಲೆ ಬಳಕೆಯ ಚಾರಿತ್ರಿಕ ಅನುಭವವನ್ನು ಆಧರಿಸಿ ನಿಧಾನಗತಿಯಲ್ಲಿ ಸಾಗುವ ಮತ್ತು ಬಳಕೆತಪ್ಪಿದ ಸಾಮಗ್ರಿಗಳನ್ನು ಒಳಗೊಳ್ಳುವಂತೆ ಹವಣಿಕೆಯನ್ನು ಮಾಡಲಾಗುವುದು. ಉತ್ಪನ್ನ ರೇಖಗಳು ಮತ್ತು ಮಾರುಕಟ್ಟೆ ಸ್ಥಿತಿಗತಿಗಳನ್ನು ಪರಿಗಣಿಸಿ ವೈಯಕ್ತಿಕ ವ್ಯಾಪಾರವನ್ನು ಆ ಆಧಾರವು ಒಳಗೊಳ್ಳುತ್ತದೆ.

ವೆಚ್ಚ ಮತ್ತು ನಿವ್ವಳ ಸಾಕ್ಷಾತ್ಕಾರ ಮೌಲ್ಯದ ತುಲನೆಯನ್ನು ಬಾಬ್ತುವಾರು ಆಧಾರದ ಮೇಲೆ ಮಾಡಲಾಗಿದೆ.

ಇ) **ಬಾಧೆ ತಟ್ಟುವಿಕೆ**

i. ಹಣಕಾಸು ಸಾಧನಗಳಿಗೆ ಬಾಧೆತಟ್ಟುವಿಕೆ

ನಿರೀಕ್ಷಿತ ಸಾಲ ನಷ್ಟಗಳಿಗೆ ನಷ್ಟ ಹವಣಿಕೆಗಳನ್ನು ಕಂಪೆನಿಯು ಕೆಳಗಿನವುಗಳ ಮೇಲೆ ಗುರುತಿಸುತ್ತದೆ:

– ಭೋಗ್ಯ ವೆಚ್ಚದಲ್ಲಿ ಲೆಕ್ಕಹಾಕಲಾದ ಹಣಕಾಸು ಆಸ್ತಿಗಳು; ಮತ್ತು

– ಎಫ್‌ವಿಸಿಓಐ – ಸಾಲ ಸಾಧನಗಳಂತೆ ಲೆಕ್ಕಹಾಕಲಾದ ಹಣಕಾಸು ಆಸ್ತಿಗಳು.

ಪ್ರತಿ ವರದಿಯ ದಿನಾಂಕದಂದು, ಹಣಕಾಸು ಆಸ್ತಿಗಳನ್ನು ಭೊಗ್ಯದ ವೆಚ್ಚದಲ್ಲಿ ಗುರುತಿಸಲಾಗಿದೆಯೇ ಮತ್ತು ಎಫ್‌ವಿಸಿಓಐ ನಂತೆ ಸಾಲ ಭದ್ರತೆಗಳು ಸಾಲ–ಬಾಧಿತವೇ ಎಂದು ಕಂಪೆನಿ ಅಂದಾಜುಮಾಡುತ್ತದೆ. ಭವಿಷ್ಯದ ನಗದು ಹರಿವುಗಳ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುವ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಸಂಗತಿಗಳು ಘಟಿಸಿದ್ದರೆ ಅಂತಹ ಹಣಕಾಸು ಆಸ್ತಿಯನ್ನು 'ಸಾಲ–ಬಾಧಿತ' ಎಂದು ಗುರುತಿಸಲಾಗುತ್ತದೆ.

ಕಂಪೆನಿಯು ಆಯುಷ್ಯಾವಧಿಗೆ ನಿರೀಕ್ಷಿತ ಸಾಲ ನಷ್ಟಗಳಿಗೆ ಸಮನಾಗಿ ಹವಣಿಕೆಗಳನ್ನು ಲೆಕ್ಕಹಾಕುತ್ತದೆ, ಆದರೆ ಕೆಳಗಿನವುಗಳಿಗೆ 12 ತಿಂಗಳುಗಳ ನಿರೀಕ್ಷಿತ ಸಾಲ ನಷ್ಟಗಳ ನೆಲೆಯಲ್ಲಿ ಲೆಕ್ಕಹಾಕಲಾಗುತ್ತದೆ:

– ವರದಿಯ ದಿನಾಂಕದಂದು ಕಡಿಮೆ ಸಾಲ ಅಪಾಯವನ್ನು ಹೊಂದಿದೆ ಎಂದು ನಿರ್ಧರಿಸಲಾದ ಸಾಲ ಭದ್ರತೆಗಳು; ಮತ್ತು

– ಪ್ರಾರಂಭಿಕ ಗುರುತಿಸುವಿಕೆಯ ನಂತರ ಗಣನೀಯವಾಗಿ ಸಾಲ ಅಪಾಯವು (ಹಣಕಾಸು ಸಾಧನದ ನಿರೀಕ್ಷಿತ ಆಯುಷ್ಯದ ಅವಧಿಗೆ ಪಾವತಿ ತಪ್ಪುವಿಕೆಯ ಅಪಾಯ) ಹೆಚ್ಚಳ ಕಾಣದ ಇತರ ಸಾಲ ಭದ್ರತೆಗಳು ಮತ್ತು ಬ್ಯಾಂಕ್ ಶಿಲ್ಕುಗಳು.

ವ್ಯಾಪಾರದಲ್ಲಿ ಬರಬೇಕಾದವುಗಳಿಗೆ ನಷ್ಟ ಹವಣಿಕೆಗಳನ್ನು ಯಾವಾಗಲೂ ಜೀವಿತಾವಧಿಗೆ ನಿರೀಕ್ಷಿತ ಸಾಲ ನಷ್ಟಗಳಿಗೆ ಸಮನಾದ ಮೊತ್ತಕ್ಕೆ ಲೆಕ್ಕಹಾಕಲಾಗುತ್ತದೆ.

ಹಣಕಾಸು ಸಾಧನದ ನಿರೀಕ್ಷಿತ ಆಯುಷ್ಯದ ಉದ್ದಕ್ಕೆ ಎಲ್ಲ ಸಾಧ್ಯ ಪಾವತಿ ತಪ್ಪುವಿಕೆ ಘಟನೆಗಳಿಂದ ಉಂಟಾಗುವ ಎಲ್ಲ ನಿರೀಕ್ಷಿತ ಸಾಲ ನಷ್ಟಗಳು ಆಯುಷ್ಯಾವಧಿ ನಿರೀಕ್ಷಿತ ಸಾಲ ನಷ್ಟಗಳಾಗಿವೆ.

12 ತಿಂಗಳ ನಿರೀಕ್ಷಿತ ಸಾಲ ನಷ್ಟಗಳೆಂದರೆ ವರದಿಯ ದಿನಾಂಕದಿಂದ 12 ತಿಂಗಳ ಒಳಗೆ (ಅಥವಾ ಸಾಧನದ ನಿರೀಕ್ಷಿತ ಆಯುಷ್ಯವು 12 ತಿಂಗಳಿಗಿಂತಲೂ ಕಡಿಮೆ ಇದ್ದರೆ ಕಡಿಮೆ ಅವಧಿ) ಸಾಧ್ಯವಿರಬಹುದಾದ ಪಾವತಿ ತಪ್ಪುವ ಸಂದರ್ಭಗಳ ಕಾರಣವಾಗಿ ಘಟಿಸುವ ನಿರೀಕ್ಷಿತ ಸಾಲ–ನಷ್ಟಗಳ ಭಾಗವಾಗಿವೆ.

ಮೇಲಿನ ಎಲ್ಲ ಪ್ರಕರಣಗಳಲ್ಲೂ, ನಿರೀಕ್ಷಿತ ಸಾಲ ನಷ್ಟಗಳನ್ನು ಅಂದಾಜುಮಾಡುವಾಗ ಪರಿಗಣಿಸಲಾಗಿರುವ ಗರಿಷ್ಠ ಅವಧಿಯೆಂದರೆ ಕಂಪೆನಿಯು ಸಾಲ ಅಪಾಯಕ್ಕೆ ತೆರೆದುಕೊಂಡಿರುವ ಗರಿಷ್ಠ ಗುತ್ತಿಗೆಯ ಅವಧಿಯಾಗಿದೆ.

ಪ್ರಾರಂಭದ ಗುರುತಿಸುವಿಕೆಯ ನಂತರ ಹಣಕಾಸು ಆಸ್ತಿಯ ಸಾಲ ಅಪಾಯವು ಗಣನೀಯವಾಗಿ ಹೆಚ್ಚಿದೆಯೇ ಎನ್ನುವುದನ್ನು ನಿರ್ಧರಿಸುವಾಗ ಮತ್ತು ನಿರೀಕ್ಷಿತ ಸಾಲ ನಷ್ಟಗಳನ್ನು ಅಂದಾಜು ಮಾಡುವಾಗ ಯುಕ್ತವಲ್ಲದ ವೆಚ್ಚ ಅಥವಾ ಪ್ರಯತ್ನವನ್ನು ಒಳಗೊಳ್ಳದೆ ಲಭ್ಯವಿರುವ ಮತ್ತು ಪ್ರಸ್ತುತವಾಗಿರುವ ಸೂಕ್ತವಾದ ಮತ್ತು ಬೆಂಬಲವೀಯುವ ಮಾಹಿತಿಯನ್ನು ಪರಿಗಣಿಸುತ್ತದೆ. ಇದರಲ್ಲಿ ಕಂಪೆನಿಯ ಚಾರಿತ್ರಿಕ ಅನುಭವ ಮತ್ತು ತಿಳುವಳಿಕೆಯ ಸಾಲ ನಿರ್ಧಾರಣವನ್ನು ಆಧರಿಸಿದ ಪರಿಮಾಣಾತ್ಮಕ ಹಾಗೂ ಗುಣಾತ್ಮಕ ಮಾಹಿತಿ ಮತ್ತು ವಿಶ್ಲೇಷಣೆ ಹಾಗೂ ಮುನ್ನೋಟದ ಮಾಹಿತಿ ಸೇರುತ್ತದೆ.

ಹಣಕಾಸು ಆಸ್ತಿಯೊಂದರ ಸಾಲ ಅಪಾಯವು 90 ದಿನಗಳಿಗೂ ಅಧಿಕವಾಗಿ ಬಾಕಿ ಉಳಿದಿದ್ದರೆ ಅದು ಗಣನೀಯವಾಗಿ ಹೆಚ್ಚಳ ಕಂಡಿದೆ ಎಂದು ಕಂಪೆನಿ ತಿಳಿಯುತ್ತದೆ. ಆದರೆ, ಕಂಪೆನಿಯು ಎಲ್ಲ ಬರಬೇಕಾದವುಗಳನ್ನೂ ಯಾವುದೇ ನಷ್ಟವಿಲ್ಲದೇ ಬರುವುದೆಂದು ನಿರೀಕ್ಷಿಸುವ ಕಾರಣ 90 ದಿನಗಳಿಗೂ ಹೆಚ್ಚಿನ ಅವಧಿಗೆ ಬಾಕಿಯಾಗಿ ಉಳಿದಿರುವ ಬರಬೇಕಾದವುಗಳಿಗಾಗಿನ ಯಾವುದೇ ಸಾಲ ನಷ್ಟಗಳಿಗೆ ಕಂಪೆನಿಯು ಹವಣಿಕೆಯನ್ನು ಒದಗಿಸಿರುವುದಿಲ್ಲ.

ii. ಹಣಕಾಸೇತರ ಆಸ್ತಿಗಳಿಗೆ ಬಾಧೆ ತಟ್ಟುವಿಕೆ

ತೊಡೆದುಹಾಕುವಿಕೆ:

ನಿರ್ದಿಷ್ಟ ಅಂತ್ಯದ ಸ್ವತ್ತು, ಸ್ಥಾವರ ಮತ್ತು ಸಲಕರಣೆಗಳು ಹಾಗೂ ಅಗ್ರಾಹ್ಯ ಆಸ್ತಿಗಳನ್ನು ಅವುಗಳ ಮುಂದೊಯ್ಯುವ ಮೊತ್ತದ ವಸೂಲಿ ಸಾಧ್ಯವಿರುವುದಿಲ್ಲ ಎಂಬ ಸೂಚನೆ ಇದ್ದಲ್ಲಿ ವಸೂಲಾತಿಗೆ ಮೌಲ್ಯಮಾಪನ ಮಾಡಲಾಗುತ್ತದೆ. ಇಂತಹ ಯಾವುದೇ ಸಂದರ್ಭ ಉಂಟಾದರೆ, ಇತರ ಆಸ್ತಿಗಳಿಂದ ಬಹುತೇಕ ಸ್ವತಂತ್ರವಾಗಿ ನಗದು ಹರಿವುಗಳನ್ನು ಆಸ್ತಿಯು ಸೃಷ್ಟಿಸದಿದ್ದಲ್ಲಿ, ವಸೂಲಾಗಬೇಕಿರುವ ಮೊತ್ತವನ್ನು (ನ್ಯಾಯಯುತ ಮೌಲ್ಯದಲ್ಲಿ ಹೆಚ್ಚಿನ ಮೌಲ್ಯದಿಂದ ಮಾರಲು ತಗುಲುವ ವೆಚ್ಚ ಮತ್ತು ಬಳಕೆಯಲ್ಲಿನ ಮೌಲ್ಯವನ್ನು ಕಳೆದು) ವೈಯಕ್ತಿಕ ಆಸ್ತಿ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ಇಂತಹ ಪ್ರಕರಣಗಳಲ್ಲಿ, ಆಸ್ತಿಯು ಯಾವ ನಗದು ಉತ್ಪಾದನಾ ಘಟಕಕ್ಕೆ (ಸಿಜಿಯು) ಸೇರಿದೆಯೋ ಆ ಘಟಕಕ್ಕೆ ವಸೂಲಾಗಬೇಕಾದ ಮೊತ್ತವನ್ನು ನಿರ್ಧರಿಸಲಾಗುತ್ತದೆ. ಆಸ್ತಿಯೊಂದರ (ಅಥವಾ ಸಿಜಿಯು ಒಂದರ) ವಸೂಲಾಗಬಹುದಾದ ಮೊತ್ತವು ಅದರ ಒಯ್ಯುವ ಮೊತ್ತಕ್ಕಿಂತಲೂ ಕಡಿಮೆ ಎಂದು ಅಂದಾಜುಮಾಡಿದ್ದರೆ, ಆಸ್ತಿಯ (ಅಥವಾ ಸಿಜಿಯು ಒಂದರ) ಒಯ್ಯುವ ಮೊತ್ತವನ್ನು ಅದರ ವಸೂಲಾಗಬಹುದಾದ ಮೊತ್ತಕ್ಕೆ ತಗ್ಗಿಸಲಾಗುತ್ತದೆ. ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಬಾಧೆಯ ನಷ್ಟವನ್ನು ಗುರುತಿಸಲಾಗುತ್ತದೆ.

ಬಾಧೆಯ ಯಾವುದಾದರೂ ಸೂಚನೆ ಇದೆಯೇ ಎಂದು ನಿರ್ಧರಿಸಲು ಪ್ರತಿ ವರದಿಯ ದಿನಾಂಕದಂದು ದಾಸ್ತಾನುಗಳು ಮತ್ತು ಮುಂದೂಡಲಾದ ತೆರಿಗೆಗಳನ್ನು ಬಿಟ್ಟು ಹಣಕಾಸೇತರ ಆಸ್ತಿಗಳನ್ನು ಪರಿಶೀಲಿಸಲಾಗುವುದು. ಇಂತಹ ಯಾವುದಾದರೂ ಸೂಚನೆ ಇದ್ದಲ್ಲಿ, ಆಸ್ತಿಯ ವಸೂಲಾಗಬಹುದಾದ ಮೊತ್ತವನ್ನು ಅಂದಾಜುಮಾಡಲಾಗುತ್ತದೆ.

ಎಫ್) ಆದಾಯ ಗುರುತಿಸುವಿಕೆ

ಪಾವತಿ ಯಾವಾಗಲೇ ಆಗಿರಲಿ, ಕಂಪೆನಿಗೆ ಆರ್ಥಿಕ ಲಾಭಗಳ ಹರಿವು ಸಂಭಾವ್ಯವಿದ್ದು ಆದಾಯವನ್ನು ವಿಶ್ವಾಸಾರ್ಹವಾಗಿ ಲೆಕ್ಕಹಾಕಲು ಸಾಧ್ಯವಿರುವ ಮಟ್ಟಿಗೆ ಆದಾಯವನ್ನು ಗುರುತಿಸಲಾಗುತ್ತದೆ.

ಕೆಳಗಿನ ಬಾಬ್ತುಗಳ ಮೇಲೆ ಆದಾಯವನ್ನು ನಗದು ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ:

1) ಉತ್ಪಾದನೆಯಲ್ಲಿನ ಕೊರತೆಗಾಗಿ ಗುತ್ತಿಗೆದಾರರಿಂದ ವಸೂಲಾಗಬೇಕಿರುವ ದಂಡ

2) ಅಭಿವೃದ್ಧಿ ಉತ್ತೇಜಕಗಳು

3) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಮೇಲ್ವಿಚಾರಣಾ ಸಮಿತಿಯ ಮೂಲಕ ಕಬ್ಬಿಣದ ಅದಿರಿನ ಮಾರಾಟ.

4) ಲಾಭಾಂಶ ಆದಾಯ

ಜಿ) ಗುತ್ತಿಗೆಗಳು

ಇಂಡ್ ಎಎಸ್ 116ರ ಪ್ರಕಾರ, ವ್ಯಾಪಾರಿ ಸಂಸ್ಥೆಯೊಂದು, ಖನಿಜಗಳು, ತೈಲ, ಪ್ರಾಕೃತಿಕ ಅನಿಲ ಮತ್ತು ಇತರ ಅನ್ವಯವಾಗದ ಪುನರ್‌ಸೃಷ್ಟಿಯಾಗುವ ಸಂಪನ್ಮೂಲಗಳ ಅನ್ವೇಷಣೆ ಅಥವಾ ಬಳಕೆಯನ್ನು ಹೊರತುಪಡಿಸಿ ಎಲ್ಲ ಬಗೆಯ ಗುತ್ತಿಗೆಗಳಿಗೆ, ಉಪಗುತ್ತಿಗೆಯಲ್ಲಿನ ಆಸ್ತಿಗಳ ಬಳಕೆಯ ಹಕ್ಕುಗಳ ಗುತ್ತಿಗೆಗಳೂ ಸೇರಿ, ಈ ಪ್ರಮಾಣವನ್ನು ಅನ್ವಯಿಸಬೇಕಾಗುತ್ತದೆ. ಇದಕ್ಕನುಗುಣವಾಗಿ ಗಣಿಗಾರಿಕೆ ಗುತ್ತಿಗೆಗೂ ಸಹ ಈ ಪ್ರಮಾಣ ಅನ್ವಯವಾಗುತ್ತದೆ.

ಇಂಡ್ ಎಎಸ್ 116 ಗುತ್ತಿಗೆಗಳ ಗುರುತಿಸುವಿಕೆಗೆ ಒಂದು ನಿಯಂತ್ರಣ ಮಾದರಿಯನ್ನು ಸ್ಥಾಪಿಸುತ್ತದೆ. ಗ್ರಾಹಕರಿಂದ ನಿಯಂತ್ರಿತವಾಗುವ ಗುರುತಿಸಲಾದ ಆಸ್ತಿಯೊಮದರ ಇರುವಿಕೆಯನ್ನು ಆಧರಿಸಿ ಗುತ್ತಿಗೆಗಳು ಮತ್ತು ಸೇವಾ ಗುತ್ತಿಗೆಗಳ ನಡುವೆ ಇದು ಭೇದವನ್ನು ಮಾಡುತ್ತದೆ.

ಕಂಪೆನಿಯು 1 ಏಪ್ರಿಲ್ 2019ರಿಂದ ಜಾರಿಗೆ ಬರುವಂತೆ ಎಲ್ಲೆಲ್ಲಿ ಅನ್ವಯವಾಗುವುದೋ ಅಲ್ಲೆಲ್ಲ ಇಂಡ್ ಎಎಸ್ 116 'ಗುತ್ತಿಗೆಗಳು' – ಈ ಪ್ರಮಾಣವನ್ನು ಅನ್ವಯಿಸಿದೆ. ಇಂಡ್ ಎಎಸ್ 116 ಗುತ್ತಿಗೆ, ಗುತ್ತಿಗೆ ಪಡೆದಿರುವಾತ ಮತ್ತು ಗುತ್ತಿಗೆ ನೀಡುವಾತ ಹಾಗೂ ಹೊಸ ಪ್ರಕಟಣೆಗಳಿಗೆ ಸಂಬಂಧಿಸಿದಂತೆ ನಿರ್ವಚನಗಳ ಹೊಸ ಅಗತ್ಯವನ್ನು ಪರಿಚಯಿಸಿದೆ. ಸಾಧಾರಣವಾಗಿ, ಇಂಡ್ ಎಎಸ್ 116ರ ವ್ಯಾಪ್ತಿಗೆ ಬರುವ ಎಲ್ಲ ಗುತ್ತಿಗೆಗಳನ್ನೂ ಗುತ್ತಿಗೆದಾರರು ಸಂತುಲನ ಪಟ್ಟಿಯಲ್ಲಿ ಸೇರಿಸುವುದು ಮತ್ತು 'ಬಳಕೆಯ ಹಕ್ಕಿನ' ಆಸ್ತಿ ಮತ್ತು ಗುತ್ತಿಗೆಯ ಪ್ರಾರಂಭದಲ್ಲಿ ಸಂಬಂಧಿತ ಗುತ್ತಿಗೆ ಹೊಣೆಯನ್ನು ಗುರುತಿಸುವುದು ಅಗತ್ಯವಾಗಿರುತ್ತದೆ.

ಕಂಪೆನಿಯು ತಾನು ಗುತ್ತಿಗೆಯನ್ನು ಪಡೆದಿರುವ ಸಂದರ್ಭದಲ್ಲಿ ಗುತ್ತಿಗೆ ವ್ಯವಸ್ಥೆಗಳಲ್ಲಿ ಆಸ್ತಿಗಳ ಬಳಕೆಯ ಹಕ್ಕುಗಳನ್ನು ಗುರುತಿಸುತ್ತದೆ. ಗುತ್ತಿಗೆ ವ್ಯವಸ್ಥೆಗಳಲ್ಲಿ ಮೂರನೆಯ ಪಕ್ಷಗಳ ಒಡೆತನದಲ್ಲಿರುವ ಆಸ್ತಿಗಳ ಬಳಕೆಯ ಹಕ್ಕನ್ನು ಗುತ್ತಿಗೆಯನ್ನು ಜಾರಿಗೊಳಿಸುವಾಗ ಬಂಡವಾಳೀಕರಿಸಿ ಸಂತುಲನ ಪಟ್ಟಿಯಲ್ಲಿ ಗುರುತಿಸಲಾಗುತ್ತದೆ. ಗುತ್ತಿಗೆ ನೀಡುವ ಪಕ್ಷದ ಹೊಣೆಯನ್ನು ಗುತ್ತಿಗೆ ಹೊಣೆ ಎಂದು ಗುರುತಿಸಲಾಗುತ್ತದೆ. ಒಯ್ಯಲಾಗುವ ಮೊತ್ತವನ್ನು, ಗುತ್ತಿಗೆ ಹೊಣೆಯ ಮೇಲಿನ ಬಡ್ಡಿಯನ್ನು ಪ್ರತಿಫಲಿಸಲು ಹೆಚ್ಚಿಸಲಾಗುತ್ತದೆ ಮತ್ತು ಮಾಡಲಾಗುವ ಗುತ್ತಿಗೆ ಪಾವತಿಗಳಿಂದಾಗಿ ತಗ್ಗಿಸಲಾಗುತ್ತದೆ.

ರಿಯಾಯಿತಿ ನೀಡಲಾದ ಗುತ್ತಿಗೆ ಹೊಣೆಯನ್ನು ಲೆಕ್ಕಹಾಕಲು ಗುತ್ತಿಗೆ ಪಡೆದಿರುವ ಪಕ್ಷದ ವೃದ್ಧಿದಾಯಕ ಸಾಲ ಪಡೆಯುವ ದರವನ್ನು ಬಳಸಲಾಗುತ್ತದೆ. ಸಮಾನವಾದ ಮಾರುಕಟ್ಟೆಯಲ್ಲ ಸಮಾನವಾದ ಆಸ್ತಿಯನ್ನು ಪಡೆದುಕೊಳ್ಳಲು ಅಗತ್ಯವಾದ ನಿಧಿಗಳನ್ನು ಸಮಾನವಾದ ಅವಧಿಗೆ ಸಮಾನವಾದ ಭದ್ರತೆಯಲ್ಲಿ ಕಂಪೆನಿಯು ಯಾವ ಬಡ್ಡಿ ದರದಲ್ಲಿ ಸಾಲವಾಗಿ ಪಡೆದುಕೊಳ್ಳಲು ಸಾಧ್ಯವಿರುವುದೋ ಅದೇ ದರದಲ್ಲಿ ವೃದ್ಧಿದಾಯಕ ಸಾಲ ಪಡೆಯುವ ದರವನ್ನು ಲೆಕ್ಕಹಾಕಲಾಗುತ್ತದೆ.

ಪ್ರತಿ ಲೆಕ್ಕ ಅವಧಿಯ ಉಳಿದುಕೊಂಡಿರುವ ಶಿಲ್ಕಿನ ಮೇಲೆ ನಿರಂತರ ಕಾಲಕಾಲಿಕ ವ್ಯತ್ಯಾಸದ ದರವನ್ನು ಸೃಷ್ಟಿಸು ದೃಷ್ಟಿಯಿಂದ ಹಣಕಾಸು ಕೂಡಿಸುವಿಕೆ ವೆಚ್ಚವನ್ನು ಆದಾಯ ತಃಖ್ತೆಗೆ ಖರ್ಚುಹಾಕಲಾಗುತ್ತದೆ.

